ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ



ಸಂಶೋಧಕರು

ಮಲ್ಲಿಕಾರ್ಜುನ ಕೆ. ಜಿ

ಮಾರ್ಗದರ್ಶಕರು

ಡಾ.ಎಸ್.ಸಿ.ಪಾಟೀಲ್

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೧೨

ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಮಲ್ಲಿಕಾರ್ಜುನ ಕೆ. ಜಿ.

ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ್
ಪ್ರಾಧ್ಯಾಪಕರು
ದೃಶ್ಯಕಲಾ ವಿಭಾಗ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೨

ಪ್ರಮಾಣ ಪತ್ರ

ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ದೃಶ್ಯಕಲಾ ವಿಭಾಗದ ಪ್ರಾಧ್ಯಾಪಕರಾದ ಡಾ.ಎಸ್.ಸಿ.ಪಾಟೀಲ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 28/7/12

ಸ್ಥಳ: ವಿದ್ಯಾರಣ್ಯ

Mallikarjuna

(ಮಲ್ಲಿಕಾರ್ಜುನ ಕೆ. ಜಿ.)

ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ಮಲ್ಲಿಕಾರ್ಜುನ ಕೆ. ಜಿ. ಇವರು ಬರೆದು ಸಾದರಪಡಿಸಿದ **ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು** ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.


ಪ್ರಸ್ತುತ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 27/7/12

ಸ್ಥಳ: ವಿದ್ಯಾರಣ್ಯ


(ಡಾ.ಎಸ್.ಸಿ.ಪಾಟೀಲ)

ಮಾರ್ಗದರ್ಶಕರು
ಡೀನ್, ಲಲಿತಕಲಾ ನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ದೃಶ್ಯಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ – ೫೮೩ ೨೭೬



ಕೆ. ಕೆ. ಹೆಬ್ಬಾರರ ಕಲೆ ಮತ್ತು ಬದುಕು


ಪರಿವಿಡಿ



ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ






ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ಸಂಸ್ಕೃತಿಯ ಹಿನ್ನೆಲೆಯು ಬಹುಮುಖ್ಯವಾಗಿದ್ದು, ಹಾಗೆಯೇ ಲಲಿತಕಲೆಗಳ ಪಾತ್ರ ತುಂಬಾ ಮೌಲಿಕವಾದದ್ದು. ಒಂದು ರೀತಿಯಲ್ಲಿ ಜನಾಂಗದ ಬದುಕು ಜೀವನ ಚರಿತ್ರೆ ಎನಿಸಿದರೆ, ಕಲೆಗಳು ಅದರ ಆತ್ಮ ಚರಿತ್ರೆ ಎನಿಸುತ್ತದೆ. ಯಾವುದೇ ಒಂದು ನಾಗರೀಕತೆಯು ನೆಲೆಯೂರಬೇಕೆಂದರೆ, ಅಲ್ಲಿನ ಸಂಸ್ಕೃತಿಯು ಬೆಳವಣಿಗೆಯಾಗಬೇಕಾದರೆ ಶತಶತಮಾನಗಳಿಂದ ಸಾವಿರಾರು ಕಲಾವಿದರೂ, ಕಲಾಸಕ್ತರು, ಕಲಾಪೋಷಕರು ಅವಿರತವಾಗಿ ಮಾಡಿದ ಪ್ರಯತ್ನ ಮತ್ತು ಅಲ್ಲಿನ ಅರಸು ಮನೆತನಗಳು, ನಾಯಕರು, ಕಲಾಭಿರುಚಿಯ ಕಲಾಭಿಜ್ಞತೆಯ ಆಶ್ರಯ ಪಾಲನೆ ಪೋಷಣೆ ಮತ್ತು ಪ್ರೋತ್ಸಾಹಗಳು, ಸಾಹಿತ್ಯ ಸಂಗೀತ, ಚಿತ್ರ. ಶಿಲ್ಪ ಮತ್ತು ನೃತ್ಯ ಮೊದಲಾದ ಲಲಿತಕಲೆಗಳ ಬೆಳವಣಿಗೆಗೆ ಕಾರಣೀಬೂತವಾಗಿವೆ.

ಸಾಂಸ್ಕೃತಿಕ ಕಲಾಇತಿಹಾಸ ಜಡುವಾಗಿ, ಯಾರ ಒಂದು ಕಾಲದ ಜನಕ್ಕೆ ಅಂಟಿಕೊಂಡು ಯಾವುದೇ ಸಾಂಪ್ರದಾಯಿಕ ಸಾಧನ ಶೈಲಿಗಳನ್ನು ಅನುಕರಿಸುತ್ತಾರೋ ಅಂತ ಜನರ ಸಮಾಜ ಜೀವನವು ಚೈತನ್ಯಮಯವಾಗಿ ಸಾಗಿಲ್ಲವೆಂದು ಹೇಳಬೇಕು. ಅಂತ ಜನ ಸಂಪ್ರದಾಯಗಳ ಗುಲಾಮರಾಗಿದ್ದಿರಬೇಕು. ಸ್ವಂತ ಜೀವನವನ್ನು, ಚೇತನವನ್ನು ಮರೆತವರಾಗಿರಬೇಕು. ಬರೀಯ ಮಾರ್ಪಾಟಿನಿಂದಲೇ ಹೊಸ ಜೀವನದ ಸೂಚನೆಯಾಗುತ್ತದೆ ಎಂದು ಹೇಳಲಾರೆವಾದರೂ, ಮಾರ್ಪಾಟು ಹೊಸ ಜೀವನದ ಒಂದು



ಮುಖ್ಯ ಕುರುಹು. ಕಲಾವಿದನಲ್ಲಿ ಅನುಭವ ವೈವಿಧ್ಯ ಬಂದಂತೆ ಆತ ಚಿತ್ರಿಸಲು ಬಳಸುವ ಸಾಧನಗಳ ಮಾರ್ಪಾಟು ಆಗಿಯೇ ಆಗುತ್ತದೆ.[೧]

ಚಿತ್ರಕಲೆ ಪ್ರಾಚೀನವಾದ ಕಲೆ ಎಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಭಾರತೀಯ ಚಿತ್ರಕಲೆ ಬಹುಪ್ರಾಚೀನ ಎಂಬುವುದಕ್ಕೆ ಸಂಸ್ಕೃತ ಕಾವ್ಯ, ಶಾಸ್ತ್ರ ಪುರಾಣಗಳಲ್ಲಿ ಪ್ರಮಾಣಭೂತ ವಾಕ್ಯಗಳು, ಸಂದರ್ಭಗಳು ದೊರೆಯುತ್ತವೆ.[೨]

ಭಾರತೀಯರು ಕಲೆಯ ಮಹತ್ವವನ್ನು ಪ್ರಾಚೀನ ಕಾಲದಲ್ಲಿಯೇ ಅರಿತು ಅನೇಕ ಕಲಾವಿದರು ಕೃತಿ ನಿರ್ಮಾಣ ಮಾಡಿದುದಕ್ಕೆ ಅನೇಕ ನಿದರ್ಶನಗಳಿವೆ. ಪ್ರಾಚ್ಯ ಸಂಶೋಧನೆ ಫಲವಾಗಿ ಮೆಹೊಂಜೊದಾರೋದಲ್ಲಿ ದೊರೆತ ಬಣ್ಣ ಹಾಕಿದ ವಿಗ್ರಹಗಳಿಂದ ೪೫೦೦ ವರ್ಷಗಳ ಹಿಂದೆಯೇ ವಿವಿಧ ಬಣ್ಣಗಳನ್ನು ಉಪಯೋಗಿಸಿ ವಸ್ತುಗಳನ್ನು ಅಲಂಕರಿಸುವುದು ರೂಢಿಯಲ್ಲಿತ್ತೆಂದು ತಿಳಿದುಬರುತ್ತದೆ. ಅಜಂತದ ಗುಹೆಗಳಲ್ಲಿರುವ ಭಿತ್ತಿಚಿತ್ರಗಳು, ಮೂರ್ತಿಗಳು, ಬುದ್ಧ ಭಿಕ್ಷುಗಳಿಂದ ಕ್ರಿಸ್ತಪೂರ್ವದಲ್ಲಿಯೇ ಬರೆಯಲ್ಪಟ್ಟವೆಂದು ದೃಢಪಟ್ಟಿರುತ್ತವೆ. ಇದರಂತೆಯೇ ಪುದುಕೋಟೆಯ ಬಳಿಯಲ್ಲಿರುವ ಸಿತ್ತನಿವಾಸಲ್‌ದಲ್ಲಿಯೂ ಪುರಾತನ ಭಿತ್ತಿಚಿತ್ರಗಳ ದೊರೆತಿವೆ. ಕೆಲವು ಪ್ರಾಚೀನ ದೇವಾಲಯಗಳಲ್ಲಿ ಕ್ರಿ.ಶ. ೭, ೮ ನೇ ಶತಮಾನಗಳಲ್ಲಿ ಬರೆದ ಅನೇಕ ಪೌರಾಣಿಕ ಮತ್ತು ಐತಿಹಾಸಿಕ ಚಿತ್ರಗಳು ಅಂದಿನ ಕಲಾವಿದರ ಪ್ರತಿಭೆಯ ಪ್ರದರ್ಶನದಂತಿವೆ.[೩]


ಅಂತೆಯೇ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಗಮನಿಸಿದಾಗ ಚಿತ್ರ, ಶಿಲ್ಪ, ವಾಸ್ತುಶಿಲ್ಪ, ಸಂಗೀತ, ನೃತ್ಯ ಮತ್ತು ಜಾನಪದ ಕಲೆಗಳು ನೀಡಿರುವ ಕೊಡುಗೆ ಅಪಾರವಾದುದು. ಹಾಗೆಯೇ ಕಲಾ ಪ್ರಪಂಚಕ್ಕಾಗಿ ಅವಿರತವಾಗಿ ದುಡಿದ ಅಸಂಖ್ಯ ಕಲಾವಿದರ ಕೊಡುಗೆಯು ತುಂಬಾ ಅನನ್ಯವಾದುದು. ಹೀಗಾಗಿ ಮುಂದಿನ ಪೀಳಿಗೆಗೆ ಈ ಕಲೆ ಮತ್ತು ಸಂಸ್ಕೃತಿಯ ಸಾಧಕರಾದ ಕಲಾವಿದರ ಸಾಧನೆಯನ್ನು ಪರಿಚಯಿಸುವ ದಾಖಲೆಗಳು ತುಂಬಾ ಮುಖ್ಯವಾಗಿವೆ. ಈ ಹಿನ್ನೆಲೆಯಲ್ಲಿ ಕಲಾವಿದ ಸಂಶೋಧನಾ ಅಧ್ಯಯನಗಳು ಇಂದು ತುಂಬಾ ಮಹತ್ವದವುಗಳಾಗಿವೆ. ಇಂದಿನ ಕಲಾವಿದರು ಬರಿ ಕಲಾಸೃಷ್ಟಿಕಾರರು ಮಾತ್ರ ಅಲ್ಲ, ಅವರ ಅಧ್ಯಯನ ಪ್ರಿಯತೆ ಅಸಾಮಾನ್ಯವಾದದ್ದು. ಕಲೆಗೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡಬೇಕು, ಓದಬೇಕು, ಕೇಳಬೇಕು, ನೋಡಬೇಕು ಎನ್ನುವ ಹಂಬಲವುಳ್ಳವರು ಹಲವಾರು ಜನರಿದ್ದಾರೆ. ಭಾರತದ ಕಲಾವೈಭವದ ಕುರುಹುಗಳನ್ನು ಅನ್ವೇಷಿಸಬೇಕು, ವಿದೇಶಗಳ ಮಹಾನ್ ಕಲಾವಿದರ ಕಲಾಕೃತಿಗಳ ಸೊಗಸನ್ನು ಕಲಿಯಬೇಕು ಎಂಬ ವಿಶಿಷ್ಟ ಕುತೂಹಲ, ಆಕರ್ಷಣೆ,

---

೦೧. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ, ಪುಟ - ೨೯

೦೨. ಡಾ. ಎಸ್. ಸಿ. ಪಾಟೀಲ (ಸಂ.) : ಪ್ರೇಕ್ಷಕ ಕಲಾವಿದ ಹಾಗೂ ವಿಮರ್ಶಕ ಡಾ. ಶಿವರಾಮ ಕಾರಂತರು, ಪುಟ - ೨೭

೦೩. ಪಿ.ಆರ್. ತಿಪ್ಪೇಸ್ವಾಮಿ (ಪ್ರಸಂ.) : ಚಿತ್ರಕಲಾ ಪ್ರಪಂಚ, ಪುಟ - ೧೧೦




ಜಗತ್ತನ್ನು ಮುಕ್ತ ಮನಸ್ಸಿನಿಂದ ಪರಿಗ್ರಹಿಸುವ ಕಲಾವಿದರಲ್ಲಿ ಒಬ್ಬರಾದ ಕರ್ನಾಟಕದ ಕಲಾವಿದ ಕೆ.ಕೆ. ಹೆಬ್ಬಾರರಿಗೆ ಅಗ್ರಸ್ಥಾನ. ಮೊದಲು ಆಸ್ವಾಧನೆ, ಆಮೇಲೆ ಅದರ ಮನನ, ಕೊನೆಗೆ ತೀರ್ಪಾಗಿಲ್ಲದೇ ಹೋದರೂ ಅಡ್ಡಿ ಇಲ್ಲ ಎನ್ನುವ ಮನೋಭಾವದವರು ಕಲಾವಿದ ಕೆ. ಕೆ. ಹೆಬ್ಬಾರ್ ಅವರು.

ಕಲಾವಿದ ಮಕ್ಕಳಂತೆ ಸೂಕ್ಷ್ಮ ಸಂವೇದಿಯಾಗಿರಬೇಕು. ಸರ್ವತಂತ್ರ ಸ್ವತಂತ್ರನಾಗಿರಬೇಕು. ಸ್ವಯಂ ಸ್ಫೂರ್ತಿ, ಪ್ರತಿಭೆಯುಳ್ಳವನಾಗಿರಬೇಕು ಎಂದು ಹೆಬ್ಬಾರರು ಬಲ್ಲವರಾದರೂ ಒಬ್ಬ ಕಲಾವಿದ ಗಟ್ಟಿ ನೆಲೆಯಲ್ಲಿ ವ್ಯವಹರಿಸಬೇಕಾದರೆ ಆತನಿಗೆ ಕಲೆಯ ವ್ಯಾಕರಣ ತಿಳಿದಿರುವುದು ಒಳ್ಳೆಯದು, ಶಿಕ್ಷಣ ಇರುವುದೊಳ್ಳೆಯದು. ಏಕೆಂದರೆ ಶಿಕ್ಷಣದಿಂದ ಆತ್ಮವಿಶ್ವಾಸ ಚಿಗುರುತ್ತದೆ. ಈ ಅಧ್ಯಯನದ ಕಾರಣ ಮನಸ್ಸಿಗೆ ಹೊಸ ಹೊಸ ಆಯಾಮಗಳು ಹೊಳೆಯಬಹುದು. ಶಿಕ್ಷಣ ದಾರಿಯ ದೀಪವಾಗಬಹುದು! ಆದರೆ ದೀಪ ಚೆಲ್ಲುವ ಬೆಳಕಿನಲ್ಲಿ ನಡೆದು ಗುರಿ ಮುಟ್ಟಬೇಕಾದದ್ದು ಮಾತ್ರ ಪ್ರಯಾಣಿಕನ ಕೆಲಸ. ದೀಪವೇ ನಡೆಯಲಾರದು ಎಂದಿದ್ದರೂ ದೀಪಬೇಕು. “ಹೆದ್ದಾರಿಯಲ್ಲಿ ದಿಕ್ಕು ತೋರಿಸುವ ಕೈಗೊಂಬೆ ಇರುವಂತೆ” ಎಂಬ ತಮ್ಮ ನೈತಿಕತೆಯ ಸೃಜನಶೀಲತೆಯ ನಡುವೆ ಅವರು ಅತ್ಯುತ್ತಮ ಕಲಾಕೃತಿಗಳನ್ನು ರಚಿಸಿ ಹೆಸರು ಗಳಿಸಿರುವುದು ಅವರ ಬದ್ಧತೆಗೆ ಮುಖ್ಯ ಸಾಕ್ಷಿಯಾಗಿದೆ. ಅವರು ಕಲಾಶಿಕ್ಷಣಕ್ಕಾಗಿ ನಡೆಸಿದ ಹೋರಾಟ, ಪಡೆದ ಲೋಕಾನುಭವ ಇಂದಿಗೂ ಯುವಕರಿಗೆ ಸ್ಫೂರ್ತಿಯಾಗಿದೆ.

ಹೆಬ್ಬಾರರು ಭಾರತದ ಹೆಸರಾಂತ ಕಲಾಶಾಲೆಯಾದ ಬಾಂಬೆಯ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲಾ ಕೋರ್ಸಿಗೆ ಸೇರಿಕೊಳ್ಳುತ್ತಾರೆ. ಆದರೆ ಅದು ಸುಲಭವಾಗಿರಲಿಲ್ಲ. ಜುಲೈ ೧ ೧೯೩೦ರಂದು ಕೆ.ಕೆ. ಹೆಬ್ಬಾರರು ಸರ್ ಜೆ. ಜೆ. ಕಲಾಶಾಲೆಗೆ ಸೇರಿದ ಸುದಿನ, ಅಲ್ಲಿ ಕಲಾವಿದ ಕಲಿತದ್ದು ತುಂಬಾನೇ ಅಂತ ಹೇಳಬಹುದು. ವಿಶೇಷ ವ್ಯಕ್ತಿತ್ವವನ್ನು ರೂಢಿಮಾಡಿಕೊಂಡು ಬೆಳೆದು ಅನೇಕ ಪ್ರಶಸ್ತಿ, ಸನ್ಮಾನಗಳನ್ನು ಸ್ವೀಕರಿಸಿ ಹೆಸರು ಮಾಡಿರುವ ಕಲಾವಿದ ಕೆ.ಕೆ. ಹೆಬ್ಬಾರರ ಕುರಿತು ಅಧ್ಯಯನವಾಗಬೇಕಾಗಿರುವುದು ಮುಖ್ಯ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ವಿದೇಶಿಯರ ಕಲಾಪರಂಪರೆಯನ್ನು ಗಮನಿಸಿದಾಗ ಅಲ್ಲಿ ಆಕರ ಸಾಮಗ್ರಿಗಳು ಹೇರಳವಾಗಿ ಲಭಿಸುತ್ತವೆ. ಅದಕ್ಕೆ ಮುಖ್ಯ ಕಾರಣ ವಿದೇಶಿ ಕಲಾತಜ್ಞರ ದೂರದೃಷ್ಟಿ, ಕಲೆಯ ಬಗೆಗಿನ ಕಾಳಜಿ ಗಮನಾರ್ಹವಾಗಿದೆ. ನಮ್ಮ ದೇಶದಲ್ಲಿ ಐತಿಹಾಸಿಕವಾಗಿ ಅನೇಕ ಕಲೆಯ ತಾಣಗಳು, ಅಮೂಲ್ಯವಾದ ಕಲಾಕೃತಿಗಳು ಉಪಲಬ್ಧವಾದರೂ, ಅದರ ಹಿಂದೆ ದುಡಿದ ಕಲಾವಿದರ ಕುರಿತು ಯಾವುದೇ ಸ್ಪಷ್ಟವಾದಂತಹ ಮಾಹಿತಿಗಳು ಅಷ್ಟೊಂದು ಲಭ್ಯವಾಗಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಕಲೆ ಮತ್ತು ಕಲಾವಿದರನ್ನು ಕುರಿತಂತೆ ಸರಿಯಾದ ರೀತಿಯಲ್ಲಿ ಸಮಗ್ರವಾದ ಅಧ್ಯಯನವನ್ನು ಮಾಡಲು ಸಾಧ್ಯವಾಗಿಲ್ಲ. ಅಲ್ಲದೇ




ಇಂದಿನ ಅಧುನಿಕ ಯುಗದಲ್ಲಿ ಕಲಾವಿದರ ಕುರಿತಾದ ವಿಚಾರಶೀಲತೆ, ಕಲಾಕೃತಿಗಳು, ಕಲಾವಿದನ ಮನಸ್ಸನ್ನು ಪರಿಭಾವಿಸುವ ತುಂಬಾ ಗಂಭೀರವಾದಂತಹ ಅಂಶಗಳನ್ನು ತಿಳಿಯುವುದು ತುಂಬಾ ಅವಶ್ಯವಾಗಿದೆ. ಈ ಸಂದರ್ಭದಲ್ಲಿ ಅವುಗಳನ್ನು ದಾಖಲಿಸಬೇಕಾದದ್ದು ಇಂದಿನ ಬಹುಮುಖ್ಯವಾದ ಕರ್ತವ್ಯವಾಗಿದ್ದೂ, ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ತಡವಾಗಿಯಾದರೂ ಕಲೆ, ಕಲಾವಿದರ ಕುರಿತಾದ ಸಂಶೋಧನಾ ಆಧ್ಯಯನಗಳು ವಿಶ್ವವಿದ್ಯಾಲಯಗಳಲ್ಲಿ ಅರಂಭಗೊಂಡಿವೆ. ಹೀಗೆ ಕರ್ನಾಟಕದ ಹಿರಿಯ ತಲೆಮಾರಿನವರಲ್ಲಿ ಒಬ್ಬರಾದ ವಿಶ್ವವಿಖ್ಯಾತ ಕಲಾವಿದ ಕೆ.ಕೆ.ಹೆಬ್ಬಾರ್‌ರವರ ಕುರಿತು ಆಧ್ಯಯನ ಮಾಡುವ ಪ್ರಮುಖ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಕರ್ನಾಟಕದ ಕರಾವಳಿ ತೀರದ ಉಡುಪಿಯ ಸಮೀಪವಿರುವ ಕಟ್ಟಂಗೇರಿ ಎಂಬ ಚಿಕ್ಕ ಹಳ್ಳಿಯಲ್ಲಿ ಬಡಕುಟುಂಬದಲ್ಲಿ ಹೆಬ್ಬಾರರು ಜನಿಸಿದರು. ಬಾಲ್ಯದಲ್ಲಿ ಎಳೆಯ ಹೆಬ್ಬಾರರ ಸೃಜನಶೀಲ ಕಲಾಸಕ್ತಿಯನ್ನು ತನ್ನ ಗುಡಿಸಲಿನಂತಹ ಮನೆಯ ಗೋಡೆಗಳ ಮೇಲೆ ಮಸಿಯಿಂದ ಚಿತ್ರ ಬರೆಯುವುದೂ, ಆವೇ ಮಣ್ಣಿನಿಂದ ಕಲಾಕೃತಿಗಳನ್ನು ನಿರ್ಮಿಸುವುದರಲ್ಲಿಯೇ, ಜೀವನೋತ್ಸಾಹವನ್ನು ಪ್ರೀತಿಯಿಂದ ಕಾಣುತ್ತಿದ್ದ ಹೆಬ್ಬಾರರು, ಮುಂದೆ ಕಲಾಸಕ್ತಿ ಸ್ಪಷ್ಟವಾದ ರೂಪ ತಳೆದು, ಹೆಬ್ಬಾರರ ಕಲಾಪ್ರತಿಭೆ ವಿಶ್ವಮಾನ್ಯ ಕಲಾವಿದರ ಸ್ಥಾನದಲ್ಲಿ ನಿಲ್ಲಲು ಕಾರಣವಾದದ್ದು ಪ್ರಮುಖ ಅಂಶವೆನ್ನಬಹುದು.

ಯಾವುದೇ ಒಬ್ಬ ಕಲಾವಿದ ಕಲಾವಿದನಾಗಬೇಕಾದರೆ ನಿಸರ್ಗವೇ ಮೊದಲ ಗುರು, ಅದಕ್ಕಾಗಿ ಕಲಾವಿದ ಸೌಂದರ್ಯನ್ವೇಶಕನಾಗಬೇಕು, ಪ್ರಾಣಿ ಕೋಟಿಯ ಆಗು–ಹೋಗುಗಳಿಗೆ ಸ್ಪಂದಿಸುವ ಹಾಗೂ ಪ್ರಕೃತಿಯೊಂದಿಗೆ ಬೆರೆತು ಕ್ಷಣಕ್ಷಣಕ್ಕೂ ಚಿನ್ನಾಟವಾಡುವ ಸೌಂದರ್ಯ ಚೇತನವನ್ನು ಕಂಡುಕೊಳ್ಳಲು ಕಣ್ಣುಗಳನ್ನು ಸಹ ಪಳಗಿಸಬೇಕಾಗುತ್ತದೆ.[೪]

ಕರ್ನಾಟಕದ ಚಿತ್ರಕಲೆ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇದರ ಇತಿಹಾಸದಲ್ಲಿ ಅನೇಕ ಕಲಾವಿದರು ಹುಟ್ಟಿ ತಮ್ಮ ಪ್ರತಿಭೆಯನ್ನು ತೋರಿ ಮರೆಯಾಗಿದ್ದಾರೆ. ಆದರೆ ಅವರ ಹೆಸರುಗಳನ್ನು ಕಲಾಕೃತಿಗಳ ಮೇಲೆ ಸೂಚಿಸದೆ ಇರುವುದು. ಚಿತ್ರಕಲೆ ಶ್ರೇಷ್ಠಕಲೆ ಎಂಬ ಭಾವನೆ ಅವರಲ್ಲಿತ್ತಲ್ಲದೆ, ಅದು ಧರ್ಮಾರ್ಥಕಾಮ ಮೋಕ್ಷಪ್ರದವಾದುದೆಂದು ನಂಬಿಕೆಯಿತ್ತು. ಅಂತೆಯೇ ಚಿತ್ರಕಕಲೆ ಸರ್ವಕಲೆಗಳಲ್ಲಿ ಶ್ರೇಷ್ಠವೆಂಬುದಕ್ಕೆ ಖಚಿತಪಡಿಸುವ ಉಲ್ಲೇಖ ಹೀಗಿದೆ. ಮಾರ್ಕಂಡೇಯ ಪುರಾಣದ "ಕಲಾನಾಂ ಪ್ರವರಂ ಚಿತ್ರಂ ಧರ್ಮ ಕಾಮಾರ್ಥ ಮೋಕ್ಷಪ್ರದಮ್ ಮಾಂಗಲ್ಯಂ ಪ್ರಥಮಂ ಚೈತದ್ಗೈಹೇತ್ ಪ್ರತಿಷ್ಠಿತಮ್" (ಕಲೆಗಳಲ್ಲಿ ಚಿತ್ರಕಲೆ ಉತ್ತಮವಾದುದು. ಧರ್ಮ, ಅರ್ಥ, ಕಾಮ ಮೋಕ್ಷಕೆ ಸಾಧನವಾದುದು. ಮನೆಯಲ್ಲಿ ಮಂಗಳಕರವೆಂದೂ ಗೃಹದೇವತೆಯನ್ನು ಸಂತೃಪ್ತಿಪಡಿಸುವ ಸಾಧನವೆಂದು ಅರ್ಥ.[೫]

೦೪. ವಿ. ಟಿ. ಕಾಳೆ : ಎಸ್. ಎಂ. ಪಂಡಿತ್ (ಪ್ರ), ಪುಟ – ೪
೦೫. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪುಟ – ೧೯



ಕನ್ನಡಿಗ ಕಲಾವಿದರಾದ ದಂಡಾವತಿಮಠರ ನೂತನ ಕಲಾ ಮಂದಿರದಲ್ಲಿ ಆರಂಭಿಕ ಕಲಾ ಶಿಕ್ಷಣವನ್ನು ಪಡೆದುಕೊಂಡು, ಮುಂದೆ ಹೆಚ್ಚಿನ ಕಲಾ ಶಿಕ್ಷಣವನ್ನು ಮುಂಬೈನ ಸುಪ್ರಸಿದ್ಧ ಜೆ.ಜೆ. ಕಲಾ ಶಾಲೆಯಲ್ಲಿ ಪಡೆದರು. ಕನ್ನಡಿಗರಾದ ಹೆಬ್ಬಾರರು ಮುಂಬೈ ನೆಲದಲ್ಲಿಯೇ ಗಟ್ಟಿಯಾಗಿದ್ದ ನೈಜ ಮತ್ತು ಸಾಂಪ್ರದಾಯಿಕ ಕಲೆಗೆ ಅಧುನಿಕ ಲೇಪನವನ್ನು ನೀಡಿದರು. ಕಲೆಯ ಮೂಲಕ ಬದುಕಿನ ತುಡಿತ ಮಿಡಿತ, ಅನುಭವ-ಅನುಭಾವಗಳನ್ನು ವ್ಯಕ್ತಪಡಿಸಬಹುದೆಂಬ ಪ್ರಜ್ಞೆ ಈ ಕನ್ನಡಿಗ ಕಲಾವಿದರಾದ ಹೆಬ್ಬಾರರಲ್ಲಿ ಮೂಡಿತು. ಆಧುನಿಕ ಕಲಾಚಳುವಳಿಯು ತೀವ್ರ ಸ್ವರೂಪವನ್ನು ಪಡೆಯುವಲ್ಲಿ ಹೆಬ್ಬಾರರ ಹೋರಾಟವು ಮುಂದುವರೆಯಿತು. ಇಂತಹ ಕಲಾವಿದನಿಗೆ ದೇಶದ ಅತ್ಯುನ್ನತ ಪ್ರಶಸ್ತಿಗಳು ಲಭಿಸಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರ ಕಲೆಯನ್ನು ಗುರುತಿಸುವಂತಾಯಿತು. ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿಯ ಆಧ್ಯಕ್ಷರಾದ ಮೊದಲ ಕನ್ನಡಿಗರಾಗಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಕಲಾಕ್ಷೇತ್ರದಲ್ಲಿ ಅನ್ವೇಷಣಾ ಭಾವನೆಯಿಂದ ಮತ್ತು ಹೊಸ ಹೊಸ ಪ್ರಯೋಗಗಳಿಂದ ಕಲಾಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ದೇಶ ವಿದೇಶಗಳ ಕಲಾಸಕ್ತರ ಗಮನವನ್ನು ಸೆಳೆಯುವುದರೊಂದಿಗೆ ಹೆಬ್ಬಾರರು ಒಬ್ಬ ಬಹುಮುಖ ವ್ಯಕ್ತಿತ್ವವನ್ನು ಪಡೆದ ನಾಡಿನ ಹಿರಿಯ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ.

ಆಧ್ಯಯನದ ಉದ್ದೇಶ

ಪ್ರಮುಖವಾಗಿ ಕಲೆಗಳಲ್ಲಿ ವಾತ್ಸಾಯನನ ಪ್ರಕಾರ ಅರವತ್ನಾಲ್ಕು ಕಲೆಗಳಿದ್ದು, ಅವುಗಳಲ್ಲಿ ಮುಖ್ಯವಾಗಿ ಲಲಿತಕಲೆಗಳು ಹಾಗೂ ಲಲಿತೇತರ ಕಲೆಗಳು ಎಂಬ ಎರಡು ಪ್ರಮುಖವಾದ ಪ್ರಕಾರಗಳಿವೆ. ತಮ್ಮದೇ ಆದ ಚೌಕಟ್ಟಿನಲ್ಲಿ ಮಿತಿಮೀರದೆ ಯಶಸ್ವಿಯಾಗಿ ಸಾಧನೆ ಮಾಡುತ್ತಾ ಹೋಗುವುದರ ಜೊತೆಗೆ ಹೊಸ ಹೊಸ ಆಯಾಮಗಳಿಗೆ ಉತ್ತೇಜನ ನೀಡುತ್ತಿವೆ.

ಈ ಅಧ್ಯಯನದ ಉದ್ದೇಶ ಲಲಿತಕಲೆಗಳಲ್ಲಿ ಸಂಗೀತ, ನೃತ್ಯ, ನಾಟಕ, ಚಿತ್ರ, ಶಿಲ್ಪ, ಸಾಹಿತ್ಯ ಮತ್ತು ವಾಸ್ತುಶಿಲ್ಪಗಳು ಇದ್ದು, ಚಿತ್ರಕಲೆಯಲ್ಲಿ ವಿವಿಧ ರೂಪಗಳನ್ನು ಕಾಣಬಹುದು. ಅದರಂತೆ ಸಂಶೋಧನ ಪ್ರಬಂಧಗಳ ಪ್ರಸ್ತುತ ಸಾಲಿನಲ್ಲಿ ನಶಿಸಿ ಹೋಗಿರುವ ವಸ್ತುವಿಷಯ, ವ್ಯಕ್ತಿ ಹಾಗೂ ಚಿತ್ರಕೃತಿಗಳನ್ನು ಸಂರಕ್ಷಿಸುವುದು.

ಭಾರತೀಯ ಕಲಾಕ್ಷೇತ್ರವು ಬ್ರಿಟಿಷರಿಂದ ಬೆಳೆಯಲಾರಂಭಿಸಿತಂದರೂ ಪಾಶ್ಚಾತ್ಯರ ಕಲೆಗೆ ಕೆಲವು ಕಲಾವಿದರು ಯಾರೂ ಹೋಗಿದ್ದಾರೆ ಕಾರಣ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಆಡಳಿತದಲ್ಲಿ ಅವರದೆ ಕಲೆಯನ್ನು ಕಲಿಸುತ್ತಿದ್ದು, ಆದರೆ ಸ್ವಾತಂತ್ರ್ಯನಂತರದ ದಿನಗಳಲ್ಲಿ ಭಾರತೀಯ ಕಲಾವಿದರು ಎಚ್ಚೆತ್ತುಕೊಂಡುನಮ್ಮ ನಾಡು-ನುಡಿ, ಸಂಸ್ಕೃತಿಯ ವಿಶಾಲತೆಗೆ ಬೆಂಬಲವಿಟ್ಟಂತೆ ಚಿತ್ರ ಮತ್ತು ಶಿಲ್ಪವನ್ನು

ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದರಂತೆಯೇ ಹಿರಿಯ ಕಲಾವಿದರ ಸಾಲಲ್ಲಿ ನಿಂತಿರುವ ಕಲಾವಿದ ಕೆ. ಕೆ. ಹೆಬ್ಬಾರರ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ಕೆ. ಕೆ. ಹೆಬ್ಬಾರರ ಬಾಲ್ಯ ಜೀವನ, ಕಲೆಯ ಕುರಿತಂತಹ ಮೂಲ ಪ್ರೇರಣೆ, ಹುಟ್ಟಿ ಬೆಳೆದಂತಹ ಪರಿಸರ ಹಾಗೂ ಮುಂಬೈನಲ್ಲಿ ಕಲಾಶಿಕ್ಷಣ ಪಡೆಯಲು ಹೋದಂತಹ ಸಂದರ್ಭದಲ್ಲಿ ಅವರಿಗೆ ಆದ ಅನುಭವ ಸೃಜನಶೀಲ ಕಲಾಕೃತಿಗಳ ರಚನೆಗೆ ಪೂರಕವಾದ ಅನೇಕ ಅಂಶಗಳ ಕುರಿತು ಅಧ್ಯಯನ ಮಾಡುವ ಉದ್ದೇಶವಿಲ್ಲಿದೆ.

ಕಲಾವಿದ ಕೆ.ಕೆ. ಹೆಬ್ಬಾರರ ದ್ಯಾನ ಚಿತ್ರಕಲೆಯ ಬಗ್ಗೆ ಇದ್ದರೂ ಅವರ ಮನಸ್ಸಿನ ವ್ಯಾಪ್ತಿಯಲ್ಲಿ ಸಂಗೀತ–ನರ್ತನಗಳೂ ಸೇರಿದ್ದವು. ತಮ್ಮ ಕಲಾಜೀವನದ ಅಪಾರ ಭಾಗದಲ್ಲಿ ಸಂಗೀತವನ್ನೇ ವಸ್ತುವಾಗಿ ಉಳ್ಳ ಅನೇಕ ಸುಂದರ ಚಿತ್ರಗಳನ್ನು ಅವರು ಬಿಡಿಸಿದ್ದು ಅಚ್ಚರಿ ತಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿಯಲ್ಲಿ ಯಕ್ಷ–ಭೂತ–ನಾಗರ ಆರಾಧನೆ ಬಗೆಬಗೆಯ ರಂಗ ಕಲೆಗಳಿಗೆ ಇಂಬುಗೊಟ್ಟಿದ್ದು ಈಗ ಜಗಜ್ಜನಿತವಾಗಿದೆ. ಕಲಾವಿದರಾದ ಹೆಬ್ಬಾರರಲ್ಲಿ ವರ್ಣ ಪ್ರಜ್ಞೆಯನ್ನು ಜಾಗೃತಗೊಳಿಸಲು ಯಕ್ಷಗಾನದ ವೇಷಗಳು ಸಹ ಮುಖ್ಯವಾಗಿರುವ ಅಂಶವನ್ನು ಕಾಣಬಹುದು. ಸಂಪ್ರದಾಯವಂತರ ದೃಷ್ಟಿಯಲ್ಲಿ ಕಲಾವಿದ ಹೆಬ್ಬಾರರು ನಿರೀಶ್ವರವಾದಿಯಾಗಿ ಕಾಣಬಹುದಾದರೂ, ಭಾರತೀಯ ಸಂಪ್ರದಾಯದ ಅರ್ಥಹೀನ ಆಚರಣೆಗಳನ್ನು ಅವರು ತ್ಯಜಿಸಿರುವುದು ನಿಜವಾದರೂ, ತಮ್ಮ ಸಂಸ್ಕೃತಿಯ ಅಂತರಂಗವನ್ನು ಪುರಸ್ಕರಿಸುತ್ತಾರೆ. ಕಟ್ಟಿಂಗೇರಿಯಲ್ಲಿ ಸಂಕಷ್ಟವನ್ನುಂಡು ಊರೂರು ಅಲೆದರು. ಬೇರು ಕಿತ್ತು ಹೋದ ಗಿಡದಂತೆ, ಉಡುಪಿ, ಮುಂಬೈ, ದೆಹಲಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ವಸತಿ ಮಾಡಬೇಕಾಗಿ ಬರುತ್ತದೆ. ಹೀಗೆ ಅವರ ಕಲಾಶಿಕ್ಷಣ ಪಯಣದ ಹಾದಿಗಳನ್ನು ಕುರಿತು ಸಂಶೋಧನೆ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಕಲಾವಿದ ಕೆ.ಕೆ. ಹೆಬ್ಬಾರರು ರಾಷ್ಟ್ರ ಮತ್ತು ಅಂತರರಾಷ್ಟೀಯ ಖ್ಯಾತಿ ಪಡೆದು ಸಾವಿರಾರು ರೇಖಾ ಹಾಗೂ ವರ್ಣ ಕಲಾಕೃತಿಗಳನ್ನು ನಿರ್ಮಿಸಿ ತಮ್ಮದೇ ಆದ ಬಹುಮುಖ ವ್ಯಕ್ತಿತ್ವದಿಂದ ಕಲಾಕ್ಷೇತ್ರಕ್ಕೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿ ಚಿತ್ರಕಲಾ ಕ್ಷೇತ್ರದಲ್ಲಿ ಉನ್ನತವಾದ ಸಾಧನೆಯನ್ನು ಮಾಡಿದ್ದಾರೆ. ಈ ಕಲಾವಿದರ ಜೀವನ, ಸಾಧನೆಯೊಂದಿಗೆ ಅವರ ಕಲಾಕೃತಿಗಳು ಹಾಗೂ ಕಲಾಕ್ಷೇತ್ರಕ್ಕೆ ಕೊಟ್ಟ ಅವರ ಕೊಡುಗೆಯನ್ನು ಮತ್ತು ಅವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಮುಂತಾದವುಗಳನ್ನು ವಿಶೇಷವಾಗಿ ಗಮನಿಸಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಕೆ. ಕೆ. ಹೆಬ್ಬಾರರು ಕಲಾಕ್ಷೇತ್ರದಲ್ಲಿ ವಿವಿಧ ಅಕಾಡೆಮಿಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಕಲೆಯ

ಅನೇಕ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ ಕಲಾಕ್ಷೇತ್ರಕ್ಕೆ ಅವರದೇ ಆದ ಸೇವೆ ಸಂದಿದೆ. ಇವೆಲ್ಲವುಗಳನ್ನು ಗಮನಿಸಿ ಅಧ್ಯಯನ ಮಾಡುವುದು ಒಂದು ಪ್ರಮುಖ ಉದ್ದೇಶವಾಗಿದೆ. ಹೆಬ್ಬಾರರ ಕುರಿತು ಬಂದ ಸಾಹಿತ್ಯದ ಸಮೀಕ್ಷೆ, ಅವರ ಕಲಾಕೃತಿಗಳ ಸಂಗ್ರಹದ ನೆಲೆಗಳ ಕುರಿತಾದ ಹಲವಾರು ಅಂಶಗಳು ಅಧ್ಯಯನದ ವ್ಯಾಪ್ತಿಯಲ್ಲಿ ವಿವೇಚಿಸುವ ಉದ್ದೇಶವಿದೆ.

ಅಧ್ಯಯನದ ಸ್ವರೂಪ

ಈ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದ ವಿಷಯವನ್ನು ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಹಾಗೂ ಅಧ್ಯಯನಕ್ಕೆ ಬಳಸಿದ ಆಕರ ಸಾಮಗ್ರಿಗಳ ಕುರಿತ ವಿವರಣೆ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಾಯ ಎರಡು : ಕೆ. ಕೆ. ಹೆಬ್ಬಾರರ ಬಾಲ್ಯ ಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ


ಕೆ. ಕೆ.ಹೆಬ್ಬಾರರ ಬಾಲ್ಯ ಜೀವನ ಮತ್ತು ಪ್ರಾಥಮಿಕ ಶಿಕ್ಷಣದಿಂದ ಕಲಾಶಿಕ್ಷಣದವರೆಗೆ ನಡೆದು ಬಂದ ಹಾದಿಯನ್ನು ಸಹ ಹೇಳಲಾಗಿದ್ದು, ವಿಶೇಷವಾಗಿ ಹೆಬ್ಬಾರರ ಜೀವನ ಶೈಲಿಯನ್ನು ಸ್ಥೂಲವಾಗಿ ವಿವರಿಸುವಂತಹ ಪ್ರಮುಖ ಅಂಶಗಳನ್ನು ಈ ಅಧ್ಯಯನದಲ್ಲಿ ಪ್ರಸ್ತುತ ಪಡಿಸಲಾಗಿದೆ.

ಅಧ್ಯಾಯ ಮೂರು : ಕೆ. ಕೆ. ಹೆಬ್ಬಾರರ ರೇಖಾಚಿತ್ರಗಳು

ಕೆ.ಕೆ.ಹೆಬ್ಬಾರರು ರಚಿಸಿದ ಪ್ರಮುಖ ರೇಖಾಚಿತ್ರಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಿದ್ದು, ಇಲ್ಲಿ ಅವರ ರೇಖಾಚಿತ್ರಗಳನ್ನು ತೋರಿಸಿ, ಅದರ ಕುರಿತು ವಿಮರ್ಶಾತ್ಮಕ ಶೈಲಿಯನ್ನು ಬಿಂಬಿಸಿರುವ ವ್ಯಕ್ತಿತ್ವವನ್ನು ತೋರಿಸಲಾಗಿದ್ದು. ಹಾಗೆಯೇ ವಿಶೇಷ ರೇಖಾಚಿತ್ರಗಳ ಆಸಕ್ತಿಯ ಕಡೆಗೆ ವಾಲಿದ ಕೆಲವು ಅನುಭವಗಳನ್ನು ಇಲ್ಲಿ ಹೇಳುವಂತಹ ಪ್ರಯತ್ನ ~~ಈ ಅಧ್ಯಾಯ~~ದಲ್ಲಿ ಮಾಡಲಾಗಿದೆ.

ಅಧ್ಯಾಯ ನಾಲ್ಕು : ಕೆ. ಕೆ. ಹೆಬ್ಬಾರರ ವರ್ಣಚಿತ್ರಗಳು

ಈ ಕಲಾವಿದರು ಒಂದೇ ಕಡೆಗೆ ಮನಸ್ಸು ನಿಲ್ಲದೇ ವಿಭಿನ್ನ ರೀತಿಯ ಹಲವು ರೂಪಗಳನ್ನು ಬಿಂಬಿಸುವ ರೀತಿಯಲ್ಲಿ ವಿಶಿಷ್ಟವಾಗಿ ತಮ್ಮದೇ ಆದ ತನವನ್ನು ಚಿತ್ರ ರಚಿಸುವ ಮೂಲಕ ಹೊರಹಾಕಿದ್ದಾರೆ. ಹಾಗೆಯೇ ಈ ಅಧ್ಯಾಯದಲ್ಲಿ ವರ್ಣಚಿತ್ರ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು



ಅಧ್ಯಯನಕ್ಕೊಳಪಡಿಸಲಾಗಿದೆ. ಇಲ್ಲಿ ವ್ಯವಸ್ಥಿತವಾದ ವರ್ಗೀಕರಣವನ್ನು ಮಾಡಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಐದು : ಕೆ. ಕೆ. ಹೆಬ್ಬಾರರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕೆ.ಕೆ.ಹೆಬ್ಬಾರರ ಕಲಾಕೃತಿಗಳನ್ನು ರಚಿಸಬೇಕಾದರೆ ಅವರ ಮೇಲಾದ ಪ್ರಭಾವ, ಅನುಭವ, ಪ್ರೇರಣೆಯನ್ನು ಹಾಗೂ ಅವರ ಕಲಾಕೃತಿಗಳ ತಂತ್ರ, ಶೈಲಿಯನ್ನು ಕುರಿತು ಕಲಾಕೃತಿಗಳ ಹಿನ್ನೆಲೆಯಲ್ಲಿ ಇಲ್ಲಿ ವಿಚೇಚಿಸಲಾಗಿದೆ.

ಅಧ್ಯಾಯ ಆರು : ಕೆ. ಕೆ. ಹೆಬ್ಬಾರರ ಕಲಾಚಟುವಟಿಕೆಗಳು

ಈ ಅಧ್ಯಾಯದಲ್ಲಿ ಕಲಾವಿದರಾದ ಕೆ. ಕೆ. ಹೆಬ್ಬಾರರು ತಮ್ಮ ಜೀವನದಲ್ಲಿ ಕಲೆಯ ಕುರಿತು ನೈಜತೆಯ ಪ್ರತಿಕಾರವೆಂಬಂತೆ ಬೆಳೆದ ರೀತಿಯನ್ನು ಕಲಾಚಟುವಟಿಕೆಗಳ ಪ್ರತಿರೂಪವನ್ನು ಕುರಿತು ಹಾಗೆಯೇ ಅವರ ಕಲಾಸಾಧನೆಯ ಪ್ರಮುಖ ಅಂಶಗಳನ್ನು ಚರ್ಚಿಸುವ ಕಾರ್ಯ ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಏಳು : ಕೆ. ಕೆ. ಹೆಬ್ಬಾರರ ಕುರಿತು ಬಂದ ಕಲಾಸಾಹಿತ್ಯ ಸಮೀಕ್ಷೆ


ಈ ಅಧ್ಯಾಯದಲ್ಲಿ ಕಲಾವಿದ ಕೆ. ಕೆ. ಹೆಬ್ಬಾರರ ಜೀವನ ಮತ್ತು ಕಲಾಕೃತಿಗಳ ಕುರಿತು ಅನೇಕ ಲೇಖನ, ಪುಸ್ತಕಗಳು ಬಂದಿದ್ದು, ಅವು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಬಂದಿವೆ. ಅಂತವುಗಳನ್ನು ಪರಿಚಯಿಸುವುದರ ಜೊತೆಗೆ ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ ಎಂಟು : ಸಮಾರೋಪ

ಈ ಅಧ್ಯಾಯವು ಸಮಾರೋಪವಾಗಿದ್ದು, ಮೇಲಿನ ಏಳು ಅಧ್ಯಾಯಗಳಲ್ಲಿ ಬರುವ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಹೊಂದಿರುತ್ತದೆ.

ಅಧ್ಯಯನ ವ್ಯಾಪ್ತಿ

ನಮ್ಮ ದೇಶದಲ್ಲಿಯೇ ಪ್ರಸಿದ್ಧರಾದ ಕೆ. ಕೆ. ಹೆಬ್ಬಾರರ ಹೆಸರು ಪ್ರಪಂಚ ವ್ಯಾಪ್ತಿ ಹರಡಿದೆ. ಅದೇ ರೀತಿಯಲ್ಲಿ ಇವರ ಕಲಾಕೃತಿಗಳು ಸಹ ಪ್ರಪಂಚ ವ್ಯಾಪ್ತಿಯಾಗಿ ಹರಡಿವೆ. ದೇಶದ ಹಾಗೂ ಹೊರದೇಶದ ಹಲವಾರು ಕಲಾ ಗ್ಯಾಲರಿಗಳಲ್ಲಿ, ದೇಶದ ಹಾಗೂ ಶ್ರೀಮಂತರ ಮನೆಗಳಲ್ಲಿ ಇವರ ಕಲಾಕೃತಿಯ ಸಂಗ್ರಹವಿದ್ದು, ಕಲೆಯ ಮಿತಿ ಹಾಗೂ ಅಧ್ಯಯನದ ಮಿತಿಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಇರುವ ಅವರ ಕಲಾಕೃತಿಗಳು ಹಾಗೂ ಕಲಾ ಸಂಗ್ರಹಾಲಯಗಳು, ಅವರ ಮನೆ, ಅರಮನೆಯಲ್ಲಿನ ಸಂಗ್ರಹಗಳು



ಎಲ್ಲಾವನ್ನು ಆಧರಿಸಿ ಕೆ. ಕೆ. ಹೆಬ್ಬಾರರ ಜೀವನ ಸಾಧನೆ ಮತ್ತು ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ಹಾಗೂ ಪೂರಕವಾಗಿ ಕರ್ನಾಟಕೇತರ ಪ್ರದೇಶಕ್ಕೆ ಅಧ್ಯಯನದ ವ್ಯಾಪ್ತಿ ಹರಡಿಕೊಂಡಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಹೆಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಹೆಚ್.ಡಿ. ಪ್ರಬಂಧಗಳು. ೨. ಎಂ.ಫಿಲ್. ಪ್ರಬಂಧಗಳು, ೩. ಡಿ. ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಎಸ್.ಸಿ. ಪಾಟೀಲ ಅವರು ೧೯೮೩ರಲ್ಲಿ **"ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ"**[೬] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ನಡೆದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ. ಆನಂತರದ ೧೯೮೭ರಲ್ಲಿ ಡಾ. ಚುಡಾಮಣಿ ನಂದಗೋಪಾಲರವರ **"ಡ್ಯಾನ್ಸ್ ಅಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್"**[೭] ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ **"ಬಿ.ಕೆ. ಹಿರೇಮಠರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ"**[೮] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿಯೂ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಬಂದಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಕೆಲವು ಪ್ರಯತ್ನಗಳಾಗಿವೆ.

ಪಿಎಚ್.ಡಿ. ಪ್ರಬಂಧಗಳು


ದೃಶ್ಯಕಲೆಯನ್ನೇ ಅಧ್ಯಯನದ ಪ್ರಧಾನ ಉದ್ದೇಶವಾಗಿಟ್ಟುಕೊಂಡು ಬಂದ ಸಂಶೋಧನ ಅಧ್ಯಯನ ೧೯೯೧ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಸ್.ಸಿ. ಪಾಟೀಲ ಅವರ **"ಕರ್ನಾಟಕದ**

---

೦೬. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.ಧಾರವಾಡ, ೧೯೮೩.

೦೭. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್" ಮೈಸೂರು ವಿ.ವಿ– ೧೯೮೭

೦೮. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೭



ಜನಪದ ಚಿತ್ರಕಲೆ[೯] ಎಂಬ ಪಿಹೆಚ್.ಡಿ. ಪ್ರಬಂಧ ಹೊರಬಂದಿದ್ದು ಪೂರ್ಣಪ್ರಮಾಣದಲ್ಲಿ ಚಿತ್ರಕಲೆಯನ್ನು ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟ ಮೊದಲ ಪಿಹೆಚ್.ಡಿ ಮಹಾಪ್ರಬಂಧವಾಗಿದೆ. ಮುಂದೆ ನಾಲ್ಕು ವರ್ಷಗಳ ನಂತರ ೧೯೯೫ ರಲ್ಲಿ **"ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು"**[೧೦] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅ.ಲ. ನರಸಿಂಹನ್ ಅವರಿಂದ ಸಲ್ಲಿಸಲ್ಪಟ್ಟಿತು. ೧೯೯೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪುಷ್ಪಾ ದ್ರಾವಿಡ ಅವರು **"ಅನಿವಾಸಿ ಭಾರತೀಯ ಕಲಾವಿದ ದಿ ರೋರಿಕ್ ಜೀವನ ಮತ್ತು ಕಲಾಕೃತಿಗಳು"**[೧೧] ಎಂಬ ವಿಷಯದ ಮೇಲೆ, ೧೯೯೮ರಲ್ಲಿ ಸಂಪದಾ ಭಟ್ ಅವರು **"ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು"**[೧೨] ಎಂಬ ವಿಷಯದ ಕುರಿತು, ೨೦೦೨ ರಲ್ಲಿ ಯಾದಪ್ಪ ಪರದೇಶಿ ಅವರು **"ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ"**[೧೩], ಶಿವಾನಂದ ಬಂಟನೂರ **"ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ",**[೧೪] ಗಿರೀಶ ಕುಮಾರ ಅವರ **"ಬುಡಕಟ್ಟು ಚಿತ್ರಕಲೆ",**[೧೫] ಲಕ್ಷ್ಮೀದೇವಿ ಗವಾಯಿಯವರ **"ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು - ಒಂದು ಅಧ್ಯಯನ"**[೧೬], ಶರಣಪ್ಪ ಕೋಲ್ಕಾರ ಅವರ **"ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ",**[೧೭] ಸೌಮ್ಯ ಅವರ **"ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್"**[೧೮], ಪ್ರಮೀಳಾ ಲೋಚನ ಅವರ **"ಮೈಂಡ್, ಮ್ಯೂಸಿಕ್ ಅಂಡ್ ಕಲರ್ ಎಕ್ಸಪೋಸೆಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್"**[೧೯] ೨೦೦೩ರಲ್ಲಿ ವೀಣಾ ಶೇಖರ್ ಮಂಡಿಸಿದ "ಎ

---

೦೯. ಡಾ. ಎಸ್.ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ೧೯೮೧.

೧೦. ಡಾ. ಅ.ಲ. ನರಸಿಂಹನ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೮

೧೧. ಡಾ. ಪುಷ್ಪಾ ದ್ರಾವಿಡ್ : ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು. ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೭.

೧೨. ಡಾ. ಸಂಪದಾಭಟ್ : ಹಿಂದುಸ್ಥಾನ ಸಂಗೀತ ಮತ್ತು ರಾಗಮಾಲ ಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ೧೯೯೮

೧೩. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೧.

೧೪. ಡಾ. ಶಿವಾನಂದ ಬಂಟನೂರು : ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ: ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.


೧೫. ಡಾ. ಗಿರೀಶ ಕುಮಾರ : ಬುಡಕಟ್ಟು ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೬. ಡಾ. ಲಕ್ಷ್ಮೀದೇವಿ ಗವಾಯಿ : ಪಿಎಚ್.ಡಿ. ಮಹಾಪ್ರಬಂಧ "ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಳು – ಒಂದು ಅಧ್ಯಯನ ೨೦೦೨.

೧೭. ಡಾ. ಶರಣಪ್ಪ ಕೋಲ್ಕರ್ : ಕೊಪ್ಪಳ – ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೨.

೧೮. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨

೧೯. ಡಾ. ಪ್ರಮೀಳಾ ಲೋಚನ್ : ಮೈಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೨.



ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ"(೧೭೮೦ - ೧೮೨೦)[೨೦], ಸಿದ್ಧಲಿಂಗಸ್ವಾಮಿ ಹಿರೇಮಠ **"ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ"**[೨೧], ಎಸ್. ಸಿ. ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **"ಎ ಕ್ರಿಟಿಕಲ್ ಅನಾಲಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್"**[೨೨] ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧ, ೨೦೦೪ ರಲ್ಲಿ ವಿ.ಎಮ್. ಬಾಗಾಯತ್ ಅವರ **ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ"** (೧೪೦೦ - ೧೮೦೦),[೨೩] ಶಿಕುಮಾರ ಜಿ.ಓ. ಅವರ **"ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು",**[೨೪] ಪಿ. ಗೌರೀಶ, ಅವರ **"ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ",**[೨೫] ಶಶಿಕಲಾ ಹೂಗಾರ ಅವರ **"ಕರ್ನಾಟಕ ತೊಗಲು ಗೊಂಬೆ"**[೨೬] ೨೦೦೫ರಲ್ಲಿ ಶಿವಪ್ರಕಾಶ ತುಕ್ಕಣ್ಣವರ ಅವರ **"ಕರ್ನಾಟಕ ರಥ ಶಿಲ್ಪಕಲೆ"**[೨೭], ಎಸ್. ವಿ. ವೆಂಕಟೇಶಯ್ಯ ಅವರ **"ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು: ಒಂದು ಅಧ್ಯಯನ"**[೨೮], ಎಚ್. ಎನ್. ಚಿತ್ರಗಾರ ಅವರ **"ಕರ್ನಾಟಕ ಹಸ್ತಪ್ರತಿ ಚಿತ್ರಕಲೆ"**[೨೯], ೨೦೦೬ರಲ್ಲಿ ವಿಶ್ವೇಶ್ವರಿ ತಿವಾರಿ ಅವರ **"ಹೈದ್ರಾಬಾದ್–ಕರ್ನಾಟಕದ ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು",**[೩೦] ೨೦೦೭ರಲ್ಲಿ ಮಲ್ಲಿಕಾರ್ಜುನ ಬಾಗೋಡಿ ಇವರ **"ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ"**[೩೧]

---

೨೦. ಡಾ. ವೀಣಾಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೨೦೦೩.

೨೧. ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ : ಕಲಾವಿದ ಆರ್,ಎಮ್. ಹಡಪದ, ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೩.

೨೨. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ ೨೦೦೨.

೨೩. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.– ೨೦೦೪.

೨೪. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾನಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. - ೨೦೦೪.

೨೫. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. ೨೦೦೪.

೨೬. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ., ಹಂಪಿ – ೨೦೦೪


೨೭. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೪.

೨೮. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. - ೨೦೦೫.

೨೯. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ. ೨೦೦೫.

೩೦. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. - ೨೦೦೬

೩೧. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು. ೨೦೦೭.



ಮತ್ತು ಗೀತಾಂಜಲಿ ಬಿ.ಆರ್. ಅವರ **"ಐತಿಹಾಸಿಕ ದೀಪಸ್ತಂಭಗಳು",**[೩೨] ಲಕ್ಷ್ಮಣಸಿಂಗ್ ಆರ್. ರಾಠೋಡ್ ಅವರ **"ಅನ್ವಯಿಕ ಕಲೆ, ಹಿಂದಿನಿಂದ ಇಂದಿನವರೆಗೆ",**[೩೩] ೨೦೦೮ ರಲ್ಲಿ ಮೋಹನ್ ಪಂಚಾಳ ಅವರ **"ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ",**[೩೪] ವಿಶ್ವನಾಥ ಎ.ಎಸ್. ಅವರ **"ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು"**[೩೫], ಪಿ.ಟಿ. ಲಕ್ಕಣ್ಣನವರ ಅವರ **"ಕರ್ನಾಟಕದ ಚಿತ್ರಕಲಾ ಸಾಹಿತ್ಯ - ಒಂದು ವೈಚಾರಿಕ ಅಧ್ಯಯನ",**[೩೬] ರವಿಂದ್ರ ಕಮ್ಮಾರ ಅವರ **"ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು"**[೩೭], ೨೦೦೯ರಲ್ಲಿ ರೆಹಮಾನ ಪಟೇಲ ಅವರ **"ಕರ್ನಾಟಕ ಬಿದ್ರಿ ಕಲೆ" ಒಂದು ಅಧ್ಯಯನ**[೩೮], ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,**[೩೯] ೨೦೧೦ರಲ್ಲಿ ಶ್ರೀಮತಿ ಸುನಿತಾ ಪಾಟೀಲರವರ **"ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು"**[೪೦], ೨೦೧೧ರಲ್ಲಿ ನಿಂಗಪ್ಪ ಎಂ. ಅಂಗಡಿಯವರ **"ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ",**[೪೧] ಕಿಶೋರ ಎನ್. ದಾಟನಾಳ ಅವರ **"ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ"**[೪೨], ಕಾಶಿನಾಥ ಡಿ. ವಡ್ಡರ್ ಅವರ **"ಶಾಂತಿನೀಕೇತನದ ಭಿತ್ತಿಚಿತ್ರಗಳು',**[೪೩] ಸತೀಷಕುಮಾರ ವಲ್ಲ್ಯೇಪೂರೆರವರ **'ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು"**[೪೪], ಶಂಕರ ಕುಂದಗೋಳ ಅವರ **"ಕರ್ನಾಟಕದ ಗಂಜೀಫಾ ಚಿತ್ರಕಲೆ"**[೪೫], ೨೦೧೨ರಲ್ಲಿ ಭಾರತಿ ಮರವಂತಿ

೩೨. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೭

೩೩. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ. – ೨೦೦೭

೩೪. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೮.

೩೫. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. - ೨೦೦೮.

೩೬. ಡಾ.ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ - ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೮.

೩೭. ಡಾ. ರವಿಂದ್ರ ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ.೨೦೦೮.

೩೮. ಡಾ. ರೆಹಮಾನ ಪಟೇಲ : ಕನಾಟಕದ ಬಿದ್ರಿ ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು – ೨೦೦೯

೩೯. ಡಾ. ಜಿ. ಲಕ್ಷ್ಮೀಪತಿ : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೦. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೧. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೦

೪೨. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦.

೪೩. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನೀಕೇತನದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ : ಗು.ವಿ.ಗು– ೨೦೧೧

೪೪. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗು, ೨೦೧೧.

೪೫. ಡಾ. ಶಂಕರ ಕುಂದಗೋಳ : "ಕರ್ನಾಟಕದ ಗಂಜೀಫಾ ಚಿತ್ರಕಲೆ" ಕನ್ನಡ ವಿ.ವಿ. ಹಂಪಿ. ೨೦೧೨

ಅವರ **"ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ"**[೪೬], ಕಾಮಾಕ್ಷಿ ಸಿ. ಸೊಪ್ಪಣ ಅವರ **"ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ"**[೪೭] ಇವು ದೃಶ್ಯಕಲೆಗಳ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನ ಮಾಡುತ್ತಿದ್ದಾರೆ.

ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲ ಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್ ಪ್ರಬಂಧಗಳು ಹೀಗಿವೆ.

೨೦೦೧ರಲ್ಲಿ ದೇವದಾಸ ಕಳಸದ ಇವರ **"ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ",**[೪೮] ೨೦೦೫ರಲ್ಲಿ ಬಂದ ಆನಂದ ಪೂಜಾರರ **"ಕರಾವಳಿಯ ಕಾವಿ ಚಿತ್ರಕಲೆ".**[೪೯] ಡಿ.ವಿ. ಉಪಾಧ್ಯ ಅವರ **"ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ",**[೫೦] ೨೦೧೦ರಲ್ಲಿ ಎಂ.ಎಸ್. ಮೂರ್ತಿ ಅವರ **"ಮಕ್ಕಳ ಮನಸ್ಸಿನ ಚಿತ್ರಗಳು"**[೫೧] ಮುಖ್ಯವಾಗಿವೆ. ಈ ಡಿ.ಲಿಟ್ ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯವು ಪರಿಶೀಲಿಸಿ ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್ ಸಂಶೋಧನ ಅಧ್ಯಯನಕ್ಕೆ ಅವಕಾಶವಿದೆ.

ಎಂ.ಫಿಲ್. ಅಧ್ಯಯನಗಳು

ಕನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ

---

೪೬. ಡಾ. ಭಾರತಿ ಮರವಂತಿ : "ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ" ಮೈಸೂರು ವಿ.ವಿ. ೨೦೧೨


೪೭. ಡಾ. ಕಾಮಾಕ್ಷಿ ಸಿ. ಸೊಪ್ಪಣ : "ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ" ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೮. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೪೯. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೦೫.

೫೦. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೫.

೫೧. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦



ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್ ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **"ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ",**[೫೨] ೨೦೦೩ ರಲ್ಲಿ ಎ.ಎಸ್. ವಿಶ್ವನಾಥ ಅವರ **"ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು",**[೫೩] ೨೦೦೫ ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **"ಎಂ.ವಿ. ಮಿಣಜಗಿ ಜೀವನ ಮತ್ತು ಕಲಾಬದುಕು",**[೫೪] ಶಂಕರ ಕುಂದಗೋಳರ **"ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು",**[೫೫] ೨೦೦೬ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **"ವಿಜಯನಗರದ ಭಿತ್ತಿ ಚಿತ್ರಕಲೆ",**[೫೬] ರವಿ ನಾಯಕರ **"ಕಿನ್ನಾಳ ಕಲೆ",**[೫೭] ರಾಜಕುಮಾರ ಎಸ್. ಕಾಳೆ ಅವರ **"ಔಂದ ಗ್ಯಾಲರಿ",**[೫೮] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **"ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು",**[೫೯] ಬಿ.ಎಂ. ಪಾಟೀಲರ **"ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು",**[೬೦] ಉಮೇಶ ಎ.ಎಸ್. **"ಕರ್ನಾಟಕ ಜೈನ ಚಿತ್ರಕಲೆ",**[೬೧] ಶಶಿಕಾಂತ ಬಸರಿಕಟ್ಟಿಯವರ **"ಕಲಘಟಗಿಯ ಚಿತ್ರಕಲೆ",**[೬೨] ಶೈಲಾ ಬರಡೋಲರ **"ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು"**[೬೩] ಎಂಬ ಪ್ರಬಂಧಗಳು ಹೊರಬಂದಿವೆ.

೨೦೦೮ರಲ್ಲಿ ಕೃಷ್ಣವೇಣಿ **"ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ"**[೬೪] ಯೋಗೀಶ ಹೆಚ್. **"ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ",**[೬೫] ಮಹಾಕೂಟೇಶ್ವರಗೌಡ ಪಾಟೀಲ **"ಬೆಳಗಾವಿ ಜಿಲ್ಲೆಯ ಚಿತ್ರಕಲೆ",**[೬೬] ಸುರೇಶ

೫೨. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೨.

೫೩. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೩

೫೪. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.

೫೫. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೬

೫೬. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬

೫೭ ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೫೮. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು - ೨೦೦೭

೫೯. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು - ೨೦೦೭

೬೦. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೧. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭


೬೨. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೩. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೬೪. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೬೫. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೬೬. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮



ಬಡಿಗೇರ **"ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ",**[೧೭] ಸಂತೋಷಕುಮಾರ ಕುಲಕರ್ಣಿ ಅವರ **"ದಾವಣಗೆರೆ ಜಿಲ್ಲೆಯ ಚಿತ್ರಕಲೆ",**[೧೮] ಜಯರಾಜ ಚಿಕ್ಕಪಾಟೀಲರ **"ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು",**[೧೯] ಮಹೇಶ ಉಮತಾರ ಅವರ **"ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ"**[೨೦] ಗಿರಿಜಾ ಬಿರಾದಾರರ **"ವಿಜಾಪೂರ ಜಿಲ್ಲೆಯ ಚಿತ್ರಕಲೆ",**[೨೧] ಬಸಯ್ಯ ಗವಿಮಠ ಅವರ **"ಬಾಗಲಕೋಟ ಜಿಲ್ಲೆಯ ಚಿತ್ರಕಲೆ",**[೨೨] ಕೃಷ್ಣೆಗೌಡ ಹೆಚ್.ಎನ್. ಅವರ **"ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ",**[೨೩] ಮಹಾಂತೇಶ ಪಲದಿನ್ನಿ ಅವರ **"ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು"**[೨೪] ಮತ್ತು ೨೦೦೯ರಲ್ಲಿ ಕಾಂತರಾಜ ಅವರ **"ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ",**[೨೫] ರಂಗಸ್ವಾಮಿ ಅವರ **"ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ"**[೨೬] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೨೭] ೨೦೧೦ರಲ್ಲಿ ಭಾನುಮತಿ ಕೆ.ಎಲ್. ಅವರ **"ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು",**[೨೮] ದಿನೇಶ ಬಿ. ಅವರ **"ಚನ್ನಪಟ್ಟಣದ ಚಿತ್ತಾರ ಗೊಂಬೆಗಳು",**[೨೯] ವಾದಿರಾಜ ಎ. ಅವರ **"ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು",**[೩೦] ಚಿಂತಾಮಣಿ ಅವರ **"ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ"**[೩೧] ಇವುಗಳೆಲ್ಲಾ ಎಂ.ಫಿಲ್ ಪ್ರಬಂಧಗಳಾಗಿವೆ.

ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಟ್ಟು ಮೂವತ್ತೊಂದು ಎಂ.ಫಿಲ್. ಪದವಿಯ ಸಂಶೋಧನಾ ಪ್ರಬಂಧಗಳು ಹೊರಬಂದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು ಕನ್ನಡ ವಿಶ್ವವಿದ್ಯಾಲಯ

---

೧೭. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೧೮. ಸಂತೋಷಕುಮಾರ ಕುಲಕರ್ಣಿ : ದಾವಣಗೇರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೧೯. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೨೦. ಮಹೇಶ ಉಮತಾರ : ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೨೧. ಗಿರೀಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೨೨. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೨೩. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೮

೨೪. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೮

೨೫. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೯

೨೬. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ- ೨೦೦೯

೨೭. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೦೯

೨೮. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೧೦

೨೯. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೧೦


೩೦. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೧೦

೩೧. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತರಾದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ-೨೦೧೦

ಹಂಪಿಯಿಂದ ಇಪ್ಪತ್ತೊಂಬತ್ತು ಎಂ.ಫಿಲ್. ಪ್ರಬಂಧಗಳು ಹೊರಬಂದಿವೆ. ಇದಲ್ಲದೆ ಇನ್ನೂ ಅನೇಕ ಪಿಹೆಚ್.ಡಿ., ಎಂ.ಫಿಲ್ ಮತ್ತು ಡಿ.ಲಿಟ್ ಪ್ರಬಂಧಗಳು ರಚನೆಯ ಹಂತದಲ್ಲಿವೆ. ಇವುಗಳಲ್ಲದೆ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಇತ್ತೀಚಿಗೆ ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಧಾರವಾಡ, ಶಿವಮೊಗ್ಗ, ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಎ.ಟಿ.ಸಿ. (ಆರ್ಟ್ ಟೀಚರ್ ಕೋರ್ಸ್) ಐದು ವರ್ಷದ ವಿಶೇಷ ಪರಿಣಿತಿ, ಚಿತ್ರಶಿಲ್ಪ, ಗ್ರಾಫಿಕ್, ವಾಣಿಜ್ಯ ಕಲೆ, ಡಿಪ್ಲೋಮ ಅಂತಿಮ ವರ್ಷದ ತರಗತಿಗಳಲ್ಲಿ ಈ ಕೋರ್ಸ್‌ನ ಭಾಗವಾಗಿ ಕಿರು ಪ್ರಬಂಧಗಳನ್ನು ರಚಿಸಿದ್ದು, ಇವುಗಳ ಸಂಖ್ಯೆ ಮೂರು ಸಾವಿರಕ್ಕೂ ಅಧಿಕವಾಗಿವೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್. (ಬಿ.ಎಫ್.ಎ) ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿ.ವಿ.ಎ.) ಪದವಿ ಫೈನ್ ಆರ್ಟ್ಸ್ (ಎಂ.ಎಫ್.ಎ) ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗುತ್ತಿವೆ.

ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಆಯಾ ಕೋರ್ಸಿನ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳಾಗಿದ್ದು, ಇವು ಮುಂದೆ ಸಂಶೋಧನ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಿಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಅನೇಕ ವೈವಿಧ್ಯಮಯವಾದ ವಿಷಯದ ಈ ಕಿರುಪ್ರಬಂಧಗಳು ಸಂಶೋಧನಾ ಅಧ್ಯಯನಕ್ಕೆ ಆಕರ ಸಾಮಾಗ್ರಿಯಾಗಿವೆ. ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಸಂಶೋಧನ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಕರ್ನಾಟಕ ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನವು ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. "ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳು ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷೆ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನ ಅಧ್ಯಯನಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿವೆ ಎಂದು ಡಾ. ಎಸ್.ಸಿ. ಪಾಟೀಲ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ವಾಸ್ತವದ ಚಿತ್ರಣವಾಗಿದೆ."



ಪ್ರಸ್ತುತ ಕೆ.ಕೆ. ಹೆಬ್ಬಾರರನ್ನು ಕುರಿತು ನಡೆದ ಅಧ್ಯಯನದ ಸಮೀಕ್ಷೆ

ಕೆ. ಕೆ. ಹೆಬ್ಬಾರರ ಕುರಿತಾಗಿ ಹಲವಾರು ಕಲಾಸಾಹಿತ್ಯಗಳು ಇಲ್ಲಿಯವರೆಗೆ ಹಲವು ಕ್ರಮಗಳಲ್ಲಿ ಬಂದವೆ ಪುಸ್ತಕರೂಪ, ಪತಿಕಾ ಲೇಖನ, ತುಂಡು ಬರಹಗಳು, ಹೀಗೆ ಹಲವು ಬಗೆಯಲ್ಲಿ ಬಂದವೆ ಅದೇ ರೀತಿಯಲ್ಲಿ ಮೊಟ್ಟಮೊದಲಿಗೆ ೧೯೪೮ರಲ್ಲಿ ಡೀಲಕ್ಸ್ ನಳಂದ ಪಬ್ಲಿಕೇಶನ್ ಎಡಿಷನ್ ಅವರು **ಹೆಬ್ಬಾರ್**[೮೨] ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಹೆಬ್ಬಾರರ ಬಾಲ್ಯ ಜೀವನದಿಂದ ಹಿಡಿದು ಅವರು ಕಲಾಕ್ಷೇತ್ರದಲ್ಲಿ ಸಾಧಿಸಿದ ಎಲ್ಲ ಹಿರಿಮೆ ಮತ್ತು ಗರಿಮೆಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

೧೯೬೦ರಲ್ಲಿ ಪ್ರಥಮವಾಗಿ ಲಲಿತಕಲಾ ಅಕಾಡೆಮಿ, ದೆಹಲಿಯಿಂದ ಮುದ್ರಣಗೊಂಡು **ಹೆಬ್ಬಾರ್**[೮೩] ಎಂಬ ಪುಸ್ತಕವು ೧೯೮೨ರಲ್ಲಿ ಪರಿಷ್ಕೃತವಾಗಿ ಮುದ್ರಣವಾಯಿತು. ಹೆಬ್ಬಾರರ ಜೀವನ ಮತ್ತು ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ ಕುರಿತು ಪರಿಚಯಿಸುವ ಕೃತಿ ಇದಾಗಿದೆ. ೧೯೬೪ರಲ್ಲಿ **ಸಿಂಗಿಂಗ್ ಲೈನ್**[೮೪] ಎಂಬ ಪುಸ್ತಕವು ಪಿಕಾಕ್ ಪಬ್ಲಿಕೇಶನ್, ಮುಂಬೈಯವರು ಪ್ರಕಟಿಸಿದ್ದಾರೆ. ಇದೇ ಕೃತಿಯನ್ನು ೧೯೮೨ರಲ್ಲಿ ಅಭಿನವ ಪ್ರಕಾಶನದವರು ಮರುಮುದ್ರಣ ಮಾಡಿದ್ದಾರೆ. ಹೆಸರೇ ಸೂಚಿಸುವಂತೆ ಈ ಕೃತಿಯಲ್ಲಿ ಹೆಬ್ಬಾರರ ರೇಖೆಗಳ ಲಾವಣ್ಯವನ್ನು ಕಾಣಬಹುದಾಗಿದೆ.

೧೯೭೪ರಲ್ಲಿ **ಆನ್ ಆರ್ಟಿಸ್ಟ್ ಕ್ವೆಸ್ಟ್**[೮೫] ಎಂಬ ಕೃತಿಯನ್ನು ಅಭಿನವ ಪ್ರಕಾಶನ, ನವದೆಹಲಿ ಅವರು ಪ್ರಕಟಿಸಿದರು. ಇದರಲ್ಲಿ ಇದೇ ಅವಧಿಯಲ್ಲಿ ಎನ್. ಮರಿಶಾಮಾಚಾರ್ ಅವರು **ಹೆಬ್ಬಾರ್ – ಕನ್ನಡ**[೮೬] ಎಂಬ ಕೃತಿಯನ್ನು ಸಿ.ಎಂ.ಎನ್. ಪ್ರಕಾಶನದವರು ಪ್ರಕಟಿಸಿದ್ದಾರೆ. ಇದೇ ಕೃತಿಯನ್ನು ೧೯೮೩ ಮತ್ತು ೨೦೦೯ರಲ್ಲಿ ಮರುಮುದ್ರಣಗೊಂಡಿದೆ.

೧೯೮೭ರಲ್ಲಿ ಎನ್. ಮರಿಶಾಮಾಚಾರ್ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹೊರತರಲಾದ **ಕೆ. ಕೆ. ಹೆಬ್ಬಾರ್**[೮೭] ಎಂಬ ಕೃತಿಯು ಹೆಬ್ಬಾರರ ಜೀವನ ಮತ್ತು ಅವರ ಕಲೆಗಳನ್ನು ಕುರಿತು ಪರಿಚಯಿಸಿಕೊಡುವ ಕೃತಿ ಇದಾಗಿದೆ. ೧೯೮೮ರಲ್ಲಿ ಕು.ಶಿ. ಹರಿದಾಸ ಭಟ್ಟರವರು ಬರೆದು ಹೊರತಂದಂತಹ **ಕಟ್ಟಂಗೇರಿ ಕೃಷ್ಣ ಹೆಬ್ಬಾರ್, ಕಲೆ ಮತ್ತು ಜೀವನ**[೮೮] ಎಂಬ ಕೃತಿಯು ಹೆಬ್ಬಾರರ ಇಡೀ

---

೮೨. ಹೆಬ್ಬಾರ್ : ಡೀಲಕ್ಸ್ ನಳಂದ ಪಬ್ಲಿಕೇಶನ್, ಎಡಿಷನ್, ಮುಂಬೈ, ೧೯೪೮

೮೩. ಹೆಬ್ಬಾರ್ : ಸಮಕಾಲೀನ ಕಲಾವಿದರ ಮಾಲೆ, ಲಲಿತಕಲಾ ಅಕಾಡೆಮಿ, ನವದೆಹಲಿ. ೧೯೬೦

೮೪. ಸಿಂಗಿಂಗ್ ಲೈನ್ : ಪಿಕಾಕ್ ಪಬ್ಲಿಕೇಶನ್, ಮುಂಬೈ, ೧೯೬೪

೮೫. ಆನ್ ಆರ್ಟಿಸ್ಟ್ ಕ್ವೆಸ್ಟ್ : ಅಭಿನವ ಪ್ರಕಾಶನ, ನವದೆಹಲಿ, ೧೯೭೪

೮೬. ಹೆಬ್ಬಾರ್ (ಕನ್ನಡ) : ಲೇ. ಎನ್. ಮರಿಶಾಮಾಚಾರ್, ಸಿಎಂ.ಎನ್. ಪ್ರಕಾಶನ, ಬೆಂಗಳೂರು

೮೭. ಕೆ. ಕೆ. ಹೆಬ್ಬಾರ್ : ಲೇ. ಎನ್. ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೮೮. ಕಟ್ಟಂಗೇರಿ ಕೃಷ್ಣ ಹೆಬ್ಬಾರ್ : ಲೇ. ಕು.ಶಿ. ಹರಿದಾಸಭಟ್ಟ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ

ಜೀವನವನ್ನು ಒಂದು ಕಡೆಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಇದು ಇವರ ಕುರಿತು ಬಂದಂತಹ ಕೃತಿಗಳಲ್ಲಿ ಪ್ರಮುಖವಾದದ್ದಾಗಿದೆ.

೧೯೯೧ರಲ್ಲಿ ಜಹಾಂಗೀರ್ ಆರ್ಟ್‌ಗ್ಯಾಲರಿ, ಮುಂಬೈಯವರು **ವಾಯೇಜ್ ಇನ್ ಇಮೇಜಸ್**[೪೯] ಎಂಬ ಕೃತಿಯನ್ನು ಹೊರತಂದಿದ್ದಾರೆ. ೧೯೯೬ರಲ್ಲಿ **ಕಲಾಸಾಧಕ**[೫೦] : ಹೆಬ್ಬಾರರನ್ನು ಕುರಿತ ವಿವಿಧ ಲೇಖನಗಳನ್ನು ಸಂಗ್ರಹಗೊಂಡ ಈ ಕೃತಿ ಎನ್ ಮರಿಶಾಮಾಚಾರ್ ಅವರು ಬರೆದದ್ದು ಇದನ್ನು ಅವರದ್ದೇ ಆದ ಸಿಎಂಎನ್ ಪ್ರಕಾಶನದಿಂದ ಹೊರತರಲಾಗಿದೆ.

ಒಟ್ಟಾರೆ ಈ ಮೇಲಿನ ಅನೇಕ ಲೇಖನ, ಗ್ರಂಥಗಳನ್ನು ಗಮನಿಸಿದಾಗ ಒಂದೊಂದು ರೀತಿಯ ಕೆಲವು ಅಂಶಗಳನ್ನು ಒಳಗೊಂಡಂತೆ ಮೇಲಿನ ಅಧ್ಯಯನಗಳು ಮಾಹಿತಿಯನ್ನು ಒದಗಿಸುತ್ತವೆ. ಆದರೆ ಹೆಬ್ಬಾರರ ಕುರಿತು ಬದುಕು, ಕಲಾಸಾಧನೆ ಪ್ರಮುಖವಾಗಿ ಅವರ ಕಲಾಕೃತಿಗಳ ವಸ್ತುವಿಷಗಳನ್ನು ಕುರಿತು ಸಮಗ್ರವಾಗಿ ಇಲ್ಲಿಯವರೆಗೆ ಗಂಭೀರವಾದ ಯಾವುದೇ ಸಂಶೋಧನ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವಿಧಾನ

ವ್ಯಕ್ತಿಗತ ಅಧ್ಯಯನದ (ಕೇಸ್ ಸ್ಟಡಿ) ವಿಧಾನದಲ್ಲಿ ಚಿತ್ರ ಕಲಾವಿದರಾದ ಕೆ. ಕೆ. ಹೆಬ್ಬಾರರ ಜೀವನ ಮತ್ತು ಕಲೆ ಕುರಿತಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇಲ್ಲಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು.

೨. ಅನುಷಾಂಗಿಕ ಆಕರ ಸಾಮಗ್ರಿಗಳು.


ಈ ಎರಡು ಮೂಲಗಳಿಂದ ವಿಷಯ ಸಂಗ್ರಹ ಮಾಡುತ್ತೇನೆ.

೧. ಮೂಲ ಆಕರ ಸಾಮಗ್ರಿಗಳು

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯ, ಸ್ವತಃ ಕಲಾವಿದರ ಸಂದರ್ಶನ, ಅವರೊಂದಿಗಿನ ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣ ಮಾಡುವುದು, ಅವರ ಸಮಕಾಲೀನರ ಸಂದರ್ಶನಗಳು, ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ಧಪಡಿಸಿ ವಿವಿಧ ರೂಪದಲ್ಲಿ ಅಧ್ಯಯನಕ್ಕೆ ಬೇಕಾದಂತಹ ಪ್ರವಾಸವನ್ನು ಕೈಗೊಳ್ಳುವುದರ ಜೊತೆಗೆ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸುವುದು

೪೯. ವಾಯೇಜ್ ಇನ್ ಇಮೇಜಸ್ : ಜಹಾಂಗೀರ್ ಆರ್ಟ್ ಗ್ಯಾಲರಿ, ಮುಂಬೈ. ೧೯೯೧

೫೦. ಕಲಾಸಾಧಕ : ಹೆಬ್ಬಾರರನ್ನು ಕುರಿತ ವಿವಿಧ ಲೇಖನಗಳು, ಲೇ. ಎನ್. ಮರಿಶಾಮಾಚಾರ್, ಸಿಎಂ.ಎನ್. ಪ್ರಕಾಶನ, ಬೆಂಗಳೂರು



ಅಧ್ಯಯನ ಮುಖ್ಯ ಉದ್ದೇಶವಾಗಿದ್ದು, ಪ್ರಮುಖವಾಗಿ ಈ ಅಧ್ಯಯನದ ಈ ಭಾಗದಲ್ಲಿ ಕಲಾವಿದರ ಕುರಿತು ಚರ್ಚೆ ಮಾಡಬೇಕಾಗಿದ್ದು, ಆದ್ದರಿಂದ ಕಲಾವಿದರ ಕುರಿತು ಬಂದಂತಹ ಲೇಖನಗಳ ಲೇಖಕರನ್ನು ಭೇಟಿ ಮಾಡಿ ಮಾಹಿತಿ ಹಾಗೂ ಛಾಯಾಚಿತ್ರಗಳನ್ನು ಇಲ್ಲಿ ಬಳಸಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿಗಳು

ಕಲಾ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ ಹಾಗೂ ಅಪ್ರಕಟಿತ ಕಲಾವಿದರ ಕೃತಿಗಳು, ನಿಘಂಟುಗಳು, ವಿಶ್ವಕೋಶಗಳು, ಪತ್ರಿಕೆಗಳು, ಲೇಖನಗಳು ಹಾಗೂ ಗ್ರಂಥಗಳಲ್ಲಿ ಕಂಡುಬರುವಂತಹ ಪ್ರಮುಖ ಅಂಶಗಳನ್ನು ಬಳಸಿಕೊಳ್ಳುವುದರ ಜೊತೆಗೆ ಕಲಾವಿದ ಕೆ. ಕೆ. ಹೆಬ್ಬಾರರ ಕುರಿತು ವಸ್ತುವಿಷಯಗಳನ್ನು ಈ ಆನುಷಂಗಿಕ ಆಕರ ಸಾಮಗ್ರಿಯಲ್ಲಿ ಬಳಸಿಕೊಳ್ಳಲಾಗಿದೆ.


❖❖❖❖



ಅಧ್ಯಾಯ - ಎರಡು

ಕೆ.ಕೆ. ಹೆಬ್ಬಾರರ ಬಾಲ್ಯ ಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ ಮತ್ತು ಕಲಾಕೃತಿಗಳು






ಅಧ್ಯಾಯ : ಎರಡು

ಕೆ. ಕೆ. ಹೆಬ್ಬಾರರ ಬಾಲ್ಯ ಪರಿಸರ, ವಿದ್ಯಾಭ್ಯಾಸ, ವೃತ್ತಿ ಜೀವನ

ಕರ್ನಾಟಕದ ಕರಾವಳಿ ಪ್ರದೇಶ ಎಂದಾಗ ಸಮುದ್ರದ ಅಲೆಗಳು ನಿಸರ್ಗ ಸಿರಿಯಿಂದ ಮೈತುಂಬಿದ ಹಸಿರ ರಾಶಿಯ ಸುಂದರ ಕಡಲ ತೀರ ಪ್ರದೇಶವಾಗಿದ್ದು, ಭಾರತದ ಪಶ್ಚಿಮ ಕರಾವಳಿಯ ಮೈದಾನದಲ್ಲಿ ಕರಾವಳಿ ಕರ್ನಾಟಕದ ಜಿಲ್ಲೆಗಳಿದ್ದು, ಇದರ ಪೂರ್ವ ದಿಕ್ಕಿಗೆ ಸಹ್ಯಾದ್ರಿ ಪರ್ವತವೂ (ಪಶ್ಚಿಮ ಘಟ್ಟಗಳು) ಕರಾವಳಿಯ ಮೈದಾನಕ್ಕೂ ನಡುವೆ ದೊಡ್ಡದಾದ ನೈಸರ್ಗಿಕವಾದಂತಹ ಕೋಟೆಯ ನಿರ್ಮಾಣವಾಗಿರುವುದು ಪ್ರಮುಖವಾಗಿ ಕಾಣಬಹುದಾಗಿದೆ.

ಹೆಬ್ಬಾರರು ೧೯೧೧ ಜೂನ್ ೧೫ರಂದು ಅಂದಿನ ಮಂಗಳೂರು ಜಿಲ್ಲೆ ಇಂದಿನ ಉಡುಪಿ ಜಿಲ್ಲೆಯ ಸಮೀಪದ ಕಟ್ಟಂಗೇರಿಯಲ್ಲಿ ಜನಿಸಿದರು. ಉಡುಪಿಯಿಂದ ಕಟಪಾಡಿಯವರೆಗೆ ಸುಂದರವಾದ ಜಲರಾಶಿ, ಹಾಗೇ ಮುಂದೆ ಸಾಗಿದರೆ ಮೂಡುಬೆಳ್ಳಿಯ ದಾರಿಯಲ್ಲಿ ೪ ಕಿ.ಮೀ ನಡೆದರೆ ಕಟ್ಟಂಗೇರಿ ಅಲ್ಲಿರುವ ವಿಶಾಲವಾದ ಕೆರೆ, ಸುತ್ತಲಿನ ಇಡೀ ಪರಿಸರ, ಗುಡ್ಡ ಬೆಟ್ಟಗಳು, ಹಳ್ಳ ಕೊಳ್ಳಗಳು, ತೆಂಗಿನ ತೋಟ, ಭತ್ತದ ಗದ್ದೆಗಳು, ಪ್ರಕೃತಿಯ ಮಡಿಲಲ್ಲಿ, ಗುಡ್ಡದ ಬಳಿಯಲ್ಲಿ ಒಂದು ಪುಟ್ಟ ಮನೆಯಲ್ಲಿ ಕೃಷ್ಣ ಹೆಬ್ಬಾರರು ಜನಿಸಿದ ಸ್ಥಳ. ಕಟ್ಟಂಗೇರಿ ಹೆಬ್ಬಾರ ಕುಟುಂಬದ ಮೂಲ ಪುರುಷ ಯಾರೋ ತಿಳಿಯದು. ಆತ ಅಲ್ಲಿ ಯಾವ ಕಾಲದಲ್ಲಿ ಬಂದು ನೆಲೆಸಿದ ಎಂಬ ಮಾಹಿತಿಯೂ ತಿಳಿಯದು.[೧] ವೆಂಕಟರಮಣ ಹೆಬ್ಬಾರ ಮತ್ತು ಕಾವೇರಿಯಮ್ಮಳ ಪುತ್ರನೇ ಹೆಬ್ಬಾರರ ತಂದೆ ನಾರಾಯಣ ಹೆಬ್ಬಾರರು, ತಾಯಿ

೦೧. ಕು. ಶಿ. ಹರಿದಾಸ ಭಟ್ಟ : ಕಟ್ಟಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩




ಸೀತಮ್ಮ. ಈ ಹೆಬ್ಬಾರ ಪರಿವಾರದವರಿಗೆ ಯಕ್ಷಗಾನವೆಂದರೆ ತುಂಬಾ ಇಷ್ಟವಾದದ್ದು. ಇವರ ಕುಟುಂಬದಲ್ಲಿ ಕೆಲವರಿಗೆ ಮದ್ದಲೆ ಹಾಗೂ ಇತರೆ ವಾದ್ಯಗಳನ್ನು ನುಡಿಸುವುದರಲ್ಲಿ ನಿಪುಣರಾದರೆ ಇನ್ನು ಕೆಲವರು ಅರ್ಥಗಾರಿಕೆಯಲ್ಲಿ ತಂದೆ ನಾರಾಯಣ ಹೆಬ್ಬಾರರ ಗಂಟಲು ಧ್ವನಿಯ ಗಾಢವಾದ ಧ್ವನಿಯಿಂದ ಕೂಡಿದ್ದರಿಂದ, ಅವರು ಯಾವಾಗಲೂ ರಾಕ್ಷಸನ ಪಾತ್ರವನ್ನೇ ಮಾಡುತ್ತಿದ್ದರು. ಅವರು ತಮ್ಮ ಪಾತ್ರದಲ್ಲಿ ಎಷ್ಟು ತನ್ಮಯರಾಗುತ್ತಿದ್ದರೆಂದರೆ ಅವರ ಯಕ್ಷಗಾನವು ಸುಮಾರು ಒಂದು ಮೈಲಿಯಾದರೂ ಕೇಳಿಸುವಂತಹದ್ದು. ಅವರನ್ನು ಜನರು ನಿಜಕ್ಕೂ ಇವನು ರಾಕ್ಷಸನೇ ಇರಬೇಕೆಂದು ಹೊಗಳುತ್ತಿದ್ದರು.[೨] ಹೆಸರಿಗೆ ಭೂಮಾಲೀಕರು ಇವರ ಮೂಲ ಆಸ್ತಿ ಸಣ್ಣಪುಟ್ಟ ಹಿಡುವಳಿಯಕೆಯಾಗಿದ್ದು, ನಾಲ್ಕು ತುಂಡು ಭತ್ತದ ಗದ್ದೆ ಉತ್ಪನ್ನದಿಂದಲೇ ಇವರ ಜೀವನ.

ಉದ್ಯೋಗ ಇಲ್ಲದ ಜನ ಹಳ್ಳಿ ಜೀವನ ನಡೆಸುತ್ತಿದ್ದ ಕುಟುಂಬ. ಹೆಬ್ಬಾರರ ತಂದೆಗೆ ಇದ್ದ ಚೂರು ಆಸ್ತಿ ಕಳಕೊಂಡು ೧/೪ ಎಕರೆ ಸ್ಥಳದಲ್ಲಿ ಪುಟ್ಟ ಗುಡಿಸಿಲಿನಲ್ಲಿ ವಾಸವಾಗಿದ್ದರು. ಹೆಬ್ಬಾರರ ಸಹೋದರ ನಾರಾಯಣ ಹೆಬ್ಬಾರರಿಗೆ ಆಸ್ತಿ ವಿಷಯದಲ್ಲಿ ಮೋಸ ಮಾಡಿದರು. ಹೀಗಾಗಿ ಕುಟುಂಬ ವರ್ಗದವರಿಂದ ದೂರು ಉಳಿಯುವ ಸಂದರ್ಭ ಒದಗಿಬಂತು. ಆಗ ಅದೇ ಊರಿನವರೇ ಆದ ದೇವಣ್ಣ ಪೈ ಎಂಬುವವರು ತಮ್ಮ ಸ್ಥಳದಲ್ಲಿಯೇ ಮುಕ್ಕಾಲೆಕರೆ ಜಾಗವನ್ನು ಸಾಲದ ರೂಪದಲ್ಲಿ ನೀಡಿದರು. ಅಲ್ಲಿ ಒಂದು ಗುಡಿಸಲು ನಿರ್ಮಿಸಿ ಅದರಲ್ಲಿಯೇ ಹೊರಗೊಂದು ಚಾವಡಿ, ಅದರ ಪಕ್ಕದಲ್ಲಿ ಎಮ್ಮೆ ಕಟ್ಟುವ ಜಾಗ ಹಾಗೂ ಅದರ ಮೂಲೆಯಲ್ಲೇ ದೇವರ ಮನೆ, ಅಡುಗೆ ಮನೆ, ಈ ಮನೆಯಲ್ಲಿಯೇ ಕೃಷ್ಣ ಹೆಬ್ಬಾರರು ಜನಿಸಿದರು. ಇದು ಅವರ ಪಾಲಿಗೆ ಉಳಿದ ಒಟ್ಟು ಆಸ್ತಿಯಾಗಿತ್ತು.

ನಾರಾಯಣ ಹೆಬ್ಬಾರರು ಆರ್ಥಿಕವಾಗಿ ಬಸವಳಿದಿದ್ದರು. ಅವರಿಗೆ ಮಕ್ಕಳನ್ನು ಶಾಲೆಗೆ ಸೇರಿಸಲೂ ಹಣವಿರಲಿಲ್ಲ. ಈ ಸಂದರ್ಭದಲ್ಲಿ ಸೀತಮ್ಮನವರಿಗೆ ಯಾರಾದರೂ ಸಂಬಂಧಿಗಳು ಮುಂಬಯಿ, ಮದರಾಸಿನಿಂದ ಮನಿ ಆರ್ಡರ್ ಕಳುಹಿಸುತ್ತಿದ್ದು ಅವರಿಗೆ ತುಂಬಾ ಮುಖ್ಯವಾಗಿತ್ತು. ಕೃಷ್ಣ ಹೆಬ್ಬಾರರ ಪ್ರಾಥಮಿಕ ಶಿಕ್ಷಣವು ಕಟ್ಟಿಗೇರಿಯ ಸಮೀಪವೇ ಇದ್ದ ಮಿಶನ್ ಶಾಲೆಯಲ್ಲಿ ನಡೆಯಿತು.[೩] ಈ ಸಮಯದಲ್ಲಿ ಹೆಬ್ಬಾರರಿಗೆ ಕೆಲಸವನ್ನು ಕಲಿಯುವ ಹಂಬಲ ಎಷ್ಟಿತ್ತೆಂದರೆ ಅವರ ಶಾಲೆಯ ಮುಗಿದ ನಂತರದ ಸಮಯವನ್ನು ಚಿನ್ನದ ಆಭರಣದ ಕೆಲಸದಲ್ಲಿ ತೊಡಗಿ ಆಚಾರರಿಗೆ ಸಹಾಯ ಮಾಡುವುದು. ಇದರ ಜೊತೆ ಕಬ್ಬಿಣದ ಕಮ್ಮಾರನಿಂದ ತಿದಿಯೋತ್ತುವುದನ್ನು ಮತ್ತು ಕುಂಬಾರರ ಹತ್ತಿರ ಮಣ್ಣನ್ನು ಮೆದುಗೊಳಿಸಿ ಮಡಿಕೆ ತಯಾರಿಸುವ ವಿಧಾನದ ಕುರಿತು ಹೆಚ್ಚು ಆಸಕ್ತಿಯಿಂದ ಕಲಿಯುತ್ತಿದ್ದರು. ಹದ ಮಾಡಿದ

೦೨. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩
೦೩. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೬



ಮಣ್ಣನ್ನು ತಂದು ತನ್ನ ಕಲ್ಪನೆಯ ಕಲಾಕೃತಿಯ ರಚನೆಯ ಸ್ಫೂರ್ತಿ ಅಂದಿನಿಂದಲೇ ಹೆಬ್ಬಾರರಿಗೆ ಕರಗತವಾಗಿತ್ತು. ಹೀಗೆ ಎಂಟರ ಆ ಪುಟ್ಟ ಬಾಲಕನನ್ನು ನೋಡಿ ಊರಿನವರು ಆಶ್ಚರ್ಯಪಡುತ್ತಿದ್ದರು. ಕುಂಬಾರ, ಕಮ್ಮಾರ, ಬಡಗಿಗಳಲ್ಲಿ ಅವನು ಕೆಲಸ ಮಾಡುವುದನ್ನು ಕಂಡು ನಿಬ್ಬೆರಗಾಗುತ್ತಿದ್ದರು. ಈ ಸಂದರ್ಭವನ್ನು ಅವರ ಊರಿನ ಶ್ರೀಮಂತ ಶೆಟ್ಟರು ಹೆಬ್ಬಾಗಿಲಿನಲ್ಲಿರುವ ಎರಡು ಮಣ್ಣಿನ ಗಿಳಿಗಳಲ್ಲಿ ಒಂದು ಬಿದ್ದು ಒಡೆದು ಹೋಯಿತಂತೆ. ಅದನ್ನು ತಿಳಿದ ಹೆಬ್ಬಾರರು ಅಂಥಹದೇ ಒಂದು ಗಿಳಿಯನ್ನು ಮಣ್ಣಿನಿಂದ ಮಾಡಿ ಅದಕ್ಕೆ ಹಸಿರು ಬಣ್ಣ ಬಳಿದು ತತ್‌ಪ್ರತಿ ಮಾಡಿಕೊಟ್ಟರಂತೆ, ಇದನ್ನು ಕಂಡು ಶೆಟ್ಟರಿಗೆ ಆಶ್ಚರ್ಯವುಂಟಾಗಿ ಅವನಿಗೆ ಎರಡು ರೂಪಾಯಿಯ ಸಂಭಾವನೆ ನೀಡಿದ್ದು ಚಿರಸ್ಮರಣೀಯವಾದ ಸಂದರ್ಭವಾಗಿದೆ.

ಬಾಲಕ ಕೃಷ್ಣ ಹೆಬ್ಬಾರರಿಗೆ ತಾಯಿಯೆಂದರೆ ಅಚ್ಚುಮೆಚ್ಚು. ತನ್ನ ತಾಯಿ ಸೀತಮ್ಮನೊಡನೆ ಉಡುಪಿ ಶ್ರೀ ಕೃಷ್ಣ ಮಠಕ್ಕೆ ಹೋಗುವಾಗ ದೇವಾಲಯದ ಪ್ರಮುಖ ಮಂಟಪದ ಗೋಡೆಯ ಮೇಲೆ ರಾಮಣ್ಣ ಎಂಬುವವನು ಕೇರಳದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದು, ಶ್ರೀ ಮಠದಲ್ಲಿ ರವಿವರ್ಮನ ಜಟಾಯು, ರಾವಣ, ಯಕ್ಷ, ಸೇತುಬಂಧ ಚಿತ್ರಣಗಳನ್ನು ಯಥಾವತ್ತಾಗಿ ರಚನೆಯನ್ನು ಕಂಡ, ಕೃಷ್ಣ ಹೆಬ್ಬಾರರು "ತಾನೂ ಒಂದು ದಿನ ಹೀಗೆ ಚಿತ್ರ ಬಿಡಿಸಬೇಕು ಎಂದು ಮನಸ್ಸಿನಲ್ಲೇ ಸಂಕಲ್ಪ ಮಾಡಿಕೊಂಡನು"[೧೪] ಅಂದಿನಿಂದಲೇ ತನ್ನ ಮನಸ್ಸಿನಲ್ಲಿಯೇ ಕಲೆಯ ಕುರಿತ ವಿಶೇಷ ಆಸಕ್ತಿ ಚಿಗುರೊಡೆಯಲು ಕಾರಣವಾಯಿತು.

ಆ ದಿನಗಳಲ್ಲಿ ಎರಡಾಣೆಗೆ ಸಿಗುವ ರವಿವರ್ಮನ ಸರಸ್ವತಿ ಚಿತ್ರಕ್ಕೆ ಕನ್ನಡಿ ಕಟ್ಟು ಹಾಕಿಸಿ ಮನೆಗೆ ತಂದು ಅಲ್ಲಿಯೇ ಹತ್ತಿರವಿರುವ ಗುಡ್ಡಕ್ಕೆ ಒಯ್ದು 'ಅಮ್ಮಾ ಸರಸ್ವತಿ ನನಗೂ ರವಿವರ್ಮನ ಹಾಗೆ ಚಿತ್ರ ಬರೆಯುವುದನ್ನು ಕಲಿಸಿಕೊಡು' ಎಂದು ಬೇಡಿಕೊಂಡನಂತೆ.[೧೫] ಅಂತೆಯೇ ಸರಸ್ವತಿ ದೇವಿಯ ಕೃಪೆಯು ಕಟ್ಟಿಂಗೇರಿಯ ಮನೆಯ ಹೊರಗೋಡೆಯನ್ನು ಆಕೆಯ ಚಿತ್ರಗಳು ರೇಖೆಗಳಲ್ಲಿ ಮೂಡತೊಡಗಿದವು. ಅಲ್ಲೇ ಸಿಗುವ ಬಣ್ಣಗಳೆಂದರೆ, ಕಪ್ಪು ಬಣ್ಣಕ್ಕೆ ಮಸಿ, ಹಸಿರು ಬಣ್ಣಕ್ಕೆ ಎಲೆಗಳ ಹಸಿರು, ಹಳದಿ ಬಣ್ಣಕ್ಕೆ ಅರಿಶಿನದ ಪುಡಿ, ಹೀಗೆ ತನಗೆ ಸಿಕ್ಕ ಬಣ್ಣಗಳ ಮುಖಾಂತರವೇ ಚಿತ್ರ ರಚನೆಯಲ್ಲಿ ತೊಡಗಿದ, ಇದನ್ನು ಕಂಡ ಗ್ರಾಮದ ಜನರು ಹುಡುಗನ ಕಲಾಸಕ್ತಿಯನ್ನು ಮೆಚ್ಚಿ ಕೊಂಡಾಡಿದರು.


ಮನೆಯಲ್ಲಿ ಬಡತನವು ತಾಂಡವವಾಡುತ್ತಿದ್ದರಿಂದ ಮಿಷನ್ ಶಾಲೆಯಲ್ಲಿ ಐದನೇ ಕ್ಲಾಸ್ ಮುಗಿಸಿದ ಬಳಿಕೆ ಮದ್ರಾಸ್‌ನ ಬ್ರಾಡ್‌ವೇಯಲ್ಲಿ ಇದ್ದ ಷಣ್ಮುಖಾನಂದ ವಿಲಾಸವೆಂಬ ಹೋಟೆಲ್‌ನಲ್ಲಿ ೮–೯ ತಿಂಗಳು ಕೆಲಸ ಮಾಡಿದರು. ಅಷ್ಟರಲ್ಲಿ ತಾಯಿ ಸೀತಮ್ಮ ಮಗನನ್ನು ಬಿಟ್ಟು ಹೆಚ್ಚು ಕಾಲ ದೂರವಿರಲು

೧೪. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೬
೧೫. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೬

ಆಗದೇ ಹತ್ತಿರದ ಮಿಷನ್ ಶಾಲೆಯನ್ನು ಎರಡನೇ ಕ್ಲಾಸಿಗೆ ಟೀಚರ್ ಆಗಿ ಸೇರಿಕೊಮಡು ೪ ರೂಪಾಯಿ ಸಂಬಳ ಸಿಗುವಂತಾಯಿತು. ಈ ಶಾಲೆಯಲ್ಲಿ ಚಿತ್ರ ಬಿಡಿಸುವುದರಲ್ಲಿ ಹೆಬ್ಬಾರರು ಜಾಣರು. ಹೀಗಾಗಿ ಶಕುಂತಲೆಯ ಕಥೆಗೆ ಪಾಠ ಮಾಡಲು ಕಥೆಯ ಬೇರೆ ಬೇರೆ ಸನ್ನಿವೇಶಗಳಿಗೆ ಚಿತ್ರ ರೂಪದಲ್ಲಿ ಬಿಡಿಸಿ ಕ್ಲಾಸ್ ಗೋಡೆಗೆ ತೂಗು ಹಾಕಿದ ಸಂದರ್ಭವೂ ಉಂಟು. ಪರೀಕ್ಷಾ ಕಾರ್ಯಕ್ಕಾಗಿ ಬಂದ ಮಿಷನ್ ದೊರೆ ಚಿತ್ರಗಳನ್ನು ನೋಡಿ ಆಶ್ಚರ್ಯಪಟ್ಟರು. ಇದರಿಂದ ಹೆಬ್ಬಾರರಿಗೆ ಮಿಷನ್ ದೊರೆಗಳ ವಿಶ್ವಾಸ ಸಿಕ್ಕಿದಂತಾಯಿತು.

ಅಲ್ಲಿಂದ ಮುಂದೆ ಹೆಚ್ಚಿನ ಅಧ್ಯಯನಕ್ಕೆಂದು ಕುರ್ಕಾಲು ಶಾಲೆಯಲ್ಲಿ ಎಂಟನೇ ತರಗತಿ ಓದಲು ಗಣಪಯ್ಯ ಶೆಟ್ಟರ ಬಳಿ ಕರೆತಂದರು. ಶೆಟ್ಟರಿಗೆ ಹೆಬ್ಬಾರರ ಸ್ಫೂರ್ತಿಯನ್ನು ಕಂಡು ತಮ್ಮಲ್ಲಿಯೇ ಅವನ ವ್ಯಾಸಂಗ ನಡೆಯುವುದಕ್ಕೆ ವ್ಯವಸ್ಥೆ ಮಾಡಿದರು. ಯಾವುದೇ ಪಾಠ ಪ್ರವಚನದಲ್ಲೂ ಹೆಬ್ಬಾರರು ಮುಂದಿರುತ್ತಿದ್ದರು. ನಿತ್ಯವೂ ಕುರ್ಕಾಲುನಿಂದ ಶಾಲೆಗೆ ಬರುವ ಹಾದಿಯಲ್ಲಿ ಮರ-ಗಿಡ, ಗದ್ದೆ, ಬೆಟ್ಟ, ಹರಿಯುವ ನೀರಿನ ಝರಿಗಳ ನಡುವೆ ಪ್ರಕೃತಿ ಸೌಂದರ್ಯವು ನಿತ್ಯವೂ ಒಂದು ಒಳ್ಳೆಯ ಅನುಭವ ಹಾಗೂ ದುಡಿದು ಸಂಪಾದಿಸುವ ಪ್ರವೃತ್ತಿ ಬೆಳೆಯುವುದಕ್ಕೆ ಅನಂತ ಶಣೈ ಎಂಬ ಉಪಾಧ್ಯಾಯರು ಹುಡುಗರಿಗೆ ಬೇಕಾಗುವ ಖಾಲಿ ನೋಟ್ ಪುಸ್ತಕಗಳನ್ನು ತಾವೇ ತಯಾರಿಸಿ ಮಾರಾಟ ಮಾಡುವುದನ್ನು ಕಲಿಸಿಕೊಟ್ಟರು. ಹೀಗಾಗಿ ಹೆಬ್ಬಾರರಿಗೆ ಸಣ್ಣ ಪ್ರಮಾಣದಲ್ಲಾದರೂ ಸಂಪಾದನೆ ಸಿಗುತ್ತಿತ್ತು. ನಂತರ ಹಾಗೆಯೇ ಗಣಪಯ್ಯ ಶೆಟ್ಟರ ಬಳಿಯಲ್ಲಿಯೇ ಎಂಟನೇ ತರಗತಿ ಶಿಕ್ಷಣ ದೊರೆಯಿತು. ಅದರಲ್ಲೂ ಪ್ರಥಮ ಕ್ಲಾಸಿನಲ್ಲಿ ತೇರ್ಗಡೆ ಹೊಂದಿದ ಹೆಬ್ಬಾರರನ್ನು ತಮ್ಮದೇ ಇನ್ನೊಂದು ಶಾಲೆಯಲ್ಲಿ ಎಂಟು ರೂಪಾಯಿ ಸಂಬಳಕ್ಕೆ ಹಂಗಾಮಿ ಉಪಾಧ್ಯಾಯರನ್ನಾಗಿ ನೇಮಿಸಿದರು. ೮ನೇ ತರಗತಿಯನ್ನು ಪಾಸು ಮಾಡಿದ ಮೇಲೆ ಹೈಸ್ಕೂಲಿನ ೪ನೇ ಫಾರ್ಮ್ (೯ನೇ ಕ್ಲಾಸು) ಸೇರಬೇಕಾದರೆ ಇನ್ನೊಮ್ಮೆ ಪರೀಕ್ಷೆ ಕಡ್ಡಾಯವಾಗಿರುತ್ತಿತ್ತು. ಅದರಲ್ಲಿಯೂ ಹೆಬ್ಬಾರರು ತಮ್ಮ ಜಾಣ್ಮೆಯನ್ನು ಮೆರೆದರು.

ಈ ಹೈಸ್ಕೂಲ್ ಶಿಕ್ಷಣ ನಡೆಯುತ್ತಿರುವ ಸಂದರ್ಭದಲ್ಲಿಯೇ ತಂದೆ ನಾರಾಯಣ ಹೆಬ್ಬಾರರು ತೀರಿಕೊಂಡರು. ಈ ವೇಳೆಯಲ್ಲಿ ಹೆಬ್ಬಾರರ ಸಂಬಂಧಿಕರು ಯಾವುದೇ ರೀತಿಯ ಸಹಾಯಕ್ಕೂ ಬರದಿದ್ದರಿಂದ ಮನನೊಂದು ತಾಯಿ ಸೀತಮ್ಮ ಇನ್ನು ಮುಂದೆ ಈ ಊರಿನಲ್ಲಿರಬಾರದೆಂದು ನಿರ್ಧರಿಸಿ ತನ್ನ ಹುಟ್ಟೂರು ಬಿಟ್ಟು ಉಡುಪಿಗೆ ಬಂದರು. ಹೈಸ್ಕೂಲ್ ಮುಗಿಸಿದ ತರುವಾಯ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಶಾಲೆಗೆ ಸೇರಿದರು. ಆದರೆ ಚಾಮರಾಜೇಂದ್ರ ಶಾಲೆಯ ಶಿಕ್ಷಣ ಪದ್ಧತಿ ಹೆಬ್ಬಾರರಿಗೆ ಖುಷಿ ಕೊಡಲಿಲ್ಲ. ಅದಕ್ಕೆ ಕಾರಣ "ದಿನವೂ ಒಂದು ಕುರ್ಚಿ ತೋರಿಸಿ ಇದರ ದೃಶ್ಯಕೋನ



ಪರ್ಸಪೆಕ್ಟಿವ್ ಬಿಡಿಸಿ ಎನ್ನುವುದು"[೬] ಈ ರೀತಿಯ ತರಬೇತಿಯಿಂದ ಬೇಸತ್ತು, ಇಲ್ಲಿಂದ ಜಾಗ ಖಾಲಿ ಮಾಡಲು ಚಿಂತಿಸಿ ಹೊರ ನಡೆದರು. ಉಡುಪಿಗೆ ಹಿಂದಿರುಗಿದ ಹೆಬ್ಬಾರರು ಏನಿದ್ದರೂ ಕಲೆಗೆ ಸಮೀಪವಿರುವಂತಹ ಫೋಟೋಗ್ರಾಫರ್ ಶ್ರೀನಿವಾಸರಾಯರನ್ನು ಭೇಟಿಯಾಗಿ ಫೋಟೋಗಳನ್ನು ರೀ–ಟಚ್ ಮಾಡುವ ಉದ್ಯೋಗವೊಂದಕ್ಕೆ ಸೇರಿಕೊಂಡರು. ಶ್ರೀನಿವಾಸರಾಯರೂ ಲಕ್ಷಣವಂತನೂ, ಬುದ್ಧಿವಂತನೂ ಆದ ಈ ಹುಡುಗನಿಗೆ ತಿಂಗಳಿಗೆ ೧೦/– ರೂಪಾಯಿ ಸಂಬಳ ನೀಡಲು ಮುಂದಾದರು. ಹೆಬ್ಬಾರರ ಕೆಲಸದಲ್ಲಿ ಶ್ರದ್ಧೆ, ಸೂಕ್ಷ್ಮಜ್ಞಾನ, ಪರಿಶ್ರಮಗಳನ್ನು ಗಮನಿಸಿದ ಶ್ರೀನಿವಾಸರಾಯರು ನೀನು ತುಂಬಾ ಶ್ರಮಜೀವಿ, ನಿನ್ನ ಕಲಾ ಉನ್ನತ ವ್ಯಾಸಂಗಕ್ಕೆ ತಕ್ಕ ಸ್ಥಳವೆಂದರೆ ಮುಂಬಯಿ. ಅಲ್ಲಿ ನನ್ನ ಪರಿಚಯಸ್ಥರಾದ ರಾಮಕೃಷ್ಣರಾಯರಿಗೆ ಒಂದು ಪತ್ರವನ್ನು ಕೊಟ್ಟು ಅಲ್ಲಿಗೆ ಹೋಗು ಎಂದು ಹೇಳಿದರು. ಆಗ ಹೆಬ್ಬಾರರ ಮನಸ್ಸು ಉತ್ತರಕ್ಕೆ ಮುಖ ಮಾಡಿತು. ಜೀವನದ ಉತ್ತರೋತ್ತರ ಕಂಡುಕೊಳ್ಳುವ ಉದ್ದೇಶದಿಂದ ಮುಂಬಯಿ ದಾರಿ ಹಿಡಿದರು.

ಯಾವತ್ತಿನಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಮುಂಬಯಿ ಎಂದರೆ ಭಾಗ್ಯದ ಬಾಗಿಲು[೭] ಸಾಮಾನ್ಯವಾಗಿ ಅಂದಿಗೂ ಇಂದಿಗೂ ಕಸುಬಿಗೆ ಮುಂಬಯಿಯೇ ಕೇಂದ್ರ ಬಿಂದು. ಅಂತೆಯೇ ೧೯೩೩ ಜುಲೈ ೧ರಂದು ಕೃಷ್ಣ ಹೆಬ್ಬಾರರು ಮುಂಬಯಿ ತಲುಪಿದರು. ಅಣ್ಣ ಅನಂತರಾಮ ಹೆಬ್ಬಾರ ಅಷ್ಟು ಹೊತ್ತಿಗೆ ಗಿರ್ಗಾಮನಲ್ಲಿ ಒಂದು ಸಣ್ಣ ಕಟ್ಲೆರಿ ಅಂಗಡಿ ತೆರೆದಿದ್ದರು. ಮುಂಭಾಗದಲ್ಲಿ ಅಂಗಡಿಯಾದರೆ ಹಿಂದುಗಡೆ ಒಂದು ಮಂಚ ಮತ್ತು ಸ್ಟವ್. ಹಾಗಾಗಿ ಅಂಗಡಿಯೇ ವಾಸ್ತವದ ಮನೆ. ಹೆಬ್ಬಾರರು ಮುಂಬಯಿ ಸೇರಿ ನಾಲ್ಕೇ ತಿಂಗಳಲ್ಲಿ ಅಣ್ಣನ ಅಂಗಡಿ ವ್ಯಾಪಾರವಿಲ್ಲದೇ ಮುಚ್ಚಬೇಕಾಯಿತು. ಹೀಗಾಗಿ ಅಣ್ಣ ಅನಂತರಾಮ ಸ್ವಲ್ಪ ಹೆಚ್ಚು ಇಂಗ್ಲೀಷ್ ಕಲಿತರೆ ಹೊಸ ಕೆಲಸಕ್ಕೆ ಸಹಾಯವಾಗುತ್ತದೆ ಎಂದು ಮಂಗಳೂರಿಗೆ ವಾಪಾಸ್ಸಾದರು.

ಹೆಬ್ಬಾರರು ಕೆಲಸ ಹುಡುಕುತ್ತಾ ಖೋಪಾರ್ಡೆ ಸ್ಟುಡಿಯೋಕ್ಕೆ ಹೋಗಿ ಕೆಲಸ ಕೇಳಿದಾಗ, ಅವರು ಎರಡು ನೆಗೆಟೀವ್‌ಗಳನ್ನಿಟ್ಟು ರೀ–ಟಚ್ ಮಾಡಲು ಹೇಳಿದರು. ಆದರೆ ಮೊದಲೇ ಉಡುಪಿಯ ಅನುಭವದಿಂದ ರೀ–ಟಚ್‌ಗೆ ಬರುವ ನೆಗಟೀವ್‌ಗಳಲ್ಲ ಎಂದು ತಮ್ಮ ಜಾಣ್ಮೆಯನ್ನು ತೋರಿದ್ದರಿಂದ ಖೋಪಾರ್ಡೆಗೆ ಬಳಿ ೫೦ ರೂ.ಗಳ ಸಂಬಳದ ಕೆಲಸಕ್ಕೆ ಸೇರಿಕೊಂಡರು. ಸಿಕ್ಕದ್ದು ಮಕ್ಕಳ ಪುಣ್ಯವೆಂಬ ಗಾದೆಯಂತೆ ಹೆಬ್ಬಾರರ ಭವಿಷ್ಯವೂ ಏನೇ ಇರಲಿ ಸದ್ಯಕ್ಕಂತೂ ಒಂದು ಕೆಲಸ ಸಿಕ್ಕಿದೆ. ಇದರಲ್ಲಿ ನನ್ನ ಪರಿಶ್ರಮ ತೋರಿಸುತ್ತೇನೆ, ಪ್ರಾಮಾಣಿಕವಾಗಿ ದುಡಿದು ಮಾಲೀಕರಿಗೆ ತೃಪ್ತಿ ತರುವುದು ನನ್ನ ಕರ್ತವ್ಯ

೦೬. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೮
೦೭. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೧೨

ಎಂದುಕೊಂಡು ಒಬ್ಬರೇ ಎರಡು ಮಂದಿಯಷ್ಟು ಕೆಲಸ ಮಾಡುತ್ತಿದ್ದರು.[೭] ಇದರಿಂದ ಸುಪ್ರೀತನಾದ ಖೋಪಾರ್ಡೆ ತಾನು ಮಧ್ಯಾಹ್ನ ತರಿಸುತ್ತಿದ್ದ ಊಟದಲ್ಲಿ ಒಂದು ಪಾಲು ಹೆಬ್ಬಾರರಿಗೂ ಕೊಟ್ಟು ಹಂಚಿಕೊಳ್ಳುತ್ತಿದ್ದರು. ೫ ರೂ. ವಾರ್ಷಿಕ ಬಡ್ತಿ ಸಿಗುತ್ತಿದ್ದ ಸ್ಟುಡಿಯೋ ಕೆಲಸವನ್ನು ಅವರು ರೂ. ೭೦ ಸಿಗುವವರೆಗೂ ಅಂದರೆ ೩ ವರ್ಷ ಕಾಲ ಮಾಡಿದರು. ಅಷ್ಟರಲ್ಲಿಯೇ ಅನಂತರಾಮನು ನಾವೆಲ್ಟಿ ಎಂಬ ಫ್ಯಾನ್ಸಿ ಸಾಮಾಗ್ರಿಗಳ ಅಂಗಡಿಯಲ್ಲಿ ಸೇಲ್ಸ್‌ಮ್ಯಾನ್ ಕೆಲಸ ಗಿಟ್ಟಿಸಿಕೊಂಡಿದ್ದ ಹಾಗೂ ಅದರ ಜೊತೆಗೆ ಸ್ವಲ್ಪ ಸಮಯದಲ್ಲಿ ಅವರು ನಾವೆಲ್ಟಿಯೊಳೆ ಮೂರು ವಿಭಾಗ ತೆರೆದು ಅದಕ್ಕೆ ಮುಖ್ಯಸ್ಥರಾದರು. ಒಟ್ಟು ಮಾರಾಟದಲ್ಲಿ ಶೇ. ೧ ಭಾಗ ವಿಭಾಗದ ಮುಖ್ಯಸ್ಥನಿಗೆ ಎನ್ನುವಾಗ ಸೋದರನ ಆರ್ಥಿಕ ಪರಿಸ್ಥಿತಿಯು ತುಸು ಊರ್ಜಿತಕ್ಕೆ ಬಂದಿತು ಅದರಂತೆಯೇ ತಾಯಿ ಮತ್ತು ಅತ್ತಿಗೆ ಮುಂಬಯಿಗೆ ಪ್ರವೇಶಿಸುವ ಹೊತ್ತಿಗಾಗಲೇ ಕೃಷ್ಣ ಹೆಬ್ಬಾರರ ಆದಾಯವೂ ಕೊಂಚ ಹೆಚ್ಚಳ ಕಾಣುತ್ತಿತ್ತು. ಖೋಪಾರ್ಡೆ ಕೆಲಸದ ಮಾಹೆಯನ ಸಂಬಳ ಪೂರ್ತಿ ಮನೆ ಖರ್ಚಿಗೆ ಕೊಡುವುದಕ್ಕೆ ಸಾಧ್ಯವಾಯಿತು. ಕಾರಣ ಸ್ಟುಡಿಯೋದಲ್ಲಿ ಪೋಟೊಗಳು ಎನ್ಲಾರ್ಜ್ ಮಾಡಿ ಬಣ್ಣ ಹಾಕಿದರೆ ದಿನಕ್ಕೆ ೩ ರೂಪಾಯಿ ಹೆಚ್ಚಿಗೆ ಸಿಗುತ್ತಿತ್ತು ಅಂದರೆ ತಿಂಗಳ ಲೆಕ್ಕ ೭೦–೮೦ ರೂಪಾಯಿ ಇದು ತನ್ನ ಸ್ವಂತ ಖರ್ಚಿಗೆ ಮೀಸಲಾಗಿರುತ್ತಿತ್ತು.

"ಮುಂಬಯಿಯಲ್ಲಿ ಹೆಬ್ಬಾರರು ಹೆಚ್ಚಾಗಿ ತಿಳಿದುದ್ದೇನೆಂದರೆ ಯಾವುದೇ ಸಂದರ್ಭವಿರಲಿ, ಕೈಯಿಂದ ಮಾಡುವ ಯಾವುದೇ ಕಸುಬಿರಲಿ ಅದನ್ನು ಆರ್ಥಿಕ ಗಳಿಕೆಯ ಸಾಧನವಾಗಿ ಬಳಸಿಕೊಳ್ಳಲು ಹೆಬ್ಬಾರರು ಹಿಂಜರಿಯಲಿಲ್ಲ. ಸುಮ್ಮನೆ ಕೂತಿರುವುದು ಅವರ ಜಾಯಮಾನದಲ್ಲಿರಲಿಲ್ಲ. ತನ್ನ ಬಳಿ ಇರುವ ವಿದ್ಯೆ ಏನೇ ಆದರೂ ಅದು ಸಂಪಾದನೆಯ ರೂಪಕ್ಕೆ ಬರಬೇಕು. ತನ್ನ ಸ್ವಯಾರ್ಜಿತದಲ್ಲಿ ತಾನು ಬಾಳಬೇಕು ಎಂಬ ಸ್ವಂತಿಕೆಯ ಛಲವನ್ನು ಇಂತ ಸಣ್ಣಪುಟ್ಟ ಕೈಂಕರ್ಯಗಳಲ್ಲಿ ತೊಡಗಿ ಗುರುತಿಸಿಕೊಂಡವರು."[೮]

೧೯೩೫ರಲ್ಲಿ ಹೆಬ್ಬಾರರು ಹಸೆಮಣೆ ಏರಿದರು. ಆಗ ಅವರಿಗೆ ಇಪ್ಪತ್ನಾಲ್ಕು ವಯಸ್ಸು. ಉಡುಪಿಯವಳಾದ ಯಮುನಾ (ಸುಶೀಲೆ) ಜೊತೆಯಲ್ಲಿ ತಿರುಪತಿಯಲ್ಲಿ ಮದುವೆಯಾಯಿತು. ಹೆಬ್ಬಾರರ ಮದುವೆ ನಡೆದದ್ದು ತಾಪತ್ರಿಯಲ್ಲಿ ನಡೆಯಿತು. ಇದಕ್ಕೂ ಮುಂಚೆ ಒಂದು ದಿನ ಚೌಪಾಟಿಯಲ್ಲಿ ಅವರಿಗೆ ಉಡುಪಿಯ ಕೆ.ವಿ.ಆಚಾರ್ಯ ಎಂಬ ರಾಯಭಾರಿ ಮನುಷ್ಯನ ಪರಿಚಯವಾಯಿತು. ಆಚಾರ್ಯರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರದ ಎಂ.ಎ.ಪದವೀಧರರು, ಆಚಾರ್ಯರಲ್ಲಿ ಸಲಿಗೆ, ಸ್ನೇಹ ಬೆಳೆದಂತೆ ಒಂದು ದಿನ ಹೆಬ್ಬಾರರು ಹೀಗೆ ಅಡ್ಡಾಡಿಕೊಂಡು ಬರೋಣ ಎಂದು ಗೇಟ್ ವೇ ಆಫ್ ಇಂಡಿಯಾದವರೆಗೆ ಕರೆದುಕೊಂಡು ಹೋಗಿ ವಿವಾಹದ ಪ್ರಸ್ತಾವನೆಯನ್ನು ಮಾಡಿದರು.

---

೦೭. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೧೬
೦೮. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೧೭

ಹೆಬ್ಬಾರರು ತಾನು ಬಂದ ಕೆಲಸವಾದರೂ ಕಲಾರಾಧನೆ – ಅದಕ್ಕೆ ಈ ವಿವಾಹ ಬಂಧನ ಬಾಧಕವಾಗಲಾರದೇ – ಹೀಗೆ ಎಂದು ತಮ್ಮ ಕಷ್ಟಗಳನ್ನು ಮುಂದೆ ಮಾಡಿದರು. ಆದರೆ ಇವೆಲ್ಲಾ ಆಚಾರ್ಯರ ಮಾತಿನ ಮುಂದೆ ನಿಲ್ಲುವ ಹಾಗೇ ಇರಲಿಲ್ಲ. ತನ್ನ ತಾಯಿ ಸೀತಮ್ಮನಿಗೂ ಮಗನ ಮದುವೆ ಬಗ್ಗೆ ಉತ್ಕಟವಾದ ಅಪೇಕ್ಷೆ ಹೇಗೂ ಇದೆ ಎಂದಾದರೂ ಆಗಬೇಕಾದದ್ದೇ ಅಲ್ಲವೇ ಮುಗಿದು ಹೋಗಲಿ ಎಂದು ಆಚಾರ್ಯರು ನಿಮ್ಮ ತಾಯಿಯನ್ನೊಪ್ಪಿಸುವ ಕೆಲಸ ತನ್ನದು ಎಂದು ಈ ಸುದ್ದಿ ತಿಳಿದ ಸೀತಮ್ಮನ ಸಂತಸ ಇಮ್ಮಡಿಯಾಯಿತು.


ಹೆಬ್ಬಾರರ ನಿಶ್ಚಿತಾರ್ಥ ನಡೆದಿದ್ದು ಗೇಟ್‌ವೇ ಆಫ್ ಇಂಡಿಯಾದಲ್ಲಿ ಅಂದರೆ ಮದುವೆಯಾಗುವ ಹುಡುಗಿಯನ್ನು ಮೊದಲ ಸಲ ನೋಡಿದ್ದೇ ತಿರುಪತಿ ಗೋವಿಂದರಾಜ ಪಟ್ಟಣದಲ್ಲಿ – ಮದುವೆಯ ಹಿಂದಿನ ದಿನವೇ ಆ ಮದುವೆಯ ಅತಿ ಕಡಿಮೆ ಜನರಿಂದ ಕೂಡಿ ಮದುವೆಯಾಗಿತ್ತು. ವರನ ಕಡೆಯಿಂದ ತಾಯಿ ಸೀತಮ್ಮ, ಅಣ್ಣ ಅನಂತರಾಮ, ಅತ್ತಿಗೆ ಮಧ್ಯಸ್ತಿಕೆವಹಿಸಿದ ಕೆ.ವಿ. ಆಚಾರ್ಯರು – "ಮದುವೆಯಲ್ಲಿ ಹೆಬ್ಬಾರರ ನೆನಪಿನಲ್ಲಿರುವ ವಿಷಯವೆಂದರೆ – ಒಂದು ಅದು ತುಳು ಗಾದೆಯ ಕುದ್ನ(ನರಿ) ದಿಬ್ಬಣದಂತೆ ಅತಿ ಕಮ್ಮಿ ಜನಸಂಖ್ಯೆಯ ದಿಬ್ಬಣವಾಗಿದ್ದದ್ದು – ಮರು ದಿಬ್ಬಣವೂ ಹಾಗೆಯೇ ಎರಡನೆಯ ಪ್ರಸ್ತದ ಊಟದಲ್ಲಿನ ಸೊಪ್ಪಿನ ಸಾಂಬಾರು. ಹುಡುಗಿ ಇನ್ನೂ ಮೈನೆರೆದಿಲ್ಲದ ಕಾರಣ, ಹೆಣ್ಣಿನ ಕಡೆಯವರು ವಧು ಸಮೇತರಾಗಿ ಉಡುಪಿಗೆ ಮರಳಿದರು."[೯]

ಕೆಲದಿನಗಳ ನಂತರ ಹುಡುಗಿಯನ್ನು ಮುಂಬಯಿಗೆ ಕರೆದುಕೊಂಡು ಬಂದ ಮೇಲೆ ಮೊದಲ ಹೆಸರು ಬದಲಾಯಿಸಿ, ಶ್ರೀಮತಿ ಸುಶೀಲೆಯಾದಳು. 'ಉಡುಪಿಯಲ್ಲಿ ಹೆಚ್ಚು ಶಿಕ್ಷಣ ಪಡೆಯದ ಸುಶೀಲೆಗೆ ಮುಂಬಯಿಯಲ್ಲಿ ಸುಶೀಲೆ ಮತ್ತು ಅತ್ತಿಗೆಗೂ ಉಡುಪಿಯಿಂದ ವರ್ಗವಾಗಿದ್ದ ಫಿಡ್ಲ್ ಗಣಪತಿ ಎಂಬುವವರು ದೇವರ ನಾಮ ಹೇಳಿಕೊಡಲು ವ್ಯವಸ್ಥೆ ಮಾಡಿದರು. ಆವಂತಿಬಾಯಿ ಗೋಖಲೆ ವಿದ್ಯಾಲಯದಲ್ಲಿ ಹೊಲಿಗೆ, ಸಂಗೀತ ಮತ್ತು ಮರಾಠಿ ಭಾಷೆಯನ್ನು ಮಾರ್ವಾಡಿ ವಿದ್ಯಾಲಯದಲ್ಲಿ ಹಿಂದಿ ಕಲಿತು ಭಾಷರತ್ನ ಪರೀಕ್ಷೆ ಪಾಸು ಮಾಡಿದರು. ಇಷ್ಟಲ್ಲದೆ ಯಾರೋ ಒಬ್ಬ ಕುರುಡ ಸಂಗೀತಗಾರನ ಕೈಯಲ್ಲಿ ಹಿಂದೂಸ್ತಾನಿ ಸಂಗೀತದ ಪಾಠವು ಕೆಲವು ದಿನ ನಡೆಯಿತು."[೧೦]

ಈ ಮಧ್ಯೆ ಹೆಬ್ಬಾರರಿಗೆ ಕಲಾ ತಪಸ್ಸೇ ಮುಖ್ಯವಾಗಿತ್ತು. ಅಂತೆಯೇ ಅವರು ಮುಂಬಯಿಗೆ ಬರುವ ಮುಖ್ಯ ಉದ್ದೇಶವೇ ಕಲಾ ಅಧ್ಯಯನಕ್ಕಾಗಿತ್ತು. ೧೯೩ಳರಲ್ಲಿ ಲಂಡನ್‌ನ ರಾಯಲ್ ಅಕಾಡೆಮಿಯಲ್ಲಿ ಅಭ್ಯಾಸ ಮಾಡಿ ಬಂದ ಬಿ.ಆರ್.ರಾವ್, ಬಡಿಗೇರ್ ಮತ್ತು ದಂಡಾವತಿ ಮಠ ಈ ತ್ರಿಮೂರ್ತಿಗಳು

೯. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೧೮

೧೦. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೧೮




ಮುಂಬೈಯಲ್ಲಿ ನೂತನ ಕಲಾಮಂದಿರವನ್ನು ಸ್ಥಾಪಿಸಿದರು. ಹೆಬ್ಬಾರರೂ ಮುಂಬೈ ಮಹಾನಗರದಲ್ಲಿ ಒಂದು ಕಡೆ ಸಂಸಾರದ ಹೊಣೆ, ಹೊರೆ ಎರಡೂ ಪ್ರಬಲವಾಗಿತ್ತು ಮತ್ತು ಇವರ ಮಧ್ಯೆ ಕಲೆಯ ಗಂಭೀರ ಅಧ್ಯಯನವನ್ನು ಸಾಂಸಾರಿಕ ಜೀವನದ ಸಂಗಡ ಸರಿದೂಗಿಸಿಕೊಂಡು ಹೊಗಬೇಕು. ಎಂದರೆ ಅಂದಿನ ಆರ್ಥಿಕ ಸನ್ನಿವೇಶವು ಸುಲಭ ಸಾಧ್ಯವೇನೂ ಆಗಿರಲಿಲ್ಲ. ಕಲೆಯ ಬಗ್ಗೆ ಅವರ ಛಲ ಮತ್ತು ಅದಕ್ಕಾಗಿ ಅವರು ಪಟ್ಟ ಪರಿಶ್ರಮ ಇದರ ದೆಶೆಯಿಂದ ಅವರ ಅಧ್ಯಯನಕ್ಕೆ ವಿಶಿಷ್ಟತೆ ಮೂಡಿದೆ. ದಂಡಾವತಿ ಮಠರು ಯಾವುದಾದರೂ ಗ್ರೇಡ್ ಪಾಸ್ ಮಾಡು ಎಂದು ಹೇಳಿದ್ದೇ ತಡ ಹೆಬ್ಬಾರರು ನಾಲ್ಕು ದಿನದೊಳಗೆ ಪರೀಕ್ಷೆಗೆ ಕಟ್ಟಿ ಪಾಸಾದದ್ದಷ್ಟೇ ಅಲ್ಲ. ಬಹುಮಾನ ದೊರೆಯುವಷ್ಟು ಅಂಕಗಳು ದೊರೆತ ಮೇಲೆ ಅವರ ಕೀರ್ತಿ ಶಾಲೆಯೊಳಗೆ ಹಬ್ಬಿಬಿಟ್ಟಿತು. ಒಂದು ವರ್ಷ ಅಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಗೂ ಓದಿದರು. ಏಪ್ರಿಲ್ ೧೯೩೬ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ಪ್ರಾಥಮಿಕ ಪರೀಕ್ಷೆಗೂ ನೂತನ ಕಲಾಮಂದಿರದಲ್ಲಿ ಕಟ್ಟಿ ಪಾಸಾದರು. ನೂತನ ಕಲಾ ಮಂದಿರ ಇಲ್ಲವೆಂದಿದ್ದರೆ ಹೆಬ್ಬಾರರಿಗೆ ಜೆ.ಜೆ. ಸ್ಕೂಲಿನ ಪರೀಕ್ಷೆಗೆ ತೆಗೆದುಕೊಳ್ಳುವ ಸೌಕರ್ಯ ಒದಗುತ್ತಿರಲಿಲ್ಲ. ಸರ್ಕಾರಿ ಕಲಾ ಪರೀಕ್ಷೆಗಳಿಗೆ ಆಗ ಯಾರು ಬೇಕಾದರೂ ಖಾಸಗಿಯಾದ ಸಿದ್ಧತೆ ಮಾಡಿಕೊಂಡು ಕಟ್ಟಬಹುದಾಗಿತ್ತು.

೧೯೩೭ರಲ್ಲಿ ಎಡ್ವಾನ್ಸ್ ಪರೀಕ್ಷೆಯಲ್ಲಿ ತಾವೇ ಮಾದರಿಗಳನ್ನು ತಯಾರಿಸಿ ಪಾಸಾದರು. ಜೆ.ಜೆ ಸ್ಕೂಲಿನಲ್ಲಿ ಕೋರ್ಸಿಗೆ ಪ್ರವೇಶ ಪಡೆಯುವುದು ಅಷ್ಟು ಸುಲಭದ ಕೆಲಸವಲ್ಲ. ಅದು ಸಾಧ್ಯವಾದದ್ದು ಶ್ರೀ ಎಂ.ಆರ್.ಜಯಕರ್ ಮೂಲಕ, ಜಯಕರ್‌ಗೂ ಶಾಲೆಗೂ ಪೂರ್ವದ ಸಂಬಂಧವಿತ್ತು ಎಂಬುದರಿಂದ ಐದು ವರ್ಷದ ಕೋರ್ಸಿನ ಕೊನೇ ವರ್ಷಕ್ಕೆ ಹೆಬ್ಬಾರರಿಗೆ ಅಲ್ಲಿ ಸ್ಥಳಾವಕಾಶ ಒದಗಿತ್ತು. ಅಂತಿಮ ಪರೀಕ್ಷೆಯಲ್ಲಿ ಹೆಬ್ಬಾರರು ಗಳಿಸಿದ ಸ್ಥಾನಮಾನ ಕಂಡು ಜಯಕರ್‌ಗೆ ಸಂತೋಷವಾಯಿತು.

ಕೃಷ್ಣ ಹೆಬ್ಬಾರರು ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ೧೯೩೭ ಜುಲೈ ೧ ರಂದು ಅಧ್ಯಯನಕ್ಕಾಗಿ ಸೇರಿದರು. ಹೆಬ್ಬಾರರು ಡಿಪ್ಲೊಮೋ ವರ್ಗಕ್ಕೆ ಸೇರುವಾಗ ಜೆ.ಜೆ.ಸ್ಕೂಲಿನಲ್ಲಿ ಡೈರೆಕ್ಟರ್ ಗ್ಲಾಡ್‌ಸ್ಟಾನ್ ಸೊಲೋಮನ್ ವಿಶ್ರಾಂತನಾಗಿ ಅವರ ಸ್ಥಾನಕ್ಕೆ ಲಂಡನ್ನಿನ ತಾಯಲ್ ಅಕಾಡೆಮಿಯ ಚಾರ್ಲ್ಸ್ ಜೆರಾರ್ಡ್ ಅವರು ನೇಮಕಗೊಂಡಿದ್ದರು. ಜೆರಾರ್ಡ್ ಭಾರತದಲ್ಲಿರುವ ಕಲಾಶಾಲೆ ಭಾರತೀಯತ್ವವನ್ನು ಒಂದಿಷ್ಟಾದರೂ ಅಳವಡಿಸಿಕೊಂಡಿರಬೇಕು, ಸಂಪೂರ್ಣವಾಗಿ ರಾಯಲ್ ಅಕಾಡೆಮಿಯ ಶಿಕ್ಷಣ ವ್ಯವಸ್ಥೆಯನ್ನು ನೀಡಬಾರದು ಎಂಬುದು ಜೆರಾರ್ಡ್‌ರ ನೀತಿಯಾಗಿತ್ತು.

ಹೆಬ್ಬಾರರು ನೂತನ ಕಲಾ ಮಂದಿರವನ್ನು ಗುರು ದಂಡಾವತಿ ಮಠರಿಂದ ಸ್ಥಿರ ಚಿತ್ರಗಳ ರಚನೆ, ಶಿರೋಭಾಗ ಮತ್ತು ಸರ್ವಾಂಗದ ಚಿತ್ರಲೇಖನದ ಮಸಿ ಮತ್ತು ಕ್ರೆಯಾನ್‌ನಲ್ಲಿ ಕೆಲವೊಮ್ಮೆ ಜೀವಂತ



ಮಾದರಿಗಳ ತಲೆ ಮತ್ತು ಸರ್ವಾಂಗವನ್ನು ಜಲವರ್ಣ ಮತ್ತು ತೈಲವರ್ಣಗಳಲ್ಲಿ ಚಿತ್ರಿಸುವುದು, ಅಸ್ಥಿ ಪಂಜರಗಳ ಅವಲೋಕನದಿಂದ ಮನುಷ್ಯನ ಅಂಗಾಗಗಳ ಮಾಹಿತಿ, ಚಿತ್ರ ಪ್ರಬಂಧ ಜಲವರ್ಣ ಅಥವಾ ತೈಲವರ್ಣಗಳನ್ನು ನಿಸರ್ಗದ ದೃಶ್ಯಗಳ ಮುಂದಿನ ಹೆಜ್ಜೆಯಾಗಿತ್ತು. ಅಲ್ಲಿ ಮುಖ್ಯವಾಗಿ ಜೀವಂತ ಇರುವ ಮನುಷ್ಯ ಕಲಾಕೃತಿಗಳನ್ನು ಜಲವರ್ಣ ಮತ್ತು ತೈಲವರ್ಣವನ್ನು ಚಿತ್ರಿಸುವುದು ಶಿಕ್ಷಣದ ವಿಷಯವಾಗಿತ್ತು. ಸೋಲೋಮನ್‌ರ ಕಾಲದಿಂದಲೂ ಇವನ್ನು ಎರಡು ವಿಧವಾಗಿ ವಿಂಗಡಿಸಿ ಕಲಿಸಲಾಗುತ್ತಿತ್ತು.


ಒಂದನೆಯದು : "ಭಾರತೀಯ ಕಲಾ ವಿಭಾಗವನ್ನು ಭಾರತೀಯ ಚಿಕಣಿ ಚಿತ್ರಣಗಳನ್ನು ಅನುಭವಸ್ಥರಾದ ಜೆ.ಎಂ.ಆದಿವಾಸಿಯವರ ಕೈಕೆಳಗೆ ದೈನಂದಿನ ಜೀವನದಲ್ಲಿ ಕಂಡುಬರುವ ಸುಖ-ದುಃಖದ ದೃಶ್ಯಗಳನ್ನು ೧೬ನೆಯ ಶತಮಾನದಲ್ಲಾಯಿತು ನಮಗೆ ಬಳುವಳಿ ಬಂದಿರತಕ್ಕ ಶೈಲಿಯಲ್ಲಿ ತಂತ್ರದಲ್ಲಿ ಪಡಿಮೂಡಿಸುವುದು. ಹಿಂದೆ ಇಂಥ ಚಿತ್ರೀಕರಣದಲ್ಲಿ ರಾಜ ದರ್ಬಾರು ಮತ್ತು ಅಂತಃಪುರ ಜೀವನದ ದೃಶ್ಯಗಳು ಮಾತ್ರವೇ ವಸ್ತುಗಳಾಗುತ್ತಿದ್ದವು."[೧೧]

ಎರಡನೆಯದು : ವಿಭಾಗದಲ್ಲಿ ದೈನಂದಿನ ಜೀವನವೇ ವಸ್ತುವಾದರೂ ಅವರ ಚಿತ್ರೀಕರಣ ಮಾತ್ರ ಪಶ್ಚಿಮದಲ್ಲಿ ಪ್ರಚಲಿತವಾದ ವಾಸ್ತವ ಶೈಲಿಯಲ್ಲಿ ಮಾಡುವುದಾಗಿತ್ತು. ಈ ಎರಡಲ್ಲದೆ ಜೆ.ಜೆ.ಸ್ಕೂಲಿನಲ್ಲಿ ಆ ಕಾಲಕ್ಕೆ ಮೂರನೆಯ ಸ್ವರ್ಣ ಮಾಧ್ಯಮ ಪಂಥವೂ ಬಂದಿತ್ತು. ಇವರ ಮುಂಚೂಣಿಯಲ್ಲಿ ನಗಾರ್ಕರ ಎಂಬೊಬ್ಬ ಅಧ್ಯಾಪಕರಿದ್ದರು. ಇದನ್ನು ಅರೆ ವಾಸ್ತವ ಶೈಲಿ ಎಂದು ಕರೆಯಬಹುದು.

ಇವರನ್ನು ಬಂಗಾಳದಲ್ಲಿ ೨೦ನೆಯ ಶತಮಾನದ ಆದಿ ಭಾಗವನ್ನು ಬಂಗಾಳಿ ಕಲಾವಿದರಾದ ಅವನೀಂದ್ರನಾಥ ಟಾಗೂರ್, ನಂದಲಾಲ ಬೋಸ್, ಅನಿಲಕುಮಾರ್ ಹಾಲ್ದರ್ ಮುಂತಾದವರು ಅವಿಷ್ಕಾರ ಮಾಡಿದ ವಾಶ್ ತಂತ್ರವನ್ನು ಬಳಸಲಾಗುತ್ತಿತ್ತು. ಇದಕ್ಕೆ ವಿರುದ್ಧವಾಗಿ ಇರುತ್ತಿದ್ದ ಚಿಕಣಿ ಚಿತ್ರ ತಂತ್ರದಲ್ಲಿ ಅಕೃತಿಗಳಿಗೆ ನಿಶ್ಚಿತವಾದ ಸೀಮಾ ರೇಖೆಗಳಿರುತ್ತವೆ. ಬಣ್ಣಗಳು ಅಪಾರದರ್ಶಕವಾಗಿರುತ್ತವೆ.

ಕಲೆಯ ವಿಷಯವನ್ನು ಬಂಗಾಳ ತೋರಿದ ಸ್ವಾತಂತ್ರ್ಯ ಮಾರ್ಗವನ್ನು ಮುಂಬಯಿ ಸ್ವೀಕಾರ ಮಾಡದಿದ್ದರೆ ಹಿಂದೆ ಬೀಳಬೇಕಾಗಿತ್ತು. ಅದರಲ್ಲೂ ಸ್ವಾತಂತ್ರ್ಯ ಯುಗವನ್ನು ನಗೆಪಾಟಲು ಆಗಬೇಕಾದೀತು ಎಂಬ ಭೀತಿಯಿಂದಲೋ ಏನೋ, ಆ ತಂತ್ರದ ಮೇಲಿನ ಪ್ರೀತಿಯಿಂದಲೋ ಅಂತೂ ಬ್ರಿಟೀಷ್ ಅಧಿಪತ್ಯದ ಸರಕಾರಿ ಕಲಾಶಾಲೆ ಮೆಲ್ಲನೆ ಕಲಾ ಸ್ವಾತಂತ್ರ್ಯದ ಕಡೆಗೆ ಒಲಿಯಿತು. ಹೀಗೆ ಅದು ಒಲಿಯುವ ಸಂದರ್ಭದಲ್ಲಿ ಡೈರೆಕ್ಟರ್ ಹುದ್ದೆ ವಹಿಸಿದ ಚಾರ್ಲ್ಸ್ ಜೆಕಾರ್ಡ್ ಸಮುಚಿತವಾದ ಧೋರಣೆಯನ್ನು

೧೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ - ೩೪




ಶಾಲೆಯಲ್ಲಿ ಅನ್ವಯಗೊಳಿಸಿದ್ದು ಭಾರತೀಯ ಕಲಾ ಪ್ರಪಂಚಕ್ಕೆ ಅವರು ನೀಡಿದ ಬಹುದೊಡ್ಡ ಕೊಡುಗೆಯಾಯಿತು.

ಒಬ್ಬ ಕಲಾವಿದನು ತನ್ನಲ್ಲಿರುವ ಕಲೆಯನ್ನು ಅಭಿವ್ಯಕ್ತಿಸಿದರೆ ಮಾತ್ರ ಅವನು ಕಲಾವಿದನಾಗಿ ಹೊರಹೊಮ್ಮುತ್ತಾನೆ. ಈ ಕಾರಣಕ್ಕಾಗಿ ಯಾವುದೇ ದೇಶದ ಸಂಸ್ಕೃತಿಯ ಕಲಾವಿದರಾದರೂ ಕೂಡಾ ಅವರ ಇತರ ದೇಶಗಳ ಬೇರೆ ಬೇರೆ ರೀತಿಯ ಕಲಾ ಪಂಥಗಳು, ತಂತ್ರಗಳು, ಶೈಲಿಗಳು, ತಾಂತ್ರಿಕ ಕೌಶಲ್ಯ ಹಾಗೂ ವೈಚಾರಿಕ ನಿಶ್ಚಿಂತತೆ ಇಂತಹ ಗುಣಾಂಶಗಳನ್ನು ಹೀರಿಕೊಂಡು ಈ ರೀತಿ ಸಮನ್ವಯಗೊಳಿಸಿ ಅವಿರ್ಭವಿಸುವ ವ್ಯಕ್ತಿಯ ಮೂಲವಾದ ಕಲಾಯೋಗವೇ ಭಾರತೀಯ ಕಲಾವಿದನ ಸಿದ್ಧಿ ಎನಿಸಿರಬಹುದೆಂದು ಧೃಢ ವಿಶ್ವಾಸದಿಂದ ಚಾರ್ಲ್ಸ್ ಜೆರಾರ್ಡ್ ತನ್ನ ವಿದ್ಯಾರ್ಥಿಗಳ ಮನೋರಂಗವನ್ನು ವಿಸ್ತರಿಸಲು ಯತ್ನಿಸಿದನು. ಅವನ ಅಧಿಕಾರವನ್ನು ಶಾಲೆಯ ಕಲಾ ಶಿಕ್ಷಣ, ಕಲಾವಿದನ ಸ್ವಂತಿಕೆಯ ಕಡೆಗೆ ಕಲಾ ಸ್ವಾತಂತ್ರ್ಯಕ್ಕೆ ಅಭಿಮುಖವಾಗಿ ಮುನ್ನಡೆಯಿತು.

ಜೆ.ಜೆ.ಸ್ಕೂಲನ್ನು ಹೆಬ್ಬಾರರ ಜೀವನದ ಗುರಿಯಾದ ಕಲಾಯಾತ್ರೆಗೆ ಡೈರೆಕ್ಟರ್ ಚಾರ್ಲ್ಸ್ ಜೆರಾರ್ಡ್ ಹೆಬ್ಬಾರರನ್ನು ಕಲಾವಿದರಾಗಿ ನಿರ್ಮಾಣ ಮಾಡಲು ಪ್ರಮುಖವಾದ ವ್ಯಕ್ತಿಯಾಗಿದ್ದರು. ಆರಂಭದಲ್ಲಿ ಹೆಬ್ಬಾರರು ಕಲಾ ಮಂದಿರದಿಂದ ಕಲಾ ಪದ್ಧತಿಯು ಮತ್ತು ಅರ್ಧ ವರ್ಷದ ಪರೀಕ್ಷೆಯಲ್ಲಿ ಹೆಬ್ಬಾರರು ಫೇಲ್ ಆಗಿದ್ದು ಅವರಿಗೆ ಆಘಾತವೇ ಆಯಿತು. ಈ ವಿಫಲತೆಯೇ ಹೆಬ್ಬಾರರ ಮುಂದಿನ ಪರೀಕ್ಷೆಗಳ ಸಫಲತೆಗೂ ಮಿಗಿಲಾಗಿ ಕಲಾ ಜೀವನದ ಸರ್ವ ಯಶಸ್ಸಿಗೂ ಕಾರಣವಾಯಿತು. ಹಾಗೆಯೇ ೧೯೩೪ರ ಜೆ.ಜೆ.ವಾರ್ಷಿಕ ಪರೀಕ್ಷೆಯಲ್ಲಿ ಹೆಬ್ಬಾರರು ಪ್ರಥಮ ವರ್ಗ ಸ್ಥಾನದಲ್ಲಿ ತೇರ್ಗಡೆಯಾದರು. ಜೊತೆಗೆ ಸೋಲಿನ ಒಂದು ಅನುಭವ ಬರುವಂತೆ ಆದದ್ದು ಅವರ ಎರಡು ವರ್ಣ ಚಿತ್ರಗಳಿಗೆ ಮನ್ನಣೆ ಸಿಗಲಾರದೆ ಹೋದುದರಿಂದ, ೪ನೇ ವರ್ಷದ ವಿದ್ಯಾರ್ಥಿನಿಯೊಬ್ಬಳನ್ನು ಮಾಡಲ್ ಕೂರಿಸಿ 'ಹಸಿರು ಕುಪ್ಪಸ' ಮತ್ತು 'ನಿಶಾ' ಎಂಬ ಚಿತ್ರಗಳು ಭಾರೀ ವಿಶ್ವಾಸದಿಂದ ಬರೆದಿದ್ದರು. ಬಹುಮಾನವೋ ಮನ್ನಣೆಯೋ ಸಿಕ್ಕೇ ಸಿಗುವುದೆಂಬ ನಂಬಿಕೆ ಇಟ್ಟುಕೊಂಡಿದ್ದರು. ಈ ನಂಬಿಕೆಯೂ ಸುಳ್ಳಾಯಿತು. ಆಗಲೇ ಗೊತ್ತಾದದ್ದು ಒಳ್ಳೆಯದಾಯಿತು.

"ಎಲ್ಲಾ ಕಾಲದಲ್ಲೂ ಕಲಾವಿದರು ಬುದ್ಧಿಹೀನರಾಗಿ ಸ್ತ್ರೀ ಸೌಂದರ್ಯವೇ ಮುಖ್ಯಾಧಾರವೆಂಬ ತತ್ವದ ಮೇಲೆ ತಮ್ಮ ಕಾಯಕ ನಡೆಸಿದರು. ಸ್ತ್ರೀಯೇ ಕಲೆಯ ಅಧಿದೈವವೆಂದೂ ಸ್ತ್ರೀ ಶರೀರವೇ ಕಲೆಯ ಕೇಂದ್ರ ವಸ್ತುವೆಂದೂ ಭ್ರಮಿಸಿದ್ದರಿಂದ ಜಗತ್ತಿನಲ್ಲಿ ಕೆಟ್ಟದಾದ ಅದೆಷ್ಟೋ ಚಿತ್ರಗಳು ಸೃಷ್ಟಿಯಾಗಲು ಕಾರಣವಾಯಿತು. ನಿಸರ್ಗ ಸಹಜವಾಗಿ ಮಾಡಿಕೊಳ್ಳುವ ಭೌತಿಕವಾದ ಸೌಂದರ್ಯವೇ ಬೇರೆ, ಕಲಾ



ಸೌಂದರ್ಯ ಬೇರೆಂಬ ಅರಿವು ಕಲಾವಿದನಿಗೆ ಮಾಡಬೇಕಾದ್ದು ಅಗತ್ಯ ಎಂಬ ಒಬ್ಬ ವಿಮರ್ಶಕನ ಮಾತನ್ನು ಆ ಕಾಲದ ದಿನಚರಿಯಲ್ಲಿ ಹೆಬ್ಬಾರರು ಬರೆದು ತಮಗೆ ತಾವು ಎಚ್ಚರಿಕೆ ನೀಡಿಕೊಂಡಿದ್ದಾರೆ."[೧೨]


ಹೆಬ್ಬಾರರು ಎರಡನೇ ವರ್ಷ ಭಿತ್ತಿ ಅಲಂಕರಣ (ಮ್ಯೂರಲ್ ಡೆಕೋರೇಶನ್) ವರ್ಗಕ್ಕೆ ಸೇರಿದರು. ಈ ವರ್ಗದಲ್ಲೂ ಜೆರಾರ್ಡ್ ಅವರೇ ಶಿಕ್ಷಕರು. ಆದರೆ ಭಿತ್ತಿ ಅಲಂಕರಣದ ತಂತ್ರದಲ್ಲಿ ಪರಿಣಿತರೇನೂ ಅಲ್ಲ. ಆದರೆ ವರ್ಗದಲ್ಲಿ ಸಂಯೋಜನೆ ಮತ್ತು ತೈಲಚಿತ್ರಗಳನ್ನು ಬಿಡಿಸುವ ವಿದ್ಯಾರ್ಥಿಗಳಿಗೆ ಮುಕ್ತ ಸ್ವಾತಂತ್ರ್ಯವಿತ್ತು.

ಮುಂಬೈ ಕಲಾ ಸಂಘಗಳು ಮತ್ತು ಅಖಿಲ ಭಾರತೀಯ ಕಲಾ ಸ್ಪರ್ಧೆಗಳಿಗೆ ಚಿತ್ರಗಳನ್ನು ಕಳಿಸಲು ಆರಂಭ ಮಾಡಿದ್ದು ೧೯೩೯ರಲ್ಲಿ. ಮುಂಬಯಿ ಆರ್ಟ್ಸ್ ಸೊಸೈಟಿಯು ೪೦ ರೂಪಾಯಿ ಬಹುಮಾನವನ್ನು ಹೆಬ್ಬಾರರ 'ಪ್ರೇಮ ಕೇಳಿ' ಎಂಬ ಕೃತಿಗೆ ನೀಡಿತ್ತು ಹಾಗೂ ೪ ಚಿತ್ರಗಳಿಗೆ ಪ್ರದರ್ಶನದ ಅವಕಾಶ ನೀಡಿತ್ತು. ಕಲಾ ಶಾಲೆಯ ಕೊನೇ ವರ್ಷದಲ್ಲಿ ಜೆರಾರ್ಡ್ ನೇತೃತ್ವದಲ್ಲಿ ಅಜಂತಾ, ಎಲ್ಲೋರಗಳಿಗೆ ಯಾತ್ರೆಯ ಸಂದರ್ಭದಲ್ಲಿ ರಚನೆ ಮಾಡಿದ ಚಿತ್ರಗಳ ಪ್ರತಿಯನ್ನು ಶಾಲೆಗಾಗಿ ಜೆರಾರ್ಡ್ ೧೦೦ ರೂಪಾಯಿಗೆ ಕೊಂಡುಕೊಂಡರು. 'ನೀನು ಬೇಕಾದರೆ ಇನ್ನೊಂದು ಮಾಡಿಕೋ'[೧೩] ಎಂದರು. ಅಂತೆಯೇ ಹೆಬ್ಬಾರರು ಇನ್ನೊಂದು ಕೃತಿಯನ್ನ ಮಾಡಿ ೩೦೦ ರೂಪಾಯಿಗೆ ಮಾರಿದರು. ಹೀಗೆಯೇ ಇನ್ನೂ ಅನೇಕ ಚಿತ್ರಗಳನ್ನು ಬರೆದು ಸ್ಪರ್ಧೆಗಳಿಗೆ ಕಳಿಸುವುದು, ಮಾರುವುದು ಅವರ ಹವ್ಯಾಸವಾಯಿತು. ಇದು ಅವರ ವರಮಾನದ ಒಂದು ಅವಶ್ಯ ಉಪಾಯವೂ ಆಯಿತು.

ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಂದ ಪಾಸು ಮಾಡಿದ ಹೆಬ್ಬಾರರಿಗೆ ಜೆ.ಜೆ.ಕಲಾಶಾಲೆಯಲ್ಲಿ ಫೆಲೋಷಿಪ್ ಸಿಕ್ಕಿತು. ಯಾರಾದರೂ ಒಬ್ಬ ಉತ್ತಮಾಂಕವುಳ್ಳ ವಿದ್ಯಾರ್ಥಿಗೆ ೬೦ ರೂಪಾಯಿ ತಿಂಗಳ ಸಂಬಳದ ಈ ಹುದ್ದೆಯನ್ನು ಮೀಸಲಿಡುವ ಪದ್ಧತಿಯಂತೆ ೧೯೩೯ ಮೇ ೩೧ರಂದು ಹೆಬ್ಬಾರರು ನೇಮಕಗೊಂಡರು. ೧೯೪೦ ಜನವರಿ – ಮಾರ್ಚ್ ೩೧ ರವರೆಗೆ ಈ ಹುದ್ದೆಯ ಬದುಲು ನಿಜಕ್ಕೂ ಸಹಾಯಕ ಅಧ್ಯಾಪಕರಾಗಿ ಕ್ಲಾಸಿಗೆ ಹೋಗಿ ಪಾಠ ಮಾಡುವ ಅವಕಾಶ ದೊರೆಯಿತು. ಎಲ್ಲಾ ತರುಣ ಶಿಕ್ಷಕರಂತೆ ಹೆಬ್ಬಾರರು ತುಂಬಾ ಕ್ರಿಯಾಶೀಲರಾಗಿ, ಚಟುವಟಿಕೆಯಿಂದ ಕೂಡಿದ್ದು, ವಿದ್ಯಾರ್ಥಿಗಳ ಪ್ರೇಮವನ್ನು ಗಳಿಸಿದರು. ಶಿಷ್ಯವರ್ಗದ ವ್ಯಕ್ತಿತ್ವ ವಿಕಾಸಕ್ಕೆ ಪೋಷಣೆ ನೀಡುವುದು. ಅವರಲ್ಲಿ ಆತ್ಮವಿಶ್ವಾಸ ಉದಯಿಸುವಂತೆ ಮಾಡಿ ವಿದ್ಯಾರ್ಥಿಗಳನ್ನು ಬೆಳೆಸುವುದು ತನ್ನ ಕರ್ತವ್ಯದ ಮುಖ್ಯಾಂಶವೆಂದು ಬಲವಾಗಿ ನಂಬಿದ್ದರು.

---

೧೨. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩೫
೧೩. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩೫




ಜೀವಂತ ಚಿತ್ರೀಕರಣಕ್ಕೆ ಹೊರಗಿನಿಂದ ಮಾಡೆಲ್‌ಗಳನ್ನು ತರಿಸುವ ರೂಢಿ, ಜೊತೆಗೆ ಅವರ ವಿದ್ಯಾರ್ಥಿಗಳಲ್ಲಿ ಹತ್ತು ನಿಮಿಷಕ್ಕೊಬ್ಬರಂತೆ ಒಬ್ಬೊಬ್ಬರನ್ನೇ ಮಾಡೆಲ್ ರೀತಿ ನಿಲ್ಲಿಸುತ್ತಿದ್ದರು. ಮನುಷ್ಯಾಕೃತಿಯ ತರಂಗಗಳನ್ನು ರೇಖೆಗಳಲ್ಲಿ ಸೆರೆಹಿಡಿಯಲು ಶಕ್ತವೆಂಬುದನ್ನು ವಿದ್ಯಾರ್ಥಿಗಳಿಗೆ ಕಲಿಸಿದರು. ಈ ವಿಷಯವು ವಿದ್ಯಾರ್ಥಿಗಳಿಗೆ ಇಷ್ಟವೆನಿಸಿದ ವಿಷಯವಾಗಿತ್ತು. ಈ ವರ್ಗದಲ್ಲಿ ನ್ಯೂಟನ್ ಸೋಜಾ, ಹರ್‌ಕಿಶನ್‌ಲಾಲ್, ಪ್ರಾಣನಾಥಮೋಗಾ, ಬರ್ರಾತಿಯಾ ಮುಂದೆ ಪ್ರಸಿದ್ಧ ಕಲಾವಿದರಾದುದುಂಟು. ವಿದ್ಯಾರ್ಥಿಗಳಿಗೆ ತಮ್ಮ ಚಿತ್ರ ಕೃತಿಗಳನ್ನು ವಿಮರ್ಶೆ ಮಾಡಿ ಅವರೇ ಸ್ವತಂತ್ರ್ಯವಾಗಿ ತಮ್ಮ ಚಿತ್ರಗಳನ್ನು ತಿದ್ದಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತಿದ್ದರು.

ಜೆ. ಜೆ. ಕಲಾಶಾಲೆಯಲ್ಲಿ ಎರಡು ವರ್ಷಗಳ ಕಾಲ ಅಧ್ಯಾಪಕ ವೃತ್ತಿಯ ಜೊತೆಗೆ ತನ್ನ ಕಲಾಸೃಷ್ಟಿಯ ಪ್ರಥಮ ಸೊಪಾನವನ್ನು ಯಶಸ್ವಿಯಾಗಿ ಮುಗಿಸಿದರು, ತಮ್ಮ ನೆಚ್ಚಿನ ಅಧ್ಯಾಪಕ ಹೆಬ್ಬಾರರನ್ನು ಅವರ ವಿದ್ಯಾರ್ಥಿಗಳು ಮರೆಯಲಿಲ್ಲ. ಶಾಲೆಯಿಂದ ಹೊರಟು ನಿಂತಾಗ ಹೃದಯ ಸ್ಪರ್ಶಿಯಾದ ವಿದಾಯ ಸತ್ಕಾರ ಅರ್ಪಿಸಿದರು. ಪ್ರೀತಿಯ ಗುರುವಿಗೆ ಚಿನ್ನದಲ್ಲಿ ಕಟ್ಟಿದ ಹರಳಿನುಂಗುರವನ್ನೂ, ಪಾರ್ಕರ್ ಪೆನ್ನನ್ನೂ ಉಡುಗೊರೆಯಾಗಿ ಕೊಟ್ಟರು. ವಿದಾಯ ಭಾಷಣವನ್ನು "ಈ ಉಂಗುರ ಕಲಾದೇವಿಗೆ ನನ್ನ ಮದುವೆಯಾದ ಸಂದರ್ಭದಲ್ಲಿ ಕೊಟ್ಟ ಮದುವೆಉಂಗುರವೆಂದು ಈ ಪೆನ್ ಅವರ ಉಡುಗೊರೆ ಎಂತಲೂ ಸ್ವೀಕರಿಸುತ್ತೇನೆ ಎಂದರು."[೧೪]

"ಈ ಸಂದರ್ಭದಲ್ಲಿ ಹೆಬ್ಬಾರರು ಈ ಮಾತುಗಳಿಂದ ಭಾವೋದ್ವೇಗಕ್ಕೆ ತುತ್ತಾಗಿ ಜೋರ್ಡ್ ದಂಪತಿಗಳು ಹೆಚ್ಚು ಹೊತ್ತು ಇರಲಾರದೆ 'ನನ್ನನ್ನು ನೋಡಿ ಹೋಗು' ಎಂದು ತಮ್ಮ ಕೊಠಡಿಗೆ ಆಹ್ವಾನಿಸಿದರು. "ನೀನು ಇಲ್ಲಿಂದ ದೂರವಾದೆ ಎಂದು ಭಾವಿಸಬೇಡ, ಇನ್ನೊಮ್ಮೆ ಕರೆದಾಗ ಬಂದೇ ಬರುತ್ತೀ ಅಲ್ಲವೇ! ಎಂದು ಎದೆ ತುಂಬಿ ಹೇಳಿದರು. ಇದರಿಂದಲೇ ಗೊತ್ತಾಗುತ್ತದೆ. ಗುರು ಶಿಷ್ಯರ ಸಂಬಂಧ ಏನೆಂದು ತಿಳಿಯುತ್ತದೆ."[೧೫]

ಅಧ್ಯಯನ ಮುಗಿಸಿದ ಮೇಲಾದರೂ ನಿಶ್ಚಿತ ವರಮಾನ ತರುವ ಉದ್ಯೋಗ ಸಿಗಲಿಲ್ಲ. ಆಗ ತೋರಿದ ಎರಡು ದಾರಿ ಖಾಸಗಿಯಾಗಿ ಕಲೆಯ ಪಾಠ ಹೇಳುವುದು ಮತ್ತು ಚಿತ್ರ ಬರೆದು ಸ್ಪರ್ಧೆಗಳಿಗೆ ಕಳಿಸಿದರೆ ಬರುವ ಬಹುಮಾನವನ್ನು ಆದಾಯದ ಅಂಶವೆಂದು ತಿಳಿಯುವುದು. ಚಿತ್ರಗಳನ್ನು ಮಾರಿ ಬರುವ ನೂರಿನ್ನೂರು ರೂಪಾಯಿಗಳ ಅಸ್ಥಿರ ವರಮಾನದಲ್ಲಿಯೇ ಸಂಸಾರ ಸಾಗಿಸುವ ಪ್ರಮೇಯ– ಅದೂ ಮುಂಬಯಿಯಲ್ಲಿಯೇ ಕಲೆಯನ್ನೆ ಬದುಕಲು ದಾರಿಯಾಗಿ ಸ್ವೀಕರಿಸುವ ಮನುಷ್ಯನಿಗೆ ತಾಪತ್ರಯ

೧೪. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩೬
೧೫. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩೬




ತಪ್ಪದು ಎಂಬ ವಾಸ್ತವ ಪ್ರಜ್ಞೆ, ಏನಿದ್ದರೂ ಒಂದಲ್ಲ ಒಂದು ದಿನ ಗುರಿ ಮುಟ್ಟಿಯೇ ತೀರುವನೆಂಬ ಉತ್ಕಟ ಛಲ, ವ್ಯಕ್ತಿತ್ವದ ಯಾವುದೇ ಮೂಲೆಯನ್ನು ಒಯ್ಯುತ್ತಿದ್ದವು. ಬೇಸರ, ನಿರಾಶೆಗಳು ಆಗಿಂದಾಗ್ಗೆ ಇಣುಕಿ ಹಾಕಿದರೂ ಬದುಕಿನ ಸ್ಥಾಯಿಯಲ್ಲಿ ಆಶಾವಾದಿಯಿಂದಲೇ ಮನೆಮಾಡಿತ್ತೆಂದು ಹೇಳಬಹುದು.

"ದ್ವಿತೀಯ ಮಹಾಯುದ್ಧ ಕಾಲದಲ್ಲಿ ನಡೆದೊಂದು ಘಟನೆ. ೧೯೪೩ ಇಡೀ ಭಾರತ ಭೂಮಿಯನ್ನೇ ಬ್ರಿಟೀಷ್ ಸಾರ್ವಭೌಮರು ಯುದ್ಧ ಕ್ಷೇತ್ರವೆಂದು ಕಾರಿದ ಕಾಲವಾಗಿತ್ತು. ಮಿಲಿಟರಿ ನೆಲೆಗಳಂತಹ ಪಶ್ಚಿಮ ಕರಾವಳಿ ನಾಗರೀಕರಿಗೆ ವಿಶೇಷವಾದ ಸ್ಥಳ. ಹೆಬ್ಬಾರರು ಕಲಾವಿದನ ಕಣ್ಣು ಕರಾವಳಿಯ ಸುಪ್ರಭಾತದ ನೇಸರಿನ ಚೆಲುವನ್ನು ಚಿತ್ರಿಸುತ್ತಾ ನಿಷೇದಿತ ಪ್ರದೇಶದೊಳಕ್ಕೆ ಪ್ರವೇಶಿಸಿದ್ದರು. ಇಬ್ಬರು ಜವಾನರು ಹೆಬ್ಬಾರರನ್ನು ಅರೆಸ್ಟ್ ಮಾಡಿದಾಗ 'ನಾನು ಕಲಾವಿದ, ಇಲ್ಲಿಗೆ ದಾರಿ ತಪ್ಪಿ ಬಂದೆನಷ್ಟೆ' ಎಂದು ಕೇಳಿಕೊಂಡರು. ಗೊತ್ತಿದೆ ಬಿಡು, ಗುಪ್ತಾಚಾರರು ಎಂತೆಂಥ ವೇಷ ಹಾಕುತ್ತಾರೆ ನಿನ್ನನ್ನು ಗುಂಡು ಹಾಕಿ ಸುಟ್ಟರೂ ಯಾರೂ ನಿನ್ನನ್ನು ಕೇಳುವವರಿಲ್ಲ, ತಿಳಿಯಿತೇ ಎಂದು ಗದರಿಸುತ್ತಾರೆ. ಇದೇ ಸಂದರ್ಭದಲ್ಲಿ ಬ್ರಿಟೀಷ್ ಆಫೀಸರ್ ಜವಾನರಿಗೆ ಸನ್ನೆ ಮಾಡಿ ಮ್ಯಾಚಿಸ್ ಇದೆಯೇ ಎಂದು ವಿಚಾರಿಸುವುದನ್ನು ಕಂಡ ಕೂಡಲೇ ಹೆಬ್ಬಾರರು ನನ್ನ ಹತ್ತಿರ ಇದೆ ಎಂದು ಕೂಗಿದರು. ಆತ ಸಮೀಪಕ್ಕೆ ಬಂದಾಗ ಸಿಗರೇಟ್‌ಗೆ, ಕಡ್ಡಿ ಹಚ್ಚಿ 'ನೋಡಿ ಸರ್ ನಾನೊಬ್ಬ ಕಲಾವಿದ, ಸರಕಾರದ ಜೆ.ಜೆ.ಸ್ಕೂಲಿನಲ್ಲಿ ಪಾಠ ಮಾಡುವವನು, ಗುಪ್ತಾಚಾರನೆಂದು ತಪ್ಪಾಗಿ ತಿಳಿದು ಅರೆಸ್ಟ್ ಮಾಡಿದ್ದಾರೆ. ಅದಕ್ಕೆ ಆತ ಇಂಟೆಲಿಜೆನ್ಸ್ ಆಫೀಸರ್‌ಗೆ ತಿಳಿಸಿ ಅಲ್ಲಿಂದ ಜೆ.ಜೆ.ಗೆ ಫೋನ್ ಮಾಡಿ ತನ್ನ ಗುರುತನ್ನು ಸಮರ್ಥಿಸಿಕೊಳ್ಳಲು ಹೆಬ್ಬಾರರು ಶಕ್ತರಾದರು. ಹೆಬ್ಬಾರರು ತನ್ನಷ್ಟಕ್ಕೆ ನಾನೇನಾದರೂ ಹೆದರಿದರೆ ಎದೆಗುಂದಿಬಿಟ್ಟಿದ್ದರೆ ಆಫಿಸರ್‌ಗೆ ಬೆಂಕಿಪೊಟ್ಟಣ ಕೊಡದೆ ಹೋಗಿದ್ದರೆ ನನ್ನ ಗತಿ ಏನು? ಎನ್ನುತ್ತಲೇ ಮನೆಗೆ ಸೇರಿದರು.[೧೬]

ನಾಲ್ಕು ಮಂದಿ ಅಮೇರಿಕನ್ ಮಹಿಳೆಯರು ಹೆಬ್ಬಾರರ ಪಾಠಕ್ಕೆ ಮನಃಸೋತಿದ್ದರು. ಅವರಲ್ಲಿ ಒಬ್ಬಾಕೆಗೆ ಚಿತ್ರಕಲೆಯ ತಂತ್ರವನ್ನು ಕಲಿಸಿ ಹೀಗೆ ಮಾಡಿದರೆ ಸೈ ಎಂದು ಹೇಳಿ ಒಂದು ತಿಂಗಳ ಬಳಿಕ ಹೋದರೆ ಖಾಲಿ ಕಾಗದ ತೋರಿಸಿದಳು ಯಾವುದೋ ಕುಟುಂಬದ ಹೆಂಗಸು ಮೇಷ್ಟ್ರ ಮುಖ ಕಂಡ ಮೇಲೆಯೇ ಬ್ರಷ್ ಹಿಡಿಯುವಳು. ಅವರಲ್ಲಿ ವಿಶೇಷವೆಂದರೆ ನಾನೂಬಾಯಿ ಎಂಬ ವಿದ್ಯಾರ್ಥಿ ಯಾವುದೇ ಹುಚ್ಚಿಗೆ ಪೇಂಟಿಂಗ್ ಕಲಿಯಲು ಹೊರಟನು ಆತನು ದೊಡ್ಡ ಶ್ರೀಮಂತ ಕುಟುಂಬಕ್ಕೆ ಸೇರಿದವನು. ನಾನೂಬಾಯಿ ಸಂಪರ್ಕದಿಂದ ಗ್ವಾಲಿಯರ್‌ನ ಮಹಾರಾಜರ ಚಿತ್ರ ಬಿಡಿಸಬೇಕೆಂದು ಹೆಬ್ಬಾರರನ್ನೊಪ್ಪಿಸಿದರು. ಇದಕ್ಕೆ ಆಗಿನ ಕಾಲಕ್ಕೆ ೩೦೦೦ ರೂಪಾಯಿಗಳ ಸಂಭಾವನೆಯನ್ನು ಪಡೆದಿದ್ದರು.

---

೧೬. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೩೭




ಆ ಚಿತ್ರ ನೋಡಿ ಸುಪ್ರೀತನಾದ ಯುವರಾಜರು ತಮ್ಮ ಕುದುರೆಯ ಚಿತ್ರವನ್ನು ಹೆಬ್ಬಾರರ ಕೈಯಿಂದ ಮಾಡಿಸಿದರಂತೆ, ಒಬ್ಬಳು ಪೇಂಟಿಂಗ್ ಕಲಿಯಲು ಶಿಷ್ಯೆ ಶಿರೀನ್ ಮುಗಾಸೇಠ್ ರೋಸಿಮೋಡಿಯ ಸಂದರ್ಭದಲ್ಲಿ ಹೆಬ್ಬಾರರು ವಸಂತ ಎಂಬ ಒಂದು ಚಿತ್ರವನ್ನು ಉಡುಗೊರೆ ಕೊಟ್ಟಿದ್ದಲ್ಲದೆ ಒಂದು ಇಂಗ್ಲೀಷ್ ಪದ್ಯ ಬರೆದರಂತೆ ಅದು ಅವರ ಪ್ರಥಮ ಇಂಗ್ಲೀಷ್ ಕವನ

> "Heaven may shower its fift rare
> Unto you the blossom fair,
>
> Bearing fruits which you are
> To smile upon you worthy pair"[೧೭]

ಹೆಬ್ಬಾರರಿಗೆ ಆರ್ಥಿಕ ತಾಪತ್ರಯ ತಪ್ಪಿದ್ದಲ್ಲ, ಎಷ್ಟು ಸಂಪಾದಿಸಿದರೂ ಸಂಸಾರದ ಬಾಯಿ ಮುಚ್ಚಲಾಗುತ್ತಿರಲಿಲ್ಲ. ಆದರೂ 'ಒಂದೂವರೆ ವರ್ಷದಿಂದ ನಾನು ಸ್ವತಂತ್ರ್ಯ ಉದ್ಯೋಗಿಯಾಗಿ ಜೀವನ ಮಾಡಬಲ್ಲೆ' ಎಂಬ ವಿಶ್ವಾಸವಿತ್ತು.[೧೮] ಈ ಸಂದರ್ಭವನ್ನು ಜೆ.ಜೆ.ಸ್ಕೂಲಿನ ಸಂಜೆ ಕ್ಲಾಸುಗಳಿಗೆ ಜೂನಿಯರ್ ಟೀಚರ್ ಆಗಿ ಜೋರ್ಡ್ ಕರೆದರು. ಗುರುಗಳ ಮಾತಿಗೆ ಒಲ್ಲೆಯೆನ್ನಲು ಮನಸ್ಸು ಬರಲಿಲ್ಲ. ಹೆಬ್ಬಾರರೊಂದಿಗೆ ವಿದೇಶಾನುಭವ ಪಡೆದು ಮರಳಿ ಬಂದ ಶಿವಾಕ್ಸ್ ಚಾವಡಾ ಸೀನಿಯರ್ ಟೀಚರ್ ಆಗಿ ೨೦೦ ರೂ. ಸಂಬಳ ಸಿಕ್ಕರೇ, ಹೆಬ್ಬಾರರಿಗೆ ೧೦೦ ರೂಪಾಯಿ, ದಿಲ್ಲಿಯಲ್ಲಿ ಸ್ಥಾಪನೆಯಾಗಲಿದ್ದ ಯುದ್ಧ ಚಿತ್ರಗಳ ಸಂಗ್ರಹಾಲಯಕ್ಕೆ ಸಮರ ಸಾಂದ ಚಿತ್ರಗಳನ್ನು ಹೆಬ್ಬಾರರು 'ಮೇಜರ್ ಚಲ್ಲಾರಾಮನ ಸಾಹಸಗಾಥೆ ಎಂಬ ಚಿತ್ರಕ್ಕೆ ರೂ. ೪೫೦ಗಳನ್ನು ಸಂಪಾದಿಸಿದರು.

"ಹೆಬ್ಬಾರರು ತಮ್ಮ ಕಲಾ ಜೀವನದ ಪೂರ್ವಭಾಗವನ್ನು ಅತ್ಯಂತ ಪ್ರಸಿದ್ಧವೆನಿಸಿರುವ ಒಂದೇ ಚಿತ್ರ ಜಾನುವಾರು ಜಾತ್ರೆ (ಕ್ಲಾಟು ಮಾರ್ಟ್) ಚಿತ್ರವನ್ನು ೧೯೪೪ರಲ್ಲಿ ರಚಿಸಿದರು. ಈ ಚಿತ್ರಕ್ಕೆ ೨೫ ರೂಪಾಯಿಗಳ ಬಹುಮಾನವು ಬಂದಿತು. ಟೈಮ್ಸ್ ಆಫ್ ಇಂಡಿಯಾದಲ್ಲಿ ಸ್ವಂತ ಗುರು ಜೆರಾರ್ಡ್ ಅವರ ಪ್ರಶಂಸಾತ್ಮಕ ವಿಮರ್ಶೆಯನ್ನು ಗಿಟ್ಟಿಸಿಕೊಂಡರು. ಇದು ಹೆಬ್ಬಾರರ ಅತ್ಯಂತ ಜನಪ್ರಿಯ ಚಿತ್ರಗಳೆಂತಲೂ, ದೇಶ ವಿದೇಶಗಳಲ್ಲಿ ಮನ್ನಣೆ ಪಡೆಯಿತು."[೧೯] ಸಂಜೆ ಕ್ಲಾಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಗಡ ಚಾವಡಾ ಮಾಲುಸ್ತೆ, ಜಮಾಲ್ ಮಿಸ್ ಮರ್ಚೆಂಟ್ ಮುಂತಾದವರುಗಳನ್ನು ಕೂಡಿಕೊಂಡು ಅಂಬರನಾಥಕ್ಕೆ ಶೈಕ್ಷಣಿಕ ಯಾತ್ರೆ ಹೊರಟ ಸಂದರ್ಭವನ್ನು ಹಾಗೂ ಶಿವ ದೇವಸ್ಥಾನದ ಪ್ರಸಿದ್ಧ ಚಿತ್ರಗಳನ್ನು ಬರೆದರು. ಜೆ.ಜೆ.ಯ ಸೀನಿಯರ್ ಮಾಸ್ಟರ್ ಚಾವಡಾ ಮತ್ತು ಕುಲುಕಣಿವೆಯನ್ನು ನೋಡಲು

೧೭. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೩೯
೧೮. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೩೯
೧೯. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೪೦



೧೯೪೫ರಲ್ಲಿ ಹೊರಟರು. ಗುರುದ್ವಾರದ ಕತ್ರೇನ್‌ನಲ್ಲಿ ವಾಲ್ಯೋನಿಯ ಹೋಟೆಲ್‌ನ ಕಿಟಕಿಯಿಂದ ಕಂಡ ಹಿಮಾಲಯದ ದೃಶ್ಯ ಮೋಹಕ ಮತ್ತು ನಾಗರ್ ಎಂಬಲ್ಲಿ ಗುಡ್ಡದ ಮೇಲಿನ ಪ್ರೊ. ನಿಕೋಲಸ್ ರೋರಿಕ್ ಅವರನ್ನು ಕಂಡಾಗ ಅವರ ನೀಳವಾದ ಬಿಳಿಗಡ್ಡ, ಕೆಂಪಾದ ಶರೀರ, ಧೃಢಕಾಯಗಳಿಂದ ಕೂಡಿದ ರಷಿಯನ್ ಕಲಾವಿದ ಹಿಮಾಲಯದ ಒಬ್ಬ ಮಹರ್ಷಿಯಂತೆ ತೋರುತ್ತಿದ್ದರು. ಅಲ್ಲಿಂದ ಮನಾಲಿಯಲ್ಲಿ ಎರಡು ದಿನಗಳ ಕಾಲ ಡೋಗ್ರಿ ಮತ್ತು ಮನಾಲಿ ಜಾತ್ರೆಯನ್ನು ವೀಕ್ಷಿಸಿದರು. ಭವಾನಿ ದೇವಾಲಯದ ಅದೆಷ್ಟೋ ಸ್ಕೆಚ್ ಮಾಡಿದಂತೆ ಜೊತೆಗೆ ಸುತ್ತಲಿನ ನಿಸರ್ಗವನ್ನು ಬೋಧಿಸಿದರು. ನಿಸರ್ಗದ ಖಜಾನೆಯೇ ಅವರ ಕಣ್ಮುಂದೆ ತೆರೆದಿತ್ತು. ಸುಮಾರು ಒಂದು ತಿಂಗಳ ಪ್ರಚಾರದಲ್ಲಿ ತನ್ನ ತೂಕ ಹೆಚ್ಚಾಯಿತೆಂದು ಮನಸ್ಸು ಹಗುರವಾಯಿತೆಂದು ಹೆಬ್ಬಾರರು ನೆನಪಿಸಿಕೊಳ್ಳುತ್ತಾರೆ.

ನಾಲ್ಕು ದಿನಗಳ ನಂತರ ಮುಂಬಯಿಗೆ ಬಂದ ನಂತರದಲ್ಲಿ ಸಂಜೆ ಕ್ಲಾಸುಗಳಿಗೆ ಸೀನಿಯರ್ ಮಾಸ್ಟರ್ ಆಗಿ ನೇಮಕ ಮಾಡಲು ಜೆರಾರ್ಡ್ ಅವರ ಆಜ್ಞಾ ಪತ್ರ ಕುಲುವಿನಿಂದ ಮರಳಿದ ಬೆನ್ನಲ್ಲೇ ಹೆಬ್ಬಾರರಿಗೆ ಹಸ್ತಗತವಾಯಿತು. ಮಿತ್ರ ಚಾವಡನ ಸ್ಥಾನವನ್ನು ತಾನು ಆಕ್ರಮಿಸುವುದು ಸರಿಯಾದೀತೇ ಎಂಬ ಮಾನಸಿಕ ಗೊಂದಲದ ಸತ್ಯ ಸಂಗತಿಯನ್ನು ತಿಳಿದ ಮಿತ್ರ ಚಾವುಡ, ನಿನಗೆ ಈ ಕೆಲಸ ಬೇಕಾದ್ದಾಗಿದೆ. ನಾನು ಸ್ವಂತ ಕೃತಿಗಳಿಂದಲೇ ಜೀವನ ಮಾಡಬಲ್ಲೆ ಅಲ್ಲದೆ ಅಧ್ಯಾಪಕ ವೃತ್ತಿ ನನ್ನ ಸ್ವಭಾವಕ್ಕೆ ಹೇಳಿಸಿದ್ದಲ್ಲವೆಂದು ತೋರುತ್ತದೆ. ಇದರಿಂದ ಹೆಬ್ಬಾರರ ಮಾನಸಿಕ ತುಮುಲ ನಿಂತಿತ್ತು. ಆದರೆ ಹೆಬ್ಬಾರರಿಗೂ ಸ್ವತಂತ್ರ ಕಲಾವಿದನಾಗುವ ಅಪೇಕ್ಷೆ ಇದ್ದರೂ ಕೆಲ ತಿಂಗಳು ಅಂದರೆ ೧೯೪೬ಕ್ಕೆ ಪೂರ್ವ ವಿಶ್ರಾಂತರಾದ ಮೇಲೆ ಜೆ.ಜೆ.ಸ್ಕೂಲ್ ಸಂಪರ್ಕ ತನಗೆ ಹಿತಕರವಾಗಬಾರದೆಂದು ಮೊದಲೇ ನಿರ್ಣಯಿಸಿಕೊಂಡಿದ್ದರು.

"ಹೆಬ್ಬಾರರು ೧೯೪೫ರಲ್ಲಿ ಬಾಂಬೇ ಆರ್ಟ್ಸ್ ಸೊಸೈಟಿಯನ್ನು ರಂಪಾರ್ಟ್‌ರೋ ೬ನೇ ನಂಬರ್ ಸೊಸೈಟಿ ಕಟ್ಟಡದಲ್ಲಿ ಅವರ ಪ್ರಥಮ ಏಕಾಂಗ ಪ್ರದರ್ಶನ ನಡೆಯಿತು. ಈ ಮೊದಲ ಪ್ರದರ್ಶನಕ್ಕೆ ಗುರು ಚಾರ್ಲ್ಸ್ ಜೆರಾರ್ಡ್ ಅವರೇ ಉದ್ಘಾಟಿಸಿದ್ದರು. ಅದೇ ವರ್ಷದ ಆರ್ಟ್ಸ್ ಸೊಸೈಟಿಯ ವಾರ್ಷಿಕ ಪ್ರದರ್ಶನದಲ್ಲಿ 'ಕುಲು ಕಣಿವೆ' ಮತ್ತು ಪ್ರೊ. ಹ್ಯೂಗೆಮನ್ ಎಂಬ ಚಿತ್ರಗಳಿಗೆ ಮನ್ನಣೆ ದೊರೆಯಿತು."[೨೦] ಮೊದಲ ಕಲಾ ಪ್ರದರ್ಶನದಲ್ಲಿ ೨೨ ಚಿತ್ರಗಳು ಮಾರಾಟವಾದವು. ಇದರಿಂದ ೨೫೦೦ ರೂಪಾಯಿ ಸಿಕ್ಕಿತು. ಹೆಬ್ಬಾರರು ಪರಿಸ್ಥಿತಿಗೆ ಶರಣಾಗದೆ ಸ್ವಾಧ್ಯಾಯ ಸ್ವಾವಲಂಬನೆ ಮತ್ತು ಸ್ವ-ಪರಿಶ್ರಮದ ಬಲದಿಂದಲೇ ತನ್ನ ಜೀವನವನ್ನು ನಿರ್ಮಿಸಿಕೊಂಡರು. ದಕ್ಷಿಣಭಾರತದ ವಾಸ್ತುಶಿಲ್ಪ, ಕೇರಳ ರಾಜ್ಯದ ಉತ್ಸವಗಳು

೨೦. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೪೧


ಅಲ್ಲಿನ ನಿಸರ್ಗ ದೃಶ್ಯಗಳು, ಪಲಿಟನ, ಸಾಂಚಿ, ಖಜುರಾಹೋ, ಕೊನಾರ್ಕ್ ಮುಂತಾದ ಸ್ಥಳಗಳಲ್ಲಿರುವ ಸುಸಂಸ್ಕೃತಿಯ ಉತ್ತಮೋತ್ತಮ ಕೃತಿಗಳನ್ನು ಮನಃಪಟಲದಲ್ಲಿ ಅಂಟಿಸಿಕೊಂಡರು.

ಕನ್ಯಾಕುಮಾರಿ, ತಿರುವನಂತಪುರಂ ಇಲ್ಲಿ ಸಂಚಾರ ಮಾಡುವ ಸಂದರ್ಭದಲ್ಲಿ ತಿರುವಾಂಕೂರಿನ ಮಾಜಿ ದಿವಾನರಾದ ಕೋಮತ್ತ್ಲ ಅಚ್ಯುತ ಮೆನನ್ ಅವರ ಅತಿಥಿಯಾಗಿದ್ದು ಕೇರಳ ಸಂಸ್ಕೃತಿಯ ಸಂಪೂರ್ಣ ಪರಿಚಯ ಪಡೆದರು. ತ್ರಿಚೂರಿನ 'ಪೂರಂ' ಉತ್ಸವವನ್ನು ಆನೆಗಳ ವೈಭವ ಮತ್ತು ಬಿರುಸು ಬಾಣಗಳ ವಿಜೃಂಭಣೆ ಹೆಬ್ಬಾರರ ಮನಸ್ಸಿನ ಮೇಲೆ ಅಚ್ಚಳಿಯದ ಕುಸುರಿ ಕೆಲಸದ ಅನೇಕ ಭಿತ್ತಿಚಿತ್ರಗಳನ್ನು ಪದ್ಮನಾಭಪುರಂ ಅರಮನೆಯಲ್ಲಿ ಅದಕ್ಕಿಂತಲೂ ಒಳ್ಳೆಯ ಚಿತ್ರಗಳನ್ನು ನೋಡಿದರು. ಕೇರಳದಲ್ಲಿ ಹಳೆಯ ಪ್ರಾದೇಶಿಕ ಸಂಸ್ಕೃತಿಯೊಂದು ವಾಸ್ತು ವೈಭವವನ್ನು ಮಾತ್ರವಲ್ಲದೆ ನಿತ್ಯ ಜೀವನದಲ್ಲಿಯೂ ಹಾಸುಹೊಕ್ಕಾಗಿ ಜೀವಂತವಾಗಿರುವುದನ್ನು ಕಂಡು ವಿಸ್ಮಿತರಾದರು. ನಾನಾ ರೀತಿಯ ಹರಕೆಗಳು, ಕಟ್ಟು ಕಲ್ಯಾಣನಂಥ ವಿಧ್ಯುಕ್ತ ಆಚರಣೆಗಳು, ಉತ್ಸವಗಳು, ಸಂಪ್ರದಾಯಗಳು ಹೆಬ್ಬಾರರ ಕುಂಚಕ್ಕೆ ಸ್ಫೂರ್ತಿ ಒದಗಿಸಿದವು. ಕೇರಳದ ರಮಣೀಯವಾದ ನಿಸರ್ಗವನ್ನು ಪ್ರಖರವಾದ ಬಿಸಿಲಿನ ಬೆಳಕಿನಲ್ಲಿ ಜನಜೀವನದ ಸೊಗಸನ್ನು ಬಿಂಬಿಸುವ ಹಲವಾರು ದೃಶ್ಯಗಳನ್ನು ಅವರಲ್ಲಿ ಚಿತ್ರಿಸಿದರು. 'ಅಲೆಪ್ಪಿ ಹೊಳೆ'ಯಲ್ಲಿ 'ಸ್ತ್ರೀಯರ ಸ್ನಾನದೃಶ್ಯ', 'ಸ್ನಾನಕ ಕನ್ನಿಕೆಯರು', 'ಜ್ವಲಂತ ದಕ್ಷಿಣ ಸನ್ನಿಸಾತ್' ಎಂಬ ಚಿತ್ರಗಳಿಗೂ 'ಕಟ್ಟು ಕಲ್ಯಾಣಂ ನಡವಳಿ' 'ಮೆಯಿಡನ್ ಹುಡ್' ಹಂತ ಎಂಬ ಪ್ರಸಿದ್ಧ ಚಿತ್ರಕ್ಕೂ ಪ್ರೇರಣೆಗಳಾದವು.[೨೧]

ಹೆಬ್ಬಾರರಿಗೆ ಪಾವುಲ್ ಗೋಗಾ ವರ್ಣಗಳ ವಿರೋಧಾತ್ಮಕ ಗುಣಗಳ ಬಳಕೆಯನ್ನು ತಾಹಿತಿ ದ್ವೀಪದ ಪ್ರಜ್ವಲ ನಿಸರ್ಗದಿಂದ ಕಲಿತುಕೊಂಡ ಹಾಗೆ ತಾವಾದರೂ ಕೇರಳದಲ್ಲಿ ವರ್ಣ ಸಾಂಗತ್ಯ ಮತ್ತು ವರ್ಣ ವಿರೋಧಗಳ ತಾಂತ್ರಿಕ ರಹಸ್ಯವನ್ನು ಕಲಿತುಕೊಂಡೆ ಎನ್ನುತ್ತಾರೆ. ಅಧ್ಯಯನಕ್ಕೆ ಮೂಲ ನಮ್ಮ ಸಂಸ್ಕೃತಿಯ ಮೂಲ ನೆಲೆಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಮತ್ತು ಅಧ್ಯಯನದ ದೃಷ್ಟಿಯಿಂದ ಹೆಬ್ಬಾರರು ದಕ್ಷಿಣ ಭಾರತದಂತೆ ಉತ್ತರ ಭಾರತದ ಪ್ರಮುಖ ಐತಿಹಾಸಿಕ ಸ್ಥಳ ವೀಕ್ಷಣೆಯಲ್ಲಿ ಮುಂದಾದರು.

ಅಂತೆಯೇ ನೆರೆಮನೆಯ ಮಿತ್ರ ಕಪಾಡಿಯನ ಜೊತೆ ಸೌರಾಷ್ಟ್ರದ ಸಂಚಾರ ಕಾಲದಲ್ಲಿ ಪಲಿಟನ, ಸೊನಾಗಡ, ಸಿಹೋರ್ ಮುಂತಾದ ಐತಿಹಾಸಿಕ ಸ್ಥಳ ಭೇಟಿಯ ಜೊತೆಗೆ ಅಲ್ಲಿನ ಗ್ರಾಮೀಣ ಜೀವನದ ವೈವಿದ್ಯಗಳನ್ನು ಅರಿತುಕೊಂಡು ಚಿತ್ರ ರಚನೆ ಮಾಡಿದರು. ಸಾಂಚಿ ಖಜುರಾಹೋಗಳಲ್ಲಿ ಇಂದಿನ ಹಾಗೆ ಹೋಟೆಲ್ ಇತ್ಯಾದಿ ಪ್ರವಾಸಿಗರಿಗೆ ಹೆಬ್ಬಾರರು ಹೆಚ್ಚು ಅನುಕೂಲಗಳಿಲ್ಲದಿರುವ ಸ್ಥಳಗಳನ್ನು ನೋಡಿ ಬಂದರು.

೨೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೩೯




ದಿಲ್ಲಿ, ಮಧುರಾ, ಆಗ್ರಾ, ಖಜುರಾಹೋ, ಸಾಂಚಿ, ಚಂದೇಲ ಅರಸರು ಕಟ್ಟಿದ ಚಂದೇರಿ ದೇವಸ್ಥಾನದ ಚೆಲುವು ಪ್ರತಿ ಶಿಲ್ಪವೂ ತಮ್ಮೊಳಗೆ ಯಾವುದೋ ರಹಸ್ಯವನ್ನು ಹಂಚಿಕೊಂಡು ಆನಂದಿಸುವಂತೆ ಕಾಣುತ್ತಿತ್ತು. ಖಜುರಾಹೋ ದೇವಾಲಯದ ಕಾಮಪ್ರಚೋದಕ ಭಂಗಿಗಳಲ್ಲಿ ಭಾರತೀಯ ಕಲಾ ಸೌಂದರ್ಯವೇ ಮೂರ್ತಿಗಳಿರುವಂತೆ ರಚಿಸಲಾಗಿದೆ. ಖಜುರಾಹೋ ಭಾರತೀಯ ಕಲಾ ಏಕತೆಯ ಸಂಕೇತವಾಗಿತ್ತು. ಅಲ್ಲಿನ ನೃತ್ಯದ ವಸ್ತುವೂ ಸಾಕಷ್ಟು ಕಾಮ ಪ್ರಚೋದಕವಾಗಿತ್ತು. ಹೊಸದಾಗಿ ಮದುವೆ ಆಗಿ ಬಂದ ಹೆಂಡತಿಯನ್ನು ವ್ಯಭಿಚಾರಿಣಿಯೆಂದು ಆರೋಪಿಸುವ ಗಂಡ ಹೆಂಡಿರ ಜಗಳವೇ ನೃತ್ಯದ ವಸ್ತುವಾಗಿ ಪರಿಣಮಿಸಿದೆ.

"೧೯೪೯ರಲ್ಲಿ ಎರಡನೆ ಏಕಾಂಗ ಪ್ರದರ್ಶನ ಮುಂಬೈನ ತಾಜ್ ಹೋಟೆಲ್‌ನಲ್ಲಿ ಹೆಬ್ಬಾರರ ಚಿತ್ರಗಳ ಪ್ರದರ್ಶನ ನಡೆಯಿತು."[೨೨] ಕಲಾವಿದರು ಪೂರ್ವ ವಿದ್ಯಾರ್ಥಿ ನ್ಯೂಟನ್ ಸೋಹಾನ ಒಂದು ಪೇಂಟಿಂಗನ್ನು ತಮ್ಮ ಮುದ್ರಿತ ಆಲ್ಬಮ್ಮಿಗೆ ವಿನಿಮಯ ಮಾಡಿಕೊಂಡು ತನ್ನ ಶಿಷ್ಯವಾತ್ಸಲ್ಯದಿಂದ ಆತ ಕೊಟ್ಟ ಚಿತ್ರವನ್ನು ಚೇತನವನ್ನಾಗಿರಿಸಿಕೊಂಡಿದ್ದಾರೆ. ಹೆಬ್ಬಾರರ ಕಲಾಗುರು ಚಾರ್ಲ್ಸ್ ಜೋರ್ಡ್ ೧೯೪೬ರಲ್ಲಿ ನಿವೃತ್ತರಾಗಿ ಸ್ವದೇಶಕ್ಕೆ ತೆರಳುವ ಮುನ್ನ ಸಂಜೆ ಕ್ಲಾಸಿನ ವತಿಯಿಂದ ಅವರಿಗೆ ಸತ್ಕಾರ ನಡೆಯಿತು. ಜೆರಾರ್ಡ್ ಶಿಷ್ಯರಾದ ನಿಮ್ಮಲ್ಲಿ ಹೆಚ್ಚಿನವರನ್ನು ನೋಡುವ ಸುಯೋಗ ತನಗೆ ಒದಗದೆ ಹೋದರೂ ಕೆಲವರಾದರೂ ಕಲಾಯಾತ್ರೆಯಲ್ಲಿ ಯಶಸ್ವಿಯಾಗಿರುವ ಸುದ್ದಿಯನ್ನು ಕೇಳಿ ಸಂತೋಷ ಪಡುತ್ತಾರೆ. ಹೆಬ್ಬಾರರು 'ತಾಯಿಯನ್ನು ಕಳೆದುಕೊಂಡು ಎಳೆಗರುವಿನಂತೆ ಆಗಿಬಿಟ್ಟೆ' ಎಂದು ಅವರ ದಿನಚರಿಯಲ್ಲಿ ಬರೆದಿರುವುದನ್ನು ಗಮನಿಸಬಹುದು. ಹೆಬ್ಬಾರರಿಗೆ ನಿಜಕ್ಕೂ ಜೆರಾರ್ಡ್ ಸಂರಕ್ಷಕ ದೈವತ್ ಕರುಣಾಳು ಬೆಳಕಿನಂತೆ ಕೈಹಿಡಿದು ಆತ ಗುರುವಾಗಿ ಕಲೆಯಲ್ಲಿ ತ್ರಿಶಂಕು ಸ್ಥಿತಿಯಲ್ಲಿದ್ದ ಅವರು ಕಲೆಗೆ ವಿಮುಖರಾಗಿಬಿಡುತ್ತಿದ್ದರೋ ಏನೋ ಹಾಗೂ ತನ್ನ ಸಕಲ ಸಮಸ್ಯೆಗಳಿಗೂ ಬೆಂಬಲವಾಗಿ ನಿಂತು ಮಾರ್ಗದರ್ಶನ ಮಾಡಿದ ಮಹಾ ಗುರುವನ್ನು ಆಗಸ್ಟ್ ೧೩ ರಂದು ಬುಲಾರ್ಡ್ ಪಿಯರ್‌ನಲ್ಲಿ ಹೊರಡುವ ಸಂದರ್ಭದಲ್ಲಿ ಕಣ್ಣು ತುಂಬಾ ನೀರು, ಎದೆ ತುಂಬ ಭಾವಗಳೊಂದಿಗೆ ಹೆಬ್ಬಾರರು ಗುರುವನ್ನು ಬೀಳ್ಕೊಟ್ಟರು.

ಒಂದಲ್ಲ ಒಂದು ದಿನ ತಾನು ಸ್ವತಂತ್ರ ಕಲಾವಿದನಾಗಿ ಕಸುಬುದಾರನಾಗಿ ಬದುಕಬೇಕೆಂದು ನಿರ್ಧಾರ ಮಾಡಿದ ಹೆಬ್ಬಾರರು ಕಲಾಗುರು ಇಲ್ಲದ ಜೆ.ಜೆ. ಕಲಾಶಾಲೆಯಿಂದ ಹೊರಬಿದ್ದರು. ೧೯೪೬ ಪೂರ್ವಭಾಗದಲ್ಲಿ 'ಮೆಯ್ಡನ್ ಹುಡ್'ಗೆ ಬಾಂಬೆ ಆರ್ಟ್ಸ್ ಸೊಸೈಟಿಯು ಸುವರ್ಣ ಪದಕ ಪಡೆದುಕೊಂಡಿತು. ಜೆಸ್ಪೀಸ್ ಲೋಕೂರರ ವ್ಯಕ್ತಿ ಚಿತ್ರಕ್ಕೂ ಆ ವಿಭಾಗದ ಸರ್ವಶ್ರೇಷ್ಠ ಪ್ರಶಸ್ತಿ ದೊರೆಯಿತು. ಕೆಮೂಲ್ಡ್

೨೨. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೪೬




ಗ್ಯಾಲರಿಯ ಕೋಕೂ ಗಾಂಧಿ ದಿಲ್ಲಿಯಲ್ಲಿ ಒಂದು ವಿಶೇಷ ಪ್ರದರ್ಶನಕ್ಕೆ ಹೆಬ್ಬಾರರ ೧೬ ಚಿತ್ರಗಳು ಆಯ್ಕೆಗೊಂಡವು. ಹೆಬ್ಬಾರರಲ್ಲದೆ, ಅಮೃತ ಶೇರ್‌ಗಿಲ್, ಎನ್.ಎಸ್ ಬೇಂದ್ರೆ, ಚಾವಡಾ ಮತ್ತು ರಾಜ್ಞಾ ಅವರ ಚಿತ್ರಗಳ ಜತೆಗಿದ್ದ ಪ್ರದರ್ಶನವನ್ನು ದಿವಾನ್ ಚಮನ್‌ಲಾಲ್ ಉದ್ಘಾಟಿಸಿದರು. 'ಸ್ನಾನ ಮಾಡುವ ಕನ್ಯೆಯರು' ಚಿತ್ರವನ್ನು ನೋಡಿದ ನೆಹರೂ ಮತ್ತು ಲೋಡಿಮೌಂಟ್ ಬ್ಲಾಡನ್ ಅದನ್ನು ಚೀನಾದ ಮದಾಮ್ ಚಯಂಗ್ ಕೈಶೇಕ್ ಅವರಿಗೆ ಉಡುಗೊರೆಯ ಸಲುವಾಗಿ ಪಡೆದುಕೊಂಡರು.

೧೯೪೭ರಲ್ಲಿ ಬಾಂಬೆ ಆರ್ಟ್ಸ್ ಸೊಸೈಟಿಯ ಆಡಳಿತ ಸಮಿತಿ ಹಾಗೂ ಸಲಹಾ ಸಮಿತಿಯ ಸದಸ್ಯರಾದರು. ಅವರಿಗೆ ಹೆಸರು, ಕೀರ್ತಿ ಬಂದರೂ ಹೆಬ್ಬಾರರು ಹಳೆಯ ನೆನೆಪುಗಳನ್ನು ಮರೆಯದೆ ಅದೇ ಹಾದಿಯಲ್ಲಿಯೇ ಸಾಗಿದರು. ಮನಸ್ಸನ್ನು ಉದ್ವಿಗ್ನಗೊಳಿಸಿದ ಘಟನೆಯೆಂದರೆ "ಗಾಂಧೀಜಿಯವರ ಹತ್ಯೆ ೩೦ ಜನವರಿ ೧೯೪೮, ಹೆಬ್ಬಾರರ ಕುಂಚದಲ್ಲಿ ಮೂಡಿ ಬಂದ ಕಿಸ್ಮೋ ಈ ತೈಲಚಿತ್ರದಲ್ಲಿ ಗಾಂಧೀಜಿ ನೆಲಕ್ಕೆ ಕುಸಿದು ಬಿದ್ದಿದ್ದರೆ ಹಿನ್ನಲೆ ಕಮಾನಿಸ್ ಮುಖ್ಯಕಲ್ಲು 'ಕೀಸ್ಟೋನ್' ಉರುಳಿಬಿದ್ದಿದೆ. ಇಬ್ಬರು ಹುಡುಗಿಯರು ದುಃಖಿತರಾಗಿದ್ದಾರೆ. ಈ ಚಿತ್ರ ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿಗೆ ಹೆಬ್ಬಾರರು ದಾನ ನೀಡಿದ್ದಾರೆ."[೨೩]

ಭಾರತದ ಸ್ವಾತಂತ್ರ್ಯ ಸಂಗ್ರಾಮ ಹೇಗೆ ಬಂಗಾಳದಲ್ಲಿ ಪ್ರಾರಂಭವಾಯಿತೋ ನಮ್ಮ ಕಲೆಯ ಸ್ವಾತಂತ್ರ್ಯ ಚಳುವಳಿಗೂ ಅಲ್ಲಿಂದಲೇ ಕಲೆಗಂಟಿದ ವಸಾಹತು ವಾದವನ್ನು ತಿರಸ್ಕರಿಸಿ ಸ್ವದೇಶಿ ಪಂಥವನ್ನು ಸ್ಥಾಪಿಸಿದ ಕೀರ್ತಿ ಬಂಗಾಳಕ್ಕೆ ಸಲ್ಲುತ್ತದೆ. ಇದಕ್ಕೆ ಅವನೀಂದ್ರ ಟಾಗೋರರು ಹಾಗೂ ಸ್ನೇಹಿತರು, ಕಲಾ ಬಂದುಗಳು ಸಹಕರಿಸಿದರಾದರೂ, ಅವನೀಂದ್ರರ ತಂತ್ರ ಕೌಶಲ್ಯ ಇಲ್ಲದ ಬುದ್ದಿಗೇಡಿಗಳ ಬರೀಯ ಅನುಕರಣದಿಂದ ಮರೆಯಾಯಿತು. ಇಂತಹ ಸಂದರ್ಭದಲ್ಲಿ ಸ್ವದೇಶಿತನದ ದುರಾಭಿಮಾನ ಸಲ್ಲದೆಂದು ಸಾಹಿತ್ಯ ವಿಷಯವನ್ನು ರವೀಂದ್ರನಾಥ್ ಟಾಗೂರರು ಚಿಕಿತ್ಸೆ ಮಾಡಲು ಹೊರಟರಂತೆ, ಜಾಮಿನಿರಾಯ್ ಕಲಾಕ್ಷೇತ್ರದಲ್ಲಿ ಮಾಡಿದರು. ನಿರ್ಜೀವವಾಗಿದ್ದ ಅವನೀಂದ್ರ ಪಂಥವನ್ನು ಬಿಟ್ಟು ನೂತನ ಶೈಲಿಯೊಂದನ್ನು ಸ್ಥಾಪಿಸಿ ನಮ್ಮ ದೇಶದ ಕುಶಲ ಕೆಲಸಗಾರರು, ಬಡಗಿ, ಸ್ವರ್ಣಕಾರ, ಕಮ್ಮಾರ ಮುಂತಾದ ಜನರನ್ನು ಕೂಡಿಸಿಕೊಂಡು ಬರೆದಿರುವ ರೇಖಾ ಪರಿಣಿತಿ ಮತ್ತು ತರಂಗ ಗುಣವನ್ನು ಆಧುನಿಕ ಚಿತ್ರಕಲೆಗೆ ಅನ್ವಯಿಸಲು ಕಾರ್ಯ ಪ್ರಯತ್ನಿಸಿದರು. ಕಲೆಯ ಕುರಿತಂತೆ ಒಂದು ಆಕೃತಿಯ ಅನಗತ್ಯ ಅಂಶಗಳನ್ನು ಮರೆಮಾಚಿ ಮೂಲ ಸತ್ಯವನ್ನಷ್ಟೇ ಸ್ಫುಟಗೊಳಿಸಿ ತೋರಿಸುತ್ತ ಈ ಸ್ವತಂತ್ರ ಮಾರ್ಗವನ್ನು ಹೆಬ್ಬಾರರು ಬಲ್ಲವರಾದರೂ ಆ ಮಾರ್ಗವನ್ನು ಹಿಡಿಯಲಿಲ್ಲ. ಈ ಸಂದರ್ಭದಲ್ಲಿ ಅಮೃತ ಶೇರ್‌ಗಿಲ್ ಭಾರತೀಯ ಸ್ತ್ರೀ ಸಮಾಜದಲ್ಲಿ ನೆರಳಿನಂತೆ ಸಾಗುವ ನೀಳಕಾಯ ಚಿತ್ರಗಳಿಗೆ ಪ್ರಸಿದ್ಧರಾದರು.

೨೩. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೪೭




ಹೆಬ್ಬಾರರು ಹಾಗೂ ಅಮೃತ ಶೇರ್‌ಗಿಲ್ ಅವರು ಹೆಚ್ಚು ಸ್ತ್ರೀ ಕಲಾಕೃತಿಗಳನ್ನು ಚಿತ್ರಿಸಿದ್ದು, ಈ ಇಬ್ಬರು ಕಲಾವಿದರು ಜನಸಾಮಾನ್ಯರ ಅಂತರಾಳದ ನೋವು–ನಲಿವುಗಳಿಗೆ ರೂಪಕೊಡುವುದು. ಅಮೃತಾ ಶೇರ್‌ಗಿಲ್ ಸ್ತ್ರೀ ಜಾತಿಯ ನಿಸ್ಸಹಾಯಕತೆಯನ್ನು ಹೃದಯ ವಿದ್ರಾವಕವಾಗಿ ಚಿತ್ರಿಸುತ್ತಾರೆ.[೨೪] ಆದರೆ ಹೆಬ್ಬಾರರು ಸ್ತ್ರೀಯರು, ಹಣ್ಣು ಮಾರುವವರು, ಜಾಡಮಾಲಿಗಳು, ಹೆಣ್ಣು ಕೂಲಿಯವರು, ಇಟ್ಟಿಗೆ ಹೊರುವ ಕೆಲಸದವರು, ಸಂತೋಷದಿಂದ ಮಕ್ಕಳು ಮರಿಯೊಂದಿಗೆ ಆಡುತ್ತಿರುವ ದೃಶ್ಯಗಳು ಹೆಬ್ಬಾರರ ಕಲೆಯ ಆರಂಭ ದಿಶೆಯಲ್ಲಿ ಅವರ ಸ್ಕೆಚ್ ಪುಸ್ತಕ, ಕ್ಯಾನ್ವಾಸ್‌ಗಳಲ್ಲಿ ತುಂಬಿ ತುಳುಕುತ್ತಿದ್ದ ಇಂಥ ಚಿತ್ರಗಳಲ್ಲಿನ ಮರುಕವೇ ಮುಂದೆ ಬೆಳೆದು ಮನುಕುಲದ ಅಳಿವು ಉಳಿವುಗಳ ಪ್ರಶ್ನೆಯಾಗಿ ಅವರು ಆ ಮೇಲೆ ಬರೆದ ಅದೆಷ್ಟೋ ಮಹತ್ವದ ಕೃತಿಗಳ ಹಿಂದಿನ ಪ್ರೇರಣೆಯಾಗಿದೆ.

ಜಾಡಮಾಲಿಯೊಬ್ಬಳ ದುಃಖಕ್ಕೆ ಮಿಡಿಯುವ ಚೇತನ, ಮನುಷ್ಯನ ಜಾತಿಯ ಬಗ್ಗೆ ಮರುಕವುಳ್ಳ ಸೂಕ್ಷ್ಮ ಸಂವೇದನೆಯ ಈ ಮನುಷ್ಯ ಜಾತಿಯ ಭವಿಷ್ಯದ ಕುರಿತ ಕಾಳಜಿಯ ವಿಧವಿಧವಾದ ಚಿತ್ರಾಭಿವ್ಯಕ್ತಿಯಾಗಿದೆ ಎಂದು ಹೇಳಬಹುದು. ಹೆಬ್ಬಾರರ ಕಲೆಯ ಕುರಿತಾದ ಆಸಕ್ತಿಯು ಯಾವುದೇ ಒಂದು ಒಳ್ಳೆಯ ಗುಣವನ್ನು ಮೊಳಕೆಯಲ್ಲಿ ಕಾಣುವುದೆಂಬಂತೆ ಹೆಬ್ಬಾರರ ಪ್ರಯೋಗಶೀಲತೆ, ವ್ಯಕ್ತಿಪರತೆ, ಗುಣಶ್ರೇಷ್ಠತೆಯಲ್ಲಿ ಭಾರತೀಯ ಕಲಾವಿದನಿಗೆ ಬೇಕಾದ ಕಲಾ ಗುಣಲಕ್ಷಣಗಳನ್ನು ಕಂಡ ಚಾರ್ಲ್ಸ್ ಜೆರಾರ್ಡ್, ಹೆಬ್ಬಾರರಿಗೆ ಪ್ರೋತ್ಸಾಹ ನೀಡುವುದರಿಂದ ಒಳ್ಳೆಯ ಫಸಲು ನಿರೀಕ್ಷೆಯಲ್ಲಿದ್ದರು.

ಹೆಬ್ಬಾರರ ಏಕವ್ಯಕ್ತಿ ಪ್ರದರ್ಶನ ಸಂದರ್ಭದಲ್ಲಿ ಜೆರಾರ್ಡ್ ನನ್ನ ಶಾಲೆಯ ಹಳೆಯ ವಿದ್ಯಾರ್ಥಿ ಎಂಬುವುದಕ್ಕಾಗಿ ಮಾತ್ರವಲ್ಲ! ಈತ ಶಾಲೆಯ ಬುದ್ಧಿವಂತ ವಿದ್ಯಾರ್ಥಿ. ಜೆ.ಜೆ.ಸ್ಕೂಲಿನ ವಿದ್ಯಾರ್ಥಿಯಾಗಿಯೂ, ಅಧ್ಯಾಪಕರಾಗಿಯೂ ಆತನ ಪ್ರಗತಿಯನ್ನು ನಾನು ನೋಡಿದ್ದೇನೆ. ಒಳ್ಳೇಯ ಉಪಾಧ್ಯಾಯನಾಗಿರುವವನು ಒಳ್ಳೆಯ ಕಲಾವಿದನೂ ಆಗಿರುವಂತಾದ್ದು ಅಪರೂಪವಷ್ಟೇ. ನಮ್ಮಲ್ಲಿನ ಕಲಾಶಾಲೆಯ ಶಿಕ್ಷಣ ಮುಗಿಸಿದ ಮೇಲೆ ಹೆಬ್ಬಾರರು ಇತರರಂತೆ ಅಷ್ಟರಲ್ಲೇ ತೃಪ್ತಿಪಡಲಿಲ್ಲ. ಸತತವಾಗಿ ಚಿತ್ರ ಬರೆಯಲು ತೊಡಗಿದರು. ಉದ್ಯಮ ಮತ್ತು ಸಾಹಸ ಒಬ್ಬ ಕಲಾವಿದನ ಬೆಳವಣಿಗೆಗೆ ಪೋಷಕವಾದ ತತ್ವಗಳಷ್ಟೇ. ಅವರ ಚಿತ್ರಗಳಲ್ಲಿ ಕಂಡುಬರುವ ಲವಲವಿಕೆ, ನಿರಂತರ ಪ್ರಯೋಗಶೀಲತೆ, ನಿಂತನೀರಾಗಲೊಲ್ಲದ ಅಸಂತೃಪ್ತಿ ಯಾವಾಗಲೂ ಒಬ್ಬ ಕಲಾವಿದನು ಸದಾ ಅಸಂತೃಪ್ತನಾಗಿರಬೇಕು. ಇವನ್ನು ಕಂಡಾಗ ನಿಶ್ಚಯವಾಗಿ ಸ್ವರಚಿತ ಮಾರ್ಗದಲ್ಲಿ ಯಶಸ್ಸು ಗಳಿಸಿಯೇ ಗಳಿಸುತ್ತಾರೆ. ಪ್ರದರ್ಶನಗೊಂಡಿರುವ ಚಿತ್ರಗಳಿಂದ ಹೆಬ್ಬಾರರು ಬಹುಮುಖ ಪ್ರತಿಭೆಯ ಕಲಾವಿದನೆಂಬುದು ಖಚಿತವಾಗುತ್ತದೆ. ಈ ಕಲಾವಿದರು ಪೂರ್ವ

೨೪. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೪೮




ಮತ್ತು ಪಶ್ಚಿಮ ಎರಡು ಕಲಾಶೈಲಿಯಲ್ಲಿಯೂ ಕುಂಚದ ಹಿಡಿತ ಸಾಧಿಸಿದ್ದಾರೆ. ವ್ಯಕ್ತಿ ಚಿತ್ರ ಮತ್ತು ನಿಸರ್ಗ ದೃಶ್ಯಗಳ ಈ ಎಲ್ಲಾ ಚಿತ್ರದಲ್ಲಿ ಜನರನ್ನು ಮೆಚ್ಚಿಸುವ ಸರ್ವ ಪ್ರಯತ್ನದಿಂದ ಕಲಾವಿದ ಖಂಡಿತವಾಗಿ ಬಲ್ಲವರಿಂದ ಮೆಚ್ಚಿಗೆ ಗಳಿಸಿದವರಾಗಿದ್ದಾರೆ.

"ಭಾರತೀಯವೆಂದೆನಿಸುವ ಕಲೆ ಯಾವುದು? ಎಲ್ಲಿದೆ? ಎಂಬ ಬಗ್ಗೆ ಚರ್ಚೆಗಳು ಬೇಕೆಂಬಷ್ಟು ಬೇಡವೆನಿಸುವಷ್ಟು ಈ ಕಾಲದಲ್ಲಿ ಹೆಬ್ಬಾರರ ಚಿತ್ರಗಳಿಗೆ ಆಕ್ಷೇಪವೆತ್ತುವವರು ಇರಲು ಸಾಧ್ಯ. ಆದರೆ ಈ ವಿಷಯಕ್ಕೆ ಹೆಬ್ಬಾರರ ಸಮದೃಷ್ಟಿ, ಸಮಚಿತ್ತ ಕಳೆದುಕೊಳ್ಳಬೇಕಾಗಿಲ್ಲ. ಇತರರ ಮಾತಿನ ಬದಲಾಗಿ ಅವರು ಆತ್ಮ ಸಾಕ್ಷಿಗೆ ಸರಿಯಾಗಿ ಸ್ವಂತ ದರ್ಶನದ ಕಲಾವಿಷ್ಕಾರಗಳಿಗೆ ಬದ್ಧರಾಗಿ ಕೆಲಸ ಮಾಡುತ್ತಾರೆ. ಹೆಬ್ಬಾರರ ಚರ್ಚೆ ಏನಿದ್ದರೂ ನಾಲಿಗೆಯಿಂದಲ್ಲ, ತಮ್ಮ ಕುಂಚದ ಬಲದಿಂದ ಮಾಡಿ ತೋರಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅವರ ಬಣ್ಣ ಮತ್ತು ರೇಖೆಗಳಲ್ಲಿ ಎಂಥ ಧೈರ್ಯ, ದೃಢತೆಗಳಿವೆ, ಆತ್ಮ ವಿಶ್ವಾಸವಿದೆ ಎಂಬುದು ನೋಡಿದವರಿಗೆ ಅರಿವಾಗುತ್ತದೆ. ಮೊಗ್ಗು ಅರಳಿ ಹೂವಾಗುವ ಹಂತ ತಲುಪಿದ ಈ ಕಲಾವಿದ ಕಾಲಾನುಕ್ರಮವಾಗಿ ಹೂ ಚೆನ್ನಾಗಿ ಅರಳಿ ಸುಗಂಧ ಬೀರುವುದರಲ್ಲಿ ಸಂದೇಹವಿಲ್ಲ. ಮುಂಬಯಿ ಹಾಗೂ ಪಶ್ಚಿಮ ಭಾರತದಲ್ಲಿ ಉದಯಮಾನವಾಗುತ್ತಿರುವ ಹೊಸ ಪರಂಪರೆಯ ಹರಿಕಾರ ಎಂದು ಜೆರಾರ್ಡ ಹೇಳಿದ್ದಾರೆ."[೨೫]

ಆ ಕಾಲದಲ್ಲಿ ಹೆಬ್ಬಾರರನ್ನು ಭೇಟಿಯಾದ ಎಲ್ಲರಿಗೂ ಮತ್ತು ನೂತನ ಕಲಾಮಂದಿರದ ದಂಡಾತಿಮಠ ಅವರು ಬರೆದ ಪತ್ರಗಳಲ್ಲಿ ಬೆಳವಣಿಗೆಯನ್ನು ಹೆಬ್ಬಾರರು ಕಂಡು ಬೆಳವಣಿಗೆಗೆ ಪೋಷಕವೆನಿಸುವ ಮಾತುಗಳಲ್ಲಿ ಪತ್ರವನ್ನು ಬರೆದಿದ್ದಾರೆ. ಹೆಬ್ಬಾರರು ೧೯೬೦ರಲ್ಲಿ ಜರ್ಮನಿಗೆ ೧೯೬೯ರಲ್ಲಿ ಆಸ್ಟ್ರೇಲಿಯಾಗೆ ಹೋಗುವ ಮುನ್ನ ಗುರುಗಳ ಆಶೀರ್ವಾದ ಪಡೆಯಲು ಬರವಣಿಗೆ ಪ್ರತಿಯಾಗಿ ಶ್ರೀ ದಂಡವತಿ ಮಠರು ನೀನು 'ಈ ಹೊತ್ತಿನವರೆಗೆ ಮಾಡಿದ ಚಿತ್ರಗಳನ್ನು ಅನೇಕ ದೃಶ್ಯಗಳನ್ನು ಸಿದ್ಧಪಡಿಸಿ ಅವುಗಳನ್ನು ಕ್ರೂಢಿಕರಿಸಿ ಒಂದು ದೊಡ್ಡ ಪುಸ್ತಕ ಬರೆ. ಇದರಿಂದ ಮುಂದೆ ಬರುವ ಚಿತ್ರಕಾರರಿಗೆ ಮಾರ್ಗದರ್ಶಕವಾಗಿ ನಿಮ್ಮ ಹೆಸರು ಚಿರಕಾಲ ಉಳಿಯಲಿ. ಅದನ್ನು ನಾನು ನೋಡಬೇಕೆಂಬ ಆಶೆ. ಇದೇ ದೇಶಕ್ಕಾಗಿ ನೀವು ಮಾಡುವ ಕಲೆಯ ಸೇವೆ.'[೨೬] ಎಂದು ಗುರು ದಂಡವತಿ ಮಠರು ಆಶೀರ್ವದಿಸಿದ್ದರು.

ಭಾರತೀಯ ಕಲೆಯ ಕಾಲಘಟ್ಟದಲ್ಲಿ ಕಲಾ ಸೇವೆಗೆ ತಮ್ಮನ್ನು ತೊಡಗಿಸಿಕೊಂಡ ಹೆಬ್ಬಾರರಿಗೆ ಭಾರತೀಯ ಕಲೆಯಲ್ಲಿ ಒಂದು ಮಹತ್ವದ ಸ್ಥಾನವಿದೆ. ನಮ್ಮ ಕಲಾಪರಂಪರೆಯ ಆಧುನಿಕತೆಯ ಸಂದರ್ಭದಲ್ಲಿ ಅವರ ಚಿತ್ರಗಳನ್ನು ಚೆಲ್ಲಿರುವ ಕಲೆಯ ಶಕ್ತಿ, ಭಾರತೀಯ ಕಲೆಯನ್ನರಿಯ ಬಯಸುವವರು

೨೫. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೪೯
೨೬. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕಲೆ ಮತ್ತು ಬದುಕು, ಪುಟ – ೫೦




ಹೆಬ್ಬಾರರ ಚಿತ್ರಕಲಾ ಪ್ರದರ್ಶನಕ್ಕೆ ಹೊಗಬೇಕು. ಅಲ್ಲಿ ಅವರಿಗೆ ಆನಂದ ಕೊಡುವ ಚಿತ್ರಗಳು ಮಾತ್ರವಲ್ಲ ಭಾರತೀಯ ಕಲೆಯ ಸದ್ಯ ಸ್ಥಿತಿ, ಸಮಕಾಲೀನ ಸಮಸ್ಯೆಗಳನ್ನು ಗುರುತಿಸಿಕೊಳ್ಳಬಹುದಾಗಿತ್ತು.

ಸಮಕಾಲೀನ ಭಾರತೀಯ ಕಲಾವಿದನಿಗೆ ಹಾದಿ ಸುಗಮವಾಗಿಲ್ಲ, ಗುರಿಯೂ ಸ್ಪಷ್ಟವಾಗಿಲ್ಲ. ಈ ಸಂದರ್ಭವನ್ನು ತಮ್ಮ ಶಿಕ್ಷಣ ಪಶ್ಚಿಮದ ಶೈಲಿಯಲ್ಲಿ ಪಡೆದಿದ್ದರೂ ಅದರಿಂದ ವಿಮುಕ್ತರಾಗಿ ತನ್ನದೇ ಮೌಲಿಕ ಮಾರ್ಗದಲ್ಲಿ ಹೆಜ್ಜೆ ಇಟ್ಟು ಭಾರತದ ಕಲಾಪರಂಪರೆಗಳನ್ನು ಬೆಳೆಸಿದರು. ಯಾವುದೇ ಒಂದು ಪಂಥಕ್ಕೆ ಕಟ್ಟು ಬೀಳದೆ ವಸ್ತು ನಿಷ್ಟುರತೆಯಿಂದ ತಮ್ಮದೇ ಆದ ಅಭಿವ್ಯಕ್ತಿಗೆ ಬದ್ಧರಾಗಿ ಬರೆದ ಚಿತ್ರಗಳಲ್ಲಿ ಅಸಂತೃಪ್ತಿ ಪುಟಿಯುತ್ತಿರುವ ಅವರ ಚೇತನದಲ್ಲಿ ಕಲೆಯನ್ನು ಬೆಳೆಸುವ ಚೈತನ್ಯವಿದೆ.

ಈ ಹಿಂದೆ ಹೆಬ್ಬಾರರು ಅಧ್ಯಯನಕ್ಕೆಂದು ಪ್ರಥಮವಾಗಿ ೧೯೪೯ ಏಪ್ರಿಲ್ ೨೫ರಂದು ಮಲೋಜ ಎಂಬ ಹೆಸರಿನ ಹಡಗಿನಲ್ಲಿ ಲಂಡನ್ನಿಗೆ ಪ್ರಯಾಣ ಬೆಳೆಸಿದ್ದರು. ಈ ಸಂಧರ್ಭದಲ್ಲಿ ನೂತನ ಕಲಾಮಂದಿರದ ಶಿಕ್ಷಕರೂ, ವಿದ್ಯಾರ್ಥಿಗಳು, ಗುರುಗಳಾದ ದಂಡಾಮತಿ ಮಠರು ಬಂದು ವಿದಾಯ ಸತ್ಕಾರ ಏರ್ಪಡಿಸಿದ್ದಲ್ಲದೇ ಅವರಿಗೆ ಒಂದು ಪ್ಯಾಲೆಟ್, ಬ್ರಷ್ ಮತ್ತು ಸ್ಕೆಚ್ ಪುಸ್ತಕ ಉಡುಗೊರೆಯಾಗಿ ಕೊಟ್ಟಿದ್ದರು. ಇದರಿಂದ ಹೆಬ್ಬಾರರು ಬಾಂಬೆ ಆರ್ಟ್ಸ್ ಸೊಸೈಟಿಯ ಐದು ತೊಲಾ ಚಿನ್ನದ ಪದಕಕ್ಕಿಂತಲೂ ಹೆಚ್ಚಿನದೆಂದು ಹೇಳಿದ್ದಾರೆ. ಈ ಉಡುಗೊರೆಯನ್ನು ಹಳೇ ಹೊಸ ೨೫ ಚಿತ್ರಗಳನ್ನು ಹಿಡಿದುಕೊಂಡು ೧೯೪೯ರ ಏಪ್ರಿಲ್ ೨೫ನೇ ತಾರೀಖು ಎಸ್. ಎಸ್. ಮಲೋಜ್ ಎಂಬ ಹಡಗಿನಲ್ಲಿ ಲಂಡನಿಗೆ ಮೊದಲ ಪ್ರಯಾಣ ಹೊರಟಿತು. ಹಾದಿಯಲ್ಲಿ ಕೆಬಿನ್‌ಮೇಟ್ ಗುಹಾ, ಬೆನರ್ಜಿ, ಶ್ರೀನಿವಾಸನ್, ಘೋಷ, ಸುಧಾರೆಡ್ಡಿ ಮುಂತಾದವರೊಂದಿಗೆ ಬಿಸ್ಕೆಕೊಲ್ಲಿ, ಅರಬ್ಬೀಸಮುದ್ರ, ಕೆಂಪು ಸಮುದ್ರ, ಸಯೋಜ್ ಕಾಲುವೆ ಭೂಮಧ್ಯ ಸಮುದ್ರ, ಜಿಬ್ರಾಲ್ಟರ್, ಹಡಗು ಚಲಿಸುತ್ತಿರುವಾಗ ಉಂಟಾಗುವ ವಿವಿಧ ಅನುಭವ ಮತ್ತು ಸ್ನೇಹಿತರ ಜೊತೆಗೆ ಸಂತೋಷದಿಂದ ಮೂರು ವಾರ ಕಳೆಯುವುದೇನೂ ಕಷ್ಟವಾಗಲಿಲ್ಲ. ಅದೇ ಹಡಗಿನಲ್ಲಿ ಪ್ರಸಿದ್ಧ ಮಾನವ ಶಾಸ್ತ್ರಜ್ಞ ಡಾ. ಹೈಮಂಡಾರ್ಫ್ ಕೂಡಾ ಹೊರಟಿದ್ದರು. ಗ್ರಾಂಡ್ ಫ್ಯಾನ್ಸಿ ಡ್ರೆಸ್ ನರ್ತನದ ರಾತ್ರಿ ಹೆಬ್ಬಾರರು ಕಚ್ಚೆಪಂಚೆ, ಮುಂಡಾಸಿನ ಒಬ್ಬ ಮುದಿ ಬ್ರಾಹ್ಮಣನ ವೇಶದಲ್ಲಿ ನಗಿಸಿದರು. ಇವರಿಂದ ಕಾರ್ಯಕ್ರಮದ ಕೊನೆಯಲ್ಲಿ ಎಸ್.ಎಸ್.ಮಲೋಜಾ ಹೆಸರು ಕೆತ್ತಿದ ಬೆಳ್ಳಿಯ ಸಿಗರೇಟ್[೨೭] ಕೇಸನ್ನು ಬಡ ಬ್ರಾಹ್ಮಣ ವೇಷಧಾರಿಗೆ ಬಂದಿತು.

೧೬ರ ಮುಂಜಾನೆ ಥೇಮ್ಸ್ ನದಿ ದರ್ಶನ, ಅಲ್ಲಿಂದ ಕೆಲವೇ ಹೊತ್ತಿನಲ್ಲಿ ಲಂಡನ್ನಿನ ಟಿಲ್ಬರಿ ಡಾಕ್ಸ್ ಇಳಿಯುವಾಗ ಲಂಡನಿಗೆ ಪ್ಯಾರೀಸ್ ಮೂಲಕ ರೈಲಿನಲ್ಲಿ ಆಗಲೇ ಬಂದು ಸೇರಿದ್ದ ಬ್ಯಾನರ್ಜಿ

೨೭. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೫೩




ಸ್ವಾಗತಕ್ಕೆ ಕಾದಿದ್ದ; ಸಂದರ್ಭದಲ್ಲಿ ಹೋಟೆಲಿಗೆ ಹೋಗಿ ಪಾಸ್‌ಪೋರ್ಟ್ ಎಲ್ಲಿ ಎಂದು ಹೆಬ್ಬಾರರನ್ನು ಸ್ವಾಗತಕಾರ ಕೇಳಿದಾಗಲೇ ಪಾಸ್‌ಪೋರ್ಟ್ ಇಟ್ಟ ಬ್ಯಾಗನ್ನು ಟ್ಯಾಕ್ಸಿಯಲ್ಲೇ ಮರೆತು ಬಂದಿದ್ದರು. ಈ ಸಂದರ್ಭದಲ್ಲಿ ಟ್ಯಾಕ್ಸಿಯವನು ಬ್ಯಾಗ್ ಹಿಡಿದುಕೊಂಡು ಒಳಗೆ ಧಾವಿಸುತ್ತಿದ್ದ. ಬ್ಯಾಗಿನಲ್ಲಿ ಪಾಸ್‌ಪೋರ್ಟ್ ಮಾತ್ರವೇ ಅಲ್ಲದೆ ವಿದೇಶಿ ಯಾತ್ರೆಗೆ ಸಂಗ್ರಹಿಸಿದ ಹಣವು ಕೂಡಾ ಇತ್ತು.[೨೮] ಟ್ಯಾಕ್ಸಿ ಡ್ರೈವರ್‌ನ ಪ್ರಮಾಣಿಕತೆ ಕಂಡು ಹೃದಯ ಪೂರ್ವಕವಾಗಿ ಕೊಂಡಾಡಿದರು.

ನಂತರದಲ್ಲಿ ಕಲಾಗುರು ಚಾರ್ಲ್ಸ್ ಜೆರಾರ್ಡ್‌ರಿಗೆ ಲಂಡನ್ನಿಗೆ ಬಂದಿರುವ ವಿಷಯ ತಿಳಿಸಿದರು. ಆಗ ಭಾರತೀಯ ಹೈಕಮೀಷನರ್ ಆಗಿದ್ದ ವಿ.ಕೆ.ಕೃಷ್ಣಮೆನನ್ ಅವರಿಗೆ ತಮ್ಮ ಪರಿಚಯದ ಯಾವುದೇ ಮಾಹಿತಿ ಭಾರತ ಸರ್ಕಾರದಿಂದ ಬಂದಿಲ್ಲ ಎಂದರು. ಹೆಬ್ಬಾರರು ಕಲಾ ಅಧ್ಯಯನಕ್ಕಾಗಿ ಬಂದಿದ್ದೇನೆ ಎಂದು ತಿಳಿಸಿದರೆ, ಮೆನನ್ ಪ್ರೋತ್ಸಾಹದ ಬದಲು 'ಲಂಡನ್ ಎಂತಹ ಸ್ಥಳವೆಂದೂ ಗೊತ್ತಿಲ್ಲದೆ ಇಲ್ಲಿಗೆ ಬಂದರೆ ಪ್ರಯೋಜನವಿಲ್ಲ. ನಂದಲಾಲರಂತೆ ಸರಿಯಾಗಿ ಬೆಳೆದ ಮೇಲೆ ಬರುವುದೊಳ್ಳೆಯದು' ಎಂಬ ನಿರುತ್ಸಾಹದ ಮಾತುಗಳನ್ನು ಆಡಿದರು. ಇದರಿಂದ ನೊಂದ ಹೆಬ್ಬಾರರು ಎಷ್ಟು ಸಾಧ್ಯವೋ ಅಷ್ಟು ಯುರೋಪಿಯನ್ ದೇಶಗಳನ್ನು ನೋಡುವುದು, ಅಲ್ಲಿನ ಕಲಾ ಸಂಗ್ರಹಗಳ ಅಧ್ಯಯನ ಮಾಡುವುದು ಸಾಧ್ಯವಾದಷ್ಟು ಪ್ರದರ್ಶನಗಳನ್ನು ಕೊಡುವುದು ಹೆಬ್ಬಾರರ ಕಲಾಪ್ರವಾಸದ ಉದ್ದೇಶವಾಯಿತು.

ಲಂಡನ್ ಗ್ಯಾಲರಿಗಳನ್ನು ಕಂಡು ಸಂತೋಷವಾಯಿತು ಎನ್ನುತ್ತಾರೆ. ರಾಯಲ್ ಅಕಾಡೆಮಿಯ ಬೇಸಿಗೆ ಪ್ರದರ್ಶನವನ್ನು ನೋಡಲು ಹೋದರೆ ಚಾರ್ಲ್ಸ್ ಜೆರಾರ್ಡ್ ಅವರ ಕೃತಿಗಳನ್ನು ಹೊರತು ಬೇರಾವುದೇ ಹೆಬ್ಬಾರರಿಗೆ ಆಕರ್ಷಿಸಲಿಲ್ಲ. ಗ್ಯಾಲರಿಗಳಲ್ಲಿ ನೋಡಿದ ಚಿತ್ರಗಳಿಗೆ ವ್ಯಕ್ತಪಡಿಸಿದ ಪ್ರತಿಕ್ರಿಯೆ ಮತ್ತು ಗ್ಯಾಲರಿಯ ಸಂದರ್ಭದಲ್ಲಿ ಚಿತ್ರಗಳ ಬಗ್ಗೆ ಮೂಡಿದ ತನ್ನ ಅನಿಸಿಕೆಗಳನ್ನು ಆಯಾ ಸಂಧರ್ಭದಲ್ಲಿಯೇ ದಿನಚರಿಯನ್ನು ಬರೆದಿಟ್ಟಿದ್ದಾರೆ. ಅವರಲ್ಲಿ ಎಂಥ ದೊಡ್ಡ ಕಲಾವಿದನ ಕೃತಿಯಾದರೂ ತನ್ನ ಮೇಲೆ ಮಾಡಿದ ಪರಿಣಾಮ ಅದರಲ್ಲಿನ ವೈಶಿಷ್ಟ್ಯಗಳೇನು ಎಂಬುದನ್ನು ಅಂದಂದೇ ಬರೆದಿದ್ದಾರೆ.

ಲಂಡನ್, ಪ್ಯಾರೀಸ್, ಜೂರಿಕ, ಅಮ್‌ಸ್ಟರ್ಡಾಮ್‌ಗಳ ಕಲಾ ಸಂಪತ್ತುಗಳು ಕಣ್ಣಾರೆ ಕಂಡು ಸವಿದ ಕಲಾವಿದ ಹೆಬ್ಬಾರರು ಒಂದು ವರ್ಷದಲ್ಲೇ ಪ್ರಬುದ್ಧತೆಯೂ ಭಾರತೀಯ ಕಲಾಪ್ರಪಂಚದಲ್ಲಿ ಸ್ವಸ್ಥಾನ ಪರಿಜ್ಞಾನವೂ ಉಂಟಾಯಿತೆಂದು ಭಾವಿಸಬಹುದು. ಬ್ರಿಟನ್ನಿನ ಆರ್ಟ್ಸ್ ಕೌನ್ಸಿಲ್ ಟೇಟ್ ಗ್ಯಾಲರಿಯಲ್ಲಿ 'ವಿಯೆನ್ನಾ' ಸಂಗ್ರಹದ ವಿಶೇಷ ಪ್ರದರ್ಶನವೊಂದು ತೆರೆದಿತ್ತು. ವಿಯೆನ್ನ ಗ್ಯಾಲರಿಯಿಂದ ಆಮದು ಮಾಡಿಕೊಂಡ ೨೦೦ ಚಿತ್ರಗಳು ಚಿನ್ನಾಭರಣ ಕೌಶಲ ಸಿಲ್ಲಿಗಳು, ಟೈಪಿಸ್ಟ್‌ಗಳು, ನವಜಾಗೃತಿ ಕಾಲದ ಕಂಚಿನ ಮೂರ್ತಿಗಳು, ಗ್ರೀಕ್ ರೋಮನ್ ವಸ್ತುಗಳು, ಸಚಿತ್ರ ಇಟಾಲಿಯನ್ ಹಸ್ತಪ್ರತಿಗಳು




ಇವನ್ನೆಲ್ಲಾ ನೋಡಿ ಬೆಕ್ಕಸ ಬೆರಗಾದರು. ಬಕ್ಕಿಂಗ್ ಹಾಮ್ ಶಾಲೆಗೆ ಗುರು ಚಾರ್ಲ್ಸ್ ಜೆರಾರ್ಡ್‌ರನ್ನು ನೋಡುವ ಹಾಗೆ ಶಿಷ್ಯನನ್ನು ನೋಡುವ ಸಂಭ್ರಮದ ದಿನ. ಲಂಡನ್ನಿನಿಂದ ೧೮ ಮೈಲಿ ದೂರದ ಹಳ್ಳಿಯಲ್ಲಿ ಮೂರುವರೆ ಎಕರೆ ವಿಸ್ತೀರ್ಣವುಳ್ಳ ನಿಸರ್ಗ ಸುಂದರ ಸನ್ನಿವೇಶದಲ್ಲಿ ಜೆರಾರ್ಡ್ ಅವರ ಕಾಟೇಜು ನಿಂತಿತ್ತು. ತೋಟದಲ್ಲಿ ಓಕ್, ಸೇಬು, ಚೆರ್ರಿ ಮರಗಳು ತೋಟದ ಮರಗಿಡ, ಪೊದರುಗಳನ್ನೆಲ್ಲಾ ಪ್ರೀತಿಯಿಂದ ಹೆಬ್ಬಾರರಿಗೆ ಶ್ರೀಮತಿ ಜೆರಾರ್ಡ್ ಪರಿಚಯ ಮಾಡಿಸಿದರು.

ಚಹಾಪಾನದ ನಂತರ ಏಕಾಂಗಿ ಪ್ರದರ್ಶನದ ಏರ್ಪಾಟು ಹೇಗಿರಬೇಕೆಂಬುದನ್ನು ಚರ್ಚಿಸೋಣ ಬಾ ಹೊರಗೆ ಹೋಗೋಣ, ದೂರದಲ್ಲಿ ಕಾಣುವ ಮುಂದಿನ ಮನೆಯನ್ನು ನೋಡು, ಅದರ ಸುತ್ತಣ ನಿಸರ್ಗವನ್ನು ನೋಡಿ ಚಿತ್ರ ಬಿಡಿಸೋಣ ಎಂದು ಮನಸ್ಸಾಗುವುದಿಲ್ಲವೇ? ಇಂತಹ ಸಾಮಾನ್ಯ ಸನ್ನಿವೇಶಗಳೇ ಅಸಾಮಾನ್ಯ ಚಿತ್ರಗಳಾಗಿ ಪರಿವರ್ತಿಸಿದ್ದಲ್ಲವೆ? ನಿನಗೂ ಬಿಡಿಸಲು ಮನಸ್ಸಾಗುತ್ತದೋ ಎಂದು ಪ್ರಶ್ನೆ ಕೇಳಿದರೂ – ತನ್ನ ಪ್ರಶ್ನೆಗಳಿಗೆ ತಾನೇ ಉತ್ತರಿಸುವಂತೆ ಈ ಸನ್ನಿವೇಶಗಳನ್ನು ಗಮನಿಸಿದಾಗ ವ್ಯಾನ್‌ಗಘನನ್ನು ನೆನಪಿಗೆ ತಂದುಕೊಳ್ಳಲೇಬಾರದು. "ಒಂದು ಮಗು ಹೊಸತೊಂದು ಸ್ಥಳವನ್ನು ನೋಡುವಂತೆ ನಿರ್ಭೋರ್ಧತೆಯಿಂದ ಸರಳವಾಗಿ ನೋಡಲು ಕಲಿಯಬೇಕು. ಚಿತ್ರಕ್ಕೆ ಕೂತುಕೊಳ್ಳಬೇಕು. ದಿನದ ಕೆಲಸ ಮುಗಿಸಿದ ಮೇಲೆ ವಿಮರ್ಶಾ ದೃಷ್ಟಿಯಿಂದ ಅವನು ಪರಿಶೀಲಿಸುವಾಗ ಬೇಕಿದ್ದರೆ ಹಿಂದಿನ ಕಲಾವಿದರು ಇದೇ ಸನ್ನಿವೇಶಗಳನ್ನು ಮೂಡಿಸಿದ ರೀತಿಯನ್ನು ಗಮನಕ್ಕೆ ತಂದುಕೊಳ್ಳಬಹುದು".[೨೮]

ಚಿತ್ರದಲ್ಲಿ ಮಾತ್ರ ನಿನ್ನದೇ ದೃಷ್ಟಿಕೋನ, ನಿನ್ನದೇ ಕೈವಾಡಕ್ಕೆ ಆದ್ಯತೆ ನೀನು ಇಲ್ಲಿಗೆ ಬಂದಿದ್ದು. ನೋಡಿದೆಲ್ಲವನ್ನೂ ಕರಗಿಸಿಕೋ, ಅರಗಿಸಿಕೋ, ಆದರೆ ನಿನ್ನ ಸ್ವಂತಿಕೆ ಬಿಡಬೇಡ, ನಿನ್ನ ಚಿತ್ರಗಳು ನಿನ್ನ ವ್ಯಕ್ತಿತ್ವದ ಪ್ರತಿಫಲನವಾಗಬೇಕೇ ವಿನಃ ಇನ್ನೊಬ್ಬರದಲ್ಲ. ಯುರೋಪಿನಲ್ಲಿ ನಿನಗೆ ಬೇಕಾದ್ದು ನೋಡಲು ಸಿಗುತ್ತದೆ. ನೋಡು ಕಣ್ತುಂಬ ಆದರೆ ನೋಡುವ ಕಣ್ಣು ನಿನ್ನದು ಬರೆಯುವ ಚಿತ್ರ ನಿನ್ನದೇ ಆಗಬೇಕು ಎಂಬುವುದನ್ನು ಮರೆಯಬೇಡ. ಅವರೆಷ್ಟೇ ದೊಡ್ಡವರಿರಲೀ ನೀನು ನಿನಾಗಿರುವುದು ಶ್ರೇಯಸ್ಕರ, ಪಾಶ್ಚಾತ್ಯ ಕಲಾ ವೈಭವದ ಗುಂಗಿನಲ್ಲಿ ಬಿದ್ದರೂ ಅಲ್ಲಿನ ಸತ್ವ, ಸತುವುಗಳನ್ನು ಅರ್ಥೈಸಿಕೊಂಡರೂ ಹೆಬ್ಬಾರರು ತನ್ನತನವನ್ನು ಎಂದೂ ಬಿಟ್ಟುಕೊಡಲಿಲ್ಲ. ಯಾವ ಪಂಥಕ್ಕೂ ಸಾಂಪ್ರದಾಯಕ್ಕೂ ಬಂಧಿಯಾಗಲಿಲ್ಲ. ಅವರು ಸ್ವಕೀಯ ದೃಷ್ಟಿ ನಿಷ್ಠರಾಗಿ ಕಲಾಯಾತ್ರೆಯಲ್ಲಿ ಸ್ವಂತಿಕೆಯನ್ನು ಬಿಡಲಿಲ್ಲ. ನ್ಯಾಷನಲ್ ಆರ್ಟ್ ಗ್ಯಾಲರಿಯಲ್ಲಿ ಸಂಪನ್ನಗೊಂಡ ಮ್ಯೂಸಿಯಂ ಸಂಗ್ರಹದ ವಿಶಿಷ್ಟ ಪ್ರದರ್ಶನದಲ್ಲಿ ೧೨೦ ಚಿತ್ರಗಳಿದ್ದವು. ಪಯೆತಾವನ್ನು ಶಿಲುಬೆಗೇರಿದ ಏಸುವಿನ ಕರುಣಾಮಯಿ ವ್ಯಕ್ತಿತ್ವಕ್ಕಾಗಿ ವಾನ್

೨೮. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೫೩



ಡೈಕನ್ ವ್ಯಕ್ತಿ ಚಿತ್ರಗಳು ಮುಖದೊಳಗಿನ ಭಾವನೆಗಾಗಿ ಗೋಯೆನ್ ಮಲ್ಲ ಕಾಳಗವನ್ನು ಅವರ ಕಂದು ಬಣ್ಣದ ಹಿನ್ನಲೆಗಾಗಿ ಎಲ್‌ಗ್ರೆಕೋನ ಕ್ರಿಸ್ತ ಚಿತ್ರವನ್ನು ಅವರ ಕಂದು ಬಣ್ಣಕ್ಕೆ ಇದಿರಾಗಿ ಕೂಡಿಸಿದ ಕ್ರಿಸ್ತನ ಮೈಮೇಲೆ ಹಾಕಿದ ಕೆಂಬಣ್ಣದ ಬಟ್ಟೆಗಾಗಿ ರೊಬೆನ್ ಚಿತ್ರವನ್ನು ಅದರ ನಾಟಕೀಯತೆಗಾಗಿ ಟಿಟಿಯನ್ ಬರೆದ ಹುಡುಗನ ಮುಖ ಚಿತ್ರವನ್ನು ಅದರ ಕಲಾ ಕೌಶಲ್ಯಕ್ಕಾಗಿ ಮೆಚ್ಚಿಕೊಂಡರು.

ಡಾ-ವಿಂಚಿ, ರೂಬೆನ್, ಗೋಯಾ, ಎಲ್ಗ್ರೆಕೋ, ಟಿಟಿಯನ್ ಪಾಶ್ಚಾತ್ಯ ಕಲೆಯ ಇತಿಹಾಸವೇ ಮೂರ್ತಿಭವಿಸಿ ಮ್ಯೂಸಿಯಂ ಸಂಗ್ರಹದ ಮೂಲಕ ಟೇಟ್ ಗ್ಯಾಲರಿಯಲ್ಲಿ ಸೃಷ್ಟಿಸಲಾಗಿತ್ತು. ಗ್ಯಾಲರಿಗಳನ್ನು ಕಂಡ ಚಿತ್ರ ಪ್ರದರ್ಶನದಲ್ಲಿ ಕಂಡಿದ್ದನ್ನು ಮನನ ಮಾಡಿಕೊಂಡರು. ಒಂದೇ ದಿನದಲ್ಲಿ ೩–೪ ಗ್ಯಾಲರಿಗಳನ್ನು ಸಂದರ್ಶಿಸಿದರೂ ಅವರಿಗೆ ತೃಪ್ತಿ ಇಲ್ಲ. ಅಷ್ಟೊಂದು ತವಕ, ಪ್ರಾಚೀನ ಮತ್ತು ಆಧುನಿಕ ಚಿತ್ರಕಲೆ ಎಂಬ ವ್ಯತ್ಯಾಸವಿಲದೇ, ಹಿಂದಿನದು ಕಳೆದದ್ದು, ತಿಳಿಯಬೇಕಾದದ್ದು ಆದರೆ ಕಲಾವಿದ ಬದುಕಬೇಕಾದದ್ದು, ಬೆಳಗಬೇಕಾದದ್ದು ಹಿಂದಿನದಲ್ಲ, ಇದನ್ನು ವರ್ತಮಾನ ಕಾಲ, ಭೂತ, ಭವಿಷ್ಯತ್ ಕಾಲಗಳಿಗಿಂತಲೂ ಹೆಚ್ಚಿನ ಆದ್ಯತೆಗೆ ಅರ್ಹವಾದದ್ದು.

ಸ್ಫೂರ್ತಿಗೆ ಭೂತಕಾಲ, ಕ್ರಿಯಾ ತಾತ್ಪರಕ್ಕೆ ಸ್ವಂತ ಸೃಜನಶೀಲತೆಗೆ ಇಂದಿನದೂ ಆಧುನಿಕವಾಗಿದ್ದಾಗಿರಲೇಬೇಕು. ಒಂದೇ ದಿನ ನಾಲ್ಕು ಗ್ಯಾಲರಿಯನ್ನು ಸುತ್ತಿದರೂ ದಣಿವಿಲ್ಲ. ಇಂಗ್ಲೀಷ್ ಪೈಂಟರ್ಸ್‌ಗಳಾದ ಟರ್ನರ್, ಹೊಗಾರ್ತ್, ಕಾನ್ಸ್‌ಟೇಬಲ್, ವಿಲಿಯಮ್ ಬ್ಲೇಕ್ ಈ ನಾಲ್ವರು ಶಾಶ್ವತವಾಗಿ ಕಲಾಲೋಕದಲ್ಲಿ ಮನ್ನಣೆ ಪಡೆಯುತ್ತಾರೆ. ಟರ್ನರ್, ಕಾನ್ಸ್‌ಟೇಬಲ್ ಅವರಿಲ್ಲದಿದ್ದರೆ 'ಆಧುನಿಕ ಚಿತ್ರಕಲೆ' ಹುಟ್ಟುತ್ತಲೇ ಇರಲಿಲ್ಲ. ವಿಲಿಯಮ್ ಒಲ್ಲೆಕ್ ತನ್ನ ಕಾಲದ ಅತ್ಯಂತ ಸೃಜನಶೀಲ ಕಲಾವಿದ. ತನ್ನ ಶಿಲ್ಪವನ್ನು ತಾನೇ ಕಂಡರಿಸುವ ಶಿಲ್ಪಿಯಂತೆ ಕೃಷ್ಣ ಹೆಬ್ಬಾರರು ತನ್ನ ಜೀವನವನ್ನು ತಾನೇ ರೂಪಿಸಿಕೊಂಡ ಸ್ವಸಹಾಯ ಶೂರರಷ್ಟೇ ಜೂನ್ ೧೪ನೇ ರಾಯಲ್ ಇಂಡಿಯಾ ಮತ್ತು ಪಾಕಿಸ್ತಾನ ಸೊಸೈಟಿಯ ಆಶ್ರಯದಲ್ಲಿ ಇಂಪೀರಿಯರ್ ಆರ್ಟ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಹೆಬ್ಬಾರರ ಪ್ರಥಮ ವಿದೇಶಿ ಪ್ರದರ್ಶನ ಆರಂಭವಾಯಿತು. ಚಾರ್ಲ್ ಜೆರಾರ್ಡ್ ಬಕ್ಕಿಂಗ್ ಹ್ಯಾಂನಿಂದ ಒಂದು ಪ್ರದರ್ಶನವನ್ನು ಆರಂಭಿಸಿದರು.

ಜೆರಾರ್ಡ್ ಶಿಷ್ಯನ ಬಗ್ಗೆ ಹೇಳಿದ್ದು ಭವಿಷ್ಯದ ಆಶೋತ್ತರಗಳು ಅದರೊಳಗೆನೇ ಎಚ್ಚರಿಕೆಯನ್ನು ಹೀಗೆ ತಿಳಿಸಿದರು. "ಸ್ವದೇಶಿ ಪರಂಪರೆಯ ಬೆಳಕಿನಲ್ಲಿ ಕಲಾಉದ್ಯೋಗ ಮಾಡುತ್ತಿರುವ ಹೆಬ್ಬಾರರು ಭಾರತದ ಒಬ್ಬ ಪ್ರಗತಿಶೀಲ ಕಲಾವಿದ. ಸಾಂಪ್ರದಾಯಿಕ ಶೈಲಿಯಲ್ಲಿ ಹಿಂದಿನದನ್ನು ನಕಲು ಹೊಡೆಯುವುದೋ ಅಥವಾ ಪಶ್ಚಿಮದ ನವೋದಯ ವಾದಗಳಿಗೆ ಬಲಿಯಾಗಿ ಪಾಶ್ಚಾತ್ಯ ಶೈಲಿಯನ್ನು ಅನುಸರಿಸುವ ಬದಲಿಗೆ ತನ್ನದೇ ಆದ ಹಾದಿ ಕಂಡುಕೊಂಡು, ಅಗತ್ಯ ಕಂಡರೆ ಪೂರ್ವ ಪಶ್ಚಿಮವೆನ್ನದೆ


ಯಾವುದೇ ತಂತ್ರವನ್ನಾದರೂ ಬಳಸಿ ತನ್ನ ವಸ್ತುವಿಗೆ ಹಿಡಿಸುವ ಶೈಲಿಯಲ್ಲಿ ಅಪ್ಪಟ ಭಾರತೀಯನೆನಿಸುವ ಕಲಾಮಾರ್ಗವನ್ನು ಅವರು ಸೃಷ್ಟಿಸುತ್ತಿದ್ದಾರೆ. ಸ್ವಂತಿಕೆ ಇರುವ ತನಕ ಯಾವ ತಂತ್ರವಾದರೂ ಎನಂತೆ? ಎಂಬ ಅವರ ಧೋರಣೆ ತರ್ಕ ಸಮ್ಮತವಾದುದ್ದಾಗಿದೆ. ಇಂತ ನವೀನ ಅಭಿವ್ಯಕ್ತಿಗೆ ಸ್ವತಂತ್ರ ಭಾರತದಲ್ಲಿ ಇದೀಗ ಅನುಕೂಲ ಸನ್ನಿವೇಶ ಪ್ರಾಪ್ತವಾಗಿದೆ. ನವ್ಯತೆಗೂ ಅನುಭವಗಳ ನಡುವೆ ಪ್ರಚಾರ ಪ್ರಭಾವಗಳ ಗುಂಗಿನಲ್ಲಿ ಅವರು ತಮ್ಮ ಅಸಲೀ ಭಾರತೀಯತ್ವವನ್ನು ಕಳೆದುಕೊಳ್ಳಬಾರದೆಂದು ನನ್ನ ವಿನಂತಿ."[೨೯] ಲಂಡನ್ನಿನಲ್ಲಿದ್ದಷ್ಟು ದಿನ ಮಿತ್ರರ ಸಂಗಡವೋ ಅಲ್ಲಿನ ಮುಖ್ಯ ಸ್ಮಾರಕಗಳಲ್ಲದೆ ಬ್ಯಾಲೇ ಮುಂತಾದವನ್ನು ನೋಡುವುದರಲ್ಲಿ ಹೆಬ್ಬಾರರು ಮಗ್ನರಾಗಿರುತ್ತಿದ್ದರು.

ಕಲೆಯ ಅಧ್ಯಯನಕ್ಕಾಗಿ ಬಂದವರಾದರೂ ಸುತ್ತಲಿನ ಸಮಾಜದ ಇತಿಹಾಸ ಮತ್ತು ವರ್ತಮಾನವನ್ನು ಸವಿಯಲು ಅವರ ಮನಸ್ಸು ತವಕಪಡುತ್ತಿತ್ತು. ಹೋದಲ್ಲಿ ಅಪರಚಿತರನ್ನು ಮಿತ್ರರಾಗಿ ಪರಿವರ್ತಿಸಿಕೊಂಡು ತೀರಾ ಆತ್ಮೀಯತೆಯನ್ನು ಬೆಳೆಸುವುದೂ ಅವರಿಗೆ ಸಾಧ್ಯವಾಗುತ್ತಿತ್ತು. ಲಂಡನ್ನಿನ ಪ್ರಸಿದ್ಧ ಕಲಾವಿದರು "ಮ್ಯಾಥ್ಯೂಸ್ಮಿತ್ ಮತ್ತು ಫೆಲಿಕ್ಸ್ ಟೋಫೊಲಸ್ಕಿ ಅವರ ಸಂಪರ್ಕದಿಂದ ತಮ್ಮ ಸ್ಟುಡಿಯೋಗಳಿಗೆ ಆಹ್ವಾನವಿತ್ತರು. ಯುರೋಪಿನ ಕಲಾವಿದರನ್ನು ನೋಡಿ ಅವರ ಸನ್ಮೋಹಿನಿಗೆ ಒಳಗಾಗಬೇಡ, ಆಚೆ ತಿರುಗಿ ನಿನ್ನದೇ ಸ್ವಂತ ದಾರಿ ಹಿಡಿದು ನಡೆಯಬೇಕು ಎಂದು ಮ್ಯಾಥ್ಯೂಸ್ಮಿತ್ ಕಿವಿಮಾತು ನುಡಿದರು."[೩೦]

ಇಂಗ್ಲೆಂಡಿನ ಯಾತ್ರೆ ತೃಪ್ತಿಕರವಾಗಿ ಮುಗಿಯುವುದರಲ್ಲಿತ್ತು. ಇಂಗ್ಲೇಂಡಿನಲ್ಲಿ ನೋಡಬೇಕಾದ ಸ್ಥಳಗಳನ್ನು ನೋಡಿ ಆಗಿತ್ತು. ಕಲಾ ಗುರು ಜೆರಾರ್ಡ್‌ರ ಸಂದರ್ಶನ ಮಾಡಿ ಆಗಿತ್ತು. ಜೊತೆಗೆ ಹೊಸ ಮಿತ್ರ ವರ್ಗದ ಗಳಿಕೆಯು ಮಾಡಿಕೊಂಡಂತಾಗಿತ್ತು. ಐರೋಪ್ಯ ನೋಡಿ ಆಗಿತ್ತು. ಐರೋಪ್ಯ ಕಲೆಯ ಪ್ರಥಮ ದರ್ಶನದಲ್ಲಿ ಅದರ ವೈಭವದ ಪರಿಚಯ ಮತ್ತು ಹಾಲೆಂಡ್ ಮತ್ತು ಫ್ರಾನ್ಸ್‌ನ ಮ್ಯೂಸಿಯಂಗಳನ್ನು ಕಾಣುವ ಅವಕಾಶ. ಆಮ್‌ಸ್ಟಡಾಮ್ ಜಾವಾ ಬಾಲಿ ದ್ವೀಪಗಳ ಕಲಾ ಪ್ರಾತಿಥ್ಯವುಳ್ಳ ಸಂಗ್ರಹಾಲಯ ಭಾರತ ಸಂಸ್ಕೃತಿ ಜನ್ಯವಾದ ಇಂಡೋನೇಶಿಯಾ ಕಲೆ ತನ್ನದೇ ವೈವಿಧ್ಯದಿಂದ ಆ ಜನರನ್ನು ಆಕರ್ಷಿಸಬಲ್ಲವಾಗಿತ್ತು. ಹಾಲೆಂಡಿನಲ್ಲಿ ಈ ಬಗ್ಗೆ ಸಂಗ್ರಹಾಲಯ ಅಧ್ಯಯನ ನಡೆಯುತ್ತಿದ್ದವು.

ಎಲ್ಲೇ ಹೋದರೂ ಸ್ಕೆಚ್ ಪುಸ್ತಕದಲ್ಲಿ ಹೆಬ್ಬಾರರು ರೇಖೆಗಳಲ್ಲಿ ಸ್ಮರಣ ಚಿತ್ರಗಳನ್ನು ಬಿಡಿಸಿಕೊಳ್ಳುತ್ತಿದ್ದರು. ಅದಕ್ಕೆ ಒಂದು ಅವಕಾಶ ಒದಗಿದ್ದು ಮಾರ್ಕೆನ್ ದ್ವೀಪಕ್ಕೆ ಪ್ರವಾಸ ಮಾಡಿದಾಗ. ಅಲ್ಲಿಯ ವೊಲೆಂಟಾಮ್ ಎಂಬ ಹಳ್ಳಿಯಲ್ಲಿ ಎಲ್ಲರೂ ರಾಷ್ಟ್ರೀಯ ಪೋಷಾಕುಗಳನ್ನೇ ಧರಿಸಿಕೊಂಡಿದ್ದು ಇಡೀ ಹಳ್ಳಿಯೇ ಮಧ್ಯಯುಗದಲ್ಲಿರುವಂತೆ ಒಂದು ವಿಶೇಷ ಏರ್ಪಾಟಾಗಿತ್ತು. ಅಲ್ಲಿನ ಹೆಣ್ಣು ಮಕ್ಕಳು ಮತ್ತು ಬೆಸ್ತ


೨೯. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೫೮
೩೦. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೫೯



ಹುಡುಗರು ಸುಂದರವಾದ ಚಿತ್ರಗಳನ್ನು ಹೆಬ್ಬಾರರು ಸ್ಕೆಚ್ ಬುಕ್ಕಿಗೆ ಸೇರಿಸಿಕೊಂಡರು. ಉತ್ಸಾಹಭರಿತರಾಗಿ ಚಿತ್ರ ಬಿಡಿಸಲು ನೆರವಾಗುತ್ತಿದ್ದರು. ಸದಾ ಮುಗುಳ್ನಗುತ್ತಾ ತೃಪ್ತಿಯೇ ತಮ್ಮ ಸಂತೋಷವೆಂಬ ಹಾಗೆ ಅವರ ಕೆಲಸದ ನಡುವೆ ತಮಗೆ ದೊರಕುವ ಪರಿಚಯಾತ್ಮಕ ಒಡನಾಟ, ಸ್ನೇಹಗಳಿಗೆ ಹೆಬ್ಬಾರರು ತುಂಬಾ ಬೆಲೆ ಕೊಡುತ್ತಾರಷ್ಟೆ. ಯಾತ್ರೆಯಲ್ಲಿ ಶಾಂತಿನಿಕೇತನವನ್ನು ಓದಿದ ಪಾವುಲಿನ್ ಬೋರ್ನ್ಸ್, ಡಚ್ ಕಲಾವಿದೆ ಮಾರ್ಕೆನ್ಸ್ ಕಲಾವಿದ ಹಾಸ್ಪೆರ್ ಭಾರತೀಯ ಧೂತವಾಸದ ಮಿತ್ರರಾದ ಚಿತ್ರಕಲಾ ಹವ್ಯಾಸಿಗಳ ಪರಿಚಯದಿಂದ ಹೆಬ್ಬಾರರ ದಿಗಂತ ವಿಸ್ತರಿಸುತ್ತಲೇ ಇತ್ತು. ಯಾವುದನ್ನು ನಿರಾತಂಕವಾದ ಮನಸ್ಸಿನಿಂದ ಸ್ವೀಕರಿಸುವ ಹೆಬ್ಬಾರರು ಮನೋಧರ್ಮವನ್ನು ಎಲ್ಲರೂ ಮೆಚ್ಚುವಂತಿರುವುದರಿಂದಲೇ ಪರಿಚಯವು ಸ್ನೇಹವಾಗಿ ಆತ್ಮೀಯ ಬಂಧುತ್ವವಾಗಿ ಮುಂದುವರೆಯಲು ಯಾವ ಅಡ್ಡಿಯೂ ಇರಲಿಲ್ಲ.

ಫ್ಲೇಮಿಶ್ ಪಂಥದ ಮಹಾನ್ ಕಲಾವಿದ ರೂಬ್ಸನ್ ಬೃಹತ್ ಗಾತ್ರದ (೩೦ ಅಡಿ) ಚಿತ್ರಗಳನ್ನು ಕಂಡು ಹೆಬ್ಬಾರರು ಪ್ರಭಾವಿತರಾದರೂ ಆತ ಬರೆದ ಸ್ನಾಯು ಬಲ ಸಂವರ್ಧನೆ ಮಾಡಿಕೊಂಡ ದಢೂತಿ ಪೈಲ್ವಾನ ಮನುಷ್ಯಾಕೃತಿಗಳನ್ನು ಅವರು ಮೆಚ್ಚಿಕೊಳ್ಳಲಿಲ್ಲ. ಬದಲು ಆತನ ಚಿಕ್ಕ ಚಿತ್ರಗಳನ್ನು ಮುಖ್ಯವಾಗಿ ನಿಗ್ರೋ ಜನರ ೪ ಕಲೆಗಳನ್ನು ಆಕರ್ಷಣೀಯ ಚಿತ್ರಗಳನ್ನು ಮೆಚ್ಚಿಕೊಂಡರು. ಸಮಕಾಲೀನ ವರ್ಷದಲ್ಲಿ ನಡೆಯುತ್ತಿದ್ದ ಕೊಲೋನಿಯಲ್ ಪ್ರದರ್ಶನ ವಸಾಹತುಶಾಹಿಯ ಬರೀ ಡೌಲು ಪ್ರದರ್ಶನ ಮಾತ್ರವೇ ಆಗಿತ್ತೆಂದೂ ಹೆಬ್ಬಾರರು ಗುರುತಿಸಿದ್ದಾರೆ. ಯಾತ್ರೆಯಲ್ಲಿ ಹೆಬ್ಬಾರರು ಸ್ವಿಡ್ಜರ್‌ಲ್ಯಾಂಡಿನಲ್ಲಿ ಅಲ್ಲಿನ ನಿಸರ್ಗ ಸೌಂದರ್ಯ ಪ್ರತಿನಿಧಿಸುವ ಅನೇಕ ಸ್ಥಳಗಳನ್ನು ಸರೋವರಗಳನ್ನು, ಸಂಸ್ಕೃತಿ ಪ್ರತಿನಿಧಿಗಳಾದ ವಸ್ತು ಸಂಗ್ರಹಾಲಯಗಳನ್ನು ಹಳೇ ಹೊಸ ಮಿತ್ರರನ್ನೂ ಸಂಧಿಸಿದರು. ಜೊರಿಕ್ ಮುಟ್ಟಿದ ಕೂಡಲೇ ಅವರು ಕಂಡಿದ್ದು ಭಾರತದಲ್ಲಿ ಪರಿಚಯಸ್ಥರಾದ ವೊಲ್ನಾಟ್ ಬ್ರದರ್ಸ್ ಹಾರ್ಡ್‌ಮೆಯರ್, ಶೆರಾರ್ಟ್ ಅವರುಗಳನ್ನು ಆಮೇಲೆ ರೋನ್ ಹಾರ್ಟ್ ಸಂಗ್ರಹದಲ್ಲಿರುವ ಚಿತ್ರಗಳ ಮೇಲೆ ಅವರ ಮೌಲ್ಯಾಂಕನವನ್ನು ಮಾಡಿದರು.

ಸೂರ್ಯನ ಬೆಳಕು ಸಹಜವಾಗಿ ಚಿತ್ರಗಳ ಮೇಲೆ ಬೀಳುವಂತೆ ಮಾಡಿದ ಏರ್ಪಾಟು ಅವುಗಳನ್ನು ತೂಗುಹಾಕಿದ ಒಪ್ಪ ಓರಣಗಳು ಹೆಬ್ಬಾರರ ಮನಸ್ಸಿಗೆ ಹಿಡಿಸಿದವು. "ದೇಶಕ್ಕೆ ದೇಶವೇ ಮ್ಯೂಸಿಯಮ್ ಎಂದು ಭಾಸವಾಗುವಂತ ದೇಶ ಯಾವುದಾದರೂ ಇದ್ದರೆ ಅದು ಇಟಲಿ ಹೆಬ್ಬಾರರು ಇಟಲಿಯಲ್ಲಿ ಕಳೆದ ದಿನಗಳನ್ನು ಉಪಯುಕ್ತ ಅಧ್ಯಯನದಲ್ಲಿ ಕಳೆದರು. ಮಿಲಾನ್, ವೆನಿಸ್, ಪ್ಲೋರೆನ್ಸ್, ಪೀಸಾ, ಸಿಯೇನಾ, ರೊಮ್, ವ್ಯಾಟಿಕನ್, ಐರೋಪ್ಯ ಚಿತ್ರಕಲೆ, ಶಿಲ್ಪಕಲೆ, ವಾಸ್ತು ಸೌಂದರ್ಯ ತುತ್ತತುದಿಗೇರಿದ್ದನ್ನು ಜಗತ್ತಿಗೆ ಸಾರುವ ದಾರ್ಶನೀಯ ಸ್ಥಳಗಳು.




ಲಿಯೋನಾರ್ಡೊ ಡಾ–ವಿಂಚಿ, ಮೈಕೆಲ್ ಏಂಜಲೋ, ರಾಫೆಲ್‌ರಂತವರು ಜಗತ್ತಿನ ಸರ್ವಶ್ರೇಷ್ಠ ಕಲಾಚಾರ್ಯರ ಚಿತ್ರಗಳನ್ನು ಕಣ್‌ತುಂಬ ಮನದಣಿಯೆ ನೋಡಿದರೋ? ನುಂಗಿದರೋ? ಕಲಾವಿದರಿಗೆ ಇಟಲಿಯ ಈ ಪುಣ್ಯ ಸ್ಥಳಗಳಲ್ಲಿ ಆಗುವ ರೋಮಾಂಚನ ಹೆಬ್ಬಾರರಿಗೂ ಆಗಿದ್ದಿರಬೇಕು. ಕ್ರೈಸ್ತ ಧರ್ಮದಲ್ಲಿನ ನಂಬಿಕೆ ಏಸುವಿನ ದೈವಿಕತೆಯಲ್ಲಿ ವಿಶ್ವಾಸ, ಸಾಮಾನ್ಯವಾಗಿ ಅಂದವೆಂಬ ಅಪವಾದಕ್ಕೆ ಗುರಿಯಾದ ಶ್ರದ್ಧೆ ಕೂಡಾ ಕಲಾವಿದನಿಗೆ ಪ್ರೇರಣೆ ಒದಗಿಸಬಹುದೆಂಬುದಕ್ಕೆ ಇಟಾಲಿಯನ್ ರಿನಾಯಿನ್‌ಸೆನ್ಸ್ ಕಲಾವಿದರು ನೂರಾರು ನಿದರ್ಶನಗಳನ್ನು ಸೃಷ್ಟಿಸಿದ್ದಾರೆ. ಇಗರ್ಜಿಗಳ ವಾಸ್ತುವಿನಲ್ಲಿ ಅರಮನೆಗಳ ಗೋಡೆಗಳಲ್ಲಿ, ಮುಚ್ಚಿಗೆಯಲ್ಲಿ ಕಲಾರೂಪದಲ್ಲಿ ಧರ್ಮಶ್ರದ್ಧೆಯ ಅವತಾರ, ವಿಶ್ವ ಮಾನ್ಯವಾದ ಇಟಾಲಿಯನ್ ಕಲೆಗಾರಿಕೆಗೆ ಹೆಬ್ಬಾರರು ಭಾವಪೂರ್ಣವಾಗಿ ನೋಡಿದರು. ವಿಚಿತ್ಸಕ ಬುದ್ಧಿಯಿಂದ ವಿಮರ್ಶಿಸುವುದನ್ನು ಹಿಂಜರಿಯಲಿಲ್ಲ."[೩೧]

ಕಾಂಪಿದಿಲ್ಲೊ ಸಂಗ್ರಹದಲ್ಲಿದ್ದ ಗ್ರೇಕೋ ರೋಮನ್ ಶಿಲ್ಪದ ಹಲವಾರು ಹಾಲುಗಳಲ್ಲಿ ವಿಜೃಂಭಿಸುತ್ತಿದ್ದ ಸುಂದರ ಶಿಲಾ ವಿಗ್ರಹಗಳನ್ನು ನೋಡಿ ಇದರಲ್ಲಿ ಇವರು ಮುಂದಿನವರಿಗೆ ಆಸ್ಪದವೇ ಇಲ್ಲದ ರೀತಿಯಲ್ಲಿ ತಮ್ಮ ಕೌಶಲ್ಯ ತೋರಿಸಿಬಿಟ್ಟಿದ್ದಾರೆ. ಅಂಗಸೌಷ್ಠವ, ಸಮನ್ವಯಗಳಿಗೆ ದೊಡ್ಡ ಬೆಲೆ ತೆತ್ತಿ ಗ್ರೇಕೋ ರೋಮನ್ ಆದರ್ಶಗಳ ಸ್ಥಾನದಲ್ಲಿ ಆಧುನಿಕ ಕಲೆ ಬೇರೆಯೇ ಗುರಿಯೆತ್ತಿ ನಡೆಯುತ್ತಿರುವುದನ್ನು ಗಮನಿಸಬೇಡವೇ? ಹಿಂದಿನ ಕಲೆಯೊಂದೇ ಅಲ್ಲ, ಇಂದಿನ ಕಲಾವಿದರೇನು ಮಾಡುತ್ತಿದ್ದಾರೆಂಬುದನ್ನು ಪ್ರತ್ಯಕ್ಷವಾಗಿ ಅರಿಯುವ ಸಂದರ್ಭ ಇಟಲಿಯಲ್ಲಿ ಹೆಬ್ಬಾರರಿಗೆ ಒದಗಿ ಬಂದಿತು. ನ್ಯೂಯಾರ್ಕಿನ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್‌ನಲ್ಲಿ ಸ್ಥಾನ ಗಳಿಸಿದ ಕಿನಾತೋ ಗುತ್ತಾಸೋದೆ ಎಂಬಾತನ ಕಲೆಯನ್ನು ಪ್ರತ್ಯಕ್ಷವಾಗಿ ಆತನ ಸ್ಟುಡಿಯೋದಲ್ಲೇ ನೋಡಿ ಅಧ್ಯಯನ ಮಾಡುವ ವಿವೇಚಿಸಿದರು ಸರಳಗೊಳಿಸಿದ ಮನುಷ್ಯ ಮತ್ತು ವಸ್ತುಗಳ ಆಕೃತಿ, ಗಾಢವಾದ ವರ್ಣಗಳ ಬಳಕೆ ಈ ಎರಡರಲ್ಲಿ ಇಬ್ಬರಲ್ಲೂ ಸಾಮ್ಯವಿತ್ತು. ಆದರೆ ಗುತ್ತಾಸೋ ತನಗಿಂತ ಹೆಚ್ಚು ಆಧುನಿಕತೆಯ ಅನುಭವ ಕೊಡಬಲ್ಲವನಾಗಿದ್ದ, ವಾತಾವರಣದ ಪ್ರಭಾವದಿಂದ ಆದರೆ ಆಧುನಿಕತೆಯ ಗೋಳು ಹಿಡಿದ ಮಾತ್ರಕ್ಕೆ ಒಂದು ಚಿತ್ರ ಶ್ರೇಷ್ಠವಾಗಬೇಕೆಂಬುದನ್ನು ಇಲ್ಲವೆಂಬುದಕ್ಕೆ ಗುತ್ತೂಸೋವೇ ಉದಾಹರಣೆ. ಆತನ ಸ್ಟುಡಿಯೋದಲ್ಲಿ ಆತ ಮಾಡಿಬಿಟ್ಟಿದ್ದ 'ಮೀನು ಹಿಡಿಯುವ' ಚಿತ್ರದಲ್ಲಿರುವಷ್ಟು ಶಕ್ತಿ ಆತನ 'ಮಾರ್ಡನ್' ಎನ್ನಿಸುವ 'ಸ್ಥಿರ ಚಿತ್ರ' ದಲ್ಲಿರುವುದಿಲ್ಲ ಎನ್ನುತ್ತಾರೆ.

ಇಟಲಿಯಲ್ಲಿ ಕೆಲಸ ಮಾಡುತ್ತಿದ್ದ ಕಲಾವಿದರನ್ನು ಇಂತ ಅಭಿಪ್ರಾಯಕ್ಕೆ ವಿರುದ್ಧವಾಗಿ ಸೃಜನ ಶೀಲರನ್ನಾಗಿ ಆಧುನಿಕತೆಯ ದಾರಿಯಲ್ಲಿ ಜಯಗಳಿಸುತ್ತಿರುವ ಕಲಾವಿದರೆಂದರೆ ಹೆಬ್ಬಾರರು ಬೇಟಿ

೩೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೬೩



ಮಾಡಿದ ಕೊರಾದೊ ಕಾಲಿ ಎಂಬ ಕಲಾವಿದ. ಆಗಲೇ ಅಮೂರ್ತ ಕಲಾಪಂಥದಲ್ಲಿ ಗಟ್ಟಿಯಾದ ಹೆಸರು ಗಳಿಸಿದ್ದ ಅವನು ದೊಡ್ಡ ಕಲಾವಿದ ಮಾತ್ರವೇ ಅಲ್ಲ ದೊಡ್ಡ ಕಲಾಚಿಂತಕನೂ ಆಗಿರುವನೆಂದು ತಿಳಿದುಕೊಂಡರು. ಪದಾರ್ಥ ಮತ್ತು ಪರಮಾರ್ಥ (ಸ್ಪಿರಿಟ್) ಗಳ ಹೋರಾಟದಲ್ಲಿ ಕಲಾವಿದರು ಸಂಲಗ್ನರಾಗಿರುತ್ತಾರಂತೆ. ಕಾಲಿಯಲ್ಲೂ ಇದೇ ಹೋರಾಟ. ಆದರೆ ಕಾಲಿಯ ಪ್ರಯೋಗಗಳ ಸತ್ವವನ್ನು ಕಂಡರೆ ಪರಮಾರ್ಥದ ಗೆಲುವು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ನೋಡಪ್ಪ ನಾನು ಬರೇ ಅಮೂರ್ತವಾದದ್ದನ್ನು ಮಾಡುತ್ತೇನೆಂದು ಭಾವಿಸಬೇಡ. ಬೇರೆಯವರೇನೇ ಹೇಳಲಿ ನನ್ನ ಚಿತ್ರ ನನಗೆ ನಿಜ, ನಗ್ನಸತ್ಯ ನನ್ನ ಪದಾರ್ಥ ನನ್ನ ಕಣ್ಣಿಗೆ ಕಾಣುವ ದರ್ಶನ, ಬೇರೆಯವರಂತೆ ನನ್ನದು ಉದಾಸೀನ ದೃಷ್ಟಿಯಲ್ಲ. ಕಣ್ಣಿಗೆ ತೋರುವುದೆಲ್ಲಾ ಹಾಗೆ ತೋರುವುದು ಮಾತ್ರವೇ ಸತ್ಯವಲ್ಲ.

"ಕಲೆಯ ಸಂವರ್ಧನೆಗಾಗಿ ಕಲಾಶಾಲೆಗಳಿಂದ ಪ್ರಯೋಜನವೇ ಇಲ್ಲವೆಂದು ಯಾವ ಕಲಾವಿದನೂ ಅಲ್ಲ ಉಪಾಧ್ಯಾಯನಾಗಿ ಕಲೆಯನ್ನು ಸೂತ್ರಗಳಲ್ಲಿ ಬಂಧಿಸಿ ಕಲಾಜಿಜ್ಞಾಸಿಗಳು ಅಧೋಗತಿಗೆ ಇಳಿಸಬಾರದೆಂದು ಎಚ್ಚರಿಕೆ ಕೊಡುತ್ತಾನೆ. ಶಿಸ್ತುಬದ್ಧ ಪಾಠಗಳ ಬದಲು ಕಲಾವಿದರಾಗುವ ಅಪೇಕ್ಷೆಯುಳ್ಳವರು ಆಗಲೇ ಕಲಾವಿದರೆನಿಸಿದವರ ಮಾರ್ಗದರ್ಶನದಲ್ಲಿ ಸಂಪರ್ಕದಲ್ಲಿದ್ದು ತಮ್ಮ ದಾರಿಯನ್ನು ತಾವೇ ನಿರ್ಮಿಸಿಕೊಳ್ಳುವುದು ಒಳ್ಳೆಯದು. ಅವರಿಗೂ ಕಲೆಗೂ ಎಂಬುದು ಕಾಲಿಯ ಅಭಿಪ್ರಾಯ."[೩೨]

ಹೆಬ್ಬಾರರು ಕಾಲಿಗೆ ತಮ್ಮ ಚಿತ್ರಗಳನ್ನು ತೋರಿಸಿದರು. ಚಿತ್ರಗಳ ಮೂಲಕ ವ್ಯಕ್ತವಾಗುವ ಹೆಬ್ಬಾರರ ವ್ಯಕ್ತಿತ್ವವನ್ನು ಗುರುತಿಸಿ ಯಾವುದೆ ಸ್ವಾಭಾವಿಕ, ಯಾವುದು ಕೃತಕ, ಯಾವುದು ಗಟ್ಟಿ, ಯಾವುದು ಟೊಳ್ಳು ಎಂಬುದನ್ನು ನಿರರ್ಗಳವಾಗಿ ಅವರಿಗೆ ಆತ ವಿವರಿಸಿ ಹೇಳಿದ. ಶೈಲಿ ಕಲಾವಿದನ ವ್ಯಕ್ತಿತ್ವಕ್ಕೆ ಸಹಜಗುಣವಾಗದಿದ್ದರೆ ಅವನಿಗೆ ಅದು ಹಿಡಿಸದ ಶೈಲಿಯ ಬದಲು ಅವರ ವಿಡಂಬನೆ ಆಗಬಹುದು. ಹೆಬ್ಬಾರರ 'ದಂಪತಿ' ಚಿತ್ರದಲ್ಲಿ ಹಾಗೆ ಆಗಿದೆ ಎಂದು ಸೂಚಿಸಿದ. ಭಾವ ಸ್ಫುರಣೆಯ ಬದಲು ಕೃತಿಯಂತೆ ಪಡಿಮೂಡುತ್ತದೆ ಅದೇ ಶ್ರದ್ಧೆ ಮತ್ತು ಮಾತಾ(ಮದರ್) ನ ಚಿತ್ರಣ ಸ್ವಭಾವ ಜನ್ಯ ಚಿತ್ರವಾಗಿ ಮೂಡಿಬಂದಿವೆ. ಇದಕ್ಕೆ ಕಾರಣ ಅವರಲ್ಲಿ ಪ್ರಾಮಾಣೀಕವಾದ ತನ್ನ ವ್ಯಕ್ತಿತ್ವವನ್ನು ತನ್ನತನವನ್ನು ಕಲಾವಿದ ಬಳಸಿಕೊಂಡಿರುವುದು. ಇಷ್ಟು ಸಮರ್ಪಕವಾಗಿ ತನ್ನ ದೌರ್ಬಲ್ಯವನ್ನು ಎತ್ತಿ ತೋರಿಸಿ ಮನದಟ್ಟು ಮಾಡಿದವರು ಬೇರೆ ಯಾರೂ ಸಿಗಲಿಲ್ಲವೆನ್ನುತ್ತಾರೆ ಹೆಬ್ಬಾರರು.

"ಸ್ವಂತಿಕೆಯ ದಾರಿ ಹಿಡಿಯುವ ಅವರ ನಿರ್ಧಾರಕ್ಕೆ ಕಾಲಿಯಂತ ದೊಡ್ಡ ಕಲಾವಿದನ ಮಾತಿನ ಬೆಂಬಲವೂ ಸಿಕ್ಕ ಮೇಲೆ ಹೆಬ್ಬಾರರು ವ್ಯಕ್ತಿತ್ವ ಚಾಂಚಲ್ಯ ಕಳೆದುಕೊಂಡು ಇನ್ನಷ್ಟು ಗಟ್ಟಿಯಾದರು. ಕೆಲವೊಮ್ಮೆ ಹೆಬ್ಬಾರರು ಆತನ ಸ್ಟುಡಿಯೋಕ್ಕೆ ಹೋದಾಗ ಆತ ವ್ಯಾಗ್ರನಾಗಿರುವುದ್ದರಿಂದ ಹಾಗೆಯೇ

೩೨. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೬೪

ಹಿಂತಿರುಗಬೇಕಾಗಿತ್ತು. ಪ್ರಸನ್ನನಾಗಿದ್ದಾಗ ಹೇಳಿದ್ದನ್ನು ಕೇಳುತಿದ್ದ, ಕೇಳಿದ್ದನ್ನು ಕಲಿಸಿಕೊಡುತ್ತಿದ್ದ. ನಿರರ್ಗಳವಾಗಿ ತನ್ನ ಆಲೋಚನೆಗಳನ್ನು ಚರ್ಚಿಸುತ್ತಿದ್ದ. ಟೆಂಪೆರಾ ತಂತ್ರದಲ್ಲಿ ಕಾಗದವನ್ನು ಚಿತ್ರ ರಚನೆಗೆ ಸಿದ್ಧಗೊಳಿಸುವ ಉಪಾಯವನ್ನು ಹೆಬ್ಬಾರರಿಗೆ ಕಲಿಸಿಕೊಟ್ಟವನು ಕಾಲಿ."[೩೩]

೧೯ನೇ ಶತಮಾನದಿಂದ ಕಲಾಲೋಕದ ಆಧುನಿಕ ಬದಲಾವಣೆಗಳು ಆರಂಭಗೊಂಡವು. ಅಂತೆಯೇ ಪಿಕಾಸೋ, ಚಿರಿಕೋ ಮುಂತಾದವರಲ್ಲಿ ಬದಲಾವಣೆ ಕಂಡರೆ ಅದರ ಜೊತೆಗೆ ವಿಜ್ಞಾನ ಕ್ಷೇತ್ರದಲ್ಲಿ ಎಷ್ಟೂ ಬೆಳವಣಿಗೆಗಳು ಆರಂಭಗೊಂಡವು. ಭಾರತೀಯ ಕಲಾವಿದರು ತಮ್ಮ ಮೂಲವನ್ನು ಅರಿತು ಅದರ ಬಲದಿಂದ ಹೊಚ್ಚ ಹೊಸ ಸೃಷ್ಟಿಗಳನ್ನು ಮಾಡಬೇಕೆಂಬ ಮೂಲ ಅಂಶಗಳನ್ನು ಹೆಬ್ಬಾರರು ನಿಶ್ಚಯಿಸಿಕೊಂಡರು.

ಹೆಬ್ಬಾರರ ಆಲ್ಬಮ್ಮಿನಲ್ಲಿದ್ದ ಜಾನುವಾರು ಜಾತ್ರೆ, ಗೋಸೇವೆ, ಕನ್ನಿಕೆಯರು, ಕನ್ಯಾಕುಮಾರಿಯರ ಕೊಲಲು ನರ್ತನ, ಚಿತ್ರಗಳನ್ನು ಕಾಲಿ ಮೆಚ್ಚಿಕೊಂಡು ಅದರಂತೆ ಕಾಲಿಯ ಚಿತ್ರಗಳನ್ನು ಮೆಚ್ಚುವುದು ಮಾತ್ರ ಹೆಬ್ಬಾರರಿಗೆ ಸಾಧ್ಯವಾಗಲಿಲ್ಲ. ಅವನಲ್ಲಿ ಮಾನವ ಸ್ವಭಾವವನ್ನು ಸವಿಸ್ತಾರವಾಗಬೇಕಾದ ರಾಗಭಾವಗಳ ಬದಲು ಬರಿಯ ತರ್ಕಬದ್ಧ, ಗಣಿತದ ನಿಷ್ಕೃಷ್ಟತೆ, ಬುದ್ಧಿ ಶಕ್ತಿ, ಪ್ರತಿಭೆ ಬೇಕಾದಷ್ಟಿದ್ದರೂ ಮನುಷ್ಯತ್ವವೇ ಇರಲಿಲ್ಲ ಎಂಬುದನ್ನು ಹೆಬ್ಬಾರರು ಮನಗಂಡರು.

❖❖❖❖


೩೩. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೬೫



ಅಧ್ಯಾಯ - ಮೂರು

ಕೆ.ಕೆ. ಹೆಬ್ಬಾರರ ರೇಖಾಚಿತ್ರಗಳು





ಅಧ್ಯಾಯ : ಮೂರು


ಕೆ. ಕೆ. ಹೆಬ್ಬಾರರ ರೇಖಾಚಿತ್ರಗಳು

"ಕಲಾವಿದನನ್ನು ನಿಜಕ್ಕೂ ಬಯಲು ಮಾಡುವುದು ರೇಖಾ ಚಿತ್ರಗಳೇ, ಅದು ಅವನ ಸಹಿ ಇದ್ದಂತೆ"[೧] ಕಲಾವಿದನೊಬ್ಬನನ್ನು ಅರ್ಥ ಮಾಡಿಕೊಳ್ಳಲು ಅವನ ರೇಖಾ ಚಿತ್ರಗಳನ್ನು ವಿಶ್ಲೇಶಿಸಬೇಕು. ಅಂತೆಯೇ ಭಾರತೀಯ ಕಲೆಗಳಲ್ಲಿ, ರೇಖೆಗಳೇ ಸಂವಹನಕ್ಕೆ ತಳಹದಿ. ಭಾರತೀಯ ಕಲೆಯ ಎಲ್ಲ ರೂಪಗಳೂ ರೇಖೆಗಳನ್ನು ಆಧರಿಸಿವೆ. ರೇಖೆಗಳು ಶಿಲ್ಪ, ನೃತ್ಯ ಮತ್ತು ಸಂಗೀತಗಳನ್ನು ರೇಖಾ ಚಲನೆಯ ಮೇಲೆಯೇ ಸಂಯೋಜಿಸಲಾಗುತ್ತದೆ.

ರೇಖಾ ಚಿತ್ರಗಳನ್ನು ಪೂರ್ಣ ಪ್ರಮಾಣದ ಕಲೆ ಎಂದು ಪರಿಗಣಿಸದೇ ಇದ್ದ ಕಾಲವೊಂದಿತ್ತು. ಆದರೆ ಕ್ರಮೇಣ ಅದರ ಮಹತ್ವದ ಅರಿವಾಗಿ ಇಂದು ಅತ್ಯಂತ ಸರಳವಾದ ರೇಖಾ ಚಿತ್ರಕ್ಕೂ ಒಂದು ವರ್ಣ ಚಿತ್ರಕ್ಕೆ ಇರುವಷ್ಟೇ ಮಹತ್ವ ಬಂದಿದೆ. ರೇಖಾಚಿತ್ರ ಅಭಿವ್ಯಕ್ತಿ ಮಾಧ್ಯಮಗಳಲ್ಲೇ ಅತ್ಯಂತ ಶುದ್ಧವಾದುದು. ಅಂತೆಯೇ ನಮ್ಮ ವಿಷ್ಣು ಧರ್ಮೋತ್ತರ ಪುರಾಣವನ್ನು ರೇಖೆಯ ಪ್ರಶಂಸಾತ್ಮಕ ಕಾರ್ಯ ಎಂದು ರೇಖೆಗಳು ನಿಪುಣ ಕಲಾವಿದನೊಬ್ಬನ ಅತ್ಯುನ್ನತ ಸಾಧನೆ ಎನ್ನುವ ಉಲ್ಲೇಖವಿದೆ.

ಫ್ರೆಂಚ್ ಕಲಾವಿದ ಇಂಗ್ರೇಸ್ ಇದನ್ನು ಒಂದೇ ವಾಕ್ಯಾಂಶದಲ್ಲಿ ಹೀಗೆ ಹೇಳಿದ್ದಾನೆ. "ಕಲೆಯ ನಿಷ್ಕಪಟತೆ[೨], ಆಕ್ಸ್‌ಫರ್ಡ್ ಯೂನಿವರ್ಸಿಟಿ ಡಿಕ್ಷನರಿಯ ಪ್ರಕಾರ ರೇಖಾ ಚಿತ್ರಗಳೆಂದರೆ, ಲೇಖನಿ,


೦೧. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾ ಚಿತ್ರ, ಪುಟ – ೮೩
೦೨. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾ ಚಿತ್ರ, ಪುಟ – ೮೩



ಪೆನ್ಸಿಲ್/ ಕ್ರೆಯಾನ್‌ನಿಂದ ರೂಪಿಸುವುದು ಎಂದರ್ಥ 'ವರ್ಣಚಿತ್ರಣ'ದಿಂದ ಭಿನ್ನವಾದ ರೀತಿಯಲ್ಲಿ ರೂಪಿಣಿ ಎನ್ನುತ್ತದೆ. ಪ್ರಕೃತಿಯಲ್ಲಿ ವಾಸ್ತವವಾಗಿ ನೋಡಲು ಸಿಗದ, ನಿಜಕ್ಕೂ ಇಲ್ಲದ ಆಕಾರಗಳನ್ನು ಗುರುತಿಸಲು ಸೃಷ್ಟಿಸುವ ಈ ಕಾಲ್ಪನಿಕ ರೇಖೆಗಳೇ ಕಲಾವಿದನ ಅಭಿವ್ಯಕ್ತಿಯನ್ನು ಗಮನಾರ್ಹ ಪಾತ್ರ ವಹಿಸುತ್ತದೆ. ರೇಖೆಗಳಲ್ಲಿನ ಅಭಿವ್ಯಕ್ತಿ ಸಾಮರ್ಥ್ಯ ಅಪರಿಮಿತವಾದದು. ಇದರಲ್ಲಿ ಆ ರೇಖೆಯ ಭಾರ, ಅದರ ದಿಕ್ಕು ಅದರ ಗುಣಧರ್ಮ ಯಾವುದರಿಂದ ಅದನ್ನು ರೇಖಿಸಲಾಗಿದೆ ಹಾಗೂ ಆ ರೇಖೆಗಳು ಬರೆಯಲ್ಪಟ್ಟಿರುವುದು ಮುಖ್ಯವಾಗುತ್ತದೆ. ಪೆನ್ಸಿಲ್, ಪೆನ್, ಚಾರ್ಕೋಲ್ ಸೀಮೆಸುಣ್ಣ, ಬ್ರಷ್, ಕಾಂಟಿ, ಸ್ಕೆಚ್ ಪೆನ್ನುಗಳು ಇತ್ಯಾದಿಗಳನ್ನು ಬರೆದಿರುವ ರೇಖೆಗಳು ಪ್ರತಿಯೊಂದು ಮಾಧ್ಯಮಕ್ಕೆ ಅನುಗುಣವಾಗಿ ವಿಭಿನ್ನ ಪರಿಣಾಮಗಳನ್ನು ಮೂಡಿಸುತ್ತವೆ. ಒಂದು ನೇರ ರೇಖೆ ಹಾಗೂ ಬಾಗಿದ ರೇಖೆ ಮತ್ತು ಅವುಗಳ ಸಂಯೋಜನೆಗಳು, ಉತ್ಪತ್ತಿ ಮಾಡುವ ಭಾವನೆಗಳು ಅರ್ಥಗಳು ಬೇರೆಯದೇ ಆಗಿರುತ್ತವೆ. ಅಂತೆಯೇ ತೀವ್ರಗತಿಯಿಂದ ಬರೆದ ರೇಖೆಯಲ್ಲಿರುವ ಚೈತನ್ಯವೂ ಮಂದಗತಿಯಿಂದ ಬರೆದ ರೇಖೆಗಳಿಂದ ಭಿನ್ನವಾಗಿರುತ್ತವೆ.

ರೇಖೆಗಳಲ್ಲಿನ ಈ ಅಭಿವ್ಯಕ್ತಿ ಗುಣಗಳನ್ನು ಕಂಡುಕೊಂಡಿದ್ದು, ಅದರ ಸಾಧ್ಯತೆಗಳನ್ನು ನಿಜಕ್ಕೂ ಅರ್ಥಮಾಡಿಕೊಂಡಿದ್ದು, ಆಧುನಿಕ ಮನಸ್ಸೇ ಹಿಂದೆ ಕೇವಲ ವಸ್ತು ವ್ಯಕ್ತಿಗಳ ಹೊರ ರೂಪಗಳನ್ನು ಗುರುತಿಸಲು ಮಾತ್ರ ಬಳಸುತ್ತಿದ್ದ ಈ ಮಾಧ್ಯಮವನ್ನು, ನವ್ಯ ಕಲಾವಿದರು ಮತ್ತು ಅನಿಸಿಕೆಗಳ ಸಮರ್ಥ ಅಭಿವ್ಯಕ್ತಿಗೆ ಬಳಸಿಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ.[೩] ಕಲಾಕೃತಿಯೊಂದರ ಕಲ್ಪನೆ ಕಲಾವಿದನಲ್ಲಿ ಮೂಡಿದ ತಕ್ಷಣ ಅದರ ಸಾಧ್ಯತೆಗಳನ್ನು ಅರಿಯಲು ಹಲವಾರು ಕಲಾವಿದರು ರಚಿಸಿದ ಕರಡು ರೇಖಾಚಿತ್ರಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಇತರ ಮಾಧ್ಯಮವೊಂದರಲ್ಲಿ ಕೃತಿ ರಚಿಸುವ ಮೊದಲು ಅದರ ಮೂಲ, ಕರಡು ವಿನ್ಯಾಸಕ್ಕೆ ಮಾತ್ರವೇ ರೇಖೆಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಆದರೆ ಕ್ರಮೇಣ ರೇಖಾ ಚಿತ್ರಕ್ಕೆ ತನ್ನದೇ ಆದ ವಿಶಿಷ್ಟ ಪರಿಣಾಮ ಬೀರುವ ಶಕ್ತಿಯಿದೆ ಎಂಬುವುದನ್ನರಿತ ಕಲಾವಿದರು ಅದನ್ನೇ ಒಂದು ಪೂರ್ಣ ಪ್ರಮಾಣದ ಕಲೆ ಎಂದು ಸ್ವೀಕರಿಸಲಾರಂಭಿಸಿದರು.[೪] ವ್ಯಕ್ತಿಯ ವೈಯಕ್ತಿಕ ಅನುಭವಗಳ ಅಭಿವ್ಯಕ್ತಿ ಮೊದಲು ರೇಖೆಗಳ ರೂಪದಲ್ಲಿ ಮೂಡುತ್ತದೆ. ಸಾಂಪ್ರದಾಯಿಕ ಕಲೆಗಳಲ್ಲಿರುವಂತೆ ಸಮಕಾಲೀನ ಕಲೆಯಲ್ಲಿ ಕಲಾಕೃತಿಯೊಂದನ್ನು ಹೀಗೆಯೇ ರಚಿಸಬೇಕೆಂಬ ಬಂಧನವಿಲ್ಲ. ಕಠಿಣ ನಿಯಮವಿಲ್ಲ. ಅಭಿವ್ಯಕ್ತಿಗೆ ಅನುಗುಣವಾಗಿ ಸ್ವಾತಂತ್ರ್ಯವಿದೆ. ನಮ್ಮ ಕಲಾವಿದರಿಗೆ ಬಾಹ್ಯ ಸೌಂದರ್ಯ ಮಾತ್ರವೇ ಸತ್ಯ. ನೋವನ್ನು ಸರಿಯಾದ ರೀತಿಯಲ್ಲಿ ಹೇಳುವ ತವಕ. ಅವರ ದೃಷ್ಟಿಯಲ್ಲಿ ರಸೋತ್ಕಟ ಸ್ಥಿತಿಗೆ

೦೩. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾ ಚಿತ್ರ, ಪುಟ – ೪೪
೦೪. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾ ಚಿತ್ರ, ಪುಟ – ೪೪



ಕೊಂಡೊಯ್ಯುವುದೇ ಕಲಾ ಕೃತಿ. ರಮ್ಯ ಕಲಾವಿದನ ಮನಸ್ಸು ಆಗಸದಲ್ಲಿ ವಿಹರಿಸಿದರೆ ಸಮಕಾಲೀನ ಕಲಾವಿದನ ಮನಸ್ಸು ವಾಸ್ತವ ಜಗತ್ತಿನಲ್ಲಿಯೇ ನಡೆದಾಡುತ್ತದೆ. ಇಲ್ಲಿ ಬಿಚ್ಚು ಮನಸ್ಸಿನಿಂದ ಹೊರ ಜಗತ್ತನ್ನು ನೋಡುವ ಆತ್ಮವನ್ನು ಶೋಧಿಸುವ ಧೋರಣೆಯಿದೆ. ಸಮಕಾಲೀನ ಚಿತ್ರಕಲೆಯ ಈ ಎಲ್ಲಾ ಅಂಶಗಳೂ ಸಮಕಾಲೀನ ರೇಖಾಚಿತ್ರಗಳಲ್ಲೂ ಹಾಸುಹೊಕ್ಕಾಗಿದೆ. ರೇಖೆಗಳನ್ನು ವೈವಿಧ್ಯಮಯವಾಗಿ ಬಳಸಿಕೊಳ್ಳುತ್ತಲೇ ನಮ್ಮ ಕಲಾವಿದರು ವಿಭಿನ್ನ ಪರಿಣಾಮಗಳನ್ನು ಮೂಡಿಸಿದ್ದಾರೆ. ರೇಖೆಗಳ ಓಟದಲ್ಲಿ ನಡಿಗೆಯಲ್ಲಿನ ವ್ಯತ್ಯಾಸಗಳು ಅದರ ಗಾತ್ರದಲ್ಲಿನ ವ್ಯತ್ಯಾಸಗಳ ಏರಿಳಿತಗಳು ಅದರ ಪರಿಣಾಮ ಮೂಡಿಸುತ್ತವೆ. ಅಂತೆಯೇ ತಮ್ಮ ಅಭಿವ್ಯಕ್ತಿಗೆ ಅನುಗುಣವಾದ ರೇಖೆಗಳನ್ನು ಕಲಾವಿದರು ಆರಿಸಿಕೊಳ್ಳುವುದು ಸ್ವಾಭಾವಿಕ. ಹೆಬ್ಬಾರರು ಹಿಂದೆ ರಚಿಸಿದ ರೇಖೆಗಳನ್ನು ಹಾಡುವ ರೇಖೆಗಳು ಎಂದೇ ಉಲ್ಲೇಖಿಸುವುದು.

ಇವುಗಳಲ್ಲಿ ವಿಶಿಷ್ಟವಾದ ಲಯಬದ್ಧತೆ, ಲಾವಣ್ಯವಿದೆ. ಇವರ ಕೆಲವು ಕಲಾಕೃತಿಗಳಲ್ಲಿ ಮಿತವಾದ ರೇಖೆಗಳಿದ್ದು ನೃತ್ಯದ ಭಾವನೆಗಳಿಗನುಗುಣವಾದ ಗತಿಯಿಂದಾಗಿ ಅವು ನೃತ್ಯವೊಂದನ್ನು ನೋಡಿದ ಅನುಭವ ಮೂಡಿಸುತ್ತವೆ. ಅತಿ ಕಡಿಮೆ ರೇಖೆಗಳಿಂದ ರಚಿಸಿದ ಉತ್ತಮ ಚಿತ್ರದ ಬಗ್ಗೆ ವಿಧ ಸಾಲಭಂಜಿಕಾದಲ್ಲಿ ವಿದೂಷಕ ಹೀಗೆ ಹೇಳಿದ್ದಾನೆ. "ಲಿಪಿ ಲಘು ಲಿಖಿತೇಯಮ್ ದಶ್ಯತೇ ಪೂರ್ಣ ಮೂರ್ತಿ" ಕೆಲವೇ ರೇಖೆಗಳಿದ್ದರೂ ಪೂರ್ಣ ಮೂರ್ತಿಂ ಪೂರ್ಣ ಪರಿಣಾಮವನ್ನು ನೀಡುತ್ತದೆನ್ನುವ ಈ ಮಾತನ್ನು ಹೆಬ್ಬಾರರ ಕೃತಿಗಳಿಗೂ ಅನ್ವಯಿಸಬಹುದಾಗಿದೆ. ರೇಖಾ ಚಿತ್ರಗಳನ್ನು ನೃತ್ಯದ ಲಾವಣ್ಯಕ್ಕಿಂತ ಅದರಲ್ಲಿನ ಬಿರುಸುಗಳು ತೀವ್ರ ಓಟವನ್ನು ಪ್ರಚೋದಿಸುವ ಗುಣವನ್ನು ಕಾಣಬಹುದು.[೫] ಒಟ್ಟಾರೆಯಾಗಿ ಹೇಳುವುದಾದರೆ ಹೆಬ್ಬಾರರ ಕೃತಿಗಳ ಜೀವ, ಮತ್ತು ಆತ್ಮಗಳೆರಡೂ ರೇಖೆಗಳಾಗಿವೆ.

ರೇಖಾಚಿತ್ರಗಳು

ಇಂಕ್ ಮಾಧ್ಯಮದ ರೇಖಾಚಿತ್ರಗಳು
* ಯಕ್ಷಗಾನ
* ಅಂಗ್ ಕೋರ್ ವಾಟ್
* ದಂಪತಿಗಳು
* ಸಂಗೀತದ ರೇಖಾಚಿತ್ರಗಳು
* ರೈತರು
* ಸಾಮಾಜಿಕ ದೃಶ್ಯಗಳು
* ನಿಸರ್ಗದ ಚಿತ್ರಗಳು
* ಮರಣೋತ್ತರ ರೇಖಾಚಿತ್ರಗಳು

ಸ್ಕೆಚ್‌ಪೆನ್ ಮಾಧ್ಯಮದ ರೇಖಾಚಿತ್ರಗಳು
* ದಂಪತಿಗಳು
* ಪ್ರಾಣಿಪಕ್ಷಿಗಳು
* ಸೈಕಲ್ ರಿಕ್ಷಾ

ಚಾರ್ಕೋಲ್
* ಭಾವಚಿತ್ರ

೦೫. ಬಿ.ವಿ.ಕೆ. ಶಾಸ್ತ್ರೀ (ಸಂ) : ರೇಖಾ ಚಿತ್ರ, ಪುಟ – ೮೮

ಕುಳಿತಿರುವ ಮಹಿಳೆ

ಹೆಬ್ಬಾರರ ಈ ರೇಖಾ ಚಿತ್ರಗಳನ್ನು ಕಂಡಾಗ ಕೆಲವೇ ಕೆಲವು ರೇಖೆಗಳಲ್ಲಿ ತಮ್ಮ ಭಾವನೆಗಳ ಮೂಲಕ ಚಿಂತಿಸುತ್ತಾ ಕುಳಿತಿರುವ ಕನ್ಯೆಯ ಚಿತ್ರವು ಅವಳು ಕುಳಿತಿರುವ ರೀತಿಯನ್ನು ಕಂಡು ತಿಳಿದು ಬರುತ್ತದೆ. ತಲೆಗೆ ಹೂವನ್ನು ಮುಡಿದುಕೊಂಡು ಯಾರಿಗೋ ಕಾಯುತ್ತಾ ಕುಳಿತಿರುವಂತೆ ಚಿತ್ರ ರೇಖಾ ಕೃತಿಯಲ್ಲಿ ಕಂಡುಬರುತ್ತದೆ.

ಯಕ್ಷಗಾನ


ಮೂಲತಃ ಹೆಬ್ಬಾರರು ದಕ್ಷಿಣ ಕರಾವಳಿ ತೀರದವರು. ಅವರಿಗೆ ಯಕ್ಷಗಾನದ ಸೊಗಡು ಹುಟ್ಟಿನಿಂದಲೇ ಬಂದಿತ್ತು. ಅವರ ತಂದೆಯು ಯಕ್ಷಗಾನದ ಕಲಾವಿದರು ಹಾಗೂ ಮನೆಮಂದಿಗೆಲ್ಲಾ ಯಕ್ಷಗಾನವೆಂದರೆ ಬಲು ಪ್ರೀತಿ. ಈ ಎಲ್ಲಾ ಕಾರಣಕ್ಕಾಗಿ ಹೆಚ್ಚಾಗಿ ಹೆಬ್ಬಾರರ ಚಿತ್ರಗಳಲ್ಲಿ ಯಕ್ಷಗಾನ ಪ್ರಭಾವಗಳನ್ನು ಕಾಣಬಹುದಾಗಿದೆ. ಇಲ್ಲಿ ಕಾಣುವ ಯಕ್ಷಗಾನದ ವಿವಿಧ ರೀತಿಯ ಭಾವನೆಗಳನ್ನು ಕಾಣುವುದರ ಜೊತೆಗೆ ಅದರ ಹಾವಭಾವಗಳ ಸನ್ನಿವೇಶಗಳ ವಿವಿಧ ರೀತಿಯ ಭಂಗಿಗಳನ್ನು ಇಲ್ಲಿ ಕಾಣಬಹುದಾಗಿದೆ.

ಗಾಯನದಲ್ಲಿ ಮಗ್ನಳಾಗಿರುವ ಮಹಿಳೆ

ಯಾವುದೇ ಕಲಾವಿದನೂ ಸಂಗೀತದ ಲಯ, ಗತಿ, ಮಾಧುರ್ಯಗಳು ಸಂಗೀತದ ರಾಗ ಸಂಚಾರವನ್ನು ಸೆರೆಹಿಡಿಯುವುದು ತುಂಬಾ ಕಷ್ಟದ ಕೆಲಸ ಆದರೆ ಹೆಬ್ಬಾರರ ಈ ಚಿತ್ರದ ರೇಖೆಗಳಲ್ಲಿ ಕಾಣುವ ಆ ಮಹಿಳೆಯು ಒಂದು ಕೈಯಲ್ಲಿ ತಂಬೂರಿಯನ್ನು ನುಡಿಸುತ್ತಾ ಸಂಗೀತದಲ್ಲಿ ಮಗ್ನಳಾಗಿರುವ ಈ ರೇಖೆಗಳ ಮುಖಾಂತರದಿಂದಲೇ ಅವಳ ಸಂಗೀತದ ಆಳವನ್ನು ತಿಳಿಯಬಹುದಾಗಿದೆ. ರೇಖಾ ಚಿತ್ರದಲ್ಲಿ ಸಂಪೂರ್ಣವಾಗಿ ಗಡುಸಾದ ರೇಖೆಗಳನ್ನು ಕಾಣಬಹುದಾಗಿದೆ. ಅದರಲ್ಲಿಯೇ ಮಹಿಳೆಯು ಕುಳಿತಿರುವ ಭಂಗಿಯ ಅಂಗರಚನಾ ಶಾಸ್ತ್ರದ ಸಂಯೋಜನೆಯನ್ನು ಕಾಣಬಹುದು.

ನೇಗಿಲ ಹೊತ್ತ ರೈತ

ಹೆಬ್ಬಾರರು ಮೂಲತಃ ಹಳ್ಳಿಯಲ್ಲಿಯೇ ಅವರ ಬಾಲ್ಯದ ಜೀವನ ಬೆಳೆದದ್ದು. ಹೀಗಾಗಿ ಅವರಿಗೆ ಎಲ್ಲಾ ರೀತಿಯ ಕೃಷಿ ಚಟುವಟಿಕೆಗಳ ಬಗ್ಗೆ ಅರಿವಿರುತ್ತದೆ. ಈ ಚಿತ್ರದಲ್ಲಿ ಬಲಿಷ್ಠವಾದ ಎರಡು ಹೋರಿಗಳು ಮುಂದೆ ಎಳೆಯುತ್ತಿರುವ ದೃಷ್ಯ ಅವುಗಳನ್ನು ಒಬ್ಬ ಬಲಿಷ್ಠನಾದ ರೈತ ಯುವಕನನ್ನು ಒಂದು ಕೈಯಲ್ಲಿ ನೇಗಿಲನ್ನು ಹಿಡಿದು ಇನ್ನೊಂದು ಕೈಯಿಂದ ಜಗ್ಗಿ ಹಿಡಿದಿರುವ ದೃಶ್ಯವಿದ್ದು. ಈ ರೇಖಾ ಚಿತ್ರವನ್ನು ಆ ಯುವಕನ ಸಂಪೂರ್ಣ ದೇಹವು ಮಾಂಸಖಂಡಗಳಿಂದ ತುಂಬಿದ್ದು ಬಲಿಷ್ಠವಾದ



ಸ್ನಾಯುಗಳು ಹಾಗೂ ಅವರಂತೆಯೇ ಎರಡು ಹೋರಿಗಳು ಚಿತ್ರದಲ್ಲಿರುವುದು ಕಂಡುಬರುತ್ತದೆ. ಕೇವಲ ಕೆಲವೇ ರೇಖೆಗಳಲ್ಲಿ ಆ ಹೋರಿಗಳು ಎಳೆಯುತ್ತಿರುವ ಶಕ್ತಿಯನ್ನು ಕಾಣಬಹುದಾಗಿದೆ.

ದಂಪತಿಗಳು

ತಾನು ಮೊದಲು ಮದುವೆಯಾದದ್ದು ಕಲೆಯನ್ನೇ ಎನ್ನುತ್ತಿದ್ದ ಹೆಬ್ಬಾರರ ಈ ಚಿತ್ರವನ್ನು ನೋಡಿದಾಗ ಅರಿವಾಗುತ್ತದೆ. ಒಂದೇ ಚಿತ್ರದಲ್ಲಿ ಒಂದು ಗಂಡು ಮತ್ತು ಹೆಣ್ಣಿನ ಮುಖಗಳು ಒಂದಕ್ಕೊಂದು ಅಭಿಮುಖವಾಗಿ ನಿಂತಿರುವ ಚಿತ್ರವು ಅವರ ಮದುವೆಯ ಸಂದರ್ಭವನ್ನು ನೆನಪಿಸುತ್ತವೆ. ಈ ಗಂಡು ಮತ್ತು ಹೆಣ್ಣನ್ನು ಬಂಧಿಸಿರುವ ಹೂವಿನ ಮಾಲೆಯು ವಿವಾಹದ ಸಂದರ್ಭಗಳನ್ನು ಸೂಚಿಸುತ್ತದೆ. ಮಧುರ ಬಾಂಧವ್ಯ ಮತ್ತು ಪ್ರೀತಿಯ ಸಂಕೇತವಾಗಿರುವ ಈ ಎರಡು ಮುಖಗಳು ಸೇರಿ ಒಂದೇ ಮುಖವಾಗಿರುವಂತೆ ಈ ಚಿತ್ರವು ನೋಡುಗರ ಭಾವನೆಗಳನ್ನು ಮೂಡಿಸುತ್ತವೆ.

ನವವಧು-ವರ

ನವವಧು ವರರ ಈ ಚಿತ್ರವು ಆಗ ತಾನೇ ಮದುವೆಯಾಗಿರುವ ವಧುವಿಗೆಂದು ಸಿಂಗಾರಗೊಂಡಿರುವ ನವ ದಂಪತಿಗಳು ಒಬ್ಬರನ್ನೊಬ್ಬರು ತಬ್ಬಿರುವ ದೃಶ್ಯವಾಗಿದೆ. ವರ ತಲೆಯಲ್ಲಿ ಕಟ್ಟಿರುವ ಬಾಸಿಂಗ, ಕಚ್ಚೆಪಂಚೆ, ವಧುವು ಸಿಂಗಾರಗೊಂಡು ಅವಳ ಜಡೆಯನ್ನು ಹೂವಿನ ಅಲಂಕಾರ ಇಬ್ಬರ ಹೂವಿನ ಹಾರಗಳೊಂದಿಗೆ ಒಬ್ಬರನ್ನೊಬ್ಬರು ಎರಡು ಕೈಗಳಿಂದ ತಬ್ಬಿ ನಿಂತಿರುತ್ತಾರೆ.

ಕಥಕ್ ನೃತ್ಯದ ಭಂಗಿ

ಕಥಕ್ ನೃತ್ಯದಿಂದ ಪ್ರಭಾವಿತರಾಗಿದ್ದ ಹೆಬ್ಬಾರರು ತಾವೇ ಕಥಕ್ ನೃತ್ಯವನ್ನು ಕಲಿಯುತ್ತಿದ್ದರು. ಹೀಗಾಗಿ ಅವರ ನೃತ್ಯದ ತನ್ಮಯತೆಯು ತಮ್ಮ ರೇಖೆಗಳ ಮೂಲಕವೇ ಹೊರಹಾಕಿದ್ದಾರೆ. ಇವರನ್ನು ನೃತ್ಯದ ಯಾವುದೇ ಭಂಗಿಯಲ್ಲಿ ನಿಂತಿರುವ ಹೆಬ್ಬಾರರೇ ಎಂಬ ಭಾಸವಾಗುತ್ತದೆ. ಹೆಬ್ಬಾರರಿಗೆ ಚಿತ್ರಕಲೆಯೊಂದಿಗೆ ನೃತ್ಯ ಕಲೆಯ ಬಗ್ಗೆ ಅಪಾರವಾದ ಆಸಕ್ತಿ ಇರುವುದನ್ನು ತೋರುತ್ತದೆ.

ಕೋಲಾಟ ಮತ್ತು ಮದ್ದಳೆಯ ದೃಶ್ಯ

ಸೃಜನಶೀಲ ಪ್ರವೃತ್ತಿ ಹೊಸ ಹಿತ ಅನುಭವಗಳಿಗೆ ತನ್ನನ್ನು ಒಪ್ಪಿಕೊಳ್ಳುವಾಗ ಉಂಟಾಗುವ ರಸಾನುಭವಗಳು ಆ ಕ್ಷಣದಲ್ಲೇ ಸೆರೆಹಿಡಿಯುವ ಆತುರಕ್ಕೆ ಪೂರ್ಣಸಿದ್ಧತೆ ಅಗತ್ಯವೆಂದೇ ಕಲಾವಿದ ಹೋಗುವಲ್ಲೆಲ್ಲಾ ತನ್ನ ಸ್ಕೆಚ್ ಬುಕ್ ಕೊಂಡೊಯ್ಯದೇ ಇರುವುದಿಲ್ಲ. ಅರವತ್ತರ ದಶಕದಲ್ಲಿ ಹೆಬ್ಬಾರರು ಹಂಪಿಗೆ ಹೋದಾಗ ಅಲ್ಲಿ ಅವರಿಗೆ ತುಂಬಾ ಮೆಚ್ಚಿಕೆಯಾದ ಶಿಲ್ಪ ಸೌಂದರ್ಯಗಳನ್ನು ನೋಡಿ

ಮೂಡಿಸಿರುವ ಕೋಲಾಟದಲ್ಲಿ ಅಪೂರ್ವನೃತ್ಯ ಭಂಗಿಯಲ್ಲಿ ಮಗ್ನರಾಗಿರುವ ಇಬ್ಬರು ಯುವತಿಯರನ್ನು ಮತ್ತು ಮದ್ದಳೆಯು ಸದ್ದಿಗೆ ಲಯಕ್ಕೆ ತನ್ಮಯಳಾಗಿ ನರ್ತಿಸುತ್ತಿರುವ ಗಾರೆ ಶಿಲ್ಪದ ರೇಖಾ ಚಿತ್ರಗಳು, ಚಿತ್ರಕಲೆ ಆಸಕ್ತಿ ಶ್ರೀಮಂತರಿಗೆ ಎನ್ನುವ ಮಾತೊಂದಿದೆ. ಪ್ರಸಿದ್ಧ ಕಲಾವಿದರ ಚಿತ್ರಗಳಿಗೆ ಬೆಲೆ ಕಟ್ಟುವುದು ಸಾಮಾನ್ಯರಿಗೆ ಸಾಧ್ಯವಿಲ್ಲವೆನ್ನುವ ಮಾತು ನಿಜ. ಹಾಗಾದರೆ ಜನಸಾಮಾನ್ಯರಿಗೆ ತಮ್ಮ ಚಿತ್ರಗಳು ಎಟುಕುವಂತಿರಬೇಕು ಎಂಬ ಚಿಂತನೆಯಿಂದ ಪ್ರಭಾವಿತರಾದ ಹೆಬ್ಬಾರರು ತುಳಸೀದಾಸ ರತ್ನಾವಳಿಯರ ಮದುವೆ ದೃಶ್ಯವಾಗಿದೆ.

ಅಂಗ್‌ಕೋರ್‌ವಾಟ್ – ನರ್ತಿಸುವ ರೇಖೆಗಳು

ಇತಿಹಾಸದ ಅವಶೇಷಗಳಿಗೆ ಒಬ್ಬ ಚಿತ್ರಕಾರ ಹೇಗೆ ಸ್ಪಂದಿಸಬಹುದು ಎಂಬುದು ಕುತೂಹಲದ ವಿಷಯ. ಹೆಜ್ಜೆ ಹೆಜ್ಜೆಗೂ ಇತಿಹಾಸದ ಅವಶೇಷಗಳನ್ನು ಗುರುತಿಸಬಹುದಾದ ಭಾರತೀಯ ಪರಿಸರದಲ್ಲಂತೂ ಲೆಕ್ಕವಿಲ್ಲದಷ್ಟು ಕಲಾವಿದರು ಇವುಗಳಿಂದ ಪ್ರಭಾವಿತರಾಗಿದ್ದಾರೆ, ಆಗುತ್ತಿದ್ದಾರೆ. ಯಾವುದೇ ರೀತಿಯ ಸೃಜನಶೀಲ ವಸ್ತುವಿಗೋ, ಶಿಲ್ಪಕ್ಕೋ ಅವಕ್ಕೆ ಸಂಬಂಧಿಸಿದ ಇತಿಹಾಸಕ್ಕೆ ಕಲಾವಿದ ಮುಖಾಮುಖಿಯಾಗಿ ಸ್ಪಂದಿಸುವಾಗ ಕಲಾವಿದನಾಗಿ ಈ ರಸಾನುಭೂತಿಯಿಂದ ಉಂಟಾದ ಉಲ್ಲಾಸಕ್ಕೂ ಉಂಟಾಗುವ ಕಲೆಯ ಅಭಿವ್ಯಕ್ತಿಯೇ ಕಲಾಕೃತಿಗಳಾಗುತ್ತವೆ.

೧೯೬೯ರಲ್ಲಿ ಹೆಬ್ಬಾರರು ತನ್ನ ವಿಶ್ವಪರ್ಯಟನಾ ಕಾಲದಲ್ಲಿ ಕಾಂಬೊಡಿಯಾದ ಐತಿಹಾಸಿಕ ಅವಶೇಷ ಅಂಗ್‌ಕೊರ್‌ವಾಟ್. ಹಿಂದೂ, ಬೌದ್ಧ ಸಂಸ್ಕೃತಿಗಳ ವ್ಯಾಪಕತೆಯ ನೆನಪು ತರುವ ಅಂಗಕೋರ್‌ವಾಟ್ ೧೨ನೇ ಶತಮಾನದ ಸಾಮ್ರಾಟ ೨ನೇ ಸೂರ್ಯವರ್ಮನ ಕಾಲದ ಜಗತ್ತಿನ ಅತ್ಯಂತ ಬೃಹದಾಕಾರದ್ದೆನ್ನಿಸುವ ಧಾರ್ಮಿಕ ಕಟ್ಟಡವನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಚಿಸಿದ ರೇಖಾಚಿತ್ರಗಳು, ರೇಖಾಚಿತ್ರಗಳಲ್ಲಿ ರಾಜನ ಅಧಿಪತ್ಯದ ಕೆಲವು ಪ್ರಮುಖ ಘಟನೆಗಳಲ್ಲದೆ ಪೌರಾಣಿಕ ವಸ್ತು ಪ್ರಧಾನವೆನಿಸುತ ವಿಷ್ಣು, ಕೃಷ್ಣರ ಕತೆಗಳ ಚಿತ್ರಗಳು, ಕಲಾ ಕೃತಿಗಳ ವಿವಿಧ ಭಂಗಿಗಳಲ್ಲಿ ವ್ಯಕ್ತವಾಗುವ ಸೊಗಸುಗಾರಿಕೆ, ಭಾವ ಪ್ರದರ್ಶನಗಳು ಇಂದಿನ ಕಾಂಬೋಡಿಯಾದ ನೃತ್ಯ ಶೈಲಿಗಳಲ್ಲಿ ಕಾಣಬಹುದು.

ಹೆಬ್ಬಾರರು ತಮ್ಮ ರೇಖಾ ಚಿತ್ರಗಳಲ್ಲಿ ಇತಿಹಾಸದ ಅವಶೇಷಗಳನ್ನು ಕಾಲ ದೇಶಗಳನ್ನು ಮೀರಿ ನಿಲ್ಲುವಂಥ ಶಿಲ್ಪ ಸೌಂದರ್ಯವನ್ನು ಅಂಗ್ಕೊರ್ ವಾಟನ್ನು ನೋಡಿದ ನೃತ್ಯ ರೂಪಕದಲ್ಲಿ ರಾಜಕುಮಾರ, ರಾಜಕುಮಾರಿಯರು ಹೂದೋಟದಲ್ಲಿ ಬೆರೆಯುವ ನೃತ್ಯದಲ್ಲಿ ರಮ್ಯ ಅನುರಾಗ ಆನಂದಗಳನ್ನು ಪ್ರಕಟಿಸುವ ಪ್ರಣಯದ ಹಾದಿಯನ್ನು ಹೆಬ್ಬಾರರು ರೇಖೆಗಳಲ್ಲಿ ಪ್ರಕಟವಾಗಿರುವ ಭಾವ ಸಂಚಾರ ನಮಗೆ ಕಾಂಬೊಡಿಯಾದ ಮತ್ತು ನಮ್ಮ ನೃತ್ಯಶೈಲಿಗಳು ಬೆರೆತುಕೊಂಡಿವೆಯೇ ಎಂಬ ಲಯಗಳನ್ನು ರೇಖೆಗಳ ಮೂಲಕ ವ್ಯಕ್ತವಾಗುತ್ತದೆ. ಹಾಗೆಂದೇ ಹೆಬ್ಬಾರರ ಹಾಡುವ ರೇಖೆಗಳು ನರ್ತಿಸುವ ರೇಖೆಗಳಾಗಿವೆ.

ಮರಣೋತ್ತರ ರೇಖೆಗಳು

ನದಿಗಳು, ಸಾಗರವನ್ನು ಸೇರುವ ಹಾಗೇ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿಯು ಅಂತ್ಯವನ್ನು ಕಾಣಬೇಕಾಗುತ್ತದೆ. ಅಂತೆಯೇ ಮಾನವನ ಜೀವನವು ಕೂಡಾ ಒಂದು ದಿನ ಅಂತ್ಯವನ್ನು ಕಾಣಬೇಕಾಗುತ್ತದೆ. ಆ ದಿನವೇ ಜೀವನದ ಕೊನೆಯ ದಿನ. ಬದುಕು ಒಂದು ಪಯಣವೆನ್ನುವ ಸಾಂಕೇತಿಕ ಅರ್ಥಕೊಡುವ ಸಾವು ಸಾವಿನಾಚೆಗೆ ಮುಂದುವರೆಯುವುದೆಂದು ತಿಳಿಯಲಾಗದ ಪಯಣದವರೆಗೆ ಕುತೂಹಲ ಕಲ್ಪನೆಗೆ ನಂಬಿಕೆಗಳು ಬೆಳೆದಿವೆ. ಹಿಂದೂ ಸಂಸ್ಕೃತಿಯಿಂದಲೇ ಪ್ರಭಾವಿತನಾದ ದೂರ ಭಾಲಿ ದ್ವೀಪದ ಮರಣೋತ್ತರ ತರ್ಪಣ, ಪಿಂಡ ಪ್ರಧಾನ ವಿಧಿಗಳ ಚಿತ್ರಗಳು, ಹೆಬ್ಬಾರರು ಇಂಡೋನೇಷ್ಯಾ ಪ್ರವಾಸ ಕಾಲದಲ್ಲಿ ಸಾಮೂಹಿಕ ದಹನ ಕ್ರಿಯೆಗೆ ಸಂಬಂಧಿಸಿರುತ್ತದೆ.

ಸಾಮೂಹಿಕ ದಹನ ಕ್ರಿಯೆಗೆ ಅಸಮಾನ್ಯರೆನಿಸುವ ಪ್ರತಿಷ್ಠಿತರು ಮುಖ್ಯವಾಗಿ ಸಾಮಾಜಿಕ ಪೌರೋಹಿತ್ಯವಹಿಸುವವರು ಸಾಯಬೇಕು. ಅಂತವರ ಆತ್ಮಗಳ ಮರಣೋತ್ತರ ಪ್ರಯಾಣವನ್ನು ಸಂಕೇತಿಸುವ ಮೆರವಣಿಗೆಗಾಗಿ ಸಿದ್ದಪಡಿಸುವ ಬಟ್ಟೆಯ ರಥವನ್ನು ಅವರ ಶವ ಸಂಸ್ಕಾರದ ಅವಶೇಷಗಳಿಗೆ ದಾರಿ ತೋರಿಸುವ ಸಂಪ್ರದಾಯ. ಬಟ್ಟೆಯಲ್ಲಿ ರಚಿಸುವ ಎರಡು ಎತ್ತುಗಳಿಗೆ ಆತ್ಮಗಳನ್ನು ಹೊತ್ತ ಈ ಅವಶೇಷಗಳನ್ನು ಸಾಗಿಸುವ ಹೊಣೆ ಅವುಗಳಲ್ಲಿ ಅಡಗಿರುವ ಆತ್ಮಗಳು ಮರಳಿ ತಮ್ಮ ದೇಹಗಳನ್ನು ಸೇರ ಬಯಸುವಂತೆ ರಥದ ಎತ್ತುಗಳನ್ನು ತಿರುಗಿಸಿ ತಿರುಗಿ ದಾರಿ ತಪ್ಪಿಸುವಂತೆ ಕೊಂಡೊಯ್ಯುವ ಮೆರವಣಿಗೆಯಲ್ಲಿ ಸಾಮಾನ್ಯರೆನಿಸುವ ನಾಗರೀಕರೂ ತಮ್ಮ ತಮ್ಮ ಮನೆಗಳಲ್ಲಿ ಹುದುಗಿಟ್ಟ, ಗತಿಸಿದ ಹಿರಿ ಕಿರಿಯರ ಸಾವಿನ ಅವಶೇಷಗಳನ್ನು ಕೊಂಡೊಯ್ದು ಸಾಮೂಹಿಕ ದಹನ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾನೆ.

ಮರಣೋತ್ತರ ಪಯಣದ ಆತ್ಮಗಳಿಗೆ ಆಹಾರ ಸಿಗುತ್ತಿರಲಿ ಎಂದು ಕೋಲಿಗೆ ಕಟ್ಟಿದ ಬಾತುಕೋಳಿಗಳನ್ನು ಮೆರವಣಿಗೆಯಲ್ಲಿ ಒಯ್ಯುತ್ತಾನೆ. ಸಾಮೂಹಿಕ ದಹನ ಕ್ರಿಯೆಯ ಸ್ಥಳದಲ್ಲಿ ಒಂದು ಉತ್ಸವದ ಸಂಭ್ರಮವೆನ್ನುವಂತೆ ನೆರೆಯುತ್ತಾರೆ. ಭಾರತೀಯ ಸಂಪ್ರದಾಯದ ತರ್ಪಣ ಪಿಂಡ ಪ್ರಧಾನ ಚಿತ್ರಗಳಲ್ಲಿ ತೀರಾ ಹತ್ತಿರದ ಸಾವಿನ ಕಲ್ಪನೆ ಬರುವಂತೆ ಭಾವ ಪ್ರಕಟವಾಗುವುದಾದರೆ ಇಂಡೋನೇಷ್ಯಾದ ಸಾಮೂಹಿಕ ದಹನ ಕ್ರಿಯೆಯಲ್ಲಿ ಸಾವಿಗೂ ದಹನ ಕ್ರಿಯೆಗೂ ಇದ್ದಿರಬಹುದಾದ ದೂರವನ್ನು ಗಮನಿಸುವುದು ಸಾಧ್ಯವಾಗುತ್ತದೆ. ಸಂಸ್ಕಾರದ ಹಿಂದನ ಭಾವ ಒಂದೇ ರೀತಿಯದಾದರೂ ಕ್ರಿಯೆ ಒಂದು ರೂಢಿಯಾಗಿ ಕಲೆಗೆ ಬದುಕಿಗೆ ಹೊಂದಿಕೊಳ್ಳುವ ಕಾಲದ ಚಲನೆಯನ್ನು ಹೆಬ್ಬಾರರ ರೇಖೆಗಳಲ್ಲಿ ಗುರುತಿಸಿಕೊಳ್ಳಬಹುದಾಗಿದೆ. ಭಾರತೀಯ ಸಂಪ್ರದಾಯದಲ್ಲಿ ಮರಣೋತ್ತರ ಚಿತ್ರಗಳಲ್ಲಿ ತಲೆಗೂದಲು, ಬಟ್ಟೆಗಳ ಮೂಲಕ ನೀರಿನ ತರ್ಪಣ, ಗತಿಸಿದ ಆತ್ಮ ಪಿಂಡದ ಅನ್ನಕ್ಕಾಗಿ ಕಾಯುತ್ತಿರುವಂತಹ ಕಾತರ

ಮರಣದ ಶಾಪವನ್ನು ಕಾಲ ಇನ್ನೂ ರೂಢಿಗೆ ಹೊಂದಿಸಬೇಕಾಗಿದೆಯೆನ್ನುವ ಭಾವವನ್ನು ಸ್ಫುಟವಾಗಿ ಬಿಂಬಿಸುವಂತಿದೆ. ಹೆಬ್ಬಾರರ ಈ ಶೋಕಯುಕ್ತ ರೇಖೆಗಳನ್ನು ಅಲ್ಲಿನ ವಾಸ್ತವ ದುಃಖದಿಂದ ಕೂಡಿರುವ ಸಂಧರ್ಭಗಳು ಮನಮುಟ್ಟುತ್ತವೆ.

ಇಬ್ಬರು ರೈತರು


ಈ ರೇಖಾ ಚಿತ್ರವನ್ನು ನೋಡಿದಾಗ ಇಬ್ಬರು ರೈತರು ಯಾವುದೋ ಮಾತಿನ ಸಂದರ್ಭವನ್ನು ಸೂಚಿಸುತ್ತದೆ. ಒಬ್ಬರು ಬಲಗೈಯಲ್ಲಿ ಕೋಲನ್ನು ಹಿಡಿದು ತನ್ನ ದೇಹದ ಭಾರವನ್ನು ಅದರ ಮೇಲೆ ಬಿಟ್ಟಂತೆ ಭಾಸವಾಗಿದ್ದು, ಇನ್ನೊಬ್ಬ ಮಿತ್ರನು ಅವನ ಹೆಗಲ ಮೇಲೆ ತನ್ನ ಬಲಗೈಯನ್ನು ಹಿಡಿದಿರುವುದು ತನ್ನ ಸೊಂಟದ ಮೇಲೆ ಎಡಗೈಯನ್ನು ಇಟ್ಟುಕೊಂಡು ಮಾತಿನ ಸಮಾಲೋಚನೆಯಲ್ಲಿ ಮಗ್ನರಾಗಿದ್ದಾರೆ. ಹೆಬ್ಬಾರರ ಕೆಲವೇ ಕೆಲವು ರೇಖೆಗಳಲ್ಲಿ ಅಂಗರಚನೆ ಶಾಸ್ತ್ರದ ಲಯಬದ್ಧವಾಗಿ ಸಾಗುವ ಮುಖಾಂತರ ಆಕೃತಿಯ ರಚನೆ, ಇಬ್ಬರದೂ ವ್ಯಕ್ತಿಗಳ ನಡುವಿನ ಸಂಬಂಧವನ್ನು ಅಚ್ಚುಕಟ್ಟಾಗಿ ರೇಖೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಪ್ರಣಯದ ಜೋಡಿ

ಗಂಡು ಹೆಣ್ಣು ಆಕೃತಿಗಳು ಪ್ರಣಯ ಪ್ರಸಂಗದ ರೇಖಾ ಚಿತ್ರವಾಗಿದೆ. ಈ ತನ್ಮಯತೆಯಿಂದ ತುಂಬಿರುವ ಮುಖಾಂತರ ಲೋಕವನ್ನೇ ಮರೆತಿರುವಂತಿದೆ. ಎರಡು ಆಕೃತಿಗಳು ನಗ್ನಾವಸ್ಥೆಯಲ್ಲಿವೆ. ಹೆಣ್ಣಿನ ಆಕೃತಿಯು ತನ್ನ ಎರಡು ಕೈಗಳಿಂದ ಕತ್ತಿನ ಭಾಗವನ್ನು ಹಿಡಿದಿದ್ದಾಳೆ. ಹೆಣ್ಣಿನ ಕೋಮಲವಾದ ದೇಹದ ಬಳುಕುವ ಏಕ ರೇಖೆಯು ದೇಹದ ಸೌಂದರ್ಯವನ್ನು ಬಿಂಬಿಸುತ್ತದೆ. ಅಲ್ಲದೆ ಬಲಿಷ್ಟವಾದ ತೊಡೆಗಳನ್ನು ಹೊಂದಿರುವ ಗಂಡಿನ ಆಕೃತಿಯು ಎಡಗಾಲನ್ನು ಒಂದು ಕಲ್ಲಿನ ಮೇಲೆ ಇಟ್ಟಿರುವುದನ್ನು ಕಾಣಬಹುದು. ಹೆಬ್ಬಾರರು ಕೆಲವೇ ರೇಖೆಗಳಲ್ಲಿ ಪ್ರಣಯ ಪ್ರಸಂಗವನ್ನು ಚಿತ್ರಿಸಿದ್ದಾರೆ.

ಡೊಳ್ಳುಬಾರಿಸುವವನು

ಶಕ್ತಿಯುತವಾದ ತೋಳಬಲಗಳಿಂದ ಸಂಪೂರ್ಣ ತನ್ಮಯನಾಗಿ ಡೊಳ್ಳು ಹೊಡೆಯುತ್ತಿರುವವನು, ಡೊಳ್ಳಿನ ನಾದವನ್ನು ಸವಿಯುತ್ತ ಎರಡು ಕೈಗಳಿಂದ ಬಾರಿಸುತ್ತಿದ್ದಾನೆ. ಯಾವುದೇ ರೀತಿಯ ಸಂಗೀತ, ನೃತ್ಯ, ಡೊಳ್ಳುಗಾರಿಕೆ ಈ ರೀತಿಯ ಚಲನ ವಲನದಲ್ಲಿಯೂ ಆಕೃತಿಗಳನ್ನು ನೋಡಲು ಸುಲಭವೆನಿಸುತ್ತವೆ. ಆದರೆ ಆ ತನ್ಮಯತೆಯಲ್ಲಿಯೇ ಇರುವವರ ಹಾವ-ಭಾವಗಳು ಅತಿ ಸೂಕ್ಷ್ಮವಾಗಿ ಗಮನಿಸಿ ಅವರ ತನ್ಮಯತೆಯ ಅನಂದವನ್ನು ಮೊದಲು ಕಲಾವಿದನು ಅನುಭವಿಸಿ ಆತ್ಮಪೂರ್ವಕವಾಗಿ ತನ್ನ ಮನದಲ್ಲಿ



ಮೂಡಿರುವಂತಹ ಚಿತ್ರಪಲ್ಲಟಗಳು, ರೇಖೆಗಳ, ವರ್ಣ, ಶಿಲ್ಪದ ಮೂಲಕ ಹೊರಹಾಕುವುದು ತುಂಬ ಕಷ್ಟದ ಕೆಲಸವೇ ಸರಿ. ಆದರೆ ಹೆಬ್ಬಾರರು ಈ ರೀತಿಯ ತನ್ಮಯತೆಯ ಸ್ಥಿತಿಯಲ್ಲಿಯೇ ರೇಖೆಗಳನ್ನು ಮೂಡಿಸುವ ಶಕ್ತಿಯನ್ನು ಪಡೆದುಕೊಂಡಿದ್ದಾರೆ.

ಸೈಕಲ್ ಸವಾರಿ


ಗಂಡನು ತನ್ನ ಹೆಂಡತಿಯನ್ನು ಸೈಕಲ್ ಹಿಂಬದಿಯಲ್ಲಿ ಕುಳ್ಳಿರಿಸಿಕೊಂಡು ಬಲು ಆಯಾಸದಿಂದ ಚಲಿಸುತ್ತಿರುವ ರೇಖಾಚಿತ್ರವು ಸಂಸಾರದ ಬಂಡಿಯು ತುಂಬಾ ಭಾರವೆಂಬಂತೆ ಭಾಸವಾಗುತ್ತದೆ. ಹೆಬ್ಬಾರರ ಸಾಮಾಜಿಕ ಕಳಕಳಿಯ ಮತ್ತು ಜನ ಜೀವನ ಸಾಮಾನ್ಯ ಜನರ ದಿನನಿತ್ಯದ ಅನೇಕ ಸಂಗತಿಗಳೇ ಅವರು ಪಡುವ ಕಷ್ಟಗಳು ಹೆಬ್ಬಾರರ ರೇಖಾಚಿತ್ರವನ್ನು ನೋಡುಗನ ಮನಮುಟ್ಟುವಂತೆ ಮೂಡಿ ಬಂದಿದೆ. ಈ ರೀತಿ ಅನೇಕ ಸಂದರ್ಭಗಳನ್ನು ಹೆಬ್ಬಾರರು ತಮ್ಮ ಮುಂಬೈ ಮಹಾನಗರ ನಿತ್ಯ ಜೀವನವನ್ನು ಸಂಪೂರ್ಣವಾಗಿ ಅರಿತವರು. ಅದನ್ನು ಅನುಭವಿಸಿ, ತಮ್ಮ ಅನುಭವದ ಮೂಲೆಯಿಂದ ಹೊರಹೊಮ್ಮಿದ ಕಾಂತಿಯ ರೇಖೆಗಳೇ ಈ ರೀತಿಯ ಗಾಢವಾದ ಪರಿಣಾಮವನ್ನು ಮೂಡಿಸಲು ಸಾಧ್ಯವಾಗಿದೆ.

ಕಟ್ಟಂಗೇರಿಯ ಮನೆ

ಉಡುಪಿಯಿಂದ ಕಟಪಾಡಿಗೆ ಕರಾವಳಿ ಮಾರ್ಗದಲ್ಲಿ ೩-೪ ಮೈಲು ನಡೆದರೆ ಕಟ್ಟಂಗೇರಿ ಸಿಗುತ್ತದೆ. ಇಡೀ ಪರಿಸರ ಗುಡ್ಡ-ಬೆಟ್ಟ, ಹಳ್ಳ-ಕೊಳ್ಳ, ತೆಂಗು-ಕಂಗು, ಗದ್ದೆಯ ಪೈರಿನ ಪಚ್ಚೆಪಸುರುಗಳಿಂದ ಕಣ್ಣಿಗೆ ತಂಪೆನಿಸುವ ಸುಂದರವಾದ ಸ್ಥಳ ಇದಾಗಿದ್ದು. ಈ ಸುಂದರವಾದ ನಿಸರ್ಗ ಚಿತ್ರವನ್ನು ತಾವು ಹುಟ್ಟಿದ ಮನೆಯ ಪರಿಸರವನ್ನು ತಮ್ಮ ಹಂಚಿನ ಮನೆ, ಜಗಲಿಕಟ್ಟೆ, ಮನೆಯ ಸುತ್ತಲು ನೆತ್ತಿರುವ ಗಿಡಮರಗಳು, ಪಕ್ಕದಲ್ಲಿಯೇ ಧನಗಳು ಕಟ್ಟುವ ಕೊಟ್ಟಿಗೆ ತಮ್ಮ ಬಾಲ್ಯಜೀವನದ ಸುಂದರವಾದ ನೆನಪನ್ನು ಈ ಕಲಾಕೃತಿಯು ಕಟ್ಟಿಕೊಡುತ್ತದೆ.

ಗಾಂಧೀಜಿ

ಈ ರೇಖಾಚಿತ್ರದಲ್ಲಿ ಬಾಪೂಜಿಯವರು ಯಾವುದೋ ದೀರ್ಘವಾದ ಆಲೋಚನೆಯಲ್ಲಿ ಕುಳಿತಿರುವಂತೆ ಭಾಸವಾಗುತ್ತದೆ. ಹೆಬ್ಬಾರರು ಬಾಪೂಜಿಯವರನ್ನು ತುಂಬಾ ಹತ್ತಿರದಿಂದ ಕಂಡವರು. ಅವರ ಪ್ರತಿಯೊಂದು ಹಾವಭಾವಗಳ ವಾಸ್ತವದ ಮನಸ್ಥಿತಿಯನ್ನು ತಮ್ಮ ರೇಖೆಗಳ ಮುಖಾಂತರ ಮೂಡಿಸುವಲ್ಲಿ ಹೆಬ್ಬಾರರು ನಿಸ್ಸಿಮರು. ಹೆಬ್ಬಾರರು ನೇರವಾಗಿ ಯಾವುದೇ ವ್ಯಕ್ತಿಯ ಸ್ಥಳದ ಪರಿಸ್ಥಿತಿಯನ್ನು ಅವರ ಅಂತರಂಗಕ್ಕೆ



ನುಂಗುವ ಸಾಮರ್ಥ್ಯವನ್ನು ಹೊಂದಿದವರು. ಹೀಗಾಗಿ ಅವರ ರೇಖೆಗಳಲ್ಲಿ ಯಾವುದೇ ವಿಷಯವನ್ನು ಮನಮುಟ್ಟುವಂತೆ ತಮ್ಮ ರೇಖೆಗಳಲ್ಲಿ ಚಿತ್ರಿಸುತ್ತಿದ್ದರಲ್ಲಿ ಇದು ಒಂದು.

ನೆಹರು ಮತ್ತು ಗಾಂಧೀಜಿ

ಹೆಬ್ಬಾರರು ಚಿತ್ರರಚಿಸುವಾಗ ಅದರಲ್ಲೂ ಪೂರ್ಣವ್ಯಕ್ತಿ ಚಿತ್ರರಚನೆಯಲ್ಲಿ ಅಂಗ ರಚನಾ ಶಾಸ್ತ್ರದ ಮತ್ತು ವ್ಯಕ್ತಿಯ ಭಾವರಚನೆಯನ್ನು ಗ್ರಹಿಸುವುದು ತುಂಬ ಕಷ್ಟದ ಕೆಲಸವಾಗಿದೆ. ಅದರಲ್ಲೂ ಹೆಬ್ಬಾರರು ತಮ್ಮ ರೇಖೆಗಳ ಮುಖಾಂತರ ನೆಹರು ಗಾಂಧೀಜಿಯವರ ಯಾವುದೋ ವಿಚಾರದ ಚರ್ಚೆಯನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಗಾಂದೀಜೀಯವರ ಮಾತನ್ನು ಆಲಿಸುತ್ತಿರುವ ನೆಹರುರವರ ಏಕಾಗ್ರತೆ ಈ ಒಂದು ಸಾಂದರ್ಭಿಕ ಚಿತ್ರದಲ್ಲಿ ಮೂಡಿಬಂದಿವೆ.

ದ. ರಾ. ಬೇಂದ್ರೆ


ವರಕವಿ ದ. ರಾ. ಬೇಂದ್ರೆಯವರ ಪಾರ್ಶ್ವನೋಟದ ಈ ರೇಖಾಚಿತ್ರವನ್ನು ಕಾಣಬಹುದು. ಹೆಬ್ಬಾರರ ಮತ್ತು ಬೇಂದ್ರೆಯವರ ಒಡನಾಟವನ್ನು ರೇಖಾಚಿತ್ರದ ಮೂಲಕ ಮೂಡಿಬಂದಿದೆ. ಈ ಚಿತ್ರದಲ್ಲಿ ವಯಸ್ಸಿನಲ್ಲಾಗಲಿ, ಜ್ಞಾನದಲ್ಲಾಗಲಿ ಬಾಡಿದಮುಖದಲ್ಲಿ ಮೂಡಿರುವ ಹಿರಿಯ ವಯಸ್ಸಿನ ಸುಕ್ಕು, ಗದ್ದ ಮುಂದೆ ಚಾಚಿ ಒಳಹೋಗಿರುವ ತುಟಿಗಳು ಕಣ್ಣಲ್ಲಿ ಯಾವುದೋ ರೀತಿಯ ತೇಜಸ್ಸು, ತಲೆಯ ಕಣವಲುಗಳು ಉಮರಿ ವಯಸ್ಸಿನ ಘನತೆಗೆ ತಕ್ಕಂತೆ ಉಳಿದಿರುವ ಕೂದಲುಗಳು, ಕೊರಳು ಭಾಗದಲ್ಲಿ ಸ್ಥಿರತೆಯನ್ನು ಕಳೆದುಕೊಂಡಿರುವ ತೊಗಲು ಹೀಗೆ ಹಲವಾರು ರೀತಿಯಲ್ಲಿ ಕಾಣುವ ಬೇಂದ್ರೆಯವರ ಮುಖದ ಚರ್ಯೆ ನೋಡುಗನಿಗೆ ಸಂತೋಷವನ್ನುಂಟುಮಾಡುತ್ತದೆ.

ಪ್ರಾಣಿ ಪಕ್ಷಿಗಳ ಅಧ್ಯಯನ

ಹೆಬ್ಬಾರರು ಒಬ್ಬ ಸಮರ್ಥ ಕಲಾವಿದ ಎನ್ನಿಸಿಕೊಳ್ಳಲು ಮಾನವನ ಅಂಗರಚನಾ ಶಾಸ್ತ್ರದ ಜೊತೆಗೆ, ಯಥಾದರ್ಶನ, ನಿಸರ್ಗಚಿತ್ರಣ ಮತ್ತು ನಿಸರ್ಗದ ಇತರ ಜೀವಿಗಳ ಅಧ್ಯಯನವು ತುಂಬ ಅಗತ್ಯವಾಗಿದ್ದು, ಅದರಂತೆಯೇ ಪ್ರಾಣಿ ಪಕ್ಷಿಗಳನ್ನು ತಮ್ಮದೇ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ನವಿಲು

ಈ ನವಿಲಿನ ಚಿತ್ರಣದಲ್ಲಿ ನವಿಲು ವಿನೂತನವಾಗಿ ಕುಳಿತಿರುವ, ನಿಂತಿರುವಂತೆ ಹಲವು ರೀತಿಯ ಭಂಗಿಗಳ ಅಧ್ಯಯನವು, ನವಿಲಿನ ಸೂಕ್ಷ್ಮವಾದ ಹಾವ ಭಾವಗಳ ಅವರ ಗುಣಗಳ ಚಿತ್ರಣವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ಚಿತ್ರಗಳನ್ನು ರಚಿಸಿದ್ದಾರೆ.



ಕೋಳಿ


ಸಾಮಾನ್ಯವಾಗಿ ಕಾಣುವ ಕೋಳಿ ಹುಂಜದ ಅಧ್ಯಯನವು ಅದನ್ನು ದಷ್ಟ ಪುಷ್ಟವಾದ ರೇಖೆಗಳಿಂದ ಚಿತ್ರಿಸಿದ್ದು, ನಿಂತಿರುವ ವಿವಿಧ ಭಂಗಿಗಳನ್ನು ರೇಖಾಚಿತ್ರದಲ್ಲಿ ಕಾಣಬಹುದು.

ಮಂಗಗಳು

ಮನೆಯ ಎತ್ತರದ ಚಾವಣಿಯ ಮೇಲೆ ಕುಳಿತಿರುವ, ಮಂಗಗಳು, ಒಂದಕ್ಕೊಂದು ತಬ್ಬಿಕೊಂಡು ವಿಶ್ರಮಿಸುತ್ತಿರುವಂತೆ ಮಂಗಗಳ ರೇಖಾಚಿತ್ರವೆಲ್ಲಾ, ಮಂಗಗಳ ಮುಖ, ಸಂಪೂರ್ಣ ಅಂಗ ರಚನಾ ಶಾಸ್ತ್ರವನ್ನು ಈ ಅಧ್ಯಾಯವು ಹೆಬ್ಬಾರರ ಕೇವಲ ವ್ಯಕ್ತಿ ಅಧ್ಯಯನಕ್ಕೆ ಸೀಮಿತವಾಗದೇ ಅವರ ವಿವಿಧ ರೀತಿಯ ಅಧ್ಯಯನ ಶೈಲಿಯು ಅವರ ರೇಖೆಗಳಲ್ಲಿ ಅಂದರೆ ನಿಸರ್ಗದ ಪ್ರಾಣಿ, ಪಕ್ಷಿಗಳು ವಿಶೇಷವಾಗಿ ಮೂಡಿಬಂದಿದೆ. ಭಾರತದಲ್ಲಿ ಕಲಾವಿದರ ಸಂಖ್ಯೆ ತುಂಬಾ ಆದರೆ ರೇಖಾಚಿತ್ರಗಳ ಕಲಾವಿದರ ಸಂಖ್ಯೆ ತುಂಬಾ ವಿರಳ ಎಂದೇಳಬಹುದು. ಹಾಗೆಯೇ ಪ್ರಮುಖ ಕಲಾವಿದರಲ್ಲಿ ಒಬ್ಬರಾದ ಕೆ.ಕೆ. ಹೆಬ್ಬಾರರು ತಮ್ಮದೇ ಶೈಲಿಯ ರೇಖಾಚಿತ್ರಗಳನ್ನು ಹೊರತಂದಿರುವುದು ನಿಜಕ್ಕೂ ಸಂತೋಷದ ವಿಷಯ ಅದರಂತೆ ಈ ಕಲಾವಿದ ರಚಿಸಿದ ರೇಖಾಚಿತ್ರಗಳನ್ನು ತೋರಿಸುವುದರ ಜೊತೆಗೆ ಆ ರೇಖೆಗಳ ಚಲನ-ವಲನಗಳನ್ನು ವಿವರಿಸುವ ಉದ್ದೇಶವು ಇಲ್ಲಡಗಿದ್ದು, ಅದರಂತೆ ಪ್ರಮುಖವಾಗಿ ಈ ಅಧ್ಯಯನವು ಉತ್ತಮವಾದ ರೇಖೆಗಳ ಅಂಶವನ್ನೊಳಗೊಂಡಿದೆ.


ಹೆಬ್ಬಾರರ ರೇಖಾಚಿತ್ರಗಳ ಅಧ್ಯಯನದಿಂದ ಕಂಡುಬಂದ ಅಂಶಗಳು

- ಹೆಬ್ಬಾರರು ಇಂಕ್ ಮತ್ತು ಚಾರ್ಕೋಲ್ ಮಾಧ್ಯಮಗಳ ಬಳಕೆಯನ್ನು ತಮ್ಮ ಚಿತ್ರ ರಚನೆಯಲ್ಲಿ ಕಾಣಬಹುದಾಗಿದೆ.
- ಹೆಬ್ಬಾರರು ಕಪ್ಪು ಇಂಕ್ ಮಾಧ್ಯಮವನ್ನೇ ಹೆಚ್ಚಾಗಿ ತಮ್ಮ ದೈನಂದಿನ ಸ್ಕೆಚ್‌ಗಳ ರಚನೆಯಲ್ಲಿ ಬಳಸಿಕೊಂಡಿದ್ದಾರೆ.
- ಹೆಬ್ಬಾರರಿಗೆ ರೇಖೆಗಳ ಬಗ್ಗೆ ಇದ್ದ ಅಪಾರವಾದಂತಹ ಆಸಕ್ತಿಯನ್ನು, ಕೆಲವೇ ಕೆಲವು ರೇಖೆಗಳಿಂದ ರಚನೆಯಾದಂತಹ ರೇಖಾಕೃತಿಗಳಲ್ಲಿ ಕಾಣಬಹುದಾಗಿದೆ.
- ಹೆಬ್ಬಾರರ ರೇಖೆಗಳು ಅವರ ಮನೋಭಾವ, ಬುದ್ಧಿಶಕ್ತಿ ಮತ್ತು ಅಂತರ ದೃಷ್ಟಿಯಿಂದ ಹೊರಬಂದಂತಹ ಈ ಕಲಾಕೃತಿಗಳಾಗಿವೆ.
- ಅವರ ರೇಖೆಗಳಲ್ಲಿ ಹಳ್ಳಿಯ ನಿಸರ್ಗ ಜೀವನ, ಯಕ್ಷಗಾನ, ಸಂಪ್ರದಾಯಗಳ ಆಚರಣೆಯನ್ನು ಮೂಡಿರುವ ರೇಖೆಗಳಲ್ಲಿ ಪ್ರಶಾಂತತೆ ಹಾಗೂ ನಿರ್ಲಿಪ್ತತೆ ಒಂದು ಕಡೆಯಾದರೆ, ನೋವು,



ಬಡತನ, ಹಸಿವು, ನಿರ್ಗತಿಕತೆಯನ್ನು ಅವರ ಆಂತರಿಕ ಚಿಂತನೆಯಿಂದ ಎಳೆದ ರೇಖೆಯೇ ಆ ವಸ್ತುವಿನ ರೇಖಾಕೃತಿಗಳಾಗಿವೆ.

- ಈ ರೀತಿಯ ಭಾವನೆಗಳ ಒತ್ತಡವನ್ನು ಕೈಚಳಕದ ಅನುಭವದ ರೇಖೆಗಳಿಂದ ಹೊರಹಾಕಿದ್ದಾರೆ.
- ಹೆಬ್ಬಾರರು ರೇಖಾಚಿತ್ರಗಳನ್ನು ವರ್ಣಚಿತ್ರಗಳ ಸ್ಥಾನಕ್ಕೆ ಮುಟ್ಟಿಸಿರುವ ಹಿರಿಮೆಯು ಇವರಿಗೆ ಸಲ್ಲುತ್ತದೆ.
- ಸೌಂದರ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ನಿಸರ್ಗ, ವ್ಯಕ್ತಿ, ಸಮಾಜ ಇವುಗಳ ನಡುವಿನ ಸೂಕ್ಷ್ಮ ಸಂಬಂಧವನ್ನು ಇವರ ರೇಖೆಗಳಲ್ಲಿ ಭಾವಸಂಚಾರದ ಮೂಲಕ ವ್ಯಕ್ತವಾಗಿದೆ.
- ಹೆಬ್ಬಾರರ ವಿಶೇಷತೆಯೆಂದರೆ ಯಾವುದೇ ವಿಷಯವನ್ನಾಗಲಿ, ಅವರು ನೇರವಾಗಿ ಅದರ ಅಂತರಾತ್ಮವನ್ನು ಮುಟ್ಟುವಂತಹ ಗುಣವುಳ್ಳವರಾಗಿದ್ದಾರೆ. ಈ ಕಾರಣದಿಂದಲೇ ಅವರ ರೇಖೆಗಳು ಹಾಡುವ ರೇಖೆಗಳೆಂದು ಪ್ರಸಿದ್ಧಿ ಪಡೆದಿವೆ.
- ಯಾವುದೇ ಕಲಾವಿದನಿಗೂ ರೇಖೆಗಳೇ ಜೀವಾಳ, ಹಾಗೆಯೇ ರೇಖೆಗಳೇ ಅವನು ಎಂತಹ ಸಿದ್ಧಿಯನ್ನು ಪಡೆದಿದ್ದಾನೆ ಎಂಬುದನ್ನು ತಿಳಿಸುತ್ತದೆ. ಹೀಗಾಗಿ ಹೆಬ್ಬಾರರು ತಮ್ಮ ರೇಖೆಗಳಲ್ಲಿಯೇ ನವರಸಗಳನ್ನು ಸಿದ್ಧಿಸಿಕೊಂಡಿದ್ದಾರೆ.
- ಹೆಬ್ಬಾರರ ಭಾವಿಚತ್ರಗಳು, ಪೂರ್ಣಭಾವಚಿತ್ರಗಳಾಗಲಿ, ಮಾನವನ ಅಂಗ ರಚನಾ ಶಾಸ್ತ್ರದ ಮತ್ತು ಪ್ರಾಣಿ ಪಕ್ಷಿಗಳ ಚಲನವಲನ ಅಧ್ಯಯನಗಳಿಂದಲೂ ತಮ್ಮ ರೇಖೆಗಳನ್ನು ಉನ್ನತ ಮಟ್ಟಕ್ಕೆ ತಲುಪಿರುವ ರೇಖಾಕೃತಿಗಳನ್ನು ಕಾಣಬಹುದಾಗಿದೆ.
- ಕರಾವಳಿಯ ಪ್ರಸಿದ್ಧ ರಂಗಕಲೆ ಯಕ್ಷಗಾನವನ್ನು ತಮ್ಮ ರೇಖೆಗಳ ಮೂಲಕ ಅವರ ವೇಷಭೂಷಣಗಳಿಂದ ಮಾತ್ರವಲ್ಲದೇ ಪಾತ್ರಗಳ ಆಂಗಿಕ ಭಂಗಿಗಳಿಂದಲೇ ಪಾತ್ರವನ್ನು ಗುರುತಿಸಬಹುದಾದ ರೇಖಾ ಕೃತಿಗಳ ರಚನೆಯನ್ನು ಮಾಡಿದ್ದಾರೆ.
- ಹೆಬ್ಬಾರರ ರೇಖೆಗಳು ಕಥಾ ನಿರೂಪಣೆಯ ಜೊತೆಗೆ, ಕಥೆ ಕಾವ್ಯಗಳಲ್ಲಿ ಮೂಡುವ ಪ್ರತಿಮೆಗಳಂತೆ ತಮ್ಮ ರೇಖಾವಿನ್ಯಾಸವನ್ನು ನಿರೂಪಿಸಿದ್ದಾರೆ.
- ಹಂಪಿಯಿಂದ ಹಿಡಿದು ಆಂಗ್‌ಕೋರಾವಾಟ್‌ನ ವಿಶ್ವಪ್ರಸಿದ್ಧ ದೇವಾಲಯದ ಶಿಲ್ಪಕಲಾಕೃತಿಗಳಲ್ಲಿರುವ ಕಲ್ಲಿನ ಕಠಿಣತೆಯನ್ನು ಮೆದುಗೊಳಿಸಿದ ರೀತಿಯಲ್ಲಿ ಶಿಲ್ಪಕಲಾಕೃತಿಗಳನ್ನು ಸುಂದರವಾದ ರೇಖಾಚಿತ್ರಗಳಲ್ಲಿ ಹಿಡಿದಿಟ್ಟಿದ್ದಾರೆ.
- ಹೆಬ್ಬಾರರು ವಿದೇಶ ಪ್ರವಾಸಗಳಲ್ಲಿ ಅವರು ಕಂಡಂತಹ ಅಲ್ಲಿನ ವಾಸ್ತು ಶೈಲಿಯಾಗಲಿ,



ಕಟ್ಟಡಗಳಾಗಲಿ, ನಗರ ಚಿತ್ರಗಳನ್ನು ತಮ್ಮ ರೇಖೆಗಳ ಮೂಲಕ ಚಿತ್ರಿಸಿದ್ದಾರೆ. ಇದರಿಂದಲೇ ಅವರು ಯಾವುದೇ ಒಂದು ಹೊಸ ವಿಷಯ, ಸಂಗತಿ, ಸಂಸ್ಕೃತಿ, ಕಲೆಗಳ ಅಧ್ಯಯನವನ್ನು ಮಾಡಲು ಅವರ ಮನಸ್ಸು ಆತೊರೆಯುವುದನ್ನು ಅವರ ರೇಖಾಚಿತ್ರಗಳಲ್ಲಿ ಕಾಣಬಹುದು.

ಹೆಬ್ಬಾರರು ನಿತ್ಯ ಸತ್ಯ ಸೌಂಧರ್ಯದ ಹುಡುಕಾಟದಲ್ಲಿ ನಿರತರಾಗಿ, ಪ್ರಯೋಗಶೀಲರಾಗಿ, ಚಿಂತನಾಶೀಲರಾಗಿ, ಮಾನವೀಯ ಕಾಳಜಿಗಳಿದ್ದ ಪ್ರತಿಭಾವಂತ ಮಹಾನ್ ಕಲಾವಿದ, ಕಲೆಯ ಮೂಲಕ ಭಾರತೀಯ ಕಲಾವಲಯಕ್ಕೆ ಅಪಾರ ಕೀರ್ತಿಯನ್ನು ತಂದಿದ್ದಾರೆ.

❖❖❖❖



ಕುಳಿತಿರುವ ಮಹಿಳೆ



ಯಕ್ಷಗಾನ



ಗಾಯನದಲ್ಲಿ ಮಗ್ನವಾಗಿರುವ ಮಹಿಳೆ




ನೇಗಿಲ ಹೊತ್ತ ರೈತ



ದಂಪತಿಗಳು




ನವವದು-ವರ



ಕೋಲಾಟ



ಮದ್ದಳೆ





ಅಂಗ್‌ಕೋರ್‌ವಾಟ್ – ನರ್ತಿಸುವ ರೇಖೆಗಳು

















ಮರಣೋತ್ತರ ರೇಖೆಗಳು



ಇಬ್ಬರು ರೈತರು



ತಾಯಿ ಮತ್ತು ಮಗು



ಕುಳಿತಿರುವ ಮಹಿಳೆ




ಪ್ರಣಯ



ಡೊಳ್ಳು ಬಾರಿಸುವವನು




ಸೈಕಲ್ ಸವಾರಿ



ಕಟ್ಟಿಂಗೇರಿ ಮನೆ




ಸೈಕಲ್ ರಿಕ್ಷಾ



ನೆಹರು ಮತ್ತು ಗಾಂಧೀಜಿ



ಗಾಂಧೀಜಿ



ದ. ರಾ. ಬೇಂದ್ರೆ








ಪ್ರಾಣಿ ಪಕ್ಷಿಗಳ ಅಧ್ಯಯನ



ಹೆಬ್ಬಾರರ ಇತರ ಪ್ರಮುಖ ರೇಖಾ ಚಿತ್ರಗಳು






































ಅಧ್ಯಾಯ - ನಾಲ್ಕು

ಕೆ.ಕೆ. ಹೆಬ್ಬಾರರ ವರ್ಣಚಿತ್ರಗಳು






ಅಧ್ಯಾಯ : ನಾಲ್ಕು

ಕೆ. ಕೆ. ಹೆಬ್ಬಾರರ ವರ್ಣಚಿತ್ರಗಳು

ಕಲಾವಿದನು ನಿರ್ಮಿಸಿದ ಕಲಾಕೃತಿಯ ಅವಕಾಶ, ವರ್ಣ, ಎತ್ತರ, ಅಗಲ, ಆಳ, ಬೇರೆ ಬೇರೆಯಾಗಿದ್ದರೂ ಎಲ್ಲಾದರಲ್ಲೂ ರೇಖೆ ಮತ್ತು ವರ್ಣಗಳೇ ಆಟವಾಡುತ್ತವೆ. "ಆದರೂ ಕಲಾಕೃತಿಯೊಂದು ತನ್ನ ಇನ್ನಿತರ ಅಂಶಗಳಿಗಿಂತಲೂ ವರ್ಣ ಸಂಯೋಜನೆಯ ತೀವ್ರತೆಯಿಂದ ನೋಡುಗನ ಪ್ರಜ್ಞೆಯನ್ನು ಕ್ಷಣಾರ್ಧದಲ್ಲಿ ಪ್ರಭಾವಿಸಬಲ್ಲದು. ನಮ್ಮ ಪಂಚೇಂದ್ರಿಯಗಳಲ್ಲಿ ಕಣ್ಣು ಅತ್ಯಂತ ಸಂವೇದನಾಶೀಲತೆಯನ್ನು ಹೊಂದಿದೆ. ಕಲಾವಿದನೊಬ್ಬನು ತನ್ನ ಅಭಿವ್ಯಕ್ತಿಗೆ ಆರಿಸಿಕೊಳ್ಳುವ ಬಣ್ಣಗಳ ಛಾಯೆಗಳು ಅವನು ನೋಡವ ಕಣ್ಣಿನ ಅನುಭವ ಅಭ್ಯಾಸ, ಮನಸ್ಸಿನ ಪಕ್ವತೆ ಭಾವನೆಗಳ ತೀವ್ರತೆಯನ್ನು ಅವಲಂಬಿಸುತ್ತವೆ."[೧]

ಕಲಾವಿದನ ಸಾಮಾಜಿಕ ದೃಷ್ಟಿಕೋನ - ಸಾಮಾಜಿಕ ಕಳಕಳಿ, ಅವನ ಅಂತರ್ಯದ ನೆಲೆಗಳ ಮೂಲ ವಿಷಯಗಳು ವರ್ಣಗಳ ಮೂಲಕ ಹೊರಹಾಕುತ್ತಾನೆ. ತಾನು ಕಾಣುವ ಯಾವುದೇ ರೀತಿಯ ವಿಷಯವನ್ನು ತನ್ನ ಅನುಭವ ಮೂಸೆಯಿಂದ ತನ್ನ ಅಂತರಾತ್ಮದಲ್ಲಿ ಮೂಡುವ ವರ್ಣ ಬಹಳ ಶಕ್ತಿಯುತವಾಗಿರುತ್ತವೆ. ಅಲ್ಲದೇ ಅವು ನೇರವಾಗಿ ನೋಡುಗನ ಮನ ಮುಟ್ಟುತ್ತವೆ. ವರ್ಣಗಳು ತನ್ನದೇ ಆದ ಸಾಂಕೇತಿಕ ಅರ್ಥವನ್ನು ಹೊಂದಿವೆ, ಒಂದೊಂದು ಬಣ್ಣವು, ಒಂದೊಂದು ರೀತಿಯ ಭಾವೋದ್ವೇಗವನ್ನು ಮನಸ್ಸಿನಲ್ಲಿ ಮೂಡಿಸುತ್ತದೆ. ಅಂತೆಯೇ ಚಿತ್ರಗಳಲ್ಲಿ "ಬಣ್ಣ ಅವಕಾಶಗಳನ್ನು ಆ ಸೃಷ್ಟಿಯ ಅತ್ಯುತ್ಕೃಷ್ಟವಾದ ಅಂಶಗಳು, ಬಣ್ಣಗಳ ವಿವಿಧ ಛಾಯೆಯು, ಕಲಾವಿದನ ವಿವಿಧ

೦೧. ಪಿ.ಆರ್. ತಿಪ್ಪೇಸ್ವಾಮಿ (ಸಂ) : ಚಿತ್ರಕಲಾ ಪ್ರಪಂಚ, ಪುಟ – ೫೬೧



ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಲ್ಲವು, ಮೂಲ ವರ್ಣಗಳಲ್ಲಿ ಕೆಂಪು ಆಕ್ರೋಶಕ್ಕೆ, ಹಳದಿ ಸಂತೋಷಕ್ಕೆ, ನೀಲಿ ಹಾತೊರೆಯುವಿಕೆಗೆ" ಹೀಗೆ ಕಲಾವಿದನು ತನ್ನ ಕಲಾಕೃತಿಯನ್ನು ವರ್ಣ ಸಂಯೋಜನೆಯನ್ನು ಆಳ, ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ ತನ್ನ ಭಾವನೆಗಳ ಅಭಿವ್ಯಕ್ತಿಯ ಹಿನ್ನೆಲೆಯನ್ನು ದುಡಿಸಿಕೊಳ್ಳುತ್ತಾನೆ. ಒಂದು ಕಲಾಕೃತಿಯ ರಸಗ್ರಹಣ ಸಹೃದಯನಿಗೆ ತಲುಪಬೇಕಾದರೆ, ಕಲಾಕೃತಿಯಲ್ಲಿ ರೇಖೆ, ವರ್ಣ ಮತ್ತು ಅವಕಾಶದ ಮೇಲೆ ಇರುತ್ತದೆ. ಚಿತ್ರಕಲೆಯಲ್ಲಿ ಆಯ್ಕೆಗೆ ಅವಕಾಶವಿರುವುದಿಲ್ಲ, ಆದರೆ ವರ್ಣಸಂಯೋಜನೆ, ರೇಖೆಗಳ ಲಯಾತ್ಮಕತೆ, ರಂಗಗಳ ಘನತ್ವ, ತೆಳುತನ, ಕುಂಚಗಳ ಹರಿದಾಟ ಮತ್ತು ಒತ್ತು ಇಂಥ ವಿವಿಧ ಕಾರಣಗಳಿಂದ ಒಂದು ಕಲಾಕೃತಿ. ಅತ್ಯಂತ ಪ್ರಾಮುಖ್ಯತೆಯನ್ನು ಪಡೆದು, ಅದರಲ್ಲಿನ ಸಂವಹನ ಶಕ್ತಿ ಪ್ರಭಾವ ಶಾಲಿಯಾಗಿರುತ್ತದೆ. ಇಲ್ಲಿ ಚಿತ್ರಗ್ರಹನ ಪ್ರಕ್ರಿಯೆ ಸರಳವಾಗುತ್ತದೆ.

ಹೆಬ್ಬಾರರು ಬಾಲ್ಯದಲ್ಲಿ ಕಳೆದದ್ದು ದೇವಾಲಯಗಳ ಪರಿಸರದಲ್ಲಿ ಇಲ್ಲಿನ ಬಣ್ಣಗಳು, ಅದರ ಪರಿಮಳ, ಹಾಡು ಸಂಗೀತ ದಿನಚರಿಯ ಅಂಗಗಳು. ಬಣ್ಣದ ಆಟಿಕೆಗಳು ಎಳೆ ವಯಸ್ಸಿನಲ್ಲಿ ಅವರಿಗೆ ಪ್ರಿಯವಾಗಿದ್ದವು. ಎಲ್ಲಾ ಮಕ್ಕಳಿಗೂ ಇರುವಂತೆ, ಆದರೆ ಹೆಬ್ಬಾರರಿಗೆ ಅವು ಸೃಜನ ಶೀಲತೆಗೆ ಸ್ಫೂರ್ತಿಯಾದವು. ಅವುಗಳ ಚಿತ್ರ ಬಿಡಿಸುವುದು, ಹೆಬ್ಬಾರರಿಗೆ ಪ್ರಿಯವಾದ ಆಟವಾಗಿತ್ತು. ಸುತ್ತಮುತ್ತಲು ಕೆಂಪು ಮಣ್ಣು, ಹಸಿರು ಎಲೆಗಳು, ನಸುಬಳಿಯ ಕಲ್ಲುಗಳು, ನೀಳವಾದ ಸಮುದ್ರದ ಜಲರಾಶಿ ಹೆಬ್ಬಾರರ ಎಳೆಯ ಮನಸ್ಸನ್ನು ತುಂಬಿದವು. ರುದ್ರಮನೋಹರವಾದ ಕರಾವಳಿಯ, ಮುಂಗಾರಿನಲ್ಲಿ ಓಡುವ ಮೋಡಗಳು ಲಾಸ್ಯವನ್ನು ಕಾಗದದಲ್ಲೋ ಕ್ಯಾನ್ವಾಸಿನಲ್ಲೋ ಹಿಡಿದಿಡುವುದು ಬಾಲಕ ಹೆಬ್ಬಾರರಿಗೆ ಸಂತಸದ ಚಟುವಟಿಕೆ.

ಅಂತರಂಗದ ಭಾವಗಳ ಅಭಿವ್ಯಕ್ತಿಗೆ ಹಾತೊರೆಯುತ್ತಿದ್ದರು. ಹೆಬ್ಬಾರರ ಕಲೆಗೆ ಮೊದಲ ಮೆಚ್ಚುಗೆ ದೊರತದ್ದು ಅವರ ತಾಯಿಯಿಂದ, ಹೆಬ್ಬಾರರು ಸ್ವತಃ ಭಾರತೀಯ ಚಿತ್ರಕಲಾ ಪ್ರಪಂಚದ ಅತ್ಯಂತ ಪ್ರಯೋಗಶೀಲತೆಯ ಅಭಿಜಾತತ್ವ ಒಂದು ಬಗೆಯ ಸ್ವಯಂಪೂರ್ಣತೆ ಅಭಿವ್ಯಕ್ತವಾಗಿದೆ. ಪಾದರಸದಂತೆ ಹರಿಯುವ ಅವರ ಬುದ್ಧಿ, ರಸಸಿದ್ದಿಯಾದ ಚೇತನ ಅವರನ್ನು ಪ್ರಯೋಗಗಳಿಂದ ದೂರವಿರಲಾರದು. ಅಂತೆಯೇ ಕಲೆಯ ವಿವಿಧ ಮಾಧ್ಯಮಗಳಲ್ಲಿ ವರ್ಣಚಿತ್ರಗಳ ಪ್ರಯೋಗಾತ್ಮಕತೆಯ ಅವರ ವಿವಿಧ ಸ್ತರಗಳು ಎದ್ದು ಕಾಣಿಸುತ್ತವೆ. ಬುದ್ಧಿ ಬೇರೆ, ಹೃದಯ ಬೇರೆ, ತಂತ್ರಸೃಷ್ಟಿ ಬೇರೆ ಎನಿಸುವ ಕಾಲ ಹಿಂದಾಗಿ ಪೂರ್ಣ ವ್ಯಕ್ತಿತ್ವದಿಂದಲೇ ಅವರು ಕಲಾಸೃಷ್ಟಿಮಾಡುವ ಪರ್ವಕಾಲವಾಯಿತು. ಮಾನವೀಯ ಕರುಣೆ, ಅನುಕಂಪಗಳಿಂದ ಹೆಬ್ಬಾರರ ವ್ಯಕ್ತಿತ್ವ ವೈಶಿಷ್ಟ್ಯ ಕರುಣೆಯೇ ಅವರ ಶೀಲವೆನಿಸುವಷ್ಟು ಅವರ


ವರ್ಣಚಿತ್ರಮೂಡಿಬಂದಿವೆ. ನಾನು ಯಾವಾಗಲು ನನ್ನ ಭಾವನೆಗಳ ಅಭಿವ್ಯಕ್ತಿಯು, ಅತೀಸರಳ ಮಾರ್ಗದ ಶೋಧದಲ್ಲಿರುತ್ತೇನೆ. ಹೊಸ ಕೃತಿಯೊಂದನ್ನು ಆರಂಭಿಸಿದೊಡನೆ ನಾನು ಹಿಂದಿನ ಸಾಧನೆಗಳನ್ನೆಲ್ಲಾ ಮರೆತು ಬಿಡುತ್ತೇನೆ. ಹೊಸ ಮಾರ್ಗದಲ್ಲಿ ಹೆಚ್ಚಿನ ಪರಿಣಾಮವನ್ನು ಹೇಗೆ ಮೂಡಿಸುವುದೆಂಬುದರ ಬಗ್ಗೆ ಯೋಚಿಸುತ್ತೇನೆ. ಕೆಲವೊಮ್ಮೆ ಇತರರೂ ಇದೇ ರೀತಿ ತಮ್ಮ ಭಾವನೆಗಳು ಇನ್ನು ಸಮರ್ಥವಾಗಿ ವ್ಯಕ್ತಪಡಿಸುವುದನ್ನು ಅರಿಯಾದಾಗ ಅವರುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಅವರೊಡನೆ ತಾತ್ವಿಕ ಬಾಂಧವ್ಯ ಬೆಸೆಯುತ್ತದೆ. ಅವರ ಅನುಭವಗಳು, ಪ್ರಯೋಗಗಳನ್ನೆ ನನದೇ ವೈಯಕ್ತಿಕತೆಗೆ ಧಕ್ಕೆ ಬರದ ರೀತಿಯಲ್ಲಿ ಬಳಸಿಕೊಳ್ಳುತ್ತೇನೆ ಎಂದು ತನ್ನ ದಿನಚರಿಯ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ.

ಅವರ ಹೊಸ ದೃಷ್ಟಿ ಹಾಗೂ ಹೊಸ ತಿಳುವಳಿಕೆಯಿಂದ ಹೊಸ ರೂಪಗಳಿಗೆ, ಹೊಸ ವರ್ಣವಿನ್ಯಾಸಕ್ಕೆ ಸರಳ ಕಲಾರೂಪಗಳಲ್ಲಿ ಅವರಿಗೆ ಅವರ ವರ್ಣ ಕಲಾಕೃತಿಗಳಲ್ಲಿ ಹೆಚ್ಚು ಸೌಂದರ್ಯ, ಹೆಚ್ಚು ಅರ್ಥ ಮೂಡುವಂತಾಯಿತು. ಜೊತೆಗೆ ಸೆಜಾನೆ, ಗಾಗಿನ ಮೊದಲಾದ ಪಾಶ್ಚಾತ್ಯ ಕಲಾವಿದರ ಶೈಲಿ ತಂತ್ರಗಳಿಂದ ಸ್ಫೂರ್ತಿಪಡೆದು, ತಮ್ಮ ಭಾವನೆ, ವಿಚಾರಗಳ ವಿಶ್ಲೇಷಣೆ ಅರ್ಥ ನಿರ್ಣಯಕ್ಕೆ ವರ್ಣಗಳ ಮೂಲಕ ಹೊಸ ಅರ್ಥವನ್ನು ನೀಡಿದ್ದಾರೆ. ಇಲ್ಲಿ ಪ್ರಾತಿನಿಧಿಕ ಕೆಲವು ಕಲಾಕೃತಿಗಳನ್ನು ಮಾತ್ರ ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದು ಸಮಗ್ರವಾದ ಹೆಬ್ಬಾರರ ಎಲ್ಲ ಕಲಾಕೃತಿಗಳ ಅಧ್ಯಯನವಲ್ಲ. ಪ್ರಸ್ತುತ ಅಧ್ಯಯನದ ಇತಿಮಿತಿಯಲ್ಲಿ ಆಯ್ದ ಕೆಲವು ಕಲಾಕೃತಿಗಳನ್ನು ಮಾತ್ರ ಇಲ್ಲಿ ಗಮನಿಸಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಹೆಬ್ಬಾರರ ಕಲಾಕೃತಿಗಳು ಹರವು ತುಂಬಾ ವಿಸ್ತಾರವಾದದ್ದು, ಅವುಗಳ ಕುರಿತಾಗಿಯೇ ವಿಶೇಷವಾದ ಪಿಹೆಚ್.ಡಿಯಂತಹ ಅಧ್ಯಯನಗಳು ನಡೆಯುವ ಅವಶ್ಯಕತೆಯಿದೆ. ಅಂತಹ ಮುಂದಿನ ಅಧ್ಯಯನಗಳಿಗೆ ಈ ಅಧ್ಯಯನವು ಒಂದು ಆಕರ ಸಾಮಗ್ರಿಯಾಗಿದೆ ಎಂದು ಹೇಳಬಹುದಾಗಿದೆ.

ವರ್ಣಚಿತ್ರಗಳು

↓

- ಜಲವರ್ಣ ಮಾಧ್ಯಮದ ವರ್ಣಚಿತ್ರಗಳು
  ↓
  - * ಸಂಯೋಜನ ಚಿತ್ರಗಳು (ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಕುರಿತಾದ ಕಲಾಕೃತಿಗಳು)
  - * ವ್ಯಕ್ತಿ ಚಿತ್ರಗಳು
  - * ಜೀವ ಮಾದರಿಯ ಚಿತ್ರಗಳು
  - * ನಿಸರ್ಗ ಚಿತ್ರಗಳು
- ತೈಲವರ್ಣ ಮಾಧ್ಯಮದ
  - * ಸಂಯೋಜನಾ ಚಿತ್ರಗಳು
  - * ನಿಸರ್ಗ ಚಿತ್ರಗಳು
  - * ವ್ಯಕ್ತಿ ಚಿತ್ರಗಳು ರೂಪದರ್ಶಿಗಳನ್ನು ಬಳಸಿದ ಭಾವಚಿತ್ರಗಳು



ಕೆ. ಕೆ. ಹೆಬ್ಬಾರರ ವರ್ಣಚಿತ್ರ ಕಲಾಕೃತಿಗಳು


ಗಣಪತಿಯ ವರ್ಣ ಚಿತ್ರ

ಹೆಬ್ಬಾರರ ಅಚ್ಚು ಮೆಚ್ಚಿನ ಗಣೇಶನ ಕಲಾಕೃತಿ ಎನ್ನಬಹುದು. ಈ ಕಲಾಕೃತಿಯನ್ನು ಹೆಬ್ಬಾರರು ತಮ್ಮ ಸ್ಟುಡಿಯೋದಲ್ಲಿ ತಾವು ಕುಳಿತುಕೊಳ್ಳುವ ಜಾಗದ ಮೇಲೆ ತೂಗಿಹಾಕಿಕೊಂಡಿದ್ದರು. ಗಣೇಶ ಆಕೃತಿಯು ಸಾಮಾನ್ಯವಾದ ರೀತಿಯಲ್ಲಿ, ಸಂಪ್ರದಾಯ ಬದ್ಧವಾದ ಯಾವುದೇ ರಚನೆಯಿಲ್ಲದೇ, ಕಲಾವಿದ ಕಲ್ಪನೆಯ ಈ ಗಣೇಶನ ಕಲಾಕೃತಿಯು, ಓಕುಳಿ ಕೆಂಪಾದ ಮೈ ವರ್ಣ, ದೊಡ್ಡದಾಗಿ ಮೆರವ ಶ್ವೇತ ಅಂಗವಸ್ತ್ರ, ಭಯಾನಕವೋ, ತುಂಟತನವೋ ಆ ಎರಡನ್ನೂ ಕೂಡಿಸಿದ ಓಕ್ಕಣಿನ ನೋಟ, ಕಾಲಿನ ಬುಡದಸ್ತ್ರಿಯಲ್ಲಿರುವ ಮೂಷಿಕ, ಗಣೇಶನ ಹಿಂಬದಿಯಲ್ಲಿ ಅರ್ಧ ಚಂದ್ರನ ರೀತಿಯಲ್ಲಿ ತೋರುವ ಚಂದ್ರಾಕೃತಿ ಒಟ್ಟಿನಲ್ಲಿ ಹೆಬ್ಬಾರರ ಪ್ಯಾಲೆಟ್ ನೈಫ್‌ನಿಂದ ಮೂಡಿರುವ ತಂತ್ರಗಾರಿಕೆ ಅವರ ಒರಟು, ಗಡುಸಾದ ವರ್ಣಗಳ ಲೇಪನ ಹಿಂಬದಿಯನ್ನು ಹಳದಿವರ್ಣ ಮತ್ತು ಗಣೇಶ ಮುಖವನ್ನು ಓಕುಳಿ ಕೆಂಪಾದ ಮುಖವರ್ಣವು ಹಿಂದೂ ಸಂಪ್ರದಾಯದ ಅರಿಶಿಣ ಮತ್ತು ಕುಂಕಮವನ್ನು ಹೋಲುವ ವರ್ಣ ಸಾಂಗತ್ಯದಲ್ಲಿ ಗಣೇಶನ ಕಲಾಕೃತಿಯನ್ನು[ಅತ್ಯಂತ ಸುಂದರವಾಗಿ ಹೆಬ್ಬಾರರು ರಚನೆ ಮಾಡಿದ್ದಾರೆ. ಹೆಬ್ಬಾರರು ಹೇಳುವಂತೆ ಈ ಗಣೇಶನಿಗೆ ಭಾರೀ ಬೇಡಿಕೆಯಿದ್ದು, ಇದನ್ನು ಯಾರಿಗೂ ಕೊಡುವುದಿಲ್ಲವೆಂದು ಹೆಬ್ಬಾರರು ಹೇಳಿರುವುದನ್ನು ಹಿರಿಯ ಕಲಾ ಸಾಹಿತಿಗಳು ತಮ್ಮ ಪುಸ್ತಕಗಳಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಕಾರ್ಲಿ ಗುಹೆಗಳು

ಹೆಬ್ಬಾರರು ೧೯೩೯ರಲ್ಲಿ ರಚಿಸಿದ ತೈಲವರ್ಣ ಚಿತ್ರವು ೭೬x೯೨ ಸೆ.ಮೀ. ಅಳತೆಯಲ್ಲಿದೆ. ಹೆಬ್ಬಾರರು ಕಾರ್ಲಿಗುಹೆಗಳ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಈ ತೈಲ ಚಿತ್ರವನ್ನು ರಚಿನೆಮಾಡಿದ್ದಾರೆ. ಕಲಾಕೃತಿಯ ದೇವಾಲಯ ಹಿಂಬದಿಯಲ್ಲಿರುವ ಗಾಢತೆಯಿಂದ, ಮುಂಬದಿಯಲ್ಲಿರುವ ದೇವಾಲಯ ನೆರಳು ಬೆಳಕಿನ ಸಂಯೋಜನೆಯು ಅತ್ಯಂತ ಆಕರ್ಷಿತವಾಗಿದೆ. ಅಲ್ಲದೆ ಚಿತ್ರಸಂಯೋಜನೆಯಲ್ಲಿ ಯಥಾದರ್ಶನದ ಬಳಕೆಯಿಂದ ತೃತೀಯ ಆಯಾಮದ ಆಕೃತಿಯ ಸ್ವರೂಪವನ್ನು ಕಾಣಬಹುದಾಗಿದೆ. ದೇವಾಲಯದ ಮೇಲ್ಛಾವಣಿಯ ಕೆಂಪು ಅಂಚುಗಳಿಂದ ಹೊಂದಿಸಿರುವಂತೆ ಭಾಸವಾಗುತ್ತದೆ.

ದೇವಾಲಯದ ದರ್ಶನಕ್ಕೆ ಏರುತ್ತಿರುವ ಮಹಿಳೆ ಮತ್ತು ಮಗು ಹಾಗೂ ವೀಕ್ಷಣೆಗೆ ಬಂದ ಸನ್ಯಾಸಿಗಳ ಚಿತ್ರಣವು, ಮುಂಬದಿಯನ್ನು ಹಸಿರು ಗಿಡಗಳ ಚಿತ್ರಣವು ಮೂಡಿ ಬಂದಿದ್ದೂ, ಸಂಪೂರ್ಣ ಚಿತ್ರಣವು ಸೂಕ್ಷ್ಮತೆಗಿಂತ ಗಾಢತೆಯಿಂದ ವರ್ಣಗಳ ಬಳಕೆಯನ್ನು ಮಾಡಲಾಗಿದ್ದು, ಈ ಚಿತ್ರವು ನೋಡಲು ಸುಂದರವಾಗಿದೆ.



ಸುಗ್ಗಿ


ಈ ಟೆಂಪರಾದ ವರ್ಣಮಾಧ್ಯಮವನ್ನು ಕಾಗದದ ಮೇಲೆ ೧೯೪೪ರಲ್ಲಿ ರಚನೆಮಾಡಿದ್ದಾರೆ. ಕಲಾಕೃತಿಯಲ್ಲಿ ಸಾಮೂಹಿಕವಾಗಿ ರೈತರು ತಾವು ಬೆಳೆದ ಭತ್ತದ ಪೈರಿನ ರಾಶಿಮಾಡುವುದು, ಗೂಡುಕಟ್ಟುವ ಕಾರ್ಯ ನಿರತರಾಗಿದ್ದಾರೆ. ಅವರಲ್ಲಿ ಗಂಡಿನ ಆಕೃತಿಯನ್ನು ಕೆಂಪು ಮತ್ತು ಬಿಳಿಯ ವರ್ಣಗಳಿಂದ ರಚಿಸಲಾಗಿದೆ.

ಹೆಬ್ಬಾರರು ತಮ್ಮದೇ ಆದ ಶೈಲಿಯಲ್ಲಿ ನೈಜವಲ್ಲದ ಮತ್ತು ಸಂಪ್ರದಾಯಿಕವಲ್ಲದ ಮಿಶ್ರಶೈಲಿಯಲ್ಲಿ ರಚಿಸಿದ್ದಾರೆ. ಅಲ್ಲದೇ ಕೋಳಿಗಳ ಗುಂಪು, ಭತ್ತವನ್ನು ಬಡಿಯುತ್ತಿರುವ ಮಹಿಳೆಯರು, ತೆನೆ ಹೊತ್ತ ಪುರುಷರು, ಭತ್ತ ಕಟಾವು ಮಾಡುತ್ತಿರುವ ಮಹಿಳೆಯರ ಗುಂಪು, ಹೀಗೆ ಸುಗ್ಗಿಯ ದಿಬ್ಬಣದ ಕಲಾಕೃತಿಯನ್ನು ನೋಡಬಹುದಾಗಿದೆ. ೧೯೪೬ರ ಬೇಸಗೆಯನ್ನು ಹೆಬ್ಬಾರರು ದಕ್ಷಿಣ ಭಾರತದ ಕಲಾಅಧ್ಯಯನ ಕುರಿತು ಪ್ರವಾಸಗೊಂಡ ಸಂದರ್ಭದಲ್ಲಿ ಕೇರಳದ ವಿಶಾಲ ಭತ್ತದ ಬಯಲುಗಳು ಕಂಡು ಅದರಿಂದ ಪ್ರೇರಿತರಾಗಿ ಮನಸೂರೆಗೊಂಡು ರಚಿಸಿರುವುದೇ ಈ 'ಸುಗ್ಗಿ' ಚಿತ್ರವಾಗಿದೆ. ಇದನ್ನು ಪೋಸ್ಟರ್ ವರ್ಣಗಳಿಂದ ಚಿತ್ರಿಸಲಾಗಿದೆ.

ಕನ್ನಿಕೆ

ಹೆಬ್ಬಾರರು ದಕ್ಷಿಣ ಭಾರತ ಪ್ರವಾಸದ ಸಂದರ್ಭದಲ್ಲಿ ಕೇರಳದ ಸಾಂಪ್ರದಾಯಿಕ ಜನರ ಉಡುಗೆ ತೊಡುಗೆಗಳು, ಅವರ ಧಾರ್ಮಿಕ ಆಚರಣೆಗಳನ್ನು ಕಂಡು ರಚನೆಮಾಡಿದ ಚಿತ್ರ. ಈ ಚಿತ್ರವನ್ನು ಟೆಂಪರಾ ಮಾಧ್ಯಮದಿಂದ ಕಾಗದದ ಮೇಲೆ ರಚಿಸಲಾಗಿದೆ. ಚಿತ್ರದಲ್ಲಿ ಕನ್ನಿಕೆಯನ್ನು ದೇವಾಲಯಕ್ಕೆ ಕರೆದೊಯ್ಯುವ ಸಾಂದರ್ಭಿಕ ದೃಶ್ಯದ ಸಂಯೋಜನವಿದ್ದೂ, ೩ ಜನ ಮಹಿಳೆಯರು ಪೂರ್ಣವಾಗಿ ಬಿಳಿ ಸೀರೆಯನ್ನುಟ್ಟು ಕನ್ನಿಕೆಯು ಕೆಂಪುವರ್ಣ ವಸ್ತ್ರವನ್ನು ಧರಿಸಿದ್ದಾಳೆ. ಕನ್ನಿಕೆಯ ಹಿಂಭಾಗದಲ್ಲಿರುವ ಗಂಡಿನ ಆಕೃತಿಯು ಹಸಿ ಮೈ ಬಣ್ಣ ಹೊಂದಿದ್ದು, ಕೈಯಲ್ಲಿ ಛತ್ರಿಯನ್ನು ಹಿಡಿದಿದ್ದಾನೆ.

ಮುಂಭಾಗದಲ್ಲಿ ಇಬ್ಬರು ಸ್ತ್ರೀಯರು ಕೈಯಲ್ಲಿ ಹೂವಿನ ತಟ್ಟೆಯನ್ನು, ಇನ್ನೊಬ್ಬ ಸ್ತ್ರೀಯು ತೂಗು ದೀಪವನ್ನು ಹಿಡಿದಿದ್ದಾಳೆ, ಕೊನೆಯಲ್ಲಿರುವ ಸ್ತ್ರೀಯು ಕೈಯಲ್ಲಿ ಛತ್ರಿಯನ್ನು ಹಿಡಿದಿದ್ದಾಳೆ, ಕಂದು ಕೆಂಪು ವರ್ಣದಲ್ಲಿ ನೆಲದ ಬಣ್ಣವಿದ್ದೂ, ಹಿನ್ನೆಲೆಯಲ್ಲಿ ನೀಲಿವರ್ಣದಿಂದ ಪೂರ್ಣಗೊಳಿಸಲಾಗಿದೆ. ಸ್ವಲ್ಪ ಭಾಗದಲ್ಲಿ ಬಾಳೆ ಎಲೆಗಳನ್ನು ತೋರಿಸಲಾಗಿದೆ. ಕನ್ನಿಕೆ ಈ ಚಿತ್ರವು ಬಾಂಬೇ ಅವರ ಸೊಸೈಟಿಯಿಂದ ಚಿನ್ನದ ಪದಕವನ್ನು ಪಡೆಯಿತು. ಆದರೆ ವಿಮರ್ಶಕರು ಅಮೃತಶೇರ್‌ಗೀಲ್ ಶೈಲಿಯ ಅನುಕರಣೆ ಮಾಡಿದ್ದಾರೆಂದು ಬಣ್ಣಿಸಿದರು.



ನೇಗಿಲಯೋಗಿ

ಮೂಲ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ನೇಗಿಲ ಹೊತ್ತ ರೈತನ ಚಿತ್ರವಾಗಿದೆ. ಹೆಬ್ಬಾರರು ಈ ಚಿತ್ರವನ್ನು ೧೯೫೫ರಲ್ಲಿ ತೈಲಮಾಧ್ಯಮದಿಂದ ಚಿತ್ರಿಸಿದ್ದಾರೆ. ಚಿತ್ರದ ಹಿನ್ನಲೆಯಲ್ಲಿ ಭೂ ವರ್ಣಗಳು ಪ್ರಧಾನವಾದ ಅಂಶಗಳು ಭಾರತೀಯ ರೈತರ ಜೀವನವನ್ನು ನೇರವಾಗಿ ವಿವರಿಸುತ್ತದೆ. ನೇಗಿಲ ಹೊತ್ತ ರೈತನೊಂದಿಗೆ ಎರಡು ಎತ್ತುಗಳಿದ್ದು, ಒಂದು ಎತ್ತು ಕಪ್ಪು ವರ್ಣದಿಂದ ತಲೆಬಾಗಿ ನಡೆಯುತ್ತಿದೆ. ಇನ್ನೊಂದು ಗಾಡ ಹಸಿರುವರ್ಣದಿಂದ ಯಾರನ್ನೋ ಆಶ್ಚರ್ಯವಾಗಿ ನೋಡುತ್ತಿದೆ. ಎತ್ತುಗಳ ಹಿಂಬದಿಯಲ್ಲಿ ಕೆಂಪುದೋಟಿ ಧರಿಸಿರುವ ಹಚ್ಚಹಸಿರು ಬಣ್ಣದ ಬಾಲಕನು ತನ್ನ ಬಲೆಯಿಂದ ಕೋಲನ್ನು ಹಿಡಿದು ಎತ್ತುಗಳಿಗೆ ಹೊಡೆಯಲು ಸಿದ್ಧನಾದಂತೆ ಕಾಣುತ್ತಾನೆ. ರೈತನು ಎಡಗೈಯಲ್ಲಿ ಕಲಾತ್ಮಕವಾದ ನೇಗಿಲನ್ನು ಹಿಡಿದು, ಗೋಪಿ ಬಣ್ಣದ ಬುಟ್ಟಿಯನ್ನು ತನ್ನ ಹೆಗಲಿಗೆ ಹಾಕಿಕೊಂಡಿದ್ದಾನೆ. ಕೆಂಪು ಮತ್ತು ನಿಂಬೆ ಹಳದಿ ಬಣ್ಣದ ದೋತರವನ್ನು ಧರಿಸಿದ್ದಾನೆ. ಒಟ್ಟಿನಲ್ಲಿ ಭಾರತೀಯ ಮೂಲ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಈ ಚಿತ್ರವು ನ್ಯಾಷನಲ್ ಮ್ಯೂಸಿಯಂ ಚೆಕೊಸ್ಲೊವಾಕಿಯದಲ್ಲಿದೆ.

ಜ್ವಲಂತ ದಕ್ಷಿಣ

ಕೇರಳದಲ್ಲಿ ಹಳೆಯ ಪ್ರಾದೇಶಿಕ ಸಂಸ್ಕೃತಿಯೊಂದು ವಾಸ್ತು ವೈಭವದಲ್ಲಿ ಮಾತ್ರವಲ್ಲದೆ ನಿತ್ಯ ಜೀವನದಲ್ಲಿಯೂ ಅವರ ನಾನಾ ರೀತಿಯಲ್ಲಿ ಹರಕೆಗಳೂ, ಕಟ್ಟು ಕಲ್ಯಾಣವಂಥ ವಿದ್ಯುಕ್ತ ಆಚರಣೆಗಳು, ಉತ್ಸವಗಳು, ಸಂಪ್ರದಾಯಗಳು. ಕೇರಳದ ರಮಣೀಯವಾದ ನಿಸರ್ಗದಲ್ಲಿ ಪ್ರಖರವಾದ ಬಿಸಿಲಿನ ಜನ ಜೀವನದ ಸೊಗಸನ್ನು ತಮ್ಮ ಚಿತ್ರದಲ್ಲಿ ಮೂಡಿಸಿದ್ದಾರೆ. ಕೇರಳದ ಮಹಿಳೆಯರು ನೀರನ್ನು ತರಲೆಂದು ಬಂದ ಮಹಿಳೆಯರ ಗುಂಪು ಒಂದುಕಡೆ ಇನ್ನೊಂದು ಕಡೆ ಅವರ ವಿವಿಧ ಆಕಾರದ ಬಿಂದಿಗೆಗಳನ್ನು ಕಾಣಬಹುದಾಗಿದೆ. ಮಹಿಳೆಯರು ನೀರಿಗಾಗಿ ತಮ್ಮ ಮಕ್ಕಳೊಂದಿಗೆ ಬಂದಿರುವ, ನೀರಿನ ಬದಲಾವಣೆಯನ್ನು ಚಿತ್ರದಲ್ಲಿ ವ್ಯಕ್ತವಾಗುತ್ತದೆ. ಚಿತ್ರದ ಅಳತೆಯು ೭೬x೯೨ ಸೆಂ.ಮೀ. ಇದು, ತೈಲವರ್ಣದಿಂದ ರಚನೆ ಮಾಡಿದ್ದಾರೆ. ಅಮೃತಾ ಶೇರ್‌ಗಿಲ್ ಅವರ ಪ್ರಭಾವವನ್ನು ಹೋಲುವ ಈ ಕಲಾಕೃತಿ ಪ್ರಸ್ತುತ ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ನೋಡಬಹುದು. ಇದು

ಶಕುಂತಲ

೧೯೪೫ರಲ್ಲಿ ಹೆಬ್ಬಾರರು ಈ ಕಲಾಕೃತಿಯನ್ನು ೩೩ x ೩೦ ಸೆಂ.ಮಿ. ಅಳತೆಯಲ್ಲಿ ರಚಿಸಿದ್ದಾರೆ. ಶಕುಂತಲ ಚಿತ್ರಕಲಾಕೃತಿಯು ಟೆಂಪರಾ ಮಾಧ್ಯಮದಲ್ಲಿ ಕಾಗದದ ಮೇಲೆ ಚಿತ್ರಿಸಲಾಗಿದೆ. ಈ ಚಿತ್ರವು

ಸಂಪೂರ್ಣವಾಗಿ ಚಪ್ಪಟೆಯ ತಂತ್ರಶೈಲಿಯಲ್ಲಿದೆ. ಅಂದರೆ ಭಾರತೀಯ ಚಿಕಣಿ ಚಿತ್ರಶೈಲಿಯ ಪದ್ಧತಿಯನ್ನು ಹೋಲುವ ರೀತಿಯಲ್ಲಿದೆ. ಆದರೆ ಅದನ್ನು ಇಂದಿನ ನೈಜಶೈಲಿಗೆ ಹೋಲಿಕೆ ಮಾಡುವ ರೀತಿಯಲ್ಲಿ ಹೊಸ ವಿಧಾನಗಳು ಅನುಸರಿಸಿದ್ದಾರೆ. ಕಲಾಕೃತಿಯಲ್ಲಿ ಮರದ ಟೊಂಗೆಯ ಮೇಲೆ ಕುಳಿತಿರುವ ಶಕುಂತಲೆಯ ಸುತ್ತಲೂ ಅವಳ ಗೆಳತಿಯರು ಅವಳಿಗಾಗಿ ಹೂವಿನ ಹಾರಗಳನ್ನು ಮಾಡಿಕೊಡಲೆಂದು ಸುತ್ತುವರೆದಂತಿದೆ. ಸುತ್ತಲು ಸಮೃದ್ಧವಾದ ಹಚ್ಚ ಹಸಿರಿನಿಂದ ಕೂಡಿದ ಗಿಡಮರಗಳು, ನೀಲಾಕಾಶದಲ್ಲಿ ಹಾರುತ್ತಿರುವ ಹಕ್ಕಿಗಳ ಸಾಲು, ಅವರ ಮುಂದೆ ನೀರಿನ ಕೊಳದಲ್ಲಿ ತಾವರೆ, ನೈದಿಲೆಗಳು ಅವರ ಮಧ್ಯ ನಿಂತಿರುವ ಜೋಡಿ ಕೊಕ್ಕರೆಗಳು ಕಲಾಕೃತಿಯನ್ನು ಇನ್ನಷ್ಟು ಸುಂದರವಾಗಿ ಕಾಣುವಂತೆ ಮಾಡಿದೆ. ಈ ಕಲಾಕೃತಿಯು ಪ್ರಸ್ತುತ ಜೆ.ಜೆ. ಆರ್ಟ್ ಕಾಲೇಜಿನ ಸಂಗ್ರಹಾಲಯದಲ್ಲಿದೆ.


ಪಂಡಿತರು

ಹೆಬ್ಬಾರರು ೧೯೪೮ರಲ್ಲಿ ಸೌರಾಷ್ಟ್ರದ ಸಂಚಾರದಲ್ಲಿ ಉತ್ತರ ಭಾರತದ ಸಂಚಾರಕ್ಕೆ ಹೊರಟರು ಈ ಸಂದರ್ಭದಲ್ಲಿ ದೆಹಲಿ, ಮಧುರಾ, ಆಗ್ರಾ, ಖಜುರಾಹೋ, ರಾಂಚಿ ಹೀಗೆ ಹಲವಾರು ಪ್ರದೇಶಗಳ ಸಂದರ್ಶನ ಮಾಡಿದಾಗ ಅಲ್ಲಿ ಕಂಡಂತಹ ಸಾಧು ಸಂತರು ಈ ಚಿತ್ರದ ಪ್ರೇರಣೆಯಾಗಿದೆ. ಈ ಚಿತ್ರವನ್ನು ತೈಲವರ್ಣದಿಂದ ಮಾಡಲಾಗಿದೆ. ಮುಖ್ಯವಾಗಿ ಮೂವರು ಸನ್ಯಾಸಿಗಳು ಮಂತ್ರೋಚ್ಛಾರಣೆಯನ್ನು ಮಾಡುತ್ತಿರುವ ಹಾಗೂ ಅಲ್ಲಿನ ವಾತಾವರಣ ಶೀತದಿಂದ ಕೂಡಿರುವಂತೆಯೇ ತಮ್ಮ ತಲೆಯ ಮೇಲಿಂದಲೂ ಸುತ್ತಿಕೊಂಡಿರುವ ಕೆಂಪು ಮತ್ತು ಕಿತ್ತಳೆ ವರ್ಣದ ವಸ್ತ್ರವನ್ನು ಧರಿಸಿದ್ದಾರೆ. ಎದುರಿನಲ್ಲಿ ಮಂತ್ರದ ಪುಸ್ತಕ ಮತ್ತು ಪಂಚಪಾತ್ರೆಯನ್ನು ಹೊಂದಿದ್ದು, ಹಿಂಬದಿಯಲ್ಲಿ ಗಿಡಗಳು ಮತ್ತು ಹಲವಾರು ಸನ್ಯಾಸಿಗಳು ಮಂತ್ರೋಚ್ಛಾರಣೆಯಲ್ಲಿ ಯಜ್ಞಕಾರ್ಯದಲ್ಲಿ ಮಗ್ನರಾಗಿದ್ದಾರೆ. ಇದರ ಅಳತೆಯು ೯೨ x ೭೬ ಸೆ.ಮೀ ಇದ್ದು, ಇದು ಮುಂಬೈನ ಷರೀಫ್ ಮುಲ್ಲಾ ಬಾಯ್ಸ್ ಅವರ ಖಾಸಗಿ ಕಲಾಸಂಗ್ರಹಾಲಯದಲ್ಲಿದೆ.

ಜಾನುವಾರು ಜಾತ್ರೆ

೧೯೪೪ರಲ್ಲಿ ಹೆಬ್ಬಾರರು ತಮ್ಮ ಕಲಾ ಜೀವನದ ಪೂರ್ವ ಭಾಗದಲ್ಲಿ ಅತ್ಯಂತ ೨೫ ರೂ.ಗಳ ಬಹುಮಾನವನ್ನು ಗಳಿಸುವುದರ ಜೊತೆಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಸ್ವತಃ ಗುರು ಜೆರಾರ್ಡ್ ಅವರ ಪ್ರಸಂಶೆ, ವಿಮರ್ಶೆಯನ್ನು ಪಡೆಯುವುದರ ಜೊತೆಗೆ ದೇಶ ವಿದೇಶಗಳ ಮನ್ನಣೆಯನ್ನು ಪಡೆಯಿತು. ಚಿತ್ರದಲ್ಲಿ ಸಂಪೂರ್ಣವಾಗಿ ಹಸು, ಎತ್ತುಗಳನ್ನು ಕೊಳ್ಳಲು ಬಂದ ಹಳ್ಳಿಗರ ದೃಶ್ಯವನ್ನು ಕಾಣಬಹುದು.

ಭಾರತೀಯ ಸಂಪ್ರದಾಯದ ರೀತಿಯಿಂದಲೇ ಕಚ್ಛೆ ಪಂಚೆಗಳನ್ನು ತೊಟ್ಟಿರುವ ಗಂಡಿನ ಆಕೃತಿಗಳು,



ಬಿಳಿ, ತಿಳಿ ಹಳದಿ ಬಣ್ಣದ ರಾಸುಗಳನ್ನು ಕಾಣಬಹುದಾಗಿದೆ. ಈ ಕಲಾಕೃತಿಯನ್ನು ಟೆಂಪರಾ ಮಾಧ್ಯಮದಿಂದ ಮಾಡಿದ್ದಾರೆ. ಇದರ ಅಳತೆಯು ೪೫x೬೦ ಸೆಂ.ಮಿ. ಹೊಂದಿದ್ದು, ಪ್ರಸ್ತುತ ಈ ಕಲಾಕೃತಿಯು ಜೆ.ಜೆ. ಕಲಾಶಾಲೆಯು ಕಲಾಸಂಗ್ರಹದಲ್ಲಿದೆ.

ಉತ್ಸವ ನೃತ್ಯ

ಹೆಬ್ಬಾರರು ರಚಿಸಿದಂತಹ ಅತ್ಯಂತ ಹೆಚ್ಚು ಸಂಕೀರ್ಣ ಹೊಂದಿರುವ ಚಿತ್ರಕಲಾಕೃತಿ ಇದಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೪೫ರಲ್ಲಿ ಚಾವಡಾ ಅವರ ಜೊತೆಯಲ್ಲಿ ಕುಲುಕಣಿನೆಯ ಸಂದರ್ಶನದ ಸಂದರ್ಭದಲ್ಲಿ ಎರಡು ದಿನಗಳ ಕಾಲ ಡೋಂಗ್ರಿ ಮತ್ತು ಮೊನಾಲಿ ಜಾತ್ರೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಅಲ್ಲಿನ ಈ ಸಮೂಹ ನೃತ್ಯಗಳು, ದೇವರ ಆರಾಧನೆ ಮತ್ತು ಅಲ್ಲಿನ ಜನರ ಅಲಂಕೃತ ಉಡುಪುಗಳು, ಬಣ್ಣ ಬಣ್ಣ ನಕ್ಷೆಗಳು ಹಾಗೂ ಪ್ರಕೃತಿ ಸೌಂದರ್ಯಕ್ಕೆ ಮನಸೋತ ಮೂಡಿದಂತಹ ಕಲಾಕೃತಿಯಾಗಿದೆ.

ಇದು ಅತಿ ಜನರುಗಳಿಂದ ಕೂಡಿದ ನೃತ್ಯ ಸಮೂಹವಾಗಿದೆ. ಸಾಲಾಗಿ ನರ್ತಿಸುತ್ತಿರುವ ಅಲಂಕೃತ ವೇಷಧಾರಿಗಳು, ವಾಧ್ಯವೃಂದದವರು, ದೇವರ ಪಲ್ಲಕ್ಕಿಯನ್ನು ಹೊತ್ತ ಜನರು, ಅಲ್ಲಲ್ಲೇ ಡೇರೆಗಳು, ಈ ಸಮಾರಂಭವನ್ನು ನೋಡಲು ನೆರದ ಜನ ಸಮೂಹ, ಹಸಿರು ಹುಲ್ಲು ಒದಿಕೆ, ಗಗನಕ್ಕೆ ಚುಂಬಿಸುವಂತೆ ಎತ್ತರಕ್ಕೆ ಬೆಳೆದಿರುವ ಹಿಮಗಿರಿಯ ವೃಕ್ಷ ಸಮುಹ ಪ್ರಕೃತಿಮಾತೆಯ ಸೊಬಗನ್ನು ಸೂಚಿಸುತ್ತದೆ. ಈ ಕಲಾಕೃತಿಯ ಅಳತೆ ೫೬x೭೦ ಸೆಂ.ಮೀ.ಯಿದ್ದು, ಪೇಪರ ಮೇಲೆ ಟೆಂಪರಾ ಮಾಧ್ಯಮದಿಂದ ರಚಿಸಲಾಗಿದೆ.

ಯಕ್ಷಗಾನ

ದಕ್ಷಿಣ ಕನ್ನಡದ ಸುಪ್ರಸಿದ್ಧ ನೃತ್ಯ ಕಲೆ ಎಂದರೆ ಯಕ್ಷಗಾನ ಹೆಬ್ಬಾರರ ಪರಿವಾರದ ಜನರಿಗೆ ಯಕ್ಷಗಾನವೆಂದರೆ ಇಷ್ಟ. ತಂದೆ ನಾರಾಯಣ ಹೆಬ್ಬಾರರಿಗೆ ಯಕ್ಷಗಾನವನ್ನು ರಾಕ್ಷಸನ ಪಾತ್ರ ಹೀಗಾಗಿ ತನ್ನ ತಂದೆಯೊಂದಿಗೆ ಬಾಲಕರಾಗಿದ್ದಾಗ ಹೆಬ್ಬಾರರ ಯಕ್ಷಗಾನಕ್ಕೆ ತುಂಬ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಅಂತೆಯೇ ಹೆಬ್ಬಾರರ ಚಿತ್ರಗಳಲ್ಲಿ ಈ ಮೂಲ ಸೊಗಡನ್ನು ಕಾಣಲು ಇದು ಮುಖ್ಯ ಪ್ರೇರಣೆಯಾಗಿದೆ. ಈ ಚಿತ್ರದಲ್ಲಿ ಯಕ್ಷಗಾನದ ಒಂದು ಸಂದರ್ಭವನ್ನು ತಮ್ಮ ವರ್ಣಚೂರಿಯ ಸಹಾಯದಿಂದ ರಚಿಸಲಾಗಿದೆ. ಈ ಚಿತ್ರದಲ್ಲಿ ಮೂಡಿರುವ ವ್ಯಕ್ತಿಯ ಅಂಗ ಸಹಿಷ್ಣುತೆ, ಯಕ್ಷಗಾನದ ಅಲಂಕಾರಗಳು, ಅವರ ಒಂದು ಶೈಲಿಯಿಂದ ಈ ಕಲಾಕೃತಿಯು ಸುಂದರವಾಗಿದೆ.

ನಾಗಮಂಡಲದ ನೃತ್ಯ


ನಾಗಮಂಡಲ ನೃತ್ಯದ ಕಲಾಕೃತಿಯು ತಮ್ಮ ದಕ್ಷಿಣ ಕನ್ನಡದ ಮೂಲ ಆರಾಧನ ದೇವತೆಯ ಚಿತ್ರಣ. ಈ ಚಿತ್ರದಲ್ಲಿ ವರ್ಣ ಸಂಯೋಜನೆಯು ಅತ್ಯಂತ ಸೊಗಸಾಗಿ ಮೂಡಿ ಬಂದಿದೆ. ಚಿತ್ರದಲ್ಲಿ ಒಬ್ಬ ಪೂಜಾರಿ ಮತ್ತು ಮಹಿಳೆಯ ನೃತ್ಯದ ಎರಡು ಆಕೃತಿಗಳನ್ನು ಗಾಢವರ್ಣದಿಂದ ರಚಿಸಲಾಗಿದೆ. ಪೂಜಾರಿಯು ದೇವರ ಆಹ್ವಾನೆಯದಂತೆ ಅವನ ಕಣ್ಣುಗಳಲ್ಲಿ ಬಾಸವಾಗುತ್ತದೆ. ಅವನ ಕೈಯಲ್ಲಿ ಹೊಂಬಾಳೆಯನ್ನು ಹಿಡಿದುಕೊಂಡಿದ್ದಾನೆ. ಅವರ ಎದುರಿಗೆ ಡಮರುಗವನ್ನು ಬಾರಿಸುತ್ತಿರುವ ಮಹಿಳೆಯು ಕೆಂಪು ಸೀರೆಯನ್ನುಟ್ಟು ಒಂದು ಕೈಯನ್ನು ಮೇಲಕ್ಕೆ ಎತ್ತಿದ್ದಾಳೆ. ಅವರ ಹಿಂಬದಿಯಲ್ಲಿ ಐದು ಹೆಡೆ ನಾಗರಾಜನ ರಂಗವಲ್ಲಿಯನ್ನು ಅತ್ಯಂತ ಸೌಮ್ಯವರ್ಣದಿಂದ ರಚನೆ ಮಾಡಲಾಗಿದೆ. ನಾಗಮಂಡಲ ಚಿತ್ರವನ್ನು ಹೆಬ್ಬಾರರು ಕಾಗದದ ಮೇಲೆ ಟೆಂಪರಾ ಮಾಧ್ಯಮದಿಂದ ೧೯೫೦ರಲ್ಲಿ ರಚಿಸಿದ್ದಾರೆ.

ಪುಷ್ಪಹಾರಸ ವಿನಿಮಯ

ಹೆಬ್ಬಾರರು ೧೯೫೬ರಲ್ಲಿ ತೈಲವರ್ಣದಿಂದ ರಚಿಸಿರುವ ಚಿತ್ರ ಈ ಕಲಾಕೃತಿಯು ಮದುವೆಯ ಸಂದರ್ಭ ನಡೆಯುವ ಪುಷ್ಪಹಾರಗಳ ವಿನಿಮಯ ಸಂದರ್ಭದ ಸಾಂದರ್ಭಿಕ ದೃಶ್ಯ. ಈ ಸನ್ನಿವೇಶವನ್ನು ವಧು ಮತ್ತು ವರರು ಒಂದು ಕೆಂಪುವರ್ಣದ ಹಿನ್ನೆಲೆಯಲ್ಲಿ, ಮಂದ ಹಸಿರಿನ ಬಾಳೆಗೊನೆಗಳು ಅರ್ಚಕರು ಮತ್ತು ಪುರೋಹಿತವರ್ಗದವರನ್ನು ಅದೇ ವರ್ಣದಿಂದ ತೋರಿಸಲಾಗಿದೆ. ಕೆಳಭಾಗದಲ್ಲಿ ಎಡಬದಿಯಲ್ಲಿ ತೋರಣವನ್ನು ಕಟ್ಟಲು ಸಿದ್ಧನಾಗಿರುವ ವ್ಯಕ್ತಿ, ಮಧ್ಯಭಾಗದಲ್ಲಿ ಹೋಮಕುಂಡದ ಮುಂದೆ ಮಂತ್ರೋಚ್ಛಾರಣೆಯಲ್ಲಿ ಮಗ್ನರಾಗಿರುವ ಪುರೋಹಿತನನ್ನು ಇಡೀ ಚಿತ್ರಕ್ಕೆ ಸಂಯೋಜನೆ ಹೊಂದುವಂತೆ ಇವುಗಳ ಬಳಕೆ ಮಾಡಲಾಗಿದೆ. ಅದರಲ್ಲಿ ಮುಖ್ಯವೆಂದರೆ ವಧುವರರನ್ನು ಬಿಳಿ ಮತ್ತು ಕಪ್ಪು ವರ್ಣಗಳ ಮಧ್ಯ ಗಂಧವರ್ಣದ ಬಳಕೆಯು ವರ್ಣಸಂಯೋಜನೆಯನ್ನು ಸಂಯೋಜಿಸಿದೆ. ಈ ಚಿತ್ರದ ಅಳತೆಯು ೭೬ x ೧೦೨ ಸೆಂ.ಮಿ. ಇದು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನವದೆಹಲಿಯಲ್ಲಿದೆ.

ಮೀನುಗಾರರು

ಈ ಕಲಾಕೃತಿಯಲ್ಲಿ ಮುಖ್ಯವಾಗಿ ಹೆಬ್ಬಾರರ ವಿಶಾಲವಾದ ದೃಷ್ಟಿಕೋನದ ಹರಿವು ಮೊದಲಿಗೆ ಮೂಡುತ್ತಿದೆ. ಕಲಾಕೃತಿಯ ವಿಶಿಷ್ಟವಾದ ಸಂಯೋಜನೆಯ ಅತ್ಯಂತ ಸಂಕೀರ್ಣವಾಗಿದೆ. ಕಲಾವಿದನ ಕಣ್ಣಿನಲ್ಲಿ ಸಮುದ್ರವು ಒಂದು ನೀಲಾಗೋಲಾಕಾರವನ್ನು ಮೂಡಿಬಂದಿದೆ. ಅದರ ಬದಿಯಲ್ಲಿಯೇ ದೋಣಿಯನ್ನು ಹಲವಾರು ಜನರು ದೋಣಿಯನ್ನು ಚಾಲಿಸುತ್ತಿರುವ ರೀತಿ ಮತ್ತು ವಿಶಾಲವಾದ ಕಡಲ ಕಿನಾರೆಯಲ್ಲಿ ಹರಡಿರುವ ಮರಳಿನ ರಾಶಿಯ ಮಧ್ಯದಲ್ಲಿ ಮೀನಿನ ಪುಟ್ಟಿಯನ್ನು ಹೊತ್ತ



ಮಹಿಳೆಯರು ತಲೆಯ ಮೇಲೆ ಮೀನುತುಂಬಿರುವ ದೊಡ್ಡಗಾತ್ರದ ಮೀನುಗಳು ನೇರವಾಗಿ ಗೋಚರಿಸುತ್ತವೆ. ಹಾಗೂ ಮಹಿಳೆಯರು ನೀಲಿ ಬಣ್ಣದ ಸೀರೆಯನ್ನು ಹುಟ್ಟು ಒಬ್ಬರ ಹಿಂದೆ ಒಬ್ಬರು ನಡೆಯುತ್ತಿದ್ದಾರೆ. ಈ ಚಿತ್ರವನ್ನು ಹೆಬ್ಬಾರರು ೧೯೭೫ರಲ್ಲಿ ತೈಲವರ್ಣದಿಂದ ಕ್ಯಾನ್‌ವಾಸನ ಮೇಲೆ ಮೂಡಿಸಿದ್ದಾರೆ. ಕಲಾಕೃತಿಯ ಅಳತೆ ೯೬.೫ ೧೦೨ ಸೆಂ.ಮೀ. ಇದೆ.

ಸಮುದ್ರ ಸಂಪತ್ತು

೧೯೯೦ರಲ್ಲಿ ಹೆಬ್ಬಾರರು ಈ ಚಿತ್ರವನ್ನು ೧೧೬x೧೫೬ ಸೆಂ.ಮೀ. ಅಳತೆಯ ಕ್ಯಾನ್‌ವಾಸನ್ನು ತೈಲವರ್ಣದಿಂದ ಮೂಡಿಸಿದ್ದಾರೆ. ಸಮುದ್ರ ಕಲಾಕೃತಿಗಳನ್ನು ನೋಡಿದ್ದಾಗ ಹೆಬ್ಬಾರರ ವಿಶಾಲವಾದ ಚಿಂತನೆಯ ಅರಿವಾಗುವತ್ತದೆ. ಬೃಹತ್ ಆದ ಸಮುದ್ರ ಕ್ಯಾನ್‌ವಾಸನ ಮೇಲೆ ಮೂಡಿಸುವ ಹೆಬ್ಬಾರರ ಚಾಣಾಕ್ಷತನವು ಅವರ ಕಲಾಕೃತಿಗಳನ್ನು ಆಳವಾಗಿ ಗಮನಿಸಿದಾಗ ತಿಳಿಯುತ್ತದೆ. ಚಿತ್ರದಲ್ಲಿ ಸಮುದ್ರವನ್ನು ಹೇರಳವಾಗಿರುವ ಮತ್ಸ್ಯರಾಶಿಯನ್ನು ಹಿಡಿಯಲು ಬಲೆಯ ಸಮೇತ ಸಿದ್ಧರಾಗಿರುವ ಎರಡು ಮಾನವಾಕೃತಿಗಳು ಅವರ ಬಳಿಯಲ್ಲಿಯೇ ನಿಂತಿರುವ ಮತ್ತು ಕುಳಿತಿರುವ ಮಹಿಳೆಯ ಆಕೃತಿಗಳು. ಸಮುದ್ರದಲ್ಲಿ ವೃತ್ತಾಕಾರವಾಗಿ ಉಂಟಾಗಿರುವ ರಚನೆಯು ಮತ್ಸ್ಯರಾಶಿಯ ಸಮೃದ್ಧಿಯನ್ನು ತೋರಿಸುತ್ತದೆ. ಅಲ್ಲದೇ ದೂರದಲ್ಲಿ ದಟ್ಟವರ್ಣದಿಂದ ಮೂಡಿರುವ ಗುಡ್ಡಗಳು, ಅದರ ಮಧ್ಯಭಾಗದಲ್ಲಿ ಎರಡು ನಿಂತಿರುವ ದೋಣಿಗಳನ್ನು ಅದರ ಹಿಂದೆ ಸೂರ್ಯನ ಬಣ್ಣಗಳನ್ನು ಹೊಂದಿರುವ ವರ್ಣದ ಛಾಯೆಯನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಚಿತ್ರವು ಒರಟಾದ ಮೈವಳಿಕೆಯಿಂದ ಕೂಡಿದೆ.

ಬಲೆ

ಹೆಬ್ಬಾರರು ರಚಿಸಿರುವ ಈ ಕಲಾಕೃತಿಯಲ್ಲಿ ಒರಟುತನದ ಬಣ್ಣದ ತಂತ್ರಗಾರಿಕೆಯನ್ನು ಬಣ್ಣಗಾರಿಕೆಯಿಂದಲೇ ಕಲಾಕೃತಿಯ ಮೇಲೆ ನಡೆದಿರುವಂತಹ ವರ್ಣಗಳ ಲೇಪನವನ್ನು ಗುರುತಿಸಬಹುದಾಗಿದೆ. ಕಲಾಕೃತಿಯಲ್ಲಿ ಸಮುದ್ರದ ದಡದಲ್ಲಿ ನಿಂತು ಬಲೆ ಬೀಸಿರುವಂತಹ ಒಬ್ಬ ಮಾನವಾಕೃತಿಯನ್ನು ದಪ್ಪವಾದ ರೇಖೆಗಳ ಮೂಲಕ ಮಾನವಾಕೃತಿಯ ರಚನೆಯಾಗಿದೆ. ಮೀನುಗಾರನು ಬೀಸಿರುವ ಬಲೆಯನ್ನು ಹಳದಿ, ಕೆಂಪು, ಮಿಶ್ರಿತ ಮೀನಿನಾಕಾರವನ್ನು ಗುರುತಿಸಬಹುದಾಗಿದೆ. ಇದರ ಹಿಂಬದಿಯನ್ನು ಗಾಢ ಸಮುದ್ರದ ಕಪ್ಪು ಮಿಶ್ರಿತ ನೀಲಿಛಾಯೆಯ ಈ ಎಲ್ಲಾ ವರ್ಣಗಳಿಂದ ಪ್ರಕಾಶಿಸುವಂತೆ ಕಾಣುತ್ತಿದ್ದು, ಸಮುದ್ರದ ದಡದಲ್ಲಿರುವ ಮರಳಿನ ರಾಶಿಯು ಸಮುದ್ರದ ನೀರನ್ನು ಸಮತೋಲನಗೊಳಿಸುವಂತೆ ಭಾಸವಾಗುತ್ತದೆ. ಇದಕ್ಕೆಲ್ಲ ಹೆಬ್ಬಾರರ ಅಗಾಧವಾದ ಚಿಂತನೆಗಳೇ ಈ

ರೀತಿಯ ವಿಶಾಲವಾದ ವಿಷಯವನ್ನು ಆಯ್ಕೆಗೆ ಕಾರಣ ಎಂದು ತಿಳಿಯಬಹುದಾಗಿದೆ. ಹೆಬ್ಬಾರರು ಕಲಾಕೃತಿಯನ್ನು ೧೯೯೧ರಲ್ಲಿ ತಮ್ಮ ಅಂತಿಮ ವರ್ಷಗಳಲ್ಲಿ ಚಿತ್ರಿಸಿದ್ದಾರೆ. ಚಿತ್ರದ ಅಳತೆಯು ೭೫x೮೫ ಸೆಂ.ಮೀ. ಇದ್ದು, ಇದನ್ನು ತೈಲವರ್ಣದಿಂದ ಚಿತ್ರಿಸಲಾಗಿದೆ.

ಸಮುದ್ರ ತೀರ


ಸಮುದ್ರ ತೀರ ಈ ಶೀರ್ಷಿಕೆಯಿಂದ ಆರಂಭವಾಗುವ ಈ ಕಲಾಕೃತಿಯು ಸಂಪೂರ್ಣವಾಗಿ ಕೆಂಪುವರ್ಣದಿಂದ ಕೂಡಿದ ವರ್ಣ ಚಿತ್ರವಾಗಿದೆ. ಸಮುದ್ರ ಅಗಾಧವಾದ ಶಕ್ತಿಯನ್ನು ಬಿಂಬಿಸಲು ಹೆಬ್ಬಾರರು ಕೆಂಪು ಮತ್ತು ಕಂದು ವರ್ಣಗಳ ಬಳಕೆಯಿಂದ ಮೂಡಿಸಿದ್ದಾರೆ. ಸಮುದ್ರದ ಹಳದಿ ಮಿಶ್ರಿತ ಕೆಂಪು ಮಿಶ್ರವರ್ಣಗಳು ಬಳಸಿಕೊಂಡಿದ್ದಾರೆ. ಸಮುದ್ರದ ಅಲೆಗಳನ್ನು ಸೂಚಿಸಲು ದಪ್ಪವಾದ ಕಪ್ಪು ಬಣ್ಣದ ಏಕರೇಖೆಗಳನ್ನು ಎಳೆದಿದ್ದಾರೆ. ಸಮುದ್ರದಲ್ಲಿ ಚಲಿಸುತ್ತಿರುವ ಮೂರು ದೋಣಿಗಳನ್ನು ಕಾಣಬಹುದು. ದಡದಲ್ಲಿ ನಿಂತು ನೋಡುತ್ತಿರುವಂತೆ ೪ ಜನರ ಗುಂಪೊಂದು ಚಿತ್ರಿತಗೊಂಡಿದೆ. ಈ ಚಿತ್ರವನ್ನು ೧೯೯೩ರಲ್ಲಿ ತೈಲ ಮಾಧ್ಯಮದಲ್ಲಿ ರಚನೆಮಾಡಲಾಗಿದೆ. ಇದರ ಅಳತೆ ೧೨೧.೭x೧೦೧.೭ ಸೆಂ.ಮೀ. ಇದೆ.

ಡೊಳ್ಳು ಬಾರಿಸುವವ

ಹೆಬ್ಬಾರರ ಈ ಡೋಲು ಬಾರಿಸುವವನು ನೋಡಿದ ಕ್ಷಣವೇ ಡೊಳ್ಳು ಬಾರಿಸುವವನ ತನ್ಮಯತೆ ಎಷ್ಟಿದೆ ಎಂದು ಹೇಳಬಹುದು. ಆಕೃತಿಯಲ್ಲಿ ತನಗಿಂತ ದೊಡ್ಡದಾದ ಡೋಲನ್ನು ಹೊತ್ತು ಬಾರಿಸುವ ಮಾನವಾಕೃತಿಯ ಎಡ ಪಾದದ ಮೇಲೆ ತನ್ನ ಮೈ ಬಾರವನ್ನು ಬಿಟ್ಟಿದ್ದಾನೆ. ಹೆಬ್ಬಾರರು ವರ್ಣಚೂರಿಯ ಸಹಾಯದಿಂದ ಮೂಡಿಸಿರುವಂತ ಕಲಾಕೃತಿಯ ಒರಟು ಮೈವಳಿಕೆಯು ಅದರಲ್ಲಿ ನೆಲಕ್ಕೆ ತಿಳಿನೀಲಿ ವರ್ಣವನ್ನು ಹಿನ್ನೆಲೆಯಲ್ಲಿ ಕಡುಹಳದಿ ವರ್ಣವನ್ನು, ಡೊಳ್ಳಿಗೆ ಕೆಂಪು ವರ್ಣವನ್ನು ವ್ಯಕ್ತಿಯು ಧರಿಸಿರುವ ಪೇಟಕ್ಕೆ ಕೆಂಪು ಬಣ್ಣದ ರುಮಾಲನ್ನು, ವ್ಯಕ್ತಿಯ ಬಾಹ್ಯರೇಖೆಗಳಿಗೆ ಗಾಢ ಕಪ್ಪು ವರ್ಣದಿಂದ ಚಿತ್ರಕೃತಿಯನ್ನು ಪೂರ್ಣಗೊಳಿಸಲಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೬೬ರಲ್ಲಿ ರಚಿಸಿದ್ದಾರೆ.

ವೀಣಾ

ಈ ಕಲಾಕೃತಿಯು ಸಂಪೂರ್ಣ ನೀಲಿವರ್ಣ ಪ್ರಧಾನವಾಗಿರುವ ಕಲಾಕೃತಿಯಲ್ಲಿ ವೀಣೆಯನ್ನು ಬಿಂಬಿಸುತ್ತದೆ. ಹಾಗೆಯೇ ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಹೆಣ್ಣಿನ ಆಕೃತಿಯ ಮುಖದ ಆಕಾರ, ವೀಣೆಯನ್ನು ನುಡಿಸುವ ಕೈಗಳು ಅಗೋಚರವಾದ ವೀಣಾಪಾಣಿಯಾದ ಸರಸ್ವತಿಯೇ ಎಂದು




ಭಾಸವಾಗುತ್ತದೆ. ಹೆಬ್ಬಾರರಿಗೆ ಕೇವಲ ಚಿತ್ರಕಲೆಯೊಂದಿಗೆ ಸಂಗೀತದಲ್ಲೂ ಅಪಾರವಾದ ಆಸಕ್ತಿಯಿತ್ತು, ಕತಕಳಿ ನೃತ್ಯವನ್ನು ಅತೀವ ಆಸಕ್ತಿಯಿಂದ ಕಲಿಯಲು ಮುಂದಾದವರು ಹಾಗಾಗಿ ಈ ರೀತಿಯ ಅಭಿಲಾಷೆಗಳು ಹೆಬ್ಬಾರರ ತಮ್ಮ ವರ್ಣಕಲಾಕೃತಿಗಳ ಮೂಲಕ ಹೊರಹಾಕಿದ್ದಾರೆ. ಇದರಿಂದಲೇ ಅವರಿಗೆ ಸಂಗೀತದಲ್ಲಿ ಎಷ್ಟು ಆಸಕ್ತಿ ಇತ್ತು ಎಂದು ತಿಳಿಯುತ್ತದೆ. ಈ ಕಲಾಕೃತಿಯನ್ನು ತೈಲವರ್ಣದಿಂದ ರಚಿಸಲಾಗಿದೆ. ಇದರ ಅಳತೆಯು ೭೬x೧೦೨ ಸೆಂ.ಮೀ. ಆಗಿದೆ.

ಸಂಜೆಯ ಹಾಡು

ಹೆಬ್ಬಾರರು ಗೋದೂಳಿ ಸಮಯದಲ್ಲಿ ರಚಿಸಿದಂತೆ ಈ ಕಲಾಕೃತಿಯು ಭಾಸವಾಗುತ್ತದೆ. ಕಲಾಕೃತಿಯಲ್ಲಿ ಸಂಪೂರ್ಣ ಹಲವಾರು ವರ್ಣಗಳಿಂದ ವರ್ಣ ಸಂಯೋಜನೆ ಗೊಂಡಿದೆ. ಹಿನ್ನೆಲೆಯಲ್ಲಿ ಸೂರ್ಯನು ಅಸ್ಥಂಗತನಾಗುತ್ತಿರುವ ದೃಶ್ಯವು ಕಾಣುತ್ತದೆ. ಒಬ್ಬ ಗ್ರಾಮೀಣ ಮಹಿಳೆಯು ಹಳ್ಳಿಯ ಸೊಗಡಿನ ವಸ್ತ್ರವಿನ್ಯಾಸವನ್ನು ಧರಿಸಿದ್ದಾಳೆ, ತಲೆಯ ಮೇಲೆ ಬುತ್ತಿಯ ಪುಟ್ಟಿಯನ್ನು ಎತ್ತಿ ಎಡಗೈಯಲ್ಲಿ ಹಸುವಿನ ಹಗ್ಗವನ್ನು ಹಿಡಿದು ಹಿಂಬದಿ ನೋಡುವ ದೃಶ್ಯವಿದೆ. ಅವಳ ಹಿಂಬದಿಯಲ್ಲಿ ಹಸುಕರುಗಳ ಹಿಂಡು ಬರುತ್ತಿರುವುದರ ಜೊತೆಗೆ ಇಬ್ಬರು ಯುವಕರು ಇದ್ದು, ಒಬ್ಬನು ಪುಪಿಳ್ಳಂಗೋವಿಯನ್ನು ಊದುತ್ತಿರುವ ದೃಶ್ಯವಾಗಿದೆ. ಒಟ್ಟಿನಲ್ಲಿ ಹೆಬ್ಬಾರರ ಒರಟಾದ ವರ್ಣಪ್ರಯೋಗದ ಕಲಾಶೈಲಿಯು ಹಳ್ಳಿಗಾಡಿನ ನಿತ್ಯ ಜೀವನದ ಕಂಪನ್ನು ಸೂಸುವ ಸಂಜೆಯ ಹಾಡಾಗಿವೆ. ಈ ಕೃತಿಯ ಅಳತೆಯು ೭೬x೧೦೨ ಸೇಂ.ಮೀ. ಆಗಿದ್ದು ತೈಲವರ್ಣದಿಂದ ಮಾಡಲಾಗಿದೆ.

ಹಂಬಲಿಸು

ಈ ವಿಶಾಲವಾದ ನೀಲಾಕಾಶದ ಬಾನಂಗಳದಲ್ಲಿ ಯಾವುದೇ ಒಂದು ಮಾನವಾಕೃತಿಯು ಈ ಭೂಮಿಯನ್ನು ಬೆಳಗುವ ಸೂರ್ಯಚಂದ್ರರ ಕಡೆಗೆ ತನ್ನ ಎರಡು ಕೈಗಳನ್ನು ಎತ್ತಿ ಯಾವುದೇ ರೀತಿಯ ತನ್ನ ಮನಸ್ಸಿನ ಬಯಕೆಯನ್ನು ಬೇಡುವಂತೆ ಬಾಸವಾಗುವ ಈ ಕಲಾಕೃತಿಯಲ್ಲಿ ಒಂದು ಸೂರ್ಯನ ಕಿರಣಗಳು ಅವನ ಪ್ರಭೆ ಮತ್ತು ಅರ್ಧ ಚಂದ್ರ ರೀತಿಯಲ್ಲಿ ಹೋಲುವ ಒಂದು ವೃತ್ತಾಕಾರವು ಇನ್ನೊಂದು ಕಡೆ ಹಿನ್ನಲೆಯಲ್ಲಿ ಸಂಪೂರ್ಣ ನೀಲಾಕಾಶದ ನೀಲಿ ವರ್ಣದಿಂದ ತುಂಬಿದೆ. ಈ ಚಿತ್ರದಲ್ಲಿ ಹೆಬ್ಬಾರರು ವಿಶ್ವಮಾನವ ರೀತಿಯಲ್ಲಿ ತನ್ನ ಮನದ ಅಭಿವ್ಯಕ್ತಿಯನ್ನು ಕೋರುವ ರೀತಿಯಲ್ಲಿ ಆ ಮಾನವಾಕೃತಿಯಲ್ಲಿ ಕಂಡುಬರುತ್ತವೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೭೧ರಲ್ಲಿ ತೈಲವರ್ಣದಿಂದ ಚಿತ್ರಿಸಿದ್ದಾರೆ.



ಶರದ್ ಪೂರ್ಣಿಮ

ಈ ಕಲಾಕೃತಿಯಲ್ಲಿ ಹಳದಿ ಮಿಶ್ರಿತ ಕಡುಬಣ್ಣವು ಈ ಕಲಾಕೃತಿಯಲ್ಲಿ ಪ್ರಧಾನ ವರ್ಣವಾಗಿದೆ. ಶರದ್ ಪೂರ್ಣಿಮೆಯ ಅಂಗವಾಗಿ ರಚಿಸಿದಂತಹ ಈ ಕಲಾಕೃತಿಯಲ್ಲಿ ಬಿಳಿಯ ಬಣ್ಣದಲ್ಲಿರುವ ಗೋಲಾಕಾರವು ಪೂರ್ಣ ಚಂದ್ರನನ್ನು ಪ್ರತಿಬಿಂಬಿಸುತ್ತದೆ. ಅಲ್ಲದೇ ವಿಶಾಲವಾದ ಬಾನಂಗಳದಲ್ಲಿ ಭೂಮಿ ಮತ್ತು ಚಂದ್ರನ ನಡುವಿನ ಅಂತರವನ್ನು ತೋರಿಸುತ್ತದೆ. ಭೂಮಿಯನ್ನು ಮೇಲ್ಮೈಗಳು ಒರಟಾದ ಮೈವಳಿಕೆಯಿಂದ ರಚಿಸಲಾಗಿದೆ. ಅದರಲ್ಲಿ ಹಳದಿ, ಕೇಸರಿ, ಹಳದಿ, ತಿಳಿಬಿಳಿ ಬಣ್ಣದ ಬಳಕೆಯನ್ನು ಮಾಡಲಾಗಿದೆ. ಹಾಗೂ ಚಂದ್ರನು ಪೂರ್ಣಪ್ರಮಾಣದಲ್ಲಿ ವೃತ್ತಾಕಾರದಲ್ಲಿ ಇರದೇ ಅಸಮತೋಲನದಿಂದ ಕೂಡಿದ ಬಿಳಿ, ಬಿಳಿವರ್ಣದಿಂದ ಕೂಡಿದ ಇವರ ಅಳತೆಯು ೧೦೨x೧೨೨ ಸೆಂ.ಮೀ. ಇದ್ದು, ತೈಲವರ್ಣದ ಕಲಾಕೃತಿಯನ್ನು ೧೯೭೨ರಲ್ಲಿ ರಚನೆಮಾಡಿದ್ದಾರೆ.

ಕಲಾವಿದರ ಕೈ ಹಿಡಿ

ಈ ಕಲಾಕೃತಿಯನ್ನು ನೋಡಲು ಸುಲಭವೆನಿಸಿದರೂ ಅದರ ಭಾವಾರ್ಥವನ್ನು ತಿಳಿಯಲು ತುಂಬಾ ಕಷ್ಟವಾಗಿದೆ. ಕಲಾಕೃತಿಯ ಮೇಲ್ಭಾಗದಲ್ಲಿ ಅಂದಕಾರದೊಂದಿಗೆ ಕೂಡಿರುವ ಸೂರ್ಯನ ಬೆಳಕಿನ ಕಿರಣಗಳಂತೆ ಕಾಣುವ ಬೆಳಕಿನ ಛಾಯೆ. ನಂತರದಲ್ಲಿ ಸಮುದ್ರದ ಜಲರಾಶಿಯನ್ನು ಹೋಲುವ ನೀರಿನ ಮೈವಳಿಕೆಯಿಂದ ಕೂಡಿರುವ ಒಂದು ಪಟ್ಟಿಕೆಯನ್ನು ಕಾಣಬಹುದು. ಮುಕ್ಕಾಲು ಭಾಗದ ಚಿತ್ರವನ್ನು ಸಂಪೂರ್ಣವಾಗಿ ಕೇಸರಿ ಮಿಶ್ರಿತ ಕೆಂಪು ಬಣ್ಣದಿಂದ ಬಣ್ಣದ ಗಾಢತೆ ಮತ್ತು ಬಲಿಷ್ಠತೆಯನ್ನು ವ್ಯರ್ಥಪಡಿಸುವ ಹಿನ್ನೆಲೆ, ಅದಕ್ಕೆ ನೇರವಾಗಿ ವಿರುದ್ಧವೆನ್ನುವ ರೀತಿಯಲ್ಲಿ ತಿಳಿ ಹಳದಿ ಬಣ್ಣದ ವೃತ್ತಾಕಾರದ ಬಳೆಯ ನಡುವೆ ಅತ್ಯಂತ ಗಾಡಾಂಧಕಾರದ ಕಡುನೀಲಿ ಮಿಶ್ರಿತ ಕಪ್ಪು ವರ್ಣವನ್ನು, ಒಂದು ಸಣ್ಣದೋಣಿಯಲ್ಲಿರುವ ಪುಟ್ಟ ಮನುಷ್ಯನು ತನಗಿಂತಲೂ ಮಿಗಿಲಾದ ಬೃಹದಾಕಾರದ ತಿಮಿಂಗಲಾಕಾರದ ಮೀನುಗಳು ಕೋಲುವ ಹಳದಿ ರೇಖೆಗಳು ನೋಡುಗನ ಮನಸ್ಸಿನ ಮೇಲೆ ಒಬ್ಬ ಸಾಮಾನ್ಯ ಮನುಷ್ಯನು ತನಗಿಂತ ಹಿರಿಯದಾದ ಕಷ್ಟಸಾಧ್ಯವಾದ ಸವಾಲುಗಳನ್ನು ಎದುರಿಸಿ ಗೆಲ್ಲಬಹುದೆಂಬ ರೀತಿಯ ತಾತ್ವಿಕವಾದ ಒಂದು ಚಿಹ್ನೆಯ ರೀತಿಯಲ್ಲಿ ಈ ಕಲಾಕೃತಿಯು ಭಾಸವಾಗುತ್ತದೆ. ಕಲಾಕೃತಿಯ ಅಳತೆ ೭೬x೧೦೨ ಸೆಂ.ಮೀ. ಇದು ತೈಲವರ್ಣದಿಂದ ಮಾಡಲಾಗಿದೆ.

ಗೋವಾ

ಒಬ್ಬ ಅನುಭವಿ ಕಲಾವಿದನ ದೃಶ್ಯ ವ್ಯಾಪ್ತಿಯು ಎಷ್ಟು ಎತ್ತರಕ್ಕೆ ತನ್ನದೃಷ್ಟಿಯನ್ನು ವಿಸ್ತರಿಸುತ್ತದೆ


ಎನ್ನುವುದಕ್ಕೆ ಹೆಬ್ಬಾರರ ಕಲಾ ಚಿಂತನೆಯೇ ಅವರಿಗೆ ಈ ರೀತಿಯ ಅತ್ಯಂತ ವಿಸ್ತಾರವಾದ ಗೋವಾ ಪರಿಸರದ ನಿಸರ್ಗ ಸಿರಿಯನ್ನು ಮತ್ತು ಸಮುದ್ರದ ಜಲರಾಶಿಯನ್ನು, ಆ ಗೊಂಡಾರಣ್ಯದಲ್ಲಿ ಗಮನಿಸಬಹುದಾಗಿದೆ. ನಿಸರ್ಗ ಸಂಬೃದ್ಧಿಯ ಈ ಪ್ರದೇಶವನ್ನು ಅತ್ಯಂತ ಎತ್ತರದ ಸ್ಥಳದಿಂದ ಚಿತ್ರಿಸಿದಂತೆ ಭಾಸವಾಗುತ್ತದೆ. ಹಸಿರಿನ ಮಧ್ಯ ಹಳದಿ ಮತ್ತು ಕೆಂಪು ವರ್ಣಗಳನ್ನು ಕಾಣಬಹುದಾಗಿದೆ. ಸಮುದ್ರ ಜಲರಾಶಿಯು ಇಡೀ ಹಸಿರು ವರ್ಣದ ವರ್ಣಸಂಯೋಜನೆಗೆ ಆಧಾರವಾಗಿ ನಿಂತಿದೆ. ಹೆಬ್ಬಾರರ ಗೋವಾಗೆ ವಿಶ್ರಾಂತಿಗೆ ಎಂದು ತೆರಳಿದ ಸಂದರ್ಭದಲ್ಲಿ ಈ ಕಲಾಕೃತಿಯನ್ನು ೧೯೪೦ರಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಕಲಾಕೃತಿಯ ಅಳತೆಯು ೭೬x೪೨ ಸೆಂ.ಮೀ. ಇದೆ.

ಗಣೇಶ

ಹೆಬ್ಬಾರರು ತಮ್ಮ ಕರ್ಮ ಭೂಮಿಯಾಗಿದ್ದ ಮುಂಬೈ ನಗರದಲ್ಲಿ ಈ ರೀತಿಯ ಗಣೇಶನ ಮೂರ್ತಿಗಳು ಕಂಡುಬರುತ್ತವೆ. ಅದರಿಂದ ಪ್ರಭಾವಿತರಾಗಿ ಹೆಬ್ಬಾರರು ರಚಿಸಿದ ಗಣೇಶನ ಕಲಾಕೃತಿಯಂತಿದೆ. ಕಲಾಕೃತಿಯಲ್ಲಿ ಮುಖ್ಯವಾಗಿ ಗಣೇಶನನ್ನು ಕೇಸರಿ ಮಿಶ್ರಿತ ಹಳದಿ ವರ್ಣದಿಂದ ಕೂಡಿದ ಗಣೇಶನ ನೇರವಾದ ಮುಖದಲ್ಲಿ ಅವನ ಕಣ್ಣುಗಳು, ಸೊಂಡಿಲು, ಸೊಂಡಿಲಿನ ಹಿಡಿದಿರುವ ಮಾದಕ ಮತ್ತು ವರದ ಹಸ್ತದಿಂದ ಮುದ್ರಿಸಿರುವುದು ಬಿಂಬಿಸುತ್ತದೆ. ಗಣೇಶನ ಆಕೃತಿಯನ್ನು ಒರಟಾದ ವರ್ಣ ತಂತ್ರಗಾರಿಕೆಯಿಂದ ರಚನೆಮಾಡಲಾಗಿದೆ. ಗಣೇಶನ ಸುತ್ತಲೂ ಬಿಳಿಯ ಪಟ್ಟೆಯನ್ನು ವೃತ್ತಾಕಾರದಲ್ಲಿ ಕಾಣಬಹುದಾಗಿದೆ. ಕಲಾಕೃತಿಯ ಸಂಪೂರ್ಣ ಹಿನ್ನೆಲೆಯಲ್ಲಿ ಕುಂಕುಮವನ್ನು ಹೋಲುವ ಕೆಂಪುವರ್ಣದಿಂದ ತುಂಬಿದ್ದಾರೆ. ಹೆಬ್ಬಾರರು ಈ ಕಲಾಕೃತಿಯನ್ನು ೧೯೫೨ರಲ್ಲಿ ತೈಲವರ್ಣದಲ್ಲಿ ಮಾಡಿದ್ದಾರೆ. ಕಲಾಕೃತಿಯ ಅಳತೆಯು ೬೦x೭೦ ಸೆಂ.ಮೀ. ಅಳತೆಯಲ್ಲಿದೆ.

ಕ್ರಿಯಾವಿಧಿ

ಹೆಬ್ಬಾರ ತಮ್ಮ ಮಮತೆಯ ಮಾತೆ ಸೀತಮ್ಮನವರು ತೀರಿ ಹೋದ ದುಃಖದ ವಿಷಯವನ್ನು ಪ್ರತಿನಿಧಿಸುತ್ತದೆ. ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಹೆಬ್ಬಾರರಿಗೆ ಬಾಲ್ಯದಿಂದಲೇ ಸಂಪ್ರದಾಯ ಬದ್ಧ ಆಚರಣೆಯಿಂದಲೇ ಬೆಳೆದವರು. ಅಂತೆಯೇ ತಮ್ಮ ತಾಯಿಯ ತಿಥಿ ಕಾರ್ಯವನ್ನು (ಹಿರಿಯರಿಗೆ ಎಡೆ ಹಾಕುವ) ನಡೆಸುವ ಸಂದರ್ಭದ ಚಿತ್ರ. ಕಲಾಕೃತಿಯಲ್ಲಿ ಆಕಾಶದಲ್ಲಿ ಹಾರಾಡುತ್ತಿರುವ ಹಲವಾರು ಹಕ್ಕಿ(ಕಾಗೆ)ಗಳು ಹಾರಾಡುತ್ತಿರುವ ದೃಶ್ಯ, ಇನ್ನೊಂದೆಡೆ ಪೂಜಾ ವಿಧಿವಿಧಾನಗಳಲ್ಲಿ ಮಗ್ನರಾಗಿರುವ ಪುರೋಹಿತರು. ಪೂಜಾಕಾರ್ಯದಲ್ಲಿ ಮಗ್ನರಾಗಿದ್ದಾರೆ, ಇನ್ನುಳಿದ ಆರುಮಂದಿಯಲ್ಲಿ ತಮ್ಮ ಮುಖವನ್ನು



ನೋಡಿ ತಮ್ಮ ಹಿರಿಯರನ್ನು ಕರೆಯುವ ರೀತಿಯಲ್ಲಿ ಅವರಿಗಿಟ್ಟು ಎಡೆಯನ್ನು ಬಾಳೆಯ ಎಲೆಯನ್ನು ಹಿಡಿಯಲಾಗಿದೆ. ಈ ಕಲಾಕೃತಿಯನ್ನು ೧೭೪೯ರಲ್ಲಿ ತೈಲವರ್ಣದಿಂದ ರಚಿಸಿದ್ದಾರೆ.

ಪ್ರಳಯ


ಈ ಕಲಾಕೃತಿಯಲ್ಲಿ ಹೆಬ್ಬಾರರು ಪೃಥ್ವಿಯ ವಿಶ್ವರೂಪವನ್ನು ತೋರಿಸಿದ್ದಾರೆ. ನಿಸರ್ಗದ ಮುಂದೆ ಮಾನವನನ್ನು ತೃಣಮಾತ್ರ ಎಂಬಂತೆ ಕಲಾಕೃತಿಯಲ್ಲಿ ಬಿಂಬಿತವಾಗಿದೆ. ಭೂಗರ್ಭದ ಅಂತರಾಳದಿಂದ ಮುಗಿಲಿನ ಎತ್ತರಕ್ಕೆ ಎದ್ದ ಜ್ವಾಲಮುಖಿಯು ನಭೋಮಂಡಲವನ್ನು ಮುಟ್ಟಿರುವುದು. ವಿಶ್ವವು ಸಂಪೂರ್ಣವಾಗಿ ಗಾಢಾಂಧಕಾರದಲ್ಲಿ ಮುಳುಗಿರುವಂತೆ ಸಂಪೂರ್ಣ ಕಪ್ಪು ಛಾಯೆಯನ್ನು ಮೂಲವಾಗಿಟ್ಟುಕೊಂಡು, ಪ್ರಕೃತಿಯ ರುದ್ರನರ್ತನಕ್ಕೆ ಇಬ್ಬರು ಮಾನವಾಕೃತಿಗಳು ಗಂಡು ಹೆಣ್ಣು ಭಯದಿಂದ ಓಡುವ ದೃಶ್ಯವಾಗಿದೆ. ಅವರನ್ನು ಸುತ್ತುವರಿದ ಅಗ್ನಿ ಜ್ವಾಲೆಯು ಭೂಮಿಯ ಮೇಲೆ ನದಿಯಂತೆ ಹರಿಯುತ್ತಿರುವ ಲಾವಾರಸವು ಎಲ್ಲವನ್ನು ಸರ್ವನಾಶಮಾಡಿವೆ. ನಭೋಮಂಡಲವನ್ನು ಎಲ್ಲ ಗ್ರಹಗಳು ಕೆಂಪು ವರ್ಣದಿಂದ ಉರಿಯುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೮೦ರಲ್ಲಿ ತೈಲವರ್ಣದಿಂದ ಮಾಡಿದ್ದಾರೆ, ಇವರ ಅಳತೆಯು ೧೦೯x೧೨೨ ಸೆ.ಮೀ. ಇದೆ.

ಗಾಳಿಪಟ

ಹೆಬ್ಬಾರರು ಈ ಕಲಾಕೃತಿಯನ್ನು ತೈಲವರ್ಣದಿಂದ ರಚಿಸಿದ ಕಲಾಕೃತಿಯಾಗಿದ್ದು, ಚಿತ್ರದಲ್ಲಿ ವಿಶಾಲವಾದ ಸಮುದ್ರದ ದಂಡೆಯ ಮೇಲೆ ಗಾಳಿಪಟದ ಆಟವನ್ನು ಆಡುತ್ತಿರುವ ೪ ಜನ ಯುವಕರ ಬಳಗ, ಸ್ವಚ್ಛಂದವಾದ ಹಳದಿ ಮಿಶ್ರಿತ ವರ್ಣದ ಆಕಾಶದಲ್ಲಿ ಮೂರು ನಾಲ್ಕು ಗಾಳಿಪಟಗಳು ಹಾರಾಡುವ ದೃಶ್ಯ ಬಣ್ಣ ಬಣ್ಣದ ಹಸಿರು, ಕೆಂಪು ಮಿಶ್ರಿತ ಹಳದಿ, ಹಸಿರೂ ಬಾಲವನ್ನು ಹೊಂದಿರುವ ಗಾಳಿಪಟಗಳು ನೋಡಲು ಸುಂದರವಾಗಿದೆ. ಆಗಸದಲ್ಲಿ ಗಾಢವಾದ ವರ್ಣದಲ್ಲಿ ಸೂರ್ಯನನ್ನು ಚಿತ್ರಿಸಿದ್ದಾರೆ. ನೀಲಿ ಸಮುದ್ರದ ಅಲೆಗಳು, ಹಳದಿ ಮರಳಿನರಾಶಿ ಒಟ್ಟಿನಲ್ಲಿ ನೋಡುಗರಿಗೆ ಸ್ಪೂರ್ತಿತರುವಂತಿದೆ.

ಶಕ್ತಿ

ಈ ತೈಲವರ್ಣದ ಚಿತ್ರವನ್ನು ೧೯೮೨ರಲ್ಲಿ ರಚಿಸಿದ್ದಾರೆ. ಈ ಚಿತ್ರಕೃತಿಯು ಪಂಚಭೂತಗಳ ಗುಂಪಿಗೆ ಸೇರುವಂತಹ ಚಿತ್ರಕೃತಿಯಾಗಿದೆ. ಕಲಾಕೃತಿಯ ತಿಳಿನೇರಳೆ ವರ್ಣದಿಂದ ಬಹುಭಾಗವನ್ನು ಬಳಸಲಾಗಿದೆ. ಕಲಾಕೃತಿಯ ಒಂದು ಬದಿಯನ್ನು ಗಾಢವಾದಂತಹ ನೀಲಿ ಪಟ್ಟಿಯನ್ನು ಕಾಣಬಹುದಾಗಿದೆ. ಚಿತ್ರದಲ್ಲಿ ಸೂರ್ಯನಂತೆ ಪ್ರಕಾಶಿಸುವ ಒಂದು ವೃತ್ತವಿದ್ದು ಅದರಿಂದ ಹೊರಹೊಮ್ಮುವಂತಹ ಪ್ರಭೆಯಲ್ಲಿ



ಹರಡಿರುವ ಕೆಂಪು ಮಿಶ್ರಿತ ನೇರಳೆ ಬಣ್ಣವು ಆ ಒಂದು ಸೂರ್ಯನ ಬಿಂದುವಿನಿಂದ ಹೊರಹೊಮ್ಮುತ್ತಿರುವ ಶಕ್ತಿಯ ಸಂಕೇತವಾಗಿದೆ. ಕಲಾಕೃತಿಯ ಮೈವಳಿಕೆಯು ಒರಟು ಬಣ್ಣದಿಂದ ಕೂಡಿದ ತಂತ್ರಶೈಲಿಯಿಂದ ಕೂಡಿದ್ದಾಗಿದೆ.

ನಾಗಮಂಡಲ


ದಕ್ಷಿಣ ಕನ್ನಡದ ಸಾಂಪ್ರದಾಯಿಕವಾದ ನಾಗಾರಾಧನೆಯನ್ನು ಹೆಬ್ಬಾರರು ದೈವಿಕತೆಯನ್ನು ವಿಶಾಲವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಕಲಾಕೃತಿಯ ಮುಕ್ಕಾಲು ಭಾಗ ನಾಗದೇವರ ಸುರುಳಿ ದಿವ್ಯ ದರ್ಶನವಾಗುತ್ತದೆ. ನಾಗದೇವತೆಯ ಚಿತ್ರವನ್ನು ಹಲವಾರು ಮಿಶ್ರವರ್ಣಗಳಿಂದ ಅದರ ಮುಖವನ್ನು ನೋಡುಗಿರಗೆ ನೇರವಾದ ಪ್ರಭಾವ ಬೀರುವಂತೆ, ಅದರ ಶಕ್ತಿ ತಿಳಿಯುವಂತೆ ಚಿತ್ರಿಸಿದ್ದಾರೆ. ನಾಗದೇವತೆಯ ಮುಂದೆ ಪೂಜಾರಿಯು ದೇವತೆಯನ್ನು ಆರಾಧಿಸುತ್ತಿರುವ ಚಿತ್ರಣವಿದೆ. ಅವರೊಂದಿಗೆ ವಾದ್ಯ ಬಳಗದವರು ವಾದ್ಯಗಳನ್ನು ನುಡಿಸುತ್ತಿದ್ದಾರೆ. ಗಾಢವಾದ ಹಿನ್ನೆಲೆಯಲ್ಲಿ ಮೂಡಿದ ವರ್ಣಚಿತ್ರಣವಾಗಿದೆ. ಹೆಬ್ಬಾರರು ಅವರ ಸಂಪ್ರದಾಯದಲ್ಲಿ ನಾಗಾರಾಧನೆಯನ್ನು ಎಷ್ಟು ದೊಡ್ಡ ರೀತಿಯಲ್ಲಿ ಆಚರಿಸುತ್ತಾರೆ ಎಂಬುದಕ್ಕೆ ಈ ಕಲಾಕೃತಿಯು ಸಾಕ್ಷಿಯಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೮೬ರಲ್ಲಿ ತೈಲವರ್ಣದಿಂದ ರಚನೆಮಾಡಿದ್ದಾರೆ. ಈ ಕಲಾಕೃತಿಯ ಅಳತೆಯು ೧೯೯x೧೨೨ ಸೆಂ.ಮೀ. ಇದೆ.

ಅಗ್ನಿ

ಈ ಕಲಾಕೃತಿಯನ್ನು ಹೆಬ್ಬಾರರು ತೈಲವರ್ಣದಿಂದ ೧೯೮೬ರಲ್ಲಿ ರಚನೆಮಾಡಿದ್ದಾರೆ. ಈ ಕಲಾಕೃತಿಯು ೧೦೨x೧೨೨ ಸೆಂ.ಮೀ. ಇದ್ದು, ಪಂಚಭೂತಗಳಲ್ಲಿ ಒಂದಾದ ಅಗ್ನಿಯ ವಿಷಯಕ್ಕೆ ಸಂಬಂಧಿಸಿದ ಕಲಾಕೃತಿಯಾಗಿದೆ. ಈ ಕಲಾಕೃತಿಯಲ್ಲಿ ಸಂಪೂರ್ಣ ಅಗ್ನಿ ಸಂಬಂಧಿಸಿದ ಹಳದಿ, ಕೇಸರಿ, ಕೆಂಪು ಮತ್ತು ಕಂದು ವರ್ಣಗಳನ್ನು ಬಳಸಲಾಗಿದೆ. ಕಲಾಕೃತಿಯ ಮಧ್ಯಭಾಗದಲ್ಲಿ ಹೋಮಕುಂಡವನ್ನು ರಚಿಸಲಾಗಿದೆ. ಹೋಮಕುಂಡದಲ್ಲಿ ಉರಿಯುತ್ತಿರುವ ಅಗ್ನಿ ಜ್ವಾಲೆಯು ತನ್ನ ಶಕ್ತಿಯ ಪ್ರಖರತೆಯು ತನ್ನ ಸುತ್ತಲು ಪ್ರಜ್ವಲಿಸಿದೆ. ಹೋಮಕುಂಡ ಸುತ್ತಲು ಕೆಂಪು, ಹಳದಿ ವರ್ಣದಿಂದ ಮೂಡಿರುವ ಪುಷ್ಪದಂತೆ ಇರುವ ವಿನ್ಯಾಸವಿದೆ. ಒಟ್ಟಿನಲ್ಲಿ ಹೆಬ್ಬಾರರ ದೃಷ್ಟಿಯಲ್ಲಿ ಪಂಚಭೂತಗಳಲ್ಲಿ ಅಗ್ನಿಯ ಪ್ರಖರತೆಯನ್ನು ಚಿತ್ರಿಸಿದ್ದಾರೆ.

ಜಲ

ಹೆಬ್ಬಾರರ ಈ ಕಲಾಕೃತಿಯು ಪಂಚಭೂತಗಳಲ್ಲಿ ಒಂದಾದ ಜಲಕ್ಕೆ ಸಂಬಂಧಿಸಿದ ಕಲಾಕೃತಿಯಾಗಿದೆ.




ಈ ಕಲಾಕೃತಿಯಲ್ಲಿ ಸಂಪೂರ್ಣವಾಗಿ ನೀಲಿವರ್ಣದಿಂದ ತುಂಬಿದೆ. ನೀಲಿ ವರ್ಣವು ಜಲರಾಶಿಯ ಸಂಕೇತವನ್ನು ಪ್ರತಿನಿಧಿಸುತ್ತವೆ. ಇದಕ್ಕೆ ಮುಖ್ಯವಾಗಿ ಕಲಾಕೃತಿಯ ಮಧ್ಯಭಾಗದಲ್ಲಿ ಬಿಂದಿಗೆಯ ಆಕೃತಿಯನ್ನು ಕಾಣಬಹುದಾಗಿದೆ. ಬಿಂದಿಗೆಯ ನೀರಿನ ಅವಶ್ಯಕತೆಯ ಸಂಕೇತವನ್ನು ಸೂಚಿಸುತ್ತದೆ. ಅವರ ಸುತ್ತಲು ಮೂಡಿರುವ ಅಲೆಗಳು ನೀರಿನ ನಿರಂತರ ಚಲನೆಯನ್ನು ಅದರಲ್ಲಿ ಮೂಡಿರುವ ಅಲೆಗಳನ್ನು ಸೂಚಿಸುತ್ತದೆ. ನೀರು ಪರಿಶುದ್ಧತೆಯ ಸಂಕೇತವಾಗಿದ್ದು ಈ ಭೂಮಿಯು ನೀರಿನಿಂದ ಕೂಡಿರುವ ಹಾಗೇ ಮಣ್ಣಿನ ಬಿಂದಿಗೆಯಲ್ಲಿ ಭೂವರ್ಣಗಳ ಬಳಕೆ ಮಾಡಲಾಗಿದೆ. ಹೆಬ್ಬಾರರ ಈ ವಿಶಾಲ ದೃಷ್ಟಿಕೋನದ ಈ ಜಲರಾಶಿಯ ಕಲಾಕೃತಿಯು ನೋಡಲು ಸೌಮ್ಯವಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೮೬ರಲ್ಲಿ ತೈಲವರ್ಣದಿಂದ ರಚಿಸಿದ್ದು, ಇದರ ಅಳತೆಯು ೭೬x೯೨ ಸೆಂ.ಮೀ ಇದೆ.

ಸೂರ್ಯಕಾಂತಿ

೧೯೬೦ರಲ್ಲಿ ಅವರು ಬರೆದ ಒಂದು ಹೂವಿನ ಚಿತ್ರವಿದೆ. ಸೂರ್ಯಕಾಂತಿ ಹೂ ಅದರ ಮೇಲ್ಗಡೆಯ ಸ್ವಲ್ಪ ಭಾಗದಲ್ಲಿ ಕಡು ಹಳದಿ ಕೆಂಪಿನ ಸೂರ್ಯಬಿಂಬ ಎರಡನ್ನೂ ಹೂವಿನ ಹೃದಯಕ್ಕೆ ಜೋಡಿಸುವ ಅಡ್ಡವಾಗಿ ಎಳೆದ ನೇರಳೆ ರೇಖೆಗಳು ತುಟಿಯ ಸಂಕೇತ, ಹೂವನ್ನು ಹಿಡಿದುಕೊಂಡು ತೊಟ್ಟಿಲಿನಲ್ಲಿ ಜೀವ ಜಿನುಗುತ್ತಿದೆ. ಸೂರ್ಯಬಿಂಬದ ತೇಜೋಪೂರ್ಣ ವರ್ಣಗಳನ್ನು ಸೂರ್ಯಕಾಂತಿ ಪಚನ ಮಾಡಿ ವಿಕಾಸೋನ್ಮುಖವಾಗಿದೆ. ಲೋಕದ ಶಕ್ತಿಗೆ ಸೂರ್ಯನನ್ನು ಸಂಕೇತವಾಗಿರಿಸಿಕೊಂಡರೆ, ಸೂರ್ಯಕಾಂತಿ ಸಕಲ ಜೀವರಾಶಿಗೂ ಸಂದೇಶ ನೀಡುವಂತಿದೆ. ಲೋಕದ ಅನಂತ ಚೈತನ್ಯವೇ ಮನುಷ್ಯನಲ್ಲಿ ಮಿಡಿಯುತ್ತದೆ. ಅದನ್ನು ಅರಸಿಕೊಂಡರೆ ಜೀವ ಅರಳುತ್ತದೆ. ಸೂರ್ಯಕಾಂತಿ ಅರಳಲು ಸೂರ್ಯನಿಗೆ ಮುಖಮಾಡಬೇಕು. ಮನುಷ್ಯ ವಿಕಾಸ ಹೊಂದಬೇಕಾದರೆ ತನ್ನಲ್ಲಿರುವ ಪರಮಶಕ್ತಿ ಅಭಿಮುಖನಾಗಿ ನಿಲ್ಲಬೇಕು ಎಂಬಂತಹ ಸಂದೇಶವನ್ನು ಈ ಕಲಾಕೃತಿಯು ಸಂದೇಶಿಸುವಂತಿದೆ.

ಆಕಾಶ

ಆಕಾಶದ ಶೀರ್ಷಿಕೆಯ ಈ ಕಲಾಕೃತಿಯು ಭೂಮಿ ಮತ್ತು ಆಕಾಶವನ್ನು ಒಂದೇ ಕಲಾಕೃತಿಯಲ್ಲಿ ಮೂಡಿಸುವ ಹೆಬ್ಬಾರರ ಕಲಾವಂತಿಕೆಯು, ಕಲಾ ಸೃಷ್ಟಿಗೆ ಅವರಿಗೆ ಅವರೇ ಸಾಟಿ. ನೋಡಲು ಸಾಮಾನ್ಯವೆನ್ನುವ ವಿಷಯದ ಆಯ್ಕೆಯಲ್ಲಿ ಇಡೀ ಚಿತ್ರಣದ ವ್ಯಾಪ್ತಿಯು ಭೂಮಿ ಮತ್ತು ಆಕಾಶವನ್ನು ಒಂದು ಮಾಡುವಂತಿದೆ. ಭೂಮಿಯ ಮೇಲೆ ಮೂಡಿರುವಂತಹ ಹಳದಿ ಮಿಶ್ರಿತ ಕೆಂಪು ಬಣ್ಣದಲ್ಲಿ ಒರಟು ಛಾಯೆಯ ಮೈವಳಿಕೆಯಿಂದ ಕೂಡಿದ್ದು, ಅವರ ಮೇಲೆ ಸಣ್ಣ ಸಣ್ಣ ರೀತಿಯ ಕಟ್ಟಡಗಳ ರಚನೆಯ ರೇಖೆಗಳನ್ನು ಕಾಣಬಹುದಾಗಿದೆ.




ಭೂಮಿಯಿಂದ ಮೇಲ್ಭಾಗದಲ್ಲಿ ಕಂದು ವರ್ಣದಿಂದ ಕೂಡಿದೆ, ಧೂಳಿನ ರಾಶಿಯಂತೆ ಗೋಚರಿಸುವ ವಾಯು ಮಂಡಲದ ಬೃಹತ್ ಆಕಾರದ ವಿಶಾಲವಾದ ವಾಯುಮಂಡಲ, ಕೊನೆಯಲ್ಲಿ ಆಕಾಶವನ್ನು ಮುಟ್ಟುವಂತೆ ತಿಳಿ ನೆರಳೆ ವರ್ಣದಿಂದ ಕೂಡಿದ ಬಿಳಿಯ ಅರ್ಧವೃತ್ತವನ್ನು ಕಾಣಬಹುದಾಗಿದೆ. ಈ ಪಂಚಭೂತಗಳ ಅಂಶಗಳು ಹೆಬ್ಬಾರರ ವಿಶಾಲವಾದ ಕಲಾವಂತಿಕೆಯನ್ನು ನೇರವಾಗಿ ತಿಳಿಸಿಕೊಡುತ್ತದೆ. ಈ ಕಲಾಕೃತಿಯನ್ನು ೧೯೮೬ರಲ್ಲಿ ತೈಲವರ್ಣದಿಂದ ರಚನೆ ಮಾಡಿದ್ದಾರೆ. ಇದರ ಅಳತೆಯು ೧೦೯x೧೨೨ ಸೆಂ.ಮೀ. ಇದೆ.

ಅಂತಿಮ ದರ್ಶನ

ಹೆಬ್ಬಾರರ ಬಾಳಿನಲ್ಲಿ ಎಂದೂ ಮರೆಯಲಾಗದ ವ್ಯಕ್ತಿ, ತಾಯಿ ಸೀತಮ್ಮ ಅವರು ಕಲಾವಿದರಾಗಿ ಮೇಲೆ ಬಂದುದು ಆಕೆಯ ತ್ಯಾಗ ಪ್ರೋತ್ಸಾಹದಿಂದ, ತಮ್ಮ ಜೀವನ ಗುರಿಮುಟ್ಟಲು ತಾಯಿ ಸ್ಫೂರ್ತಿಯಾಗಿ ನಿಂತು, ಮಗನ ಬೆಳವಣಿಗೆಯನ್ನು ಕಂಡು ಆನಂದಿಸಿದರು. ಆದರೆ ಆಕೆ ೧೯೫೪ರ ನವೆಂಬರ್ ೧೧ರಂದು ಮುಂಬಯಿಯ ಒಂದು ಸ್ಥಳೀಯ ಆಸ್ಪತ್ರೆಯಲ್ಲಿ ನಿಧನರಾದರು. ಹೆಬ್ಬಾರರಿಗೆ ತಾಯಿಯ ಸಾವಿನಿಂದ ದೊಡ್ಡ ಆಘಾತವಾಯಿತು. ಆಕೆಯ ಸಾವು ಮರೆಯಲಾಗದ ಸನ್ನಿವೇಶವಾಗಿತ್ತು. “ನನ್ನ ತಾಯಿಯನ್ನು ನಾನು ಕೊನೆಯ ಬಾರಿಗೆ ನೋಡಿದ್ದ ಸಂದರ್ಭ ಮನ ಕರಗಿಸುವ, ಮರೆಯಲಾಗದ ಕ್ಷಣವಾಗಿತ್ತು. ಈ ದೃಶ್ಯವನ್ನು ನಾನು ಕ್ಯಾನ್‌ವಾಸಿನ ಮೇಲೆ ಮೂಡಿಸಿದೆ. ನನ್ನ ತಾಯಿ ಮಲಗಿದ್ದ ಕಡೆ ಸರಳ ರೇಖೆ, ರೂಢಿ ಮತ್ತು ಸಂಪ್ರದಾಯವಲ್ಲದ ಮಾರ್ಗದಲ್ಲಿ ಕ್ಯಾನ್‌ವಾಸನ್ನು ಇಬ್ಭಾಗ ಮಾಡಿ ಆಕೆಯ ಮುಖದಿಂದ ಹೊಮ್ಮುತ್ತಿರುವ ಕಲ್ಪನಾತ್ಮಕ ಕ್ಷ–ಕಿರಣ ಬೆಳಕು, ಒಂದು ಕಡೆ ನಿಂತಿರುವ ದಾದಿ ಮತ್ತು ಲಂಬರೇಖೆಗಳನ್ನು ವಿನ್ಯಾಸದಲ್ಲಿ ಹೆಣೆದಿರುವಂತೆ ಕಾಣುತ್ತದೆ. ತಾಯಿಯ ಅಂತಿಮ ದರ್ಶನದ ದೃಶ್ಯದ ಕಲಾಕೃತಿ ಈಗ ಬೆಂಗಳೂರಿನ ವೆಂಕಟಪ್ಪ ಚಿತ್ರಕಲಾ ಶಾಲೆಯ ಹೆಬ್ಬಾರರ ವಿಭಾಗದಲ್ಲಿದೆ.

ಹುಂಜಗಳ ಕಾಳಗ

ಎರಡು ಹುಂಜಗಳ ಕಾಳಗವನ್ನು ಸುತ್ತಲು ನೆರೆದಿರುವ ಹಲವಾರು ಜನರು ಆತುರದಿಂದ ಕಾಯುತ್ತಿರುವ ದೃಶ್ಯ ಮತ್ತು ಹಲವಾರು ಕೈಗಳನ್ನು ಕಾಣಬಹುದು. ಒಟ್ಟಿನಲ್ಲಿ ಹೆಬ್ಬಾರರು ಬಾಲಿ ದ್ವೀಪದಲ್ಲಿ ನೋಡಿದ ಈ ಹುಂಜಗಳ ಕಾಳಗವು ಅವರ ಮನದಲ್ಲಿ ಮೂಡಿದ ಚಿತ್ರದಲ್ಲಿ ರಕ್ತದ ಮಡುವಿನಲ್ಲಿ ಸಾಯುತ್ತಿರುವ ಹುಂಜ ಅದರ ಮುಖದ ಮೇಲಿನ ವೇದನ, ಹುಂಜಗಳ ದೇಹದಿಂದ ಹರಿಯುತ್ತಿರುವ ರಕ್ತ, ಉದುರಿದ ಪುಕ್ಕಗಳು. ಸುತ್ತಲೂ ಮುಳ್ಳುಬೇಲಿ ಹಾಕಿದಂತೆ ಕಂಡುಬರುತ್ತಿರುವ ವೀಕ್ಷಕರ ಕೈ ಬೆರಳುಗಳು, ಕಪ್ಪು ಛಾಯೆಯಲ್ಲಿ ಅವರ ಕರಾಳವೂ, ತೀಕ್ಷಣವೂ ಆದ ಕಣ್ಣುಗಳು, ಇವು




ತೀವ್ರ ಸಂವೇದನೆಯಿಂದ ಅಭಿವ್ಯಕ್ತಿಗೊಂಡಿದೆ. ಈ ಕಲಾಕೃತಿಯಲ್ಲಿ ಕಲಾವಿದನ ಸಂವೇದನ ಶೀಲವಾಗಿರುವ ಅವನ ಮನಸ್ಸು ಈ ಮಾನವನ ಕ್ರೌರ್ಯ ಕ್ರೀಡಾ ಪರಂಪರೆಯ ಖುಷಿಯನ್ನು ತನ್ನ ಕಲಾಕೃತಿಗಳ ಮೂಲಕ ಹೊರಹಾಕಿದ ಹೆಬ್ಬಾರರ ಕಲಾಕೃತಿಯಲ್ಲಿ ಗೋಚರವಾಗುತ್ತದೆ. ಈ ಕಲಾಕೃತಿಯನ್ನು ಬಾಲಿ ದ್ವೀಪಗಳಿಗೆ ಬೇಟಿ ನೀಡಿದ ೧೯೫೫ರ ಸಂದರ್ಭದಲ್ಲಿ ತೈಲವರ್ಣದಿಂದ ರಚನೆ ಮಾಡಿದ್ದಾರೆ. ಈ ಕಲಾಕೃತಿಯು ಇಂದೂ ಚಂಡಿಗಢ ಮ್ಯೂಸಿಯಮ್ ಮತ್ತು ಆರ್ಟ್‌ಗ್ಯಾಲರಿಯಲ್ಲಿದೆ.

ಆಂಗ್ ಕೋರ್ ವಾಟ್

೧೯೬೬ರಲ್ಲಿ ಹೆಬ್ಬಾರರು ತಮ್ಮ ವಿಶ್ವಪರ್ಯಟನ ಕಾಲದಲ್ಲಿ ಕಂಡ ಐತಿಹಾಸಿಕ ಅವಶೇಷ ಆಂಗ್‌ಕೊರ್‌ವಾಟ್. ಹಿಂದೂ /ಬೌದ್ಧ ಸಂಸ್ಕೃತಿಗಳ ವ್ಯಾಪಕತೆಯ ನೆನಪು ತರುವ ಆಂಗ್‌ಕೋರ್‌ವಾಟ್ ಐದಾರು ಶತಮಾನಗಳ ಕಾಲ ಕಾಂಬೋಡಿಯದಲ್ಲಿ ಮೆರೆದಿದ್ದ ಒಂದು ಗಮನಾರ್ಹ ನಾಗರೀಕತೆಯ ಕುರುಹು. ಈ ಕಲಾಕೃತಿಯಲ್ಲಿ ಆಂಗ್‌ಕೋರ್‌ವಾಟ್ ದೇವಾಲಯದ ರಚನೆ ರಾಜರ ಸ್ಮಾರಕವಾದ ಜಗತ್ತಿನ ಅತ್ಯಂತ ಬೃಹದಾಕಾರದ್ದೆನ್ನುವ ಧಾರ್ಮಿಕ ಕಟ್ಟಡವಿದು, ದೇವಾಲಯದ ಕಟ್ಟಡವು ಒಂದು ವಿಶಾಲ ಕಂದಕದಿಂದ ಸುತ್ತುವರಿಯಲ್ಪಟ್ಟದನ್ನು ಗಾಢವರ್ಣದಿಂದ ರಚಿಸಲಾಗಿದೆ. ದೇವಾಲಯದ ಎರಡು ಬದಿಗಳಲ್ಲಿ ದೈತ್ಯಾಕಾರದ ನಾಗರೂಪದ ಕಟಾಂಜನಗಳು, ಶಿಲ್ಪದಲ್ಲಿ ರಾಜನ ಅಧಿಪತ್ಯದ ಕೆಲವು ಪ್ರಮುಖ ಪೌರಾಣಿಕ ವಸ್ತು ಪ್ರಧಾನವೆನಿಸುವ, ವಿಷ್ಣು, ಕೃಷ್ಣರ ಕತೆಗಳ ಚಿತ್ರಣ, ಕಾಂಬೋಡಿಯಾದ ನೃತ್ಯ ಸೊಗಸುಗಾರಿಕೆಯ ಭಾವ ಪ್ರದರ್ಶನಗಳು, ಎತ್ತರದ ಗೋಪುರಗಳು, ಆನೆ, ಸಿಂಹಗಳು, ಬುದ್ಧನ ಮುಖವನ್ನು ಹೋಲುವ ಮೂರ್ತಿ ಶಿಲ್ಪಗಳ ರಚನೆ ಹೆಬ್ಬಾರ ಕಲಾಶೈಲಿಯಲ್ಲಿ ಮೂಡಿಬಂದಿದೆ. ಹೆಬ್ಬಾರರು ಈ ಕಲಾಕೃತಿಯನ್ನು ೧೯೬೬ರಲ್ಲಿ ತೈಲವರ್ಣದಿಂದ ರಚನೆಮಾಡಿದ್ದಾರೆ. ಇವರ ಅಳತೆಯು ೭೬.೩x೬೬ಸೆಂ.ಮೀ. ಇದ್ದು, ಎನ್.ಜಿ. ಎಂ.ಎ. ಹೊಸದೆಹಲಿಯಲ್ಲಿದೆ.

ಪ್ರದರ್ಶನ

ಕಾಂಬೋಡಿಯಾದ ನೃತ್ಯ ಪ್ರದರ್ಶನದಿಂದ ಪ್ರಭಾವಿತರಾದ ಹೆಬ್ಬಾರರು ಮೂಲವರ್ಣಗಳ ಸಹಾಯದಿಂದ ರಚಿಸಿರುವ, ಜ್ಯಾಮಿತಿಯ ರೀತಿಯಲ್ಲಿ ಸಂಯೋಜನೆ ಮಾಡಿರುವ ಹೆಬ್ಬಾರರು ಕಾಂಬೋಡಿಯದ ಸಂಪ್ರದಾಯ ನೃತ್ಯದ ಎರಡು ಭಂಗಿಗಳನ್ನು ಇಲ್ಲಿ ರೂಪಿಸಿದ್ದಾರೆ. ನೃತ್ಯಗಾತಿಯರು ತಮ್ಮ ಸಾಂಪ್ರದಾಯಿಕ ವೇಷಭೂಷಣ ತೊಟ್ಟು ತಾಳಕ್ಕೆ ಹೆಜ್ಜೆ ಹಾಕುತ್ತಿರುವ ದೃಶ್ಯವು ನೋಡಲು ಸುಂದರವಾಗಿದೆ.



ಮೈ-ಲೆ ವಿಯಟ್ನಾಂ

೧೯೭೨ರ ಸುಮಾರಿಗೆ ಹೆಬ್ಬಾರರು ಮೈ-ಲೇ ವಿಯೆಟ್ನಾಂ ಯುದ್ಧದಲ್ಲಿ ಅಮೇರಿಕಾದ ಸೈನಿಕರು ನಡೆಸಿದ ಪಾರ್ಶಿ ಅತ್ಯಾಚಾರದ ಸನ್ನಿವೇಶ. ನನ್ನ ಮನಸ್ಸನ್ನು ಕದಡಿದ ಭೀಕರ ವರ್ತಮಾನ ಅದಕ್ಕೆ ನನ್ನ ಪ್ರತಿಕ್ರಿಯೆ ಎನ್ನುವ ಒಂದು ವರ್ಣಚಿತ್ರವನ್ನು ಅದೋಭಾಗದಲ್ಲಿ ಉದ್ದಕ್ಕೂ ರಕ್ತರಂಜಿತವಾದ ಚಿತ್ರಕಲೆ, ಒಬ್ಬ ಸ್ತ್ರೀ ಮುಖ ಮುಚ್ಚಿಕೊಂಡು ಬೆತ್ತಲೆಯಾಗಿ ಬಿದ್ದಿದ್ದಾಳೆ. ಆಕೆಯ ಹಿಂದುಗಡೆ ಕರಿ ಮಸುಕು. ಬಣ್ಣಗಳಲ್ಲಿ ವಿಯೆಟ್ನಾಮಿನ ಅಸಹಾಯ ಜನತೆ ಕೈ ಕೈ ಹಿಸುಕಿಕೊಂಡು ನಿಂತಿದ್ದಾರೆ. ತುಪಾಕಿಗಳ ಹಾರಾಟವನ್ನು ಚಲಿಸುವ ರೇಖೆಗಳು ಗುರುತಿಸುತ್ತವೆ.

ವಿಯೆಟ್ನಾಂ ಅಪರಾಧದ ಬಗ್ಗೆ ನೂರು ಅಗ್ರಲೇಖಗಳಲ್ಲಿ ತುಂಬಲಾಗದ ಅರ್ಥವ್ಯಾಪ್ತಿಯೂ, ಭಾವೋದ್ವೇಗವನ್ನು ಒಂದೇ ಚಿತ್ರದಲ್ಲಿ ಕಲಾವಿದ ಕೇಂದ್ರೀಕರಿಸಿದ್ದಾರೆ. ಈ ಆಸುರಿ ದುರ್ಘಟನೆಯಲ್ಲಿ ಪ್ರಕಟವಾದ ಮನುಷ್ಯನ ಪತನ, ಪಶುತ್ವಗಳನ್ನು ನೋಡಿ ನಮ್ಮ ಮನಸ್ಸು ರೋಧಿಸುತ್ತವೆ. ಮೈ-ಲೆ ವಿಯಟ್ನಾಂ ಕಲಾಕೃತಿಯಲ್ಲಿ ಕಪ್ಪು, ಕಂದು, ಹಸಿರು, ಕೆಂಪು-ಬಣ್ಣದ ಗಡುಸುಗಾರಿಕೆ ಎದ್ದು ಕಾಣುತ್ತಿವೆ.

ನಿರಾಶ್ರಿತರು

ಚಿತ್ರದ ಅರ್ಥಕ್ಕೆ ರಕ್ತದ ಒಂದು ಹೊಳೆ ಹರಿಯುತ್ತದೆ. ರಕ್ತರಂಜಿತ ಪದ್ಮಾನದಿ ರವೀಂದ್ರನಾಥ ಠಾಕೂರರಿಗೆ ಸ್ಫೂರ್ತಿ ಕೊಟ್ಟ ಜಲರಾಶಿ ಅದೇ ರಕ್ತದ ಹೊನಲಾಗಿದೆ. ಹೊಳೆಯ ಬಲಭಾಗದಲ್ಲಿರುವ ಚಿತ್ರದಲ್ಲಿ ಬಾಂಗ್ಲಾ ದೇಶದಲ್ಲಿ ನಡೆಯುವ ನರಮೇಧದ ಭಯಾನಕ ದೃಶ್ಯ, ಸೈನಿಕ ಕಾರ್ಯಾಚರಣೆಯ ಕಾರ್ಯವನ್ನು ಬಿಂಬಿಸುವ ಕೆಂಪು ಹಸಿರು ವರ್ಣಗಳ ಗೊಂದಲದ ಸನ್ನಿವೇಶವನ್ನು ಮರುಕಳಿಸುವ ಬಣ್ಣದ ಚೆಲ್ಲಾಟ, ಹೊಳೆಯ ಎಡಗಡೆ ಭಾಗದಲ್ಲಿ ನಿರಾಶ್ರಿತರ ಭಾರತಯಾತ್ರೆ ಅಸ್ಪಷ್ಟ ವರ್ಣಗಳಲ್ಲಿ ಅಲ್ಲಲ್ಲಿ ಮನುಷ್ಯಾಕೃತಿಗಳ ದುಃಖದ ಹೊರೆ ಹೊತ್ತ ಕೈ ಇದಾಗಿದ್ದು, ಈ ಕಲಾಕೃತಿಯಲ್ಲಿ ನರಮೇಧವು ಪ್ರತಿಬಿಂಬವಾಗುತ್ತದೆ.

ಭಾವಚಿತ್ರ

ಒಬ್ಬ ಮಾನವನ ಮುಖವನ್ನು ಅಂಗರಚನಾ ಶಾಸ್ತ್ರದ ಪ್ರಕಾರ ಮತ್ತು ವರ್ಣಗಳ ಮುಖಾಂತರ ಅವರ ಭಾವ ಚರ್ಯೆಯನ್ನು ಸ್ವಭಾವವನ್ನು ಯಥಾವತ್ತಾಗಿ ರಚನೆ ಮಾಡುವುದಕ್ಕೆ ಭಾವಚಿತ್ರಣ ಎನ್ನುತ್ತಾರೆ.

ಭಾವಚಿತ್ರಣವನ್ನು ವಿವಿಧ ಮಾಧ್ಯಮಗಳಿಂದ ಅಭ್ಯಸಿಸುತ್ತಾರೆ. ೧. ಪೆನ್ಸಿಲ್ ೨. ಚಾರ್‌ಕೋಲ್

೩. ಜಲವರ್ಣ, ೪. ತೈಲವರ್ಣ, ೫. ಶಾಯಿ, ೬. ಟೆಂಪರಾ ಹೀಗೆ ವಿವಿಧ ಮಾಧ್ಯಮಗಳಿಂದ ಚಿತ್ರಕಲಾಕೃತಿಗಳನ್ನು ರಚಿಸುತ್ತಾರೆ.

ಹೆಬ್ಬಾರರು ಈ ಮೇಲಿನ ಎಲ್ಲಾ ಮಾಧ್ಯಮಗಳನ್ನು ತಮ್ಮ ಕೃತಿರಚನೆಯನ್ನು ಬಳಸುವಷ್ಟು ಪರಿಣಿತರಾಗಿದ್ದರು. ಅವರು ಹೆಚ್ಚಾಗಿ ಶಾಯಿ, ತೈಲವರ್ಣ, ಟೆಂಪರಾ ಮಾಧ್ಯಮಗಳು ಹೆಚ್ಚಾಗಿ ಬಳಕೆ ಮಾಡಿದ್ದಾರೆ.


ತಾಯಿ ಮತ್ತು ಕಲಾವಿದ

ಈ ಕಲಾಕೃತಿಯು ೨೦x೨೯ ಸೆಂ.ಮೀ. ಇದ್ದು, ಟೆಂಪರಾ ಮಾಧ್ಯಮದಿಂದ ಚಿತ್ರಿಸಲಾಗಿದ್ದು, ಕಲಾವಿದ ಚಿತ್ರರಚನೆ ಮಾಡುತ್ತಿರುವ ಸಂದರ್ಭದಲ್ಲಿ ತನ್ನ ತಾಯಿ ಹಿಂದೆ ಬಂದು ವೀಕ್ಷಿಸುತ್ತಿರುವಂತೆ ಬಾಸವಾಗಿದೆ. ಈ ಕಲಾಕೃತಿಯಲ್ಲಿ ಮುಖ್ಯವಾಗಿ ಇಬ್ಬರನ್ನು ಕಾಣಬಹುದು. ಟೆಂಪರಾ ಮಾಧ್ಯಮದಿಂದ ಚಿತ್ರಿಸಿರುವುದರಿಂದ ನೆರಳು ಬೆಳಕನ್ನು ತೋರಿಸಲಾಗಿದೆ. ಈ ಇಬ್ಬರು ಒಂದೇ ನೋಟದಲ್ಲಿದ್ದು, ಮುಖದಲ್ಲಿ ಗಾಢತೆಯನ್ನು ಕಾಣಬಹುದು. ಕೈಯಲ್ಲಿ ಕುಂಚವಿಡಿದಿರುವ ಕಲಾವಿದ ತನ್ನನ್ನು ತಾನು ಚಿತ್ರಿಸಿರುವಂತೆ ಕಂಡು ಬರುತ್ತದೆ.

ಈಜಲ್‌ನ ಮೇಲೆ ಕ್ಯಾನ್ವಸ್ ಇಟ್ಟಿದ್ದು, ಕಲಾಕೃತಿಯು ಮರೆಮಾಚಿದೆ, ತಾಯಿ ಗಂಭೀರವಾಗಿ ವೀಕ್ಷಿಸುತ್ತಾ ಮಗನಿಗೆ ಬೆನ್ನು ತಟ್ಟುವ ಹಾಗೇ ಇದ್ದಂತಿದೆ ಶಿಸ್ತಿನ ಸಿಪಾಯಿಯಂತೆಕಾಣುತ್ತಿರುವ ಕಲಾವಿದ ಬಿಳಿ ಬಟ್ಟೆಧರಿಸಿದ್ದು, ಮುಖದಲ್ಲಿ ಆಕಾರ್ ಎಲ್ಲೊ ಮತ್ತು ತಿಳಿಕಪ್ಪು ಎದ್ದುಕಾಣುತ್ತದೆ. ತಲೆಯಲ್ಲಿ ನಾಲ್ಕೈದು ಬೆಳಕಿನ ಗೆರೆಗಳು ಕಾಣುತ್ತಿದ್ದು, ಹಿಂದಕ್ಕೆ ಬಾಚಿದಂತೆ ಕಾಣುತ್ತಿದೆ. ತಾಯಿಯ ಕ್ರಿಮ್ಸನ್ ಬಣ್ಣದ ಸೀರೆಯನ್ನುಟ್ಟಿದ್ದು, ಸ್ವಲ್ಪ ಬಾಗಿದ್ದಾರೆ ಒಟ್ಟಾರೆಯಾಗಿ ಈ ಕಲಾಕೃತಿಯು ಕಲಾವಿದನಿಗೆ ತಾಯಿಯು ಪ್ರೇರಕ ಶಕ್ತಿ ಎಂಬಂತಹ ಅಂಶವನ್ನು ಗುರುತಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಕೆಂಪು, ಬಿಳಿ, ಕಪ್ಪು, ಕ್ರಿಮ್ಸನ್, ಎಲ್ಲೋ, ಆಕಾಶ ನೀಲಿ, ಕಂದುಗೆಂಪು ಬಣ್ಣಗಳನ್ನು ಈ ಕಲಾಕೃತಿಯಲ್ಲಿ ಬಳಸಿ ಚಿತ್ರಣವನ್ನು ಪೂರ್ಣಗೊಳಿಸಿದ್ದಾರೆ.

ಮಹಾತ್ಮಗಾಂಧಿಯವರ ಭಾವಚಿತ್ರ

ಈ ಭಾವಚಿತ್ರವು ೪೫x೫೫ ಇದ್ದು ತೈಲ ವರ್ಣದಿಂದ ಮಾಡಲಾಗಿದೆ. ಈ ಕಲಾಕೃತಿಯನ್ನು ಬಾಪುಜಿಯವರು ತಮ್ಮ ತಲೆಯನ್ನು ಸ್ವಲ್ಪಮಟ್ಟಿಗೆ ಬಾಗಿಸಿ ಯಾವುದೋ ವಿಷಯದ ಬಗ್ಗೆ ಧ್ಯಾನಸಕ್ತರಾಗಿ ಯಾವುದು ಕಂಡುಬರುತ್ತದೆ. ಭಾವದಲ್ಲಿ ಅಂಗರಚನಾ ಶಾಸ್ತ್ರದ ಅಧ್ಯಾಯ ಹೆಚ್ಚಾಗಿ ನೆಡೆದುದ್ದು ಮೂರನೇ ಒಂದು ಭಾಗದ ಭಾವಚಿತ್ರವಾಗಿದೆ. ಗಾಂಧಿಜೀಯ ಮನಸ್ಸಿನ ಸ್ವಭಾವವನ್ನು ನೇರವಾಗಿ




ಕಾಣುವಂತೆ ಹೆಬ್ಬಾರರು ರಚನೆ ಮಾಡಿದ್ದಾರೆ. ಭಾವಚಿತ್ರವನ್ನು ಹಳದಿ ಮಿಶ್ರಿತ, ಹಸಿರು ಬಣ್ಣವನ್ನು ಹೆಚ್ಚಾಗಿ ಬಳಸಲಾಗಿದೆ. ಕಲಾಕೃತಿಯ ಮೈವಳಿಕೆಯು ಒರಟಾಗಿದ್ದು, ಹಿನ್ನೆಲೆಯನ್ನು ತಿಳಿಹಸಿರು ಮತ್ತು ಕೆಂಪು ವರ್ಣಗಳ ಸಂಯೋಜನೆ ಇದೆ. ಭಾವಚಿತ್ರಗಳನ್ನು ದಪ್ಪದಾದ ಹೊರರೇಖೆಯಿಂದ ಪೂರ್ಣಗೊಳಿಸಲಾಗಿದೆ.

ಮೌಲಾನ ಆಜಾದ್

ಈ ಪೂರ್ಣ ಭಾವಚಿತ್ರವನ್ನು ಹೆಬ್ಬಾರರು ೧೯೬೦-೦೨ರಲ್ಲಿ ತೈಲವರ್ಣದಿಂದ ರಚನೆ ಮಾಡಿದ್ದಾರೆ. ಚಿತ್ರವನ್ನು ಮೌಲಾನ ಆಜಾದರು ಗಾಂಭೀರ್ಯದಿಂದ ಕುರ್ಚಿಯ ಮೇಲೆ ಕುಳಿತುಕೊಂಡು, ಎಡಕೈಯಲ್ಲಿ ಪುಸ್ತಕವನ್ನು ಹಿಡಿದಿದ್ದಾರೆ. ಅವರ ಮುಖ ಭಾವದಲ್ಲಿ ಅವರ ವಯಸ್ಸನು ಸೂಚಿಸುವ ಅವರ ಬಿಳಿಯ ಮೀಸೆ, ಸಣ್ಣದಾದ ಕುರುಚಲು ಗಡ್ಡ, ಅವರು ಮುಸ್ಲಿಂ ಸಂಪ್ರದಾಯದ ಟೋಪಿ ಮತ್ತು ಅವರ ತೊಟ್ಟ ದೊಡ್ಡದಾದ ಕೋಟ್, ವ್ಯಕ್ತಿಯು ಗಾಂಭಿರ್ಯದಿಂದ ತಮ್ಮ ಗ್ರಂಥಾಲಯದಲ್ಲಿ ಅಧ್ಯಯನಕ್ಕೆಂದು ಕುಳಿತಿರುವುದು ಕಲಾಕೃತಿಯಲ್ಲಿ ಸ್ಪಷ್ಟವಾಗುತ್ತದೆ. ಅಲ್ಲದೇ ಎಷ್ಟು ಶಿಸ್ತಿನ ಮನುಷ್ಯ ಎಂದು ಅವರು ಕುಂತಿರುವ ಭಂಗಿಯಿಂದಲೇ ಬಾಸವಾಗುತ್ತದೆ. ಕಲಾಕೃತಿಯನ್ನು ಹಳದಿ, ಕೆಂಪು, ಕಂದು ಮತ್ತು ಗಾಡವರ್ಣಗಳಿಂದ ಕಲಾಕೃತಿಯಿಂದ ಪೂರ್ಣಗೊಳಿಸಲಾಗಿದೆ. ಅವರು ಕುಳಿತಿರುವ ಹಿಂಬದಿಯನ್ನು ಒಂದಕ್ಕೊಂದು ಹೊಂದಿಸಿರುವ ಪುಸ್ತಕಗಳ ಸಾಲು ಅವರು ಎಷ್ಟು ಅಧ್ಯಯನಶೀಲರು ಎಂದು ತಿಳಿಯುತ್ತದೆ. ಕಲಾಕೃತಿಯನ್ನು ಒರಟಾದ ಮೈವಳಿಕೆಯನ್ನು ಹೆಬ್ಬಾರರು ನೈಫ್‌ನಿಂದ ಪೂರ್ಣಗಳಿಸಲಾಗಿದೆ. ಈ ಕಲಾಕೃತಿಯು ಇಂದು Indian Council for Cultural Relations, New Delhi ಸಂಗ್ರಹದಲ್ಲಿದೆ.

ಇಂದಿರಾ ಗಾಂಧಿ

ಈ ಕಲಾಕೃತಿಯನ್ನು ಹೆಬ್ಬಾರರು ೧೯೭೮ರಲ್ಲಿ ತೈಲವರ್ಣದಿಂದ ರಚನೆ ಮಾಡಿದ್ದಾರೆ. ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭವನ್ನು, ಅವರಿಗೆ ಸಮಯದ ಅಭಾವದಲ್ಲಿಯೂ ಹೆಬ್ಬಾರರು ಹೇಳಿದ ಸಮಯಕ್ಕೆ ಸರಿಯಾಗಿ ಅರ್ಧ ಗಂಟೆಗಳ ಕಾಲ ಭಾವಚಿತ್ರ ರಚನೆಗೆ ವ್ಯಯ ಮಾಡುತ್ತಿದ್ದರು. ಈ ಭಾವಚಿತ್ರದಲ್ಲಿ ಇಂದಿರಾ ಗಾಂಧಿಯವರ ದಿಟ್ಟ ನೋಟದ ಮೂರನೇ ಒಂದು ಭಾಗದ ಮುಖಭಾರ್ಯೆಯ ಕಾಣಬಹುದು. ಲಭ್ಯವಿರುವ ಕಲಾಕೃತಿಯಲ್ಲಿ ಕಪ್ಪು ಬಿಳುಪಿನಲ್ಲಿ ಇದ್ದು ಅವರ ವರ್ಣದ ಬಗ್ಗೆ ತಿಳಿಯಲಾಗುವುದಿಲ್ಲ.



ಜವಾಹಾರ್ ಲಾಲ್ ನೆಹರು

ಈ ಕಲಾಕೃತಿಯು ೧೯೫೯ರಲ್ಲಿ ತೈಲವರ್ಣದಿಂದ ಹೆಬ್ಬಾರರ ರಚಿಸಿದ್ದಾರೆ. ಕಲಾಕೃತಿಯಲ್ಲಿ ನೆಹರೂರವರ ಕೈಯಲ್ಲಿ ಕಾಗದದ ಸುರಳಿಯನ್ನು ಹಿಡಿದುಕೊಂಡು ದೇಶದ ಬೆಳವಣಿಗೆಗೆ ಯೋಜನೆಗಳು ರೂಪಿಸಲು ದೃಷ್ಟಿಯನ್ನು ತೋರುವಂತೆ ನಿಂತಿದ್ದಾರೆ. ಅವರ ಸಾಮ್ಯವಾದ ಮುಖಛಾಯೆ ತಲೆಗೆ ಧರಿಸಿರುವ ಬಿಳಿಯ ಟೋಪಿ, ಲಾಂಗ್ ಕೋಟ್ ಧರಿಸಿ, ಕಪ್ಪು ಬೂಟನ್ನು ಧರಿಸಿದ್ದಾರೆ ಮತ್ತು ಕೋಟನ್ನು ಅಂತರ ಪ್ರಿಯವಾದ ಕೆಂಪು ಗುಲಾಬಿಯನ್ನು ಕಾಣಬಹುದು. ಪ್ರಮುಖವಾಗಿ ಈ ಕಲಾಕೃತಿಯ ಹಿನ್ನೆಲೆಯಲ್ಲಿ ಗಾಢವರ್ಣದಿಂದ ಗುಡಿಸಲುಗಳನ್ನು ನಿರ್ಮಾಣ ಮಾಡಲಾಗಿದೆ. ಮತ್ತು ಅವರ ಹಿಂಬದಿಯಲ್ಲಿ ಆಧುನಿಕ ಕಟ್ಟಡಗಳ ಚಿತ್ರಣವನ್ನು ಯೋಜನೆಯನ್ನು ಹೊಂದಿರುವುದನ್ನು ಗಮನಿಸಬಹುದು. ಈ ಕಲಾಕೃತಿಯು ಪಾರ್ಲಿಮೆಂಟ್ ಹೌಸ್, ನವದೆಹಲಿಯಲ್ಲಿದೆ.

ಎನ್.ಎಸ್.ಬೇಂದ್ರೆ

ಎನ್.ಎಸ್.ಬೇಂದ್ರೆಯವರ ಭಾವಚಿತ್ರವು ನೇರ ಮುಖಭಾವವನ್ನು ಹೊಂದಿದ್ದು, ಹೆಬ್ಬಾರರ ಕಲಾತಂತ್ರ ಶೈಲಿಯಾದ ಚೂರಿಯನ್ನು ಉಪಯೋಗಿಸಿ ಸಂಪೂರ್ಣ ಚಿತ್ರವನ್ನು ನಿರ್ಮಿಸಿದ್ದಾರೆ. ಕಲಾಕೃತಿಯಲ್ಲಿ ಹಳದಿ ಮಿಶ್ರಿತ ಕೆಂಪುವರ್ಣಗಳ ವರ್ಣಸಂಯೋಜನೆಯನ್ನು ಕಾಣಬಹುದು. ಶಾಂತ ಸ್ವಭಾವದಿಂದ ಕುಳಿತಿರುವ ಬೇಂದ್ರೆಯವರ ಹಿನ್ನಲೆಯನ್ನು ಗಾಢವರ್ಣದಿಂದ ತುಂಬಲಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೬೦ ತೈಲವರ್ಣದಿಂದ ಮಾಡಿದ್ದು, ಇದರ ಅಳತೆಯ ೧೦೭x೧೩೮ ಸೆಂ.ಮೀ ನಷ್ಟಿದೆ. ಈ ಕಲಾಕೃತಿಯು ನವದೆಹಲಿಯಲ್ಲಿದೆ.

ಪ್ರೊ. ದಂಡವತಿ ಮಠ

ಹೆಬ್ಬಾರರಿಗೆ ಬಾಂಬೆಯಲ್ಲಿ ಕಲಾಶಿಕ್ಷಣ ನೀಡಿದ ಮೊದಲ ಕಲಾಗುರು ದಂಡವತಿಮಠ ಅವರು. ಹೆಬ್ಬಾರರು ಜೆ. ಜೆ. ಕಲಾಶಾಲೆಗೆ ಸೇರಲು ಬೇಕಾದ ಪೂರ್ವ ಶಿಕ್ಷಣ ನೀಡಿದ ದಂಡವತಿಮಠರ ಭಾವಚಿತ್ರವನ್ನು ರಚಿಸಿದರು. ಇದರಲ್ಲಿ ದಂಡವತಿಮಠರು ತಮ್ಮ ಎಂದಿನಂತೆ ಕನ್ನಡಕ ಮತ್ತು ಕೋಟನ್ನು ಧರಿಸಿದ್ದಾರೆ. ಅವರ ಮುಖದ ಮಂದಹಾಸದ, ಮುಗ್ಧನಗುವನ್ನು ಕಾಣಬಹುದು. ಕಲಾಕೃತಿಯನ್ನು ಪೂರ್ಣವಾಗಿ ನೈಫ್ ಮತ್ತು ಬ್ರಶ್ ಮುಖಾಂತರ ಪೂರ್ಣಗೊಳಿಸಿದ್ದಾರೆ. ಮುಖದಲ್ಲಿ ಕ್ರಿಮ್‌ಸನ್ ಲೇಕ್‌ನ ಮಿಶ್ರವರ್ಣದ ಸಂಯೋಜನೆಯನ್ನು ಕಾಣಬಹುದು. ಕಡುಗೆಂಪು ಬಣ್ಣದ ಕೋಟು ಧರಿಸಿದ್ದು, ಬಿಳಿ ಬಣ್ಣದ ಅಂಗಿಯೊಂದಿಗೆ, ಕೆಂಪು ಟೈ ಕಟ್ಟಿದ್ದಾರೆ. ಹಿನ್ನೆಲೆಯಲ್ಲಿ ಕೇಸರಿ

ಮಿಶ್ರಿತ ಹಳದಿ ವರ್ಣದ ಒರಟು ಮೈವಳಿಕೆಯಿದೆ. ಭಾವಚಿತ್ರವನ್ನು ೧೯೭೬ರಲ್ಲಿ ತೈಲವರ್ಣದಿಂದ ಪೂರ್ಣಗೊಳಿಸಿದ್ದಾರೆ. ಇದರ ಅಳತೆ ೩೧x೩೧ ಸೆಂ.ಮೀ. ಇದನ್ನು ಹೆಬ್ಬಾರರ ಆರ್ಟ್ ಫೌಂಡೇಶನ್‌ನಲ್ಲಿದೆ.

ಜಾನ್ ಎಫ್ ಕೆನಡಿ ಮತ್ತು ಜವಾಹರ್ ಲಾಲ್‌ನೆಹರು

ಅಮೇರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿ ಮತ್ತು ಭಾರತದ ಪ್ರಧಾನ ಮಂತ್ರಿಯಾಗಿದ್ದ ನೆಹರು ಅವರು ಪಾರ್ಶ್ವ ನೋಟವಾಗಿರುವ ಕಲಾಕೃತಿ ಇದಾಗಿದ್ದು, ಈ ಭಾವಚಿತ್ರಗಳನ್ನು ಒಂದೇ ರೀತಿಯ ವರ್ಣ ಸಂಯೋಜನೆಯನ್ನು ಕಾಣಬಹುದಾಗಿದೆ. ಹೆಬ್ಬಾರರವರ್ಣ ಸಂಯೋಜನೆ ಮತ್ತು ಚೂರಿ ಬಳಕೆಯ ಜೊತೆಗೆ ಆಕೃತಿಯ ಹೊರ ರೇಖೆಗಳು ಎದ್ದುಕಾಣುತ್ತವೆ. ಇಬ್ಬರ ಆಕೃತಿಗಳು ಹಿನ್ನೆಲೆಯಲ್ಲಿ ಮಿಶ್ರಣಗೊಂಡಂತೆ ಬಾಸವಾಗುತ್ತದೆ. ಈ ಕಲಾಕೃತಿಯನ್ನು ನೋಡಿದಾಗ ಎರಡು ದೇಶಗಳ ಸ್ನೇಹ ಬಾಂಧವ್ಯದ ಸಂಕೇತವಾಗಿದೆ. ಹೆಬ್ಬಾರರು ೧೯೭೮ರಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಇದರ ಅಳತೆಯು ೪೫ x ೫೫ ಸೆಂ.ಮೀ ಇದ್ದು, ಪ್ರಸ್ತುತ ಈ ಕಲಾಕೃತಿ ಕೆ.ಕೆ.ಹೆಬ್ಬಾರರ ಆರ್ಟ್ ಫೌಂಡೇಶನಲ್ಲಿದೆ.

ಸುಶೀಲ

ಹೆಬ್ಬಾರರ ಬಾಳ ಸಂಗಾತಿ ಸುಶೀಲೆಯವರ ಪೂರ್ಣವ್ಯಕ್ತಿ ಭಿತ್ತಿಯು ಕಲಾಕೃತಿಯಾಗಿದೆ. ಕಲಾಕೃತಿಯನ್ನು ಹೆಬ್ಬಾರರ ಪತಿಯವರು ಭಾರತೀಯ ಸಂಪ್ರದಾಯದ ಸೀರೆಯನ್ನುಟ್ಟು ತಲೆಯ ತುಂಬ ಹೂವನ್ನು ಮುಡಿದುಕೊಂಡಿದ್ದಾರೆ. ಕಡುಗೆಂಪು ಬಣ್ಣದ ಕವಿತೆ, ಹಳದಿ ಮಿಶ್ರಿತ, ಬಿಳಿ ಬಣ್ಣದ ಸೀರೆಯನ್ನು ಬಣ್ಣಗಳ ಅಲಂಕಾರಿಕ ಪಟ್ಟಿ ಇದೆ. ಸುಶೀಲ ಅವರು ಒಂದು ಕೈಯನ್ನು ನೆಲಕ್ಕೆ ಊರಿದ್ದಾರೆ ಇನ್ನೊಂದು ಕೈಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡಿದ್ದಾರೆ. ಕಲಾಕೃತಿಯಲ್ಲಿ ವ್ಯಕ್ತಿಯನ್ನು ಪ್ರಧಾನಗೊಳಿಸುವ ಹಿನ್ನಲೆಯನ್ನು ಗಾಢವರ್ಣಗಳಿಂದ ತುಂಬಲಾಗಿದೆ. ಅವರ ಹಿಂಬದಿಯಲ್ಲಿ ಒಂದು ಹಸಿರು ಬಣ್ಣದ ಚಿತ್ರಪಟವನ್ನು ಕಾಣಬಹುದಾಗಿದೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೪೫ರಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಕಲಾಕೃತಿಯ ಅಳತೆಯು ೭೬x೯೨ ಸೆಂ.ಮೀ. ಇದ್ದು, ಹೆಬ್ಬಾರರ ಆರ್ಟ್ ಫೌಂಡೇಶನಲ್ಲಿ ನೆಲಗೊಂಡಿದೆ.

ಸಹೋದರಿಯರು

೧೯೬೬ರಲ್ಲಿ ತೈಲವರ್ಣದಿಂದ ರಚನೆ ಮಾಡಿದ್ದಾರೆ, ಇಬ್ಬರು ಸಹೋದರಿಯರ ವರ್ಣಚಿತ್ರ ಕಲಾಕೃತಿಯಲ್ಲಿ ನೇರ ಮತ್ತು ಪಾರ್ಶ್ವನೋಟದ ಚಪ್ಪಟೆ ಕಲಾಕೃತಿಯಾಗಿದ್ದು, ಕಲಾಕೃತಿಯಲ್ಲಿ ಒಬ್ಬರ

ಮೇಲೆ ಬಲಗೈಯನ್ನು ಭುಜದ ಮೇಲೆ ಇಟ್ಟಿದ್ದಾರೆ. ಅಗಲವಾದ ಮುಖ, ಸುಂದರವಾದ ಕಣ್ಣುಗಳು ಆಕೃತಿಯು ಹೊರರೇಖೆಗಳಿಂದ ಕೂಡಿದೆ, ಹಿನ್ನೆಲೆಯನ್ನು ಕೆಂಪುವರ್ಣ ಮತ್ತು ನೀಲಿ ಮಿಶ್ರಿತ ಪಾಚಿವರ್ಣದ ಅರ್ಧ ಭಾಗಗಳನ್ನು ಕಾಣಬಹುದಾಗಿದೆ. ಎಡಭಾಗದಲ್ಲಿ ಕೆಂಪು ಪಟ್ಟಿಯನ್ನು ಕಾಣಬಹುದು.

ಇಬ್ಬರು ಸಹೋದರಿಯರನ್ನು ಒಂದೇ ಚಿತ್ರದಲ್ಲಿದ್ದ ಸಂಯೋಜನೆಯು ನೋಡುಗರಿಗೆ ಹೊಸತನವನ್ನು ಮೂಡಿಸುತ್ತದೆ. ಇದರ ಅಳತೆ ೪೧x೫೧ ಸೆಂ.ಮೀ. ಇದ್ದು, ಪ್ರಸ್ತುತ ಈ ಕಲಾಕೃತಿಯು ಕೆ.ಕೆ.ಹೆಬ್ಬಾರ ಆರ್ಟ್ಸ್ ಫೌಂಡೇಶನ್ ಸಂಗ್ರಹದಲ್ಲಿದೆ.

ರೇಖಾ

ಹೆಬ್ಬಾರರ ಹಿರಿಯ ಮಗಳು ರೇಖಾ ಹೆಬ್ಬಾರರ ಭಾವಚಿತ್ರವನ್ನು ಕಾಣಬಹುದು. ಕಲಾಕೃತಿಯನ್ನು ರೇಖಾರವರ ಸೌಮ್ಯ ಮುಖಭಾವ ಅವರ ಕಪ್ಪು ವರ್ಣದ ಕೂದಲು ಅವರನ್ನು ನೋಡಲು ಇನ್ನೂ ಸುಂದರವನ್ನಾಗಿ ಮಾಡಿದೆ. ಅವರು ತೊಟ್ಟಿರುವ ಕೆಂಪು ಮತ್ತು ಕೇಸರಿ ವರ್ಣದ ಬಟ್ಟೆಯೊಂದಿಗೆ ಅವರ ಹಿಂಬದಿಯ ಹಿನ್ನೆಲೆಯು ಹೊಂದಿಕೊಂಡಂತೆ ಕಾಣುತ್ತದೆ. ಹೆಬ್ಬಾರರು ಈ ಕಲಾಕೃತಿಯನ್ನು ೧೯೭೭ರಲ್ಲಿ ತೈಲವರ್ಣದಿಂದ ಮಾಡಿದ್ದಾರೆ. ಇದು ರೇಖಾರಾವ್ ಅವರ ಬಳಿಯಲ್ಲಿಯೇ ಇದೆ.

ತಾಯಿ ಸೀತಮ್ಮ

ಹೆಬ್ಬಾರರ ಅಚ್ಚುಮೆಚ್ಚಿನ ಪ್ರೀತಿಯ ತಾಯಿ ಸೀತಮ್ಮ ಅವರು ಮೌನದಿಂದ ಕೂಡಿರುವ ಭಾವಚಿತ್ರವಾಗಿದ್ದು, ಸೀತಮ್ಮನವರು ಕೆಂಪು ಸೀರೆಯನ್ನು ತಲೆಯ ಮೇಲಿಂದ ಪೂರ್ಣವಾಗಿ ತಮ್ಮ ಮೈಯನ್ನು ಮುಚ್ಚಿಕೊಂಡಿದ್ದಾರೆ. ಹಿನ್ನೆಲೆಯಲ್ಲಿ ತಿಳಿಪಾಚಿ ಹಸಿರು ವರ್ಣದಿಂದ ಕೂಡಿದೆ. ಕಲಾಕೃತಿಯನ್ನು ಟೆಂಪರಾ ಮಾಧ್ಯಮದಿಂದ ಮಾಡಿದ್ದಾರೆ.

ಶಶಿ

ಈ ಕಲಾಕೃತಿಯು ನೋಡುತ್ತಿದ್ದಂತೆಯೇ ಪ್ರಯೋಗಾತ್ಮಕವಾದ ರೀತಿಯನ್ನು ಕಾಣುತ್ತದೆ. ಒಂದೇ ಕಲಾಕೃತಿಯಲ್ಲಿ ಒಂದೇ ರೂಪದರ್ಶಿಯ ಎರಡು ಛಾಯೆಯನ್ನು ನೋಡಬಹುದಾಗಿದೆ. ಈ ರೂಪದರ್ಶಿಯು ನೀಲಿ ಬಣ್ಣದ ಸೀರೆಯನ್ನು ಧರಿಸಿದ್ದಾಳೆ. ಕೆಂಪು ಬಣ್ಣದ ಹೂವನ್ನು ಮುಡಿದು ಕೊಂಡಿದ್ದಾಳೆ. ಕನ್ನಡಿಯನ್ನು ಅವಳ ಪ್ರತಿಬಿಂಬವನ್ನು ಕಾಣಬಹುದಾಗಿದೆ. ಅವಳ ಕೈಯಲ್ಲಿ ಕೆಂಪು ಬಣ್ಣದ ವಸ್ತುವನ್ನು ಹಿಡಿದುಕೊಂಡಿದ್ದಾಳೆ. ಈ ಕಲಾಕೃತಿಯನ್ನು ಹೆಬ್ಬಾರರು ೧೯೭೮ರಲ್ಲಿ

ತೈಲವರ್ಣದಿಂದ ರಚಿಸಿದ್ದು, ಅದರ ಅಳತೆಯು ೨೨೬ x ೧೮೮ ಸೆಂ.ಮೀ. ಇದೆ. ಇದು ರನ್ನ ಹೆಬ್ಬಾರರ ಸಂಗ್ರಹದಲ್ಲಿದೆ.

ಆದಿತ್ಯ


ಒಬ್ಬ ಪ್ರಬುದ್ಧ ಕಲಾವಿದನೆಂದು ಗುರುತಿಸಲು, ಆ ಕಲಾವಿದ ಎಲ್ಲ ರೀತಿಯ ವಿಷಯಗಳ ಬಗ್ಗೆ ಅಧ್ಯಯನ ಅವಶ್ಯ ಎಂಬುವಂತೆ ಹೆಬ್ಬಾರರು ತಮ್ಮ ಭಾವಚಿತ್ರ ರಚನೆಯಲ್ಲಿ ಸಣ್ಣ ಮಗುವಿನಿಂದಲೂ ತಮ್ಮ ಹಿರಿಯ ತಾಯಿಯವರೆಗೂ ಅಂದರೆ ಎಲ್ಲ ರೀತಿಯ ವಯಸ್ಸಿನವರನ್ನು ತಮ್ಮ ಕ್ಯಾನ್‌ವಾಸ್ ಮೇಲೆ ತಂದಿದ್ದಾರೆ. ಅಂತೆಯೇ ಈ ಆದಿತ್ಯ ಎಂಬ ಪುಟ್ಟ ಬಾಲಕ ಚಿತ್ರದಲ್ಲಿಯೂ ಅವರು ತಮ್ಮ ಕಲಾಕೌಶಲ್ಯವನ್ನು ಮೂಡಿಸಿದ್ದಾರೆ. ನಗುತ್ತಿರುವ ಸುಂದರವಾದ ಪುಟ್ಟ ಬಾಲಕನ ಕೃತಿಯು ನೋಡಲು ಅಂದವಾಗಿದೆ. ಈ ಕಲಾಕೃತಿಯನ್ನು ತೈಲವರ್ಣದಿಂದ ೧೯೭೮ರಲ್ಲಿ ರಚಿಸಿದ್ದಾರೆ. ಇದು ೪೪x೪೪ ಸೆಂ.ಮೀ ಇದ್ದು, ಕಲಾವಿದರ ಮಗಳಾದ ರೇಖಾರಾವ್ ಅವರ ಸಂಗ್ರಹಣೆಯಲ್ಲಿದೆ.

ರಜನಿ

ಪುಟ್ಟ ಬಾಲಕಿ ರಜನಿಯ ಈ ಕಲಾಕೃತಿಯನ್ನು ಹೆಬ್ಬಾರರು ೧೯೫೫ರಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಬಿಳಿ ಅಂಗಿಯನ್ನು ತೊಟ್ಟು ರಜನಿಯ ಮುಖವರ್ಣವು ಮತ್ತು ಕಪ್ಪು ಕೂದಲು ನೋಡಲು ಅಂದವಾಗಿದ್ದಾಳೆ. ಈ ಕಲಾಕೃತಿಯ ಅಳತೆಯ ೨೫x೩೫ ಸೆಂ.ಮೀ. ಇದ್ದು, ಹೆಬ್ಬಾರರ ಎರಡನೆಯ ಮಗಳಾದ ರಜನಿಯ ಬಳಿಯೇ ಇದೆ.


ಕರ್ನಾಟಕದಲ್ಲಿ ಅನೇಕ ಕಲಾವಿದರು ತಮ್ಮ ತಮ್ಮ ಕಲಾಕೃತಿಗಳ ರಚನೆಯಲ್ಲಿ ವಿವಿಧ ಆಯಾಮಗಳನ್ನು ಕಂಡುಕೊಂಡು ಯಶಸ್ವಿಯಾಗಿರುವಲ್ಲಿ ಕೆ.ಕೆ. ಹೆಬ್ಬಾರರು ಒಬ್ಬರು. ಇವರು ಟೆಂಪರಾ ಮತ್ತು ತೈಲವರ್ಣದಿಂದ ಸಂಯೋಜನಾ ಚಿತ್ರಕಲಾಕೃತಿಗಳನ್ನು ರಚಿಸಿದವರು. ಹೆಚ್ಚು ಸೃಜನಾತ್ಮಕತೆಯ ಭಾವವನ್ನು ಬೇರಿದವರು. ಹಾಗೆಯೇ ಎಕ್ಸ್‌ಪ್ರೆಶನಿಸಂಗೆ ಹೊಂದಿಕೊಳ್ಳುವವರು. ನೋಡುತ್ತಾ ಚಿತ್ರರಚನೆ ಮಾಡಿದ ವ್ಯಕ್ತಿ ಇವರು. ಹೆಚ್ಚು ಪ್ರಿಯವಾದ ದೇವರೆಂದರೆ ಗಣೇಶ, ಈ ಗಣೇಶನನ್ನು ವಿವಿಧ ಭಂಗಿಗಳಲ್ಲಿ ವರ್ಣಗಳನ್ನು ಚೆಲ್ಲಿ ದಪ್ಪ ರೇಖೆಗಳ ಮೂಲಕ ಚಿತ್ರವನ್ನು ರಚಿಸಿ ಹೆಸರಾದವರು. ಹೀಗೆ ವಿವಿಧ ವರ್ಣಚಿತ್ರಗಳನ್ನು ರಜನಿ, ತಮ್ಮದೇ ಆದ ಶೈಲಿಯನ್ನು ಹುಟ್ಟಿ ಹಾಕಿದ ಮಹಾನುಭಾವ ಕೆ.ಕೆ. ಹೆಬ್ಬಾರರು ಹೀಗಾಗಿ ಈ ಅಧ್ಯಾಯನ ಪ್ರಮುಖ ಅಂಶ ವರ್ಣಚಿತ್ರಗಳ ಕುರಿತಾಗಿದ್ದು, ಅದರಂತೆ ಪೇಂಟಿಂಗ್‌ಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

❖❖❖❖



ಹೆಬ್ಬಾರರ ವರ್ಣಚಿತ್ರಗಳ ಅಧ್ಯಯನದಿಂದ ಕಂಡುಬರುವ ಅಂಶಗಳು

- ಹೆಬ್ಬಾರರ ವರ್ಣಚಿತ್ರಗಳನ್ನು ಮುಖ್ಯವಾಗಿ ಭಾರತೀಯತೆಯು ಎದ್ದು ಕಾಣುವ ಪ್ರಮುಖ ವಿಷಯವಾಗಿದೆ.
- ಹೆಬ್ಬಾರರ ವರ್ಣಚಿತ್ರಗಳಲ್ಲಿ ಕರ್ನಾಟಕದ ಜಾನಪದ ಕಲೆ ಮತ್ತು ಜನಪದರ ಮುಗ್ಧಭಾವ, ಸೃಜನಶೀಲತೆಯನ್ನು ವರ್ಣ ವೈಖರಿಯ ಮೂಲಕ ತಮ್ಮ ಕಲಾಕೃತಿಗಳನ್ನು ಅಭಿವ್ಯಕ್ತಿಸಿದ್ದಾರೆ.
- ದಕ್ಷಿಣ ಕನ್ನಡದ ನಾಗಮಂಡಲ, ನಾಗರಾಧನೆ, ಮಹಿಳೆಯರ ರಂಗವಲ್ಲಿ ಹೀಗೆ ಬಹುಪುರಾತನ ವಾದಂತಹ ಸಂಪ್ರದಾಯಗಳನ್ನು, ಹಳ್ಳಿಯ ಜನಜೀವನದ ದೈನಂದಿನ ಆಗುಹೋಗುಗಳನ್ನು, ಕೃಷಿಯಿಂದಿಡಿದು ಸಂತೋಷದ ಸುಗ್ಗಿ ಸಂಭ್ರಮದ ಆಚರಣೆಗಳು ಹಳ್ಳಿಗಳ ಸುಂದರ ನಿಸರ್ಗ ಸೌಂದರ್ಯವನ್ನು ವರ್ಣ ಚಿತ್ರಕಲಾಕೃತಿಗಳ ಮೂಲಕ ಸೆರೆ ಹಿಡಿದಿದ್ದಾರೆ.
- ಹೆಬ್ಬಾರರು ಅನೇಕ ವಿದೇಶಿ ಪ್ರವಾಸಗಳ ಮತ್ತು ಅಲ್ಲಿನ ಅಧ್ಯಯನಗಳ ಮೂಲಕ ಕಂಡುಕೊಂಡಂತಹ ಜ್ಞಾನವನ್ನು ತಮ್ಮ ಪ್ರಯೋಗಾತ್ಮಕ ಮನೋಭಾವವನ್ನು ವರ್ಣ ಕಲಾಕೃತಿಗಳ ಮೇಲಿನ ಪ್ರಯೋಗವನ್ನು ಕಾಣಬಹುದು.
- ಹೆಬ್ಬಾರರು ಯಾವುದೇ ರೀತಿಯ ಒಂದು ಪಂಥಕ್ಕೆ ಸೀಮಿತವಾಗದೇ, ತಮ್ಮ ಮೂಲ ಭಾರತೀಯ ಶೈಲಿಯಿಂದಿಡಿದು ಆಧುನಿಕ ಕಲೆಯ ವಿವಿಧ ಪಂಥಗಳ ಅಧ್ಯಯನದ ಮೂಲಕ ತಮ್ಮದೇಯಾದ ಸ್ವಂತ ಶೈಲಿಯನ್ನು ರೂಢಿಸಿಕೊಂಡು, ಭಾರತೀಯ ಕಲೆಯನ್ನು ಆಧುನಿಕ ಕಲೆಯೆಡೆಗೆ ಒತ್ತೊಯ್ದ ಹರಿಕಾರನಂತೆ ತಮ್ಮನ್ನು ತಾವೇ ಪ್ರಯೋಗದ ಮೂಲಕವೇ ಆಧುನಿಕ ಕಲಾಶೈಲಿಯನ್ನು ಪರಿಚಯಿಸಿದ್ದಾರೆ.
- ಹೆಬ್ಬಾರರ ಸೂಕ್ಷ್ಮ ಮನೋಭಾವದಲ್ಲಿ ಮೂಡಿಬಂದಿರುವ ನಿರಾಶ್ರಿತರು, ಭಿಕ್ಷುಕರು, ವೈಪರೀತ್ಯ, ಶಾಂತಿ, ಜೀವನ, ಮರಣ ಹೀಗೆ ಸಮಾಜದ ನೋವು-ನಲಿವುಗಳ ಬಡತನದ ಭೀಕರತೆಯ ಯುದ್ಧದ ಅಶಾಂತಿಯ ರಕ್ತಮಯ ವಿಷಯಗಳಿಂದ ಅವರ ಮನಸ್ಸಿನ ಭಾವನೆಗಳ ಮೂಲಕ ಹೊರಹಾಕಿದ್ದಾರೆ.
- ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶ ಎಂಬ ವರ್ಣ ಕಲಾಕೃತಿಗಳು ತಮ್ಮ ಮತ್ತು ಪ್ರಕೃತಿ ನಡುವಿನ ಸಂಬಂಧವನ್ನು ಈ ಪಂಚಭೂತ ಶಕ್ತಿಯ ಬಗೆಗಿನ ಆಲೋಚನೆಯನ್ನು ತಮ್ಮ ಮನೋಭಾವನೆಯ, ಬುದ್ಧಿಶಕ್ತಿಯ ಮತ್ತು ಅಂತರ್‌ದೃಷ್ಟಿಯಿಂದ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ.



- ಹೆಬ್ಬಾರರು ಸಮಾಜದಿಂದ ದೂರ ಸರಿದು ಒಂಟಿಯಾಗಿ ತಮ್ಮ ಕಲಾಲೋಕದಲ್ಲಿಯೇ ಮಗ್ನರಾಗಿರದ ವ್ಯಕ್ತಿಯಾಗಿರದೇ, ಸಮಾಜದ ಆಗುಹೋಗುಗಳು, ನೋವು-ನಲಿವುಗಳ ನಿರಂತರ ಸಂಪರ್ಕವನ್ನು ಕಂಡು ಬಡತನ, ಹಸಿವು, ನಿರ್ಗತಿಕ ಜನರಲ್ಲಿ ಅಡಗಿರುವ ಕ್ರಿಯಾತ್ಮಕ ಜೀವನದ ಸ್ಫೂರ್ತಿಯನ್ನು ತಮ್ಮ ಕಲಾಕೃತಿಗಳ ಮೂಲಕ ಹೊರತರಲು ಯತ್ನಿಸಿದ್ದಾರೆ.

ಒಟ್ಟಾರೆ ಹೆಬ್ಬಾರರ ವರ್ಣ ಕಲಾಕೃತಿಗಳನ್ನು ಗಮನಿಸಿದಾಗ ಸಮಾಜ ಮತ್ತು ಪ್ರಕೃತಿಯೊಡನೆ ಇರುವ ಅವರ ನಿಕಟ ಸಂಬಂಧವನ್ನು ನಾವು ಅಧ್ಯಯನದಿಂದ ತಿಳಿಯಬಹುದಾಗಿದೆ.

❖❖❖❖



ಗಣಪತಿಯ ವರ್ಣ ಚಿತ್ರ



ಕಾರ್ಲಿ ಚಿತ್ರಗಳು



ಸುಗ್ಗಿ



ಕನ್ನಿಕೆ



ನೇಗಿಲಯೋಗಿ



ಜ್ವಲಂತ ದಕ್ಷಿಣ



ಶಕುಂತಲ



ಪಂಡಿತರು



ಜಾನುವಾರು ಜಾತ್ರೆ



ಉತ್ಸವ ನೃತ್ಯ



ನಾಗಮಂಡಲದ ದೃಶ್ಯ



ಯಕ್ಷಗಾನ



ಪುಷ್ಪಹಾರ ವಿನಿಮಯ



ಮೀನುಗಾರರು




ಸಮುದ್ರ ಸಂಪತ್ತು



ಬಲೆ



ಸಮುದ್ರ ತೀರ



ಡೋಲು ಬಾರಿಸುವವ



ವೀಣಾ



ಸಂಜೆಯ ಹಾಡು



ಹಂಬಲಿಸು



ಶರದ್ ಪೂರ್ಣಿಮ



ಕಲಾವಿದರ ಕೈಹಿಡಿ



ಗೋವಾ



ಗಣೇಶ



ಕ್ರಿಯಾ ವಿಧಿ



ಪ್ರಳಯ



ಗಾಳಿಪಟ



ಶಕ್ತಿ



ನಾಗಮಂಡಲ



ಅಗ್ನಿ



ಜಲ



ಸುರ್ಯಕಾಂತಿ



ಆಕಾಶ



ಅಂತಿಮ ದರ್ಶನ



ಹುಂಜಗಳ ಕಾಳಗ



ಆಂಗ್ ಕೋರ್ ವಾಟ್



ಪ್ರದರ್ಶನ



ಮೈ–ಲೆ ವಿಯಟ್ನಾಯ



ನಿರಾಶ್ರಿತರು



ತಾಯಿ ಮತ್ತು ಕಲಾವಿದ



ಮಹಾತ್ಮಾ ಗಾಂಧಿ



ಮೌಲಾನಾ ಆಜಾದ್



ಇಂದಿರಾ ಗಾಂಧಿ



ಜವಾಹಾರ ಲಾಲ್ ನೆಹರು



ಎನ್. ಎಸ್. ಬೇಂದ್ರೆ



ಪ್ರೊ. ದಂಡಾವತಿ ಮಠ



ಜಾನ್.ಎಫ್. ಕೆನಡಿ ಮತ್ತು ಜವಾಹಾರ ಲಾಲ್ ನೆಹರು



ಸುಶೀಲ




ಸಹೋದರಿಯರು



ರೇಖಾ



ತಾಯಿ ಸೀತಮ್ಮ




ಶಶಿ



ಆದಿತ್ಯ


ರಜಿನಿ


ಕಲಾವಿದ ಹೆಬ್ಬಾರರು



ಅಧ್ಯಾಯ - ಐದು


ಕೆ.ಕೆ. ಹೆಬ್ಬಾರರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ : ಐದು

ಕೆ. ಕೆ. ಹೆಬ್ಬಾರರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕಲೆ ಜೀವನದಿಂದ ಪ್ರತ್ಯೇಕ ಅಲ್ಲ, ಜೀವನವನ್ನು ಸುಂದರಗೋಳಿಸುವ ಶ್ರೀಮಂತಗೊಳಿಸುವ, ಎತ್ತರಿಸುವ, ಸ್ಫೂರ್ತಿ ನೀಡುವ ಕಲೆ ದೊಡ್ಡಕಲೆ, ಒಳ್ಳೆಯ ಕಲೆ. ಆಧುನಿಕ ಕಲೆಯ ಬಹ್ವಂಶದಲ್ಲಿ ಈ ಗುಣಗಳ ಕೊರತೆ ಇದೆ. ಮನುಷ್ಯರನ್ನು ನಿರ್ಜೀವ, ನಿರುತ್ಸಾಹಿಗಳನ್ನಾಗಿ ಮಾಡುತ್ತವೆ. ಮರಣದಲ್ಲಿ ಜೀವನದ ವಿಸ್ಮಯಗಳನ್ನು ಹುಡುಕಲಾಗುವುದಿಲ್ಲ. ದೃಷ್ಟಿ ಇರುವವನಿಗೆ ಬುದ್ಧಿ, ತಿಳುವಳಿಕೆ ಬರುತ್ತದೆ. ತಿಳುವಳಿಕೆ ಇರುವಲ್ಲಿ ಮಾತ್ರ ಸೃಷ್ಟಿಶೀಲ ಕಲೆ ಉಗಮವಾಗುತ್ತವೆ.

ಭಾರತದ ಆಧುನಿಕ ಕಲಾವಿದ ಕೆ.ಕೆ. ಹೆಬ್ಬಾರರ ಕಲೆಯಲ್ಲಿ ಪ್ರಾಮಾಣಿಕತೆ ಸಮತೂಕ ಅಷ್ಟೇ ಅಲ್ಲ. ಅರ್ಥ ಮತ್ತು ಅಳಿವು ಎರಡು ಇವೆ. ಅವರು ಆಧುನಿಕರಾಗಿರುವ ಕಲೆಯು ಯಾವುದೇ ಕಟ್ಟುಪಾಡುಗಳಿಗೆ ಒಳಪಡಬಾರದೆಂಬ ಅವರ ನಿಲುವಿನಿಂದ, ಯಾವುದೇ ರೀತಿಯಿಂದ ಹೊಸತನ ಸ್ವೀಕರಿಸಲು ಹಿಂಜರಿಯುವುದಿಲ್ಲ ಎನ್ನುತ್ತಾರೆ. ಆಧುನಿಕ ಕಲೆಯ ಕೆಲವು ಲಕ್ಷಣಗಳು ತಮ್ಮ ಭಾವನೆಗಳು ಪ್ರಕಟಪಡಿಸಲು ಹೆಚ್ಚು ಸಮರ್ಥವೆಂಬ ಕಾರಣಕ್ಕಾಗಿ ಅವರು ಆಧುನಿಕ ಕಲಾತಂತ್ರಗಳಿಗೆ ಶರಣುಹೋದರು. ವಿಚಾರಗಳು ಅತಿರಂಜಿತಗೊಳಿಸುವುದಾಗಲಿ ಆಕಾರಗಳನ್ನು ವಿರೂಪಗೊಳಿಸುವುದಾಗಲಿ ಅರ್ಥಹೀನವೆಂದು ಅವರು ಹೇಳುತ್ತಾರೆ. ಹೆಬ್ಬಾರರು ನೇರವಾದ ಹಾಗೂ ಸರಳವಾದ ತಂತ್ರಗಳೇ ಪರಿಣಾಮಕಾರಿಯಾಗಿರುತ್ತದೆ ಎಂದು ಹೇಳುತ್ತಾರೆ. ಹೆಬ್ಬಾರರು ಕೊಂಕಣದಿಂದ ಬಂದವರು. ಅದು ಸುಂದರ ನೆಲ, ಸುಂದರಿಯಾದ




ಸ್ತ್ರೀಯರಿಗೆ ಹೆಸರಾದದ್ದು, ಉಡುಪಿ ಹೆಬ್ಬಾರರ ಹುಟ್ಟೂರು ಇದು ಪ್ರಾಚೀನ ಯಾತ್ರ ಸ್ಥಳ, ಶ್ರೀಕೃಷ್ಣ ಮಠ, ಅಷ್ಟಮಠಗಳಿರುವ ಸುತ್ತುವರಿದ ಧಾರ್ಮಿಕಪೀಠ ಭಾರತದಲ್ಲಿ ಧಾರ್ಮಿಕ ಉತ್ಸವಗಳೆಂದರೆ ರಂಗಿನ ಸಂಭ್ರಮ. ಉಡುಪಿಯ ಉತ್ಸವ ಎಲ್ಲದಕ್ಕಿಂತಲೂ ಅತಿಶಯ ಕೊಂಕಣದ ಯಕ್ಷಗಾನ ಕೇರಳದ ಕಥಕ್ಕಳಿಯಂತೆ ಕಣ್ಣನ್ನು ತುಂಬುವ ನೃತ್ಯ, ನಾಟಕ ಇಲ್ಲಿನ ವೇಷಭೂಷಣಗಳೂ ರಂಗಲಂಕಾರವೂ ಈ ಜೀವಂತ ಕಲೆಯ ಸೌಂದರ್ಯವನ್ನು ಇಮ್ಮಡಿಸಿವೆ. ಜನರ ಬಾಯಲ್ಲಿ ಇದಕ್ಕೆ ದಶಾವತಾರ ಆಟ, ಕಥಕ್ಕಳಿ ಅತ್ಯಂತ ನೈಪುಣ್ಯ ಸಾಧಿಸಿದ ಮೂಕನಾಟಕ ಕೇರಳದ ಕಥಕ್ಕಳಿ ಯಕ್ಷಗಾನದಿಂದ ವಿಕಾಸವಾಗಿರಬೇಕು.

ಹೆಬ್ಬಾರರ ಹಿಂದಿನ ನೆನಪುಗಳಿಂದಲೆ ಬಾಲ್ಯದ ಬಯಲಾಟಗಳ ಅದ್ಭುತವಾದ ಪ್ರಪಂಚದ ಸೂಕ್ಷ್ಮವೇದಿಯಾದ ಯಾವ ಬಾಲಕನನ್ನು ಸೆಳೆದಿತ್ತು. ಅಲ್ಲದೆ ಹೆಬ್ಬಾರರ ಬಾಲ್ಯ ಕಳೆದದ್ದು, ದೇವಾಲಯಗಳ ಪರಿಸರದಲ್ಲಿ ಇಲ್ಲಿ ಬಣ್ಣಗಳು, ಪರಿಮಳ, ಹಾಡು, ಸಂಗೀತ ದಿನಚರಿಯ ಅಂಗಗಳು, ಬಣ್ಣದ ಆಟಿಕೆಗಳು ಎಳವೆಯಲ್ಲಿ ಅವರಿಗೆ ಪ್ರಿಯವಾಗಿದ್ದವು. ಹೆಬ್ಬಾರರಿಗೆ ಅವು ಸೃಷ್ಟಿಶೀಲತೆಗೆ ಸ್ಫೂರ್ತಿಯಾದವು. ಅವುಗಳ ಚಿತ್ರ ಬಿಡಿಸುವುದು ಹೆಬ್ಬಾರರಿಗೆ ಪ್ರಿಯವಾದ ಆಟವಾಗಿತ್ತು. ಸುತ್ತಮುತ್ತಲಿನ ಕೆಂಪು ಮಣ್ಣು, ಹಸಿರು ಎಲೆಗಳು, ನೀಲವಾದ ಸಮುದ್ರದ ಜಲರಾಶಿ ಹೆಬ್ಬಾರರ ಎಳೆಯ ಮನಸ್ಸನ್ನು ತುಂಬಿದವು.

ರುದ್ರಮನೋಹರವಾದ ಕರಾವಳಿಯ ಮುಂಗಾರಿನ ಓಡುವಮೋಡಗಳ ಲಾಸ್ಯಮಯ ರಾಗದಲ್ಲೋ, ಕಣ್ಣಾಸಿನಲ್ಲೋ ಹಿಡಿದಿಡುವುದು ಬಾಲಕ ಹೆಬ್ಬಾರರಿಗೆ ಸಂತಸದ ಚಟುವಟಿಕೆ, ಅವರ ಅಂತರಂಗದ ಭಾವಗಳ ಅಭಿವ್ಯಕ್ತಿಗೆ ಅವರು ಹಾತೊರೆಯುತ್ತಿದ್ದರು. ಹೆಬ್ಬಾರರು ಕಲೆಗೆ ಮೊದಲ ಮೆಚ್ಚುಗೆ ದೊರತದ್ದು ಅವರ ತಾಯಿಯಿಂದ, ಮಗನಿಗೆ ಬಣ್ಣಗಳೊಂದಿಗೆ ಆಡುವುದೇ ಪ್ರಿಯವಾದ ಹವ್ಯಾಸವೆಂದರಿತ ಆಗ ಆತ ತಮ್ಮ ಒಲವನ್ನೇ ಓಲೈಸುವಂತೆ ಹುರಿದುಂಬಿಸಿದರು. ಈ ಮಗ ಏನಾಗುತ್ತಾನೋ ನೋಡೋಣ ಎಂಬ ಛಲ ಅವರಿಗೂ ಇದ್ದಂತಿತ್ತು.

ಉಡುಪಿಯ ಕಲಾವಿದರೊಬ್ಬರು ಬಾಲಕನ ಎಳೆಯ ಪ್ರತಿಭೆ, ಸೂಫಿ ಕಲಾವಂತಿಕೆಗಳು ಕಂಡು ಪ್ರೋತ್ಸಾಹ ನೀಡಿದ್ದರು. ಹೆಬ್ಬಾರರಿಗೆ ಈ ಪ್ರೋತ್ಸಾಹ ಮತ್ತಷ್ಟು ಬಲ ಕೊಟ್ಟಿತು. ದಕ್ಷಿಣ ಕನ್ನಡ, ಅದರಲ್ಲೂ ಉಡುಪಿ, ಬೆಳೆಯುವ ಕಲಾವಿದರಿಗೆ ಉತ್ಸಾಹದಾಯಕವಾದ ಪರಿಸರ ಆಗಿರಲಿಲ್ಲ. ಆದ್ದರಿಂದ ಹೆಬ್ಬಾರರು ಮೈಸೂರಿಗೆ ಹೋಗಿ ಅಲ್ಲಿನ ಚಾಮರಾಜೇಂದ್ರ ಇನ್ಸ್‌ಟಿಟ್ಯೂನಲ್ಲಿ ಕಲಾಭ್ಯಾಸಕ್ಕೆ ಸೇರಿಕೊಂಡರು. ಅವರ ಪ್ರಗತಿ ಹಾಗೂ ಕಲಿಯುವ ಉತ್ಸಾಹ ಎಷ್ಟು ತೀವ್ರವಾಗಿತ್ತೆಂದರೆ ಕ್ಷಿಪ್ರದಲ್ಲೇ ಅವರು ಹೊಸ ಕ್ಷೇತ್ರಗಳಿಗೆ ಕಾಲಿಟ್ಟರು. ಅವರಿಗೆ ಅಲ್ಲಿಯೂ ಶಿಕ್ಷಣದಾಹ ತೀರದ ಕಾರಣ ಮುಂಬೈಗೆ ಹೊರಡುವ ತೀರ್ಮಾನದಿಂದ ಮುಂಬಯಿಗೆ ಬಂದರು, ಸ್ವಲ್ಪಕಾಲದಲ್ಲಿ ಮುಂಬಯಿಯಲ್ಲಿ ಸಿಕ್ಕಿದ ಮೊದಲ ಕೆಲಸ



ಫೋಟೋಗಳಿಗೆ ರೀ-ಟಚ್‌ಮಾಡುವ ಕೆಲಸ ಖೋಪಾರ್ಡೆ ಸ್ಟುಡಿಯೋದಲ್ಲಿ. ಅಲ್ಲಿಂದ ಅವರ ಮುಂಬಯಿಯ ಮೊದಲ ಗುರಿ ಅಧ್ಯಯನ, ಕಲಾಶಿಕ್ಷಣ, ದಂಡಾವತಿ ಮಠ ಅವರ ನೂತನ ಕಲಾಮಂದಿರದಲ್ಲಿ ಮೂಲ ಅಧ್ಯಯನಕ್ಕೆ ತೊಡಗಿಸಿದರು.


ಒಂದು ಕ್ಷಣವೂ ವಿರಾಮವಿಲ್ಲದೆ ಪ್ರತಿನಿತ್ಯವೂ, ದುಡಿಯ ಬೇಕಾದ ಅನಿವಾರ್ಯ ಹಾಗೂ ಅವರ ವ್ಯಕ್ತಿತ್ವದ ಗಟ್ಟಿತನವನ್ನು ಮೂಡಿಸಿದೆ. ಹೆಬ್ಬಾರರ ವ್ಯಕ್ತಿತ್ವದಲ್ಲಿ ಗಟ್ಟಿಯಾದ ಒಂದು ಎಳೆ, ಅವರ ಶ್ರೇಯಸ್ಸಿಗೆ ಪೋಷಕವಾದ ಸತ್ವ, ದಂಡಾವತಿ ಮಠದ ಕಲಾಶಾಲೆಯಲ್ಲಿ ಅವರಿಗೆ ಕಲಾ ಅಧ್ಯಯನದ ಮೊದಲ ಹಂತ ಹೆಬ್ಬಾರರು ಹುಟ್ಟು ಕಲಾವಿದರಾದರೂ ಅವರ ಅಧ್ಯಯನ ಪ್ರಿಯತೆ ಅಸಾಮಾನ್ಯವಾದದ್ದು, ಎಲ್ಲಾದರೂ ಕಲೆಗೆ ಸಂಬಂಧಿಸಿದ ವಿಷಯಗಳು ಅಧ್ಯಯನ ಮಾಡಬೇಕು, ಓದಬೇಕು, ಕೇಳಬೇಕು, ನೋಡಬೇಕು, ಭಾರತದ ಕಲಾವೈಭವದ ಕುರುಹುಗಳು ಅನ್ವೇಷಿಸಬೇಕು.[೧] ವಿದೇಶಗಳ ಮಹಾನ್ ಕಲಾವಿದರ ಕೃತಿಗಳ ಸೊಗಸುಗಳು ಹೀರಿಕೊಳ್ಳಬೇಕು ಎಂಬ ಅವರ ಕುತೂಹಲ, ಆಕರ್ಷಣೆ, ಜಗತ್ತಿನ ಮುಕ್ತ ಮನಸ್ಸಿನಿಂದ ಪರಿಗ್ರಹಿಸುವ ಶಿಕ್ಷಣ ಬೇಕು, ಶಿಕ್ಷಣವು ದೀಪವಿದ್ದಂತೆ, ದೀಪವೇ ನಡೆಯಲಾರದು ಎಂದಿದ್ದರೂ, ತೀರಬೇಕು, ಹೆದ್ದಾರಿಯಲ್ಲಿ ದಿಕ್ಕು ತೋರಿಸುವ ಕೈಗಂಬ ಇರುವಂತೆ.

ಅಂಥ ದಾರಿದೀಪ, ಕೈಗಂಬದ ಕೆಲಸವನ್ನು ಹೆಬ್ಬಾರರ ಜೀವನದಲ್ಲಿ ಜೆ.ಜೆ. ಕಲಾಶಾಲೆಮಾಡಿತ್ತು. ಆ ಕಲಾಶಾಲೆಗೂ ಅದರ ನಿರ್ದೇಶಕನಾಗಿ ಇಂಗ್ಲೆಂಡಿನಿಂದ ಬಂದಿದ್ದ ಚಾರ್ಲ್ಸ್ ಜೆರಾರ್ಡ್ ಹೆಬ್ಬಾರರ ಪ್ರತಿಯೊಂದು ಹೆಜ್ಜೆಯಲ್ಲೂ ಬೆಂಬಲಿಸಿದರು. ತಿದ್ದುವ ಮತ್ತು ತೀಡುವ ಮುಖಾಂತರ ಮೂರ್ತಿಯಾಗಲು ಬಯಸುತ್ತಿದ್ದ ಶಿಲೆಯನ್ನು ಮೂರ್ತಿಯನ್ನಾಗಿ ಮಾಡಿದರು.

ಬೆಳೆಯುವ ಸಿರಿ ಮೊಳಕೆಯಲ್ಲೇ ಕಂಡ ಕಲಾಗುರುವೆಂದರೆ ಚಾಲ್ಸ್ ಜೆರಾರ್ಡ್ ಮುಂಬಯಿಯನ್ನು ಹೆಬ್ಬಾರರ ಪ್ರಥಮ ಏಕವ್ಯಕ್ತಿ ಚಿತ್ರಪ್ರದರ್ಶನವನ್ನು ತೆರೆದಿಡುವ ವೇಳೆ ಅವರು ಹೆಬ್ಬಾರರ ಕಲೆಯ ಪ್ರಯೋಗಶೀಲತೆಯೂ, ವ್ಯಕ್ತಿಪರತೆಯನ್ನು ಪ್ರಶಂಸಿರುತ್ತೆ. ಕೃಷ್ಣ ಹೆಬ್ಬಾರರ ಈ ಪ್ರದರ್ಶನದ ಉದ್ಘಾಟನೆಯನ್ನು ಮಾಡಿ ಹೆಬ್ಬಾರರ ಕುರಿತು ಅವರ ಚಿತ್ರಗಳಲ್ಲು ಕಂಡುಬರುವ ಲವಲವಿಕೆ, ನಿರಂತರ ಪ್ರಯೋಗಶೀಲತೆ ಮತ್ತು ನಿಂತ ನೀರಾಗಲೊಲ್ಲದ ಅಸಂತೃಪ್ತಿ ಇವುಗಳು ಪರಿಶೀಲಿಸಿದರೆ ಅವರು ನಿಶ್ಚಯವಾಗಿ ಸ್ವರನಾಗಿರಬೇಕು ತನ್ನ ಹೆಗ್ಗಳಿಕೆ ತಾನು ಹೇಳಿಕೊಳ್ಳಬಾರದು, ಬೆನ್ನು ತಟ್ಟುವ ಕೆಲಸ ಬೇರೆಯವರು. ಚಿತ್ರ ನೋಡಿದವರು ಮಾಡಬೇಕು. ಹೆಬ್ಬಾರರು ಬಹುಮುಖ ಪ್ರತಿಭೆಯ ಕಲಾವಿದನೆಂಬುದು ಖಚಿತವಾಗುತ್ತದೆ. ಪೂರ್ವ ಮತ್ತು ಪಶ್ಚಿಮ ಎರಡರ ಕಲಾಶೈಲಿಯಲ್ಲೂ ಕುಂಚ ಆಡಿಸಬಲ್ಲ ಕಲಾವಿದನೀತ. ಈತನ ವ್ಯಕ್ತಿಚಿತ್ರ

---

೦೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೩೯



ನೋಡಿ ಕೆಲವರು ಮೆಚ್ಚಿಕೊಂಡರೆ ಇನ್ನು ಕೆಲವರು ನಿಸರ್ಗ ದೃಶ್ಯಗಳಿಗೆ ಒಲಿಯಬಹುದು. ಕಲಾವಿದರಲ್ಲಿ ಹೆಬ್ಬಾರರಿಗೆ ಅಗ್ರಸ್ಥಾನ. ಮೊದಲು ಆಸ್ವಾದನೆ, ಆ ಮೇಲೆ ಅದರ ಮನನ, ಕಟ್ಟಕೊನೆಗೆ ತೀರ್ಪು ಅದಿಲ್ಲದೇ ಹೋದರೂ ಅಡ್ಡಿಯಿಲ್ಲ, ರಸಸ್ವಾದನೆಯೇ ಮುಖ್ಯ. ನವನವೋನ್ವೇಷನಾದಿಯಾದ ಪ್ರತಿಭೆಗಳ ಕಾಲದೇಶಗಳ ಮಿತಿಯಿಲ್ಲ, ವಯಸ್ಸಿನ ಮಿತಿಯಿಲ್ಲ.

'ಪಿಕಾಸೋ ಚಿತ್ರ ಬರೆಯಬೇಕು. ಮಕ್ಕಳಂತೆ' ಎನ್ನಲು ಮಾತಿಗೂ ಇವೇ ಅರ್ಥವಲ್ಲವೇ? -ಇದು ಅವರ ಸ್ವಯಂ ಪ್ರೇರಣೆ. ಸರಳತೆ ಇವು ಮಕ್ಕಳಿಗೆ ಸಾಧ್ಯವಾದಷ್ಟು ದೊಡ್ಡವರಿಗೆ ಸುಲಭವಲ್ಲ ತಾನೇ. ಬಣ್ಣದ ಕಲ್ಪನೆಯೂ ಹಾಗೆಯೇ, ಮಕ್ಕಳಿಗೆ ಇರುವಷ್ಟು ತೀವ್ರವಾದ ವರ್ಣಾನುಭವ ದೊಡ್ಡವರಿಗೆ ಇರುವುದಿಲ್ಲ. ವರ್ಣ ಸಾಂಗತ್ಯವೂ ಹಾಗೆಯೇ ಮಕ್ಕಳಿಗೆ ಸ್ವಾಭಾವಿಕವಾಗಿ ಬರುತ್ತವೆ.

ಕಲಾವಿದ ಮಕ್ಕಳಂತೆ ಸೂಕ್ಷ್ಮ ಸಂವೇದಿಯಾಗಿರಬೇಕು, ಸರ್ವತಂತ್ರ ಸ್ವತಂತ್ರನಾಗಿರಬೇಕು. ಸ್ವಯಂ ಸ್ಫೂರ್ತಿ ಪ್ರತಿಭೆಯುಳ್ಳವನಾಗಿರಬೇಕು ಎಂದು ಹೆಬ್ಬಾರರು ಬಲ್ಲವರಾದರೂ ಒಬ್ಬ ಕಲಾವಿದ ಗಟ್ಟಿನೆಲೆಯಲ್ಲಿ ವ್ಯವಹರಿಸಬೇಕಾದರೆ ಆತನಿಗೆ ಕಲೆಯ ವ್ಯಾಕರಣ ತಿಳಿಯುವುದೊಳ್ಳೆಯದು. ದಕ್ಷಿಣ ಇರುವುದೊಳ್ಳೆಯದು, ಏಕೆಂದರೆ ಯಕ್ಷಣದಿಂದ ಆತ್ಮವಿಶ್ವಾಸ ಚಿಗಿರಿಸುತ್ತದೆ.


ಈ ಅಧ್ಯಯನದ ಕಾರಣ ಮನಸ್ಸಿಗೆ ಹೊಸ ಹೊಸ ಆಯಾಮಗಳು, ಹೊಳೆಯಬಹುದು. ಶಿಕ್ಷಣ ದಾರಿಯ ದೀಪವಾಗಬಹುದು. ಆದರೆ ದೀಪದ ಬೆಳಕಿನಲ್ಲಿ ನಡೆದು ಗುರಿಮುಟ್ಟಬೇಕಾದ್ದು, ಮಾತ್ರ ಪ್ರಾಮಾಣಿಕನ ಕೆಲಸ.

❖❖❖❖



ಅಧ್ಯಾಯ - ಆರು

ಕೆ.ಕೆ. ಹೆಬ್ಬಾರರ ಕಲಾಚಟುವಟಿಕೆಗಳು




ಅಧ್ಯಾಯ : ಆರು

ಕೆ. ಕೆ. ಹೆಬ್ಬಾರರ ಕಲಾಚಟುವಟಿಕೆಗಳು

ಲಲಿತಕಲೆಗಳಲ್ಲೊಂದಾದ ಚಿತ್ರಕಲೆಗೆ ತುಂಬಾ ಹಳೆಯ ಇತಿಹಾಸವಿದ್ದು, ಪಾಶ್ಚಾತ್ಯರು ಮೊದಲು ವಿವಿಧ ರೀತಿಯ ಪ್ರಯೋಗಗಳನ್ನು ಮಾಡಿ ಯಶಸ್ವಿಕಂಡವರು. ಹಾಗೆಯೇ ಭಾರತದಲ್ಲಿ ಸುಮಾರು ೧೮ನೇ ಶತಮಾನದಲ್ಲಿ ಪ್ರಾರಂಭವಾದ ಕಲಾವಿದರ ಬಳಗದಲ್ಲಿ ರಾಜ ರವಿವರ್ಮ ಮೊದಲಿಗರು ಎಂದರೆ ತಪ್ಪಿಲ್ಲ. ಹಾಗೆ ಬೆಳೆಯುತ್ತಾ ಮುಂದುವರೆದಂತೆ ಭಾರತದಲ್ಲಿ ಅನೇಕ ಕಲಾವಿದರು ೧೯ನೇ ಶತಮಾನದಲ್ಲಿ ಹುಟ್ಟಿಕೊಂಡು ಭಾರತೀಯ ಶೈಲಿಯಲ್ಲಿ ಪೇಂಟಿಂಗ್ ರಚಿಸಲು ತಯಾರಾಗಿದ್ದು, ದಂಡಾವತಿಮಠರವರು ಕೆ. ಕೆ. ಹೆಬ್ಬಾರರಿಗೆ ಆಶೀರ್ವಾದ ಹಾಗೂ ಕಲೆಯ ಕುರಿತು ಅರಿವನ್ನು ಮೂಡಿಸಿದರು.

ಮಗುವಿದ್ದಾಗಲೇ ಕಲೆಯನ್ನು ವಿವಿಧ ಆಯಾಮಗಳಲ್ಲಿ ತೋರಿಸಲು ಯತ್ನಿಸಿದ ಕೆ. ಕೆ. ಹೆಬ್ಬಾರರು ಚಿತ್ರಕಲೆಯನ್ನು ಪ್ರೀತಿಯಿಂದ ಆರಾಧಿಸಿದರು. ಬೆಳೆಯುತ್ತಾ ಉಡುಪಿ, ಮಂಗಳೂರು, ಮೈಸೂರು, ಬೆಂಗಳೂರು, ದೆಹಲಿ, ಮುಂಬಯಿ ಎಂಬಂತಹ ರಾಜ್ಯ ಹಾಗೂ ರಾಷ್ಟ್ರದ ಪ್ರಮುಖ ನಗರಗಳಿಗೆ ಭೇಟಿ ನೀಡಿ ಕಲೆಯನ್ನು ಕಲಿತರು. ಜೊತೆಗೆ ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಂಡರು. ಹೀಗೆ ಹೋದಕಡೆಯಲ್ಲೆಲ್ಲಾ ಸ್ನೇಹಿತರ ಬಳಗವನ್ನು ಕಟ್ಟಿಕೊಂಡವರು, ಅತಿ ಶ್ರೀಮಂತಿಕೆಯನ್ನೊತ್ತುವಂತೆ ಕಾಣದಿದ್ದರೂ ಶಿಸ್ತು, ಸಂಯಮದಲ್ಲಿ ಶ್ರೀಮಂತಿಕೆ ಇವರನ್ನಾವರಿಸಿತ್ತು ಎಂಬುದಕ್ಕೆ ಕೆ. ಕೆ. ಹೆಬ್ಬಾರರ ಕಲಾಕೃತಿಗಳೇ ಸಾಕ್ಷಿ.

ಜೆ. ಜೆ. ಕಲಾಶಾಲೆಯು ಭಾರತದ ಹಿರಿಯ ಕಲಾಶಾಲೆಯಾಗಿದ್ದು, ಇಲ್ಲಿ ಅಭ್ಯಾಸ ಮಾಡಿದವರೆಲ್ಲಾ




ರಾಷ್ಟ್ರೀಯ-ಅಂತರಾಷ್ಟ್ರೀಯ ಖ್ಯಾತಿ ಗಳಿಸಿದವರಾಗಿದ್ದಾರೆ. ಅಂತಹವರಲ್ಲಿ ಕೆ.ಕೆ.ಹೆಬ್ಬಾರರು ಒಬ್ಬರು. ಎಂ.ಎಫ್. ಹುಸೇನ್ ಅಂತಹ ಬ್ಯಾನರ್ ಕಲಾವಿದನ ಜೊತೆಗೂಡಿ ಅನೇಕ ಉತ್ತಮ ಕೆಲಸವನ್ನು ನಿರ್ವಹಿಸಿದ್ದಾರೆ. ಕೆ. ಕೆ. ಹೆಬ್ಬಾರರು ಹೀಗೆ ಭಾರತದ ಮೂಲೆ ಮೂಲೆಯಲ್ಲಿ ತಿರುಗಿ, ವಿವಿಧ ಕಲೆಗಳನ್ನು ಆರಾಧಿಸಿದ ವ್ಯಕ್ತಿ, ಕೆ.ಕೆ. ಹೆಬ್ಬಾರರು ಪ್ರಮುಖವಾಗಿ ಕ್ರಿಯೇಟಿವ್ ರಚಿಸುವ ವ್ಯಕ್ತಿಯಾಗಿದ್ದು, ಇವರ ಕಲಾಕೃತಿಗಳು ಸಾಮಾನ್ಯ ವ್ಯಕ್ತಿಯನ್ನು ಕೂಡು ಆಶ್ಚರ್ಯ ಚಕಿತಗೊಳ್ಳುವಂತೆ ಮಾಡುತ್ತವೆ. ಹೀಗೆ ಇವರ ಕಲೆ ಮುಂದುವರೆದಂತೆ ಕರ್ನಾಟಕದ ಕಲಾವಿದನಾಗಿ ನಂತರ ಭಾರತದ ಕಲಾವಿದನಾಗಿ ಹೆಸರು ಗಳಿಸಿದವರಾಗಿದ್ದಾರೆ.

ಮುಂದುವರೆದಂತೆ ಕೆ. ಕೆ. ಹೆಬ್ಬಾರರು ಮೂವತ್ತನೆಯ ವಯಸ್ಸಿನಲ್ಲಿಯೇ ಹೆಸರು ಮಾಡಿದ ವ್ಯಕ್ತಿಯಾಗಿದ್ದು, ಉಪಯುಕ್ತ ಕೆಲಸವನ್ನು ಮಾಡಿ ಭಾರತ ದೇಶಕ್ಕೆ ಹಾಗೂ ರಾಜ್ಯಕ್ಕೆ ಹೆಸರು ಗಳಿಸಿಕೊಟ್ಟವರಲ್ಲಿ ಇವರೊಬ್ಬರು. ಇವರ ಅನೇಕ ಚಟುವಟಿಕೆಗಳು ರಾರಾಜಿಸುತ್ತಿರುವುದನ್ನು ಇಲ್ಲಿ ವಿವರಿಸಲಾಗಿದೆ.

ಕರಾವಳಿ ಕರ್ನಾಟಕದಲ್ಲಿ ಜನಿಸಿದ ಹೆಬ್ಬಾರರಿಗೆ ಮೈಸೂರು ಪ್ರಥಮ ಪರಿಚಯವಾದದ್ದು, ಅವರು ಅಲ್ಲಿನ ಚಾಮರಾಜೇಂದ್ರ ಟೆಕ್ನಿಕಲ್ ಸಂಸ್ಥೆಯಲ್ಲಿ ಶಿಕ್ಷಣಕ್ಕಾಗಿ ಬಂದಾಗಲೇ. ಮುಂಬಯಿಗೆ ಹೋದ ಮೇಲೆ ಈ ಸಂಬಂಧ ಶಿಥಿಲವಾಗಿ ಮತ್ತೆ ಕೊನರಿದ್ದು ಯುನೆಸ್ಕೋ ಪ್ರೇರಿತವಾದ ಒಂದು ಮಯಸ್ಕರ ಶಿಕ್ಷಣ ಶಿಬಿರ ಮೈಸೂರಿಗೆ ಸಮೀಪವಿರುವ ಇಳಿವಾಲ ಗ್ರಾಮದಲ್ಲಿ ೧೯೫೪ರಲ್ಲಿ ನಡೆದ ವೇಳೆ ಸಮುದಾಯದ ಶಿಕ್ಷಣದಲ್ಲಿ ಯುನೆಸ್ಕೋ ತಜ್ಞ ಜಾನ್ ಬವರ್ಸ್ ಹೆಬ್ಬಾರರನ್ನು ತಮ್ಮ ತರಬೇತಿ ಶಿಬಿರಕ್ಕೆ ಕರೆದುಕೊಂಡು ಹೋದರು. ಇಲ್ಲಿಂದ ಮುಂದಕ್ಕೆ ಹೆಬ್ಬಾರರಿಗೂ ಮೈಸೂರಿಗೂ ಕಲೆಯ ನೆಲೆಯಲ್ಲಿ ನಿಕಟಸಂಬಂಧ ಬೆಳೆದು ಬಂದಿದೆ. ಮೈಸೂರು ವಿಶ್ವವಿದ್ಯಾಲಯದ ಹೊಸ ಗ್ರಂಥಾಲಯ ಭವನಕ್ಕೆ ಎರಡು ವಿಶೇಷಗಾತ್ರದ ತೈಲ ಚಿತ್ರಗಳನ್ನು ಮಾಡಿಕೊಟ್ಟದ್ದು, ೧೯೬೦ರ ದಶಕದಿಂದ ೧೯೭೦ರ ದಶಕದಲ್ಲಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದರು. ೧೯೮೫ರಲ್ಲಿ ಕನ್ನಡ ರಾಜ್ಯೋತ್ಸವದ ವಿಶೇಷ ಪ್ರಶಸ್ತಿಯನ್ನು ಅವರು ಸ್ವೀಕರಿಸಿದ್ದು ವಿಶ್ವ ಕನ್ನಡ ಸಮ್ಮೇಳನ ಮೈಸೂರಿನಲ್ಲಿ ನಡೆದಾಗ, ಇತ್ತೀಚೆಗೆ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಒಂದು ಕಲಾಶಾಲೆಯಾಗಿ ಪರಿವರ್ತಿಸಿ ಅದರ ಜೀರ್ಣೋದ್ಧಾರಕ್ಕಾಗಿ ಯೋಜನೆ ರಚಿಸಿಕೊಡುವುದರಲ್ಲೂ ಹೆಬ್ಬಾರರು ಆಸ್ಥೆ ವಹಿಸಿದ್ದಾರೆ.

೧೯೫೪: "ಜಾನ್ ಬವರ್ಸ್ ಹೆಬ್ಬಾರರ ಸನ್‌ಶೈನ್ ಮನೆಯ ಸ್ಟುಡಿಯೋಕ್ಕೆ ಭೆಟ್ಟಿ ಮಾಡಿ ಮೈಸೂರಿನಲ್ಲಿ ಬೇಸಗೆ ಕಾಲ ನಡೆಯಲಿರುವ ಶಿಬಿರದಲ್ಲಿ ಹೈಬ್ಬಾರರು ಪಾತ್ರವಹಿಸಬೇಕು, ಅಂದರೆ ಅಲ್ಲಿ ಯುನೆಸ್ಕೋ ತಯಾರಿಸುವ ವಯಸ್ಕರ ಪಠ್ಯಪುಸ್ತಕಗಳಿಗೆ ಚಿತ್ರಗಳನ್ನು ಬಿಡಿಸಿ ಕೊಡಬೇಕು ಎಂದು ಭಿನ್ನವಿಸಿದರು."[೧]

೦೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು. – ೧೧೫




ವಯಸ್ಕರ ಅನಕ್ಷರತೆ ಹೋಗಲಾಡಿಸಲು ಯುನೆಸ್ಕೋ ಆಶ್ರಯದಲ್ಲಿ ಜಗದಗಲ ನಡೆಯುತ್ತಿರುವ ಶಿಬಿರಗಳಲ್ಲಿ ಒಂದು ಮೈಸೂರಿನಲ್ಲಿ ನಡೆಯುವುದಾಗಿ ನಿಶ್ಚಿತವಾಗಿತ್ತು. ಪಠ್ಯರಚನೆಗೆ ಶಿವರಾಮ ಕಾರಂತರನ್ನು ಕರೆದಿದ್ದರು. ಹೊಸಬಗೆಯ ಪಠ್ಯಗಳು. ಸಾಮಾನ್ಯವಾಗಿ ದೊಡ್ಡಕ್ಷರದಲ್ಲಿ ಮುದ್ರಣ ಮಾಡಿದರೆ ಅದನ್ನು ಹೊಸದಾಗಿ ಅಕ್ಷರಾಭ್ಯಾಸ ಮಾಡಿದ ಜನರಿಗೆ ಕಲಿಸಬಹುದೆಂದು ಅಂದಿನ ರೂಢಿಗತ ಅಭಿಪ್ರಾಯವಾಗಿತ್ತಷ್ಟೇ. ಇದನ್ನು ಅನುಸರಿಸದೆ ವಿಷಯದ ಆಯ್ಕೆ, ಭಾಷೆಯ ಬಳಕೆ, ಚಿತ್ರಗಳ ಸೇರಿಕೆ, ಪ್ರತ್ಯಕ್ಷ ಗ್ರಾಮಾಂತರ ಸನ್ನಿವೇಶದಲ್ಲೇ ಪ್ರಯೋಗಪಶ್ಚಾತ್ ಪಠ್ಯರಚನೆ - ಇವು ಶಿಬಿರದ ಧ್ಯೇಯೋದ್ದೇಶ. ಇದಕ್ಕೆ ಅವರು 'ಮೂಲಭೂತಶಿಕ್ಷಣ'ವೆಂಬ ಹೆಸರು ಕೊಟ್ಟಿದ್ದರು. ಶಿಬಿರದಲ್ಲಿ ದೇಶ ವಿದೇಶದ ಶಿಕ್ಷಣತಜ್ಞರು ಆಗಲೇ ಗುಂಪುಕೂಡಿದ್ದರು. ಏಪ್ರಿಲ್ ೨೯ರಂದು ಹೆಬ್ಬಾರರು ಅವರನ್ನು ಸೇರಿಸಿಕೊಂಡರು.

ಜರ್ಮನಿ, ಹಾಲೆಂಡ್, ನಾರ್ವೆ, ಡೆನ್ಮಾರ್ಕ್, ಫ್ರಾನ್ಸ್‌ನಿಂದಲೂ ಭಾರತದ ಬೇರೆ ಬೇರೆ ರಾಜ್ಯಗಳಿಂದಲೂ ಶಿಕ್ಷಣತಜ್ಞರು ಸಮಾವೇಶಗೊಂಡಿದ್ದರು. ಎಲ್ಲರೂ ಹುರುಪಿನಿಂದ ದಿನವಿಡೀ ಉಪನ್ಯಾಸ, ಪ್ರತ್ಯಕ್ಷಿಗಳಲ್ಲಿ ಮಗ್ನರಾಗಿರುತ್ತಿದ್ದರು. ಶಿವರಾಮ ಕಾರಂತರು ತೀರ ಗಂಭಿರವಾದ ಈ ಶಿಕ್ಷಣದಲ್ಲಿ ಹಾಸ್ಯದಚಟಾಕಿಗಳನ್ನು ಹಾರಿಸುತ್ತಾ ಎಲ್ಲರನ್ನೂ ನಗಿಸುವ ಕೆಲಸವನ್ನು ತಮಗೆ ನಿರ್ದಿಷ್ಟಗೊಳಿಸಲಾದ ಕರ್ತವ್ಯದೊಡನೆ ಮಾಡಿಕೊಡುತ್ತಿದ್ದರು. ಜಾನ್ ಬವರ್ಸ್ ಮತ್ತು ಅವರ ಪತ್ನಿ ಶಿಬಿರಾರ್ಥಿಗಳೊಡನೆ ಭೇದಭಾವವಿಲ್ಲದೆ ಸದಾಕಾಲ ಹಸನ್ಮುಖದಿಂದ ಕಲೆತು ಬೆರೆತು ಶಿಬಿರದ ಯಶಸ್ವಿಗೆ ಕಾರಣರಾದರು. ಲಕ್ನೋದ ಲಿಟರಸಿ ಹೌಸ್ ಎಂಬ ಸಂಸ್ಥೆ ಇಳಿವಾಲ ಶಿಬಿರದಲ್ಲಿ ತಯಾರಿಸಲಾದ ಪಠ್ಯಪುಸ್ತಕಗಳನ್ನು ಪ್ರಕಟಿಸಿತು. ಅದರಲ್ಲಿ ಎರಡು ಪುಟಕ್ಕೊಂದು ಹೆಬ್ಬಾರರ ರೇಖಾಚಿತ್ರವಿದೆ. ಶಿಬಿರದಲ್ಲಿ ನಡೆದ ಅಪೇಕ್ಷಣೀಯ ಪ್ರಯೋಗವು ಆಮೇಲೆ ಪ್ರತ್ಯಕ್ಷ ರೂಪದಲ್ಲಿ ಕಾರ್ಯಗತವಾದದ್ದನ್ನು ಯಾರೂ ಅರಿಯರು.[೨] ಕೆಲವು ಶಿಬಿರಾರ್ಥಿಗಳೊಡನೆ ಬಂಡೀಪುರದ ಅಭಯಾರಣ್ಯಕ್ಕೆ ಹೆಬ್ಬಾರರು ಭೇಟಿ ನೀಡಿದ್ದು ಇದೇ ಸಂದರ್ಭದಲ್ಲಿ.

೧೯೫೪ರ ತಮ್ಮ ಜನ್ಮದಿನದಲ್ಲಿ ದೇಶದ ಒಂಭತ್ತು ಮಂದಿ ಪ್ರಸಿದ್ಧ ಕಲಾವಿದರಲ್ಲಿ ಒಬ್ಬರಾಗಿ ದಿಲ್ಲಿಯಲ್ಲಿ ಸ್ಥಾಪಿತವಾದ ಲಲಿತಕಲಾ ಅಕಾಡೆಮಿಯ ಮಹಾ ಸಭೆಗೆ ಹೆಬ್ಬಾರರು ಸದಸ್ಯರಾಗಿ ನಾಮಕರಣ ಹೊಂದಿದರು. ದಿಲ್ಲಿಯ ಸಂಸತ್‌ಭವನದ ಗೋಡೆಯಲ್ಲಿ ಭಾರತದ ಐತಿಹಾಸಿಕ ಘಟನೆಗಳನ್ನು ಭಿತ್ತಿಚಿತ್ರಗಳ ರೂಪದಲ್ಲಿ ನಿಲ್ಲಿಸುವ ಯೋಜನೆಯಂತೆ ಹೆಬ್ಬಾರರಿಗೆ ರಾಜೇಂದ್ರ ಚೋಳನ ಶ್ರೀಲಂಕ ದಂಡಯಾತ್ರೆಯನ್ನು ಇಲ್ಲಿ ನಿರ್ಮಿಸುವ ಕೆಲಸವೂ ಸಿಕ್ಕಿತು. ಆಗಸ್ಟ್ ಐದರಂದು ಲಲಿತಕಲಾ ಅಕಾಡೆಮಿಯ ಔಪಚಾರಿಕ ಉದ್ಘಾಟನೆ ಶಿಕ್ಷಣಸಚಿವ ಮೌಲನಾ ಅಬ್ದುಲ್ ಕಲಮ್ ಅಜಾದ್ ಅವರಿಂದ ನೆರವೇರಿತು. ತತ್‌ಪಶ್ಚಾತ್ ನಡೆದ ಸಭೆಯಲ್ಲಿ ಹೆಬ್ಬಾರರನ್ನು ಕಾರ್ಯನಿರ್ವಾಹಕ ಸಮಿತಿ ಸದ್ಯರನ್ನಾಗಿಯೂ ಕಾರ್ಯಕ್ರಮಗಳ ತ್ರಿಸದಸ್ಯ

೦೨. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ - ೧೧೫




ಸಮಿತಿಯ ಒಬ್ಬ ಸದಸ್ಯರನ್ನಾಗಿಯೂ ಚುನಾಯಿತರಾದರು. ಆ ವರ್ಷ ಸ್ಟಾನ್ ವಾಕ್ ತೈಲಕಂಪನಿ ತಮ್ಮ ಟ್ರಾಂಬೇ ಕಟ್ಟಡದಲ್ಲಿ ಹೆಬ್ಬಾರರಿಂದ ಒಂದು ಭಿತ್ತಿಚಿತ್ರ ರಚಿಸಲು ಕೇಳಿಕೊಂಡಿತು. ಒಂದು ತಿಂಗಳಲ್ಲಿ ಈ ಚಿತ್ರವನ್ನು ಹೆಬ್ಬಾರರು ಮುಗಿಸಿಕೊಟ್ಟರು.

೧೯೫೫: "ಕಲೆಗೆ ಸಂಬಂಧಪಟ್ಟ ಯಾವುದೇ ಚಟುವಟಿಕೆಗಳಲ್ಲಿ ಹೆಬ್ಬಾರರು ಉತ್ಸಾಹದಿಂದ ಭಾಗವಹಿಸುತ್ತಿದ್ದರಷ್ಟೆ. ಸ್ಟುಡಿಯೋದಲ್ಲಿ ಏಕಾಂತವನ್ನು ಬಯಸುವ ಕಲಾವಿದನಿಗೆ ಲೋಕಾಂತವೂ ಪ್ರಿಯವಾದದ್ದೇ. ಸಾಂಘಿಕ ಪ್ರಯತ್ನಗಳಿಗೆ ಹೆಬ್ಬಾರರು ಸಮರ್ಪಿಸಿಕೊಳ್ಳಲು ಯಾವತ್ತೂ ಹಿಂಜರಿಯಲಿಲ್ಲ. ಕಲಾಪ್ರಪಂಚಕ್ಕೆ ಸಂಬಂಧಿಸಿದ ಯಾವ ಕೈಂಕರ್ಯವೂ ಸಣ್ಣದಲ್ಲವೆಂದು ಅವರ ಭಾವನೆ, ಸತ್ವಲೇಕರ ಇಂಡಿಯನ್ ಆರ್ಟ್ ಇನ್‌ಸ್ಟಿಟೂಟಿನಲ್ಲಿ ಒಂದು ಭಾಷಣ, ನೂತನ ಕಲಾಮಂದಿರದಲ್ಲಿ ಇನ್ನೊಂದು. ಮಹಾತ್ಮಾಗಾಂಧಿಯವರ ಸ್ಮಾರಕ ನಿರ್ಮಾಣಕ್ಕಾಗಿ ಭಾರತ ಸರಕಾರ ನೇಮಿಸಿ ಸಲಹಾಸಮಿತಿಯಲ್ಲಿ ಭಾಗವಹಿಸಿ ಮರಳುವಷ್ಟರಲ್ಲಿ ಲಲಿತಕಲಾ ಅಕಾಡೆಮಿ ಏರ್ಪಡಿಸುವ ರಾಷ್ಟ್ರೀಯ ಪ್ರದರ್ಶನದಲ್ಲಿ ಮುಂಬಯಿ ಕಲಾವಿದರುಗಳ ಯಾವ ಚಿತ್ರವೂ ಆಯ್ಕೆಯಾಗಲಿಲ್ಲವೆಂದು ಕೇಳಿ ಹೆಬ್ಬಾರರಿಗೆ ವ್ಯಸನವಾಯಿತು. ಹೀಗೇಕೆ ಆಗುತ್ತಿದೆ? ಕಲಾವಿದರಿಗೂ ನಿರ್ಣಾಯಕರಿಗೂ ನಡುವೆ ಯಾವ ಕಂದರ ಬಿರಿಯುತ್ತಿದೆ? ಬಾಂಬೇ ಕಲಾವಿದರ ಮಂಡಳಿ ಮಾರ್ಚ್‌ನಲ್ಲಿ ನಡೆಸಿದ ಪ್ರದರ್ಶನ ಇದಕ್ಕಿಂತ ಹೆಚ್ಚಿನ ಯಶಸ್ಸನ್ನು ಪಡೆದರೂ, ನಾಲ್ಕು ರೂಪಾಯಿ ಪ್ರವೇಶ ಸುಮಾರು ಒಂದು ಸಾವಿರದ ಐನೂರು ಪ್ರೇಕ್ಷಕರು ಬಂದಿದ್ದರೂ, ವೈಯಕ್ತಿಕವಾಗಿ ಹೆಬ್ಬಾರರಿಗೆ ಸೋಲಿನ ನೋವೆದಕ್ಕಿತು. ಭಾರತೀಯ ಕಲಾಸಂಘದ ವಾರ್ಷಿಕೋತ್ಸವ ಸಂದರ್ಭದಲ್ಲಿ ಜರಗಿಸಿದ ಪ್ರದರ್ಶನಕ್ಕೆ ಹೆಬ್ಬಾರರು ನೋಂದಾಯಿಸಿದ ಚಿತ್ರ ಪಾರಿತೋಷಿಕ ಗೆದ್ದುಕೊಂಡರೂ ಹೆಬ್ಬಾರರಿಗೆ ಸಂತೋಷವಾಗಲಿಲ್ಲ."[೩]

ಏಕೆಂದರೆ ಯುರೋಪಿನಿಂದ ಮರಳಿದ ಮೇಲೆ ಇನ್ನು ಮುಂದೆ ಬಹುಮಾನವುಳ್ಳ ಸ್ಪರ್ಧೆಗಳಿಗೆ ಚಿತ್ರ ಕಳಿಸಬಾರದೆಂದು ಅವರು ಮಾಡಿದ ನಿರ್ಧಾರವನ್ನು ಆರ್ಥಿಕ ಅನುಪತ್ಯದ ದೆಸೆಯಿಂದ ತಾನೇ ಮುರಿಯ ಬೇಕಾಯಿತಲ್ಲಾ ಎಂಬ ವ್ಯಥೆ. ಸ್ಪರ್ಧೇತರ ಸಂದರ್ಭದಲ್ಲಿ ತಮ್ಮ ಕಲೆಗೆ ರಸಿಕರ ಪ್ರೋತ್ಸಾಹ ಸಿಗುತ್ತಾ ಇಲ್ಲ. ಬಹುಶಃ ತಾನು ಗತಕಾಲದ ವೈಭವದಲ್ಲೇ ಮುಳುಗಿರುವೆನೇನೋ? ಹೊಸತಾದ ದಾರಿಯಲ್ಲಿ ಚಿತ್ರೀಕರಣ ಮಾಡುವ ಉದ್ದೇಶ ಇನ್ನೂ ಸಫಲವಾದಂತೆ ಅನಿಸುವುದಿಲ್ಲವೆಂಬ ನಿರಾಶೇ ಮನಸ್ಸಿನ ತುಂಬ ಕವಿದಿತ್ತು. ಇಂಥ ಸನ್ನಿವೇಶದಲ್ಲಿ ಹೆಬ್ಬಾರರು ಸಾಹಿತ್ಯತಜ್ಞರ ಮಾತುಗಳನ್ನು ಮೆಲುಕುಹಾಕುತ್ತಿದ್ದುದುಂಟು. ಯೇಟ್ಸ್ ಮತ್ತು ಸೀನೋಕೆಸಿ ಸಂವಾದವನ್ನು ಜ್ಞಾಪಿಸಿಕೊಂಡದ್ದು ಅವರ ದಿನಚರಿಯಲ್ಲಿ ದಾಖಲಾಗಿದೆ.

---

೦೩. ಕು. ಶಿ. ಹರಿದಾಸ ಭಟ್ಟ : ಕಟ್ಟಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೧೬




ಹೋರಾಟಕ್ಕೆ ಸಿದ್ಧರಾದ ಹೆಬ್ಬಾರರು ಎಷ್ಟೋ ವರ್ಷಗಳ ಕಾಲ ಆರ್ಥಿಕಸಂಕಟದಲ್ಲೇ ಕಾಲಕಳೆಯಬೇಕಾಗಿತ್ತು ಆದರೆ ಅವರ ಸ್ನೇಹಿತರ ಬಳಗ ಮತ್ತು ನಿರಂತರ ಚಟುವಟಿಕೆಗಳು ಅವರ ಮನಸ್ಸನ್ನು ಸ್ತಿಮಿತದಲ್ಲಿರಿಸುತ್ತಿದ್ದರು. ಜೀವನಕ್ಕೆ ತಂಪೆರೆದ ಹಲವಾರು ಮಿತ್ರರಲ್ಲಿ ಡಾ. ಲೆವಿಸ್ ಮತ್ತು ಶ್ರೀಮತಿ ರೀಬಾ ಲೆವಿಸ್ ದಂಪತಿ ಪ್ರಮುಖರು. ತಮ್ಮ ಕಲಾಪ್ರಪಂಚದ ವ್ಯಜ್ಞಡತ್ವದಿಂದ ಹೆಬ್ಬಾರರು ರೀಬಾನ ಮೇಲೆ ಸಮ್ಮೋಹಿನಿಯನ್ನು ಬೀಸಿದ್ದರೆಂದರೂ ಸರಿಯೆ. ರೀಬಾ ದಂಪತಿ ಆ ವರ್ಷದ ಅಂತ್ಯದಲ್ಲಿ ಯುರೋಪಿಗೆ ಮರಳುವವರಿದ್ದರು. ಅವರನ್ನು ಅಗಲಬೇಕಾದ ದುಃಖವೂ ನಿರಾಶೆಯ ಮೇಲೆ ನಿರಾಶೆ ಉಂಟು ಮಾಡುವ ಪ್ರಸಂಗವಾಗಿತ್ತು. ವರ್ಷದ ಕೊನೆಯ ವಾರ ದಿಲ್ಲಿಯ ಚಿತ್ರಶಾಲೆಗಳಲ್ಲಿ ಹೆಬ್ಬಾರರ ಚಿತ್ರಗಳ ಯಶಸ್ಸು ಪರಿಸ್ಥಿತಿಯನ್ನು ಕೊಂಚ ಸುಧಾರಿಸಿತು. ಲಲಿಕಾಲಾ ಅಕಾಡೆಮಿಯಲ್ಲಿ ಪ್ರದರ್ಶನದ ತೈಲಚಿತ್ರ ವಿಭಾಗದಲ್ಲೊಂದು, ವ್ಯಕ್ತಿಚಿತ್ರ ವಿಭಾಗದಲ್ಲೊಂದು ಬಹುಮಾನ, ಐಫಾಕ್ಸ್ ಪ್ರದರ್ಶನದಲ್ಲೊಂದು ಬಹುಮಾನ, ಹೀಗೆ ಮೂರು ಬಹುಮಾನಗಳು ಸಿಕ್ಕವು.

ಜೀವನದಲ್ಲಿ ಮೊದಲ ಬಾರಿಗೆ ಹೆಬ್ಬಾರರಿಗೆ ಮನೆಯ ತಾರಸಿಯಲ್ಲಿ ತಮ್ಮದೇ ಒಂದು ಸ್ಟುಡಿಯೋ ಕಟ್ಟಿಕೊಳ್ಳುವ ಭಾಗ್ಯ ಪ್ರಾಪ್ತವಾದದ್ದು ೧೯೫೫ರಲ್ಲಿ. ಸನ್‌ಶೈನ್ ಕಟ್ಟಡದ ತಾರಸಿ ತೆರೆದ ಸ್ಥಳವಾಗಿತ್ತು. ವೇಲ್ಕರನ ಮಿತ್ರ ಇಂಜಿನಿಯರ್ ದಫ್ತರಿ ಸುಲಭದಲ್ಲಿ ಅದಕ್ಕೊಂದು ಮಾಡು ಗೋಡೆ ಹೊಂದಿಸಿಕೊಟ್ಟು ಸ್ಟುಡಿಯೋ ನಿರ್ಮಿಸಿಬಿಟ್ಟರು. ಯುಗಾದಿಯ ದಿನ ಅದರ ಪ್ರವೇಶೋತ್ಸವ. ಮುಂಜಾನೆ ಸನ್‌ಶೈನ್ ಸಹನಿವಾಸಿಗಳಿಗೆ ಸಾಯಂಕಾಲ ಕಲಾವಿದ ಮಿತ್ರರಿಗೆ ಸತ್ಕಾರ. ಇನ್ನು ಮನದಿಚ್ಚೆಯಂತೆ ಚಿತ್ರ ಬರೆಯಲು ಒಂದು ಸ್ವತಂತ್ರ ಸ್ಥಳವಕಾಶ ದೊರೆತ ಸಂತೋಷ.

೧೯೫೬: "ನೂತನ ವರ್ಷ ಹೆಚ್ಚು ಹರ್ಷದಾಯಕವಾಗಿ ತೊಡಗಿತು. ಮುಂಬಯಿಯ ರಾಜ್ಯ ಕಲಾಪ್ರದಶನದಲ್ಲಿ ಹೆಬ್ಬಾರರ ಒಂದು ಚಿತ್ರಕ್ಕೆ ಪ್ರಥಮ ಬಹುಮಾನ ದೊರೆಯಿತು. ಹಿಂದಿನ ವರ್ಷ ಪ್ರಕಟವಾದ ದೆಹಲಿಯ ಲಲಿತಕಲಾ ಬಹುಮಾನವನ್ನು ಹೆಬ್ಬಾರರು ತನ್ನ ಬಂಧು ಕೆ. ವಿ. ಆಚಾರ್ಯರಿಗೆ ಅವರ ದೆಹಲಿಯ ವ್ಯವಹಾರ ನಡೆಸುವುದಕ್ಕೆ ಉಪಯುಕ್ತವಾಗಬಹುದೆಂದು ನೀಡಿ ಕೈತೊಳೆದುಕೊಂಡರು. ಚಾವಡಾ ಜತೆಗೆ ಲಲಿತಕಲಾ ಅಕಾಡೆಮಿ ಮಹಾಸಭೆಗೆ ಹೊದವರು ಭಾಕ್ರಾನಂಗಲ್ ಅಣೆಕಟ್ಟನ್ನು ನೋಡಿ ಬಂದರು. ಅಕಾಡೆಮಿ ವತಿಯಿಂದ ಯುನೆಸ್ಕೋ ಸಹಕಾರಕ್ಕಾಗಿ ಭಾರತ ಸರಕಾರ ನೇಮಿಸಿದ ಸಹಕಾರ ಸಮಿತಿಯ ಸಭೆಯಲ್ಲಿ ಪಾಲ್ಗೊಂಡು ಮುಂಬಯಿಗೆ ಮರಳಿದವರೇ ರಶಿಯನ್ ಲೇಖಕ ಇಲ್ಯಾ ಎಹರನ್‌ಬರ್ಗ್‌ಗೆ ಮಾರ್ಗದರ್ಶಕರಾಗಿ ಅಜಂತಾ ಎಲ್ಲೋರ ಸಂದರ್ಶನ ಮಾಡಿದರು."[೪] ಮಾರ್ಚ್ ತಿಂಗಳಲ್ಲಿ ದಿಲ್ಲಿಯಲ್ಲಿ ಅಶ್‌ಫಾಕ್ ಹುಸೇನ್ ಅವರ ನೇತೃತ್ವದಲ್ಲಿ ಕಲಾಶಿಕ್ಷಣದ ಸುಧಾರಣೆಯ

೦೪. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೧೭




ಬಗ್ಗೆ ಒಂದು ಗೋಷ್ಠಿ ನಡೆಯಿತು. ಅದರಲ್ಲಿ ಶಿಫಾರಸುಗಳ ನಿರೂಪಣೆಯಲ್ಲಿ ಹೆಬ್ಬಾರರ ಕೈವಾಡವಿದೆ. ಈ ಬಗ್ಗೆ ಅವರ ಒಂದು ಉಪನ್ಯಾಸವೂ ಸಮಿತಿಯ ವರದಿಯೊಳಗಿದೆ. ಅದೇ ಕಾಲಕ್ಕೆ ದೆಹಲಿಗೆ ಬಂದ ಪೋಲೆಂಡಿನ ಸಂಸ್ಕೃತಿ ನಿಯೋಗವನ್ನು ಸ್ವಾಗತಿಸಿ ಕರೆತರುವ ಕೆಲಸವನ್ನು ಲಲಿತಕಲಾ ಅಕಾಡೆಮಿ ಹೆಬ್ಬಾರರಿಗೊಪ್ಪಿಸಿತು. ಮುಕ್ತವಾಗಿ, ವೈಯಕ್ತಿಕವಾಗಿ, ಕಲಾವಿದನ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಿರುವಂತೆ ಭಾಸವಾಯಿತು.

೧೯೫೬ರ ಸೆಪ್ಟೆಂಬರ್‌ದಲ್ಲಿ ಮುಂಬಯಿ ಆರ್ಟ್ ಸೊಸೈಟಿಯಲ್ಲಿ ಭಾಷಣಮಾಡಲು ಬಂದ ಡಾ. ರೊಡೊಲ್ಫ್ ರೇ ಅವರ ತದ್ರೂಪಿ ಕಲೆಯನ್ನು ಬಿಟ್ಟು ಅಮೂರ್ತಕಲೆಯತ್ತ ಸಾಗಿದ ದಾರಿಯನ್ನು ಸಕಾರಣವಾಗಿ ವಿವರಿಸಿದರು. ಇಂದ್ರಿಯಗಳ ಮೂಲಕ ತಿಳಿದ ವಿಷಯಗಳು ಮಾತ್ರವೇ ಸತ್ಯವಲ್ಲ. ಇಂದ್ರಿಯಗೋಚರವಾಗುವ ವಾಸ್ತವತೆ ಸಾಕ್ಷಾತ್ಕಾರವಾಗಲು ಎಲ್ಲಿಂದಲೋ ಕೃಪೆ ಒದಗಬೇಕು. ಆಗ ಕಲಾವಿದನಿಗೆ ಉಂಟಾಗುವ ನೋಟ, ಒಳನೋಟಗಳು, ಚಿತ್ರರೂಪದಲ್ಲಿ ಪ್ರಕಟವಾಗುತ್ತದೆ ಎಂದು ಅವರು ಸಾರಿದರಂತೆ. ತಥಾಕಥಿಕ ಪರಿವರ್ತನೆಗಳನ್ನು ಹೆಬ್ಬಾರರು ತಮ್ಮ ಅನುಭವದೊಡನೆ ತುಲನೆ ಮಾಡಿ ನೋಡಿದರು.

ಚಿಂತನಾಲೋಕದಲ್ಲಿ ವಿಹರಿಸುವಾಗ ಉಂಟಾಗುತ್ತಿದ್ದ ಉಲ್ಲಾಸ, ಕಲಾವಿದರ ಸತ್ಸಂಗದಲ್ಲಿ ಮೂಡುವ ಸಂತೋಷ, ಬಂಧುಬಳಗದ ಅಕ್ಕರೆಸ ಅವಿರತವಾದ ಚಟುವಟಿಕೆ, ಆಗಿಂದಾಗ ಸಿಗುವ ಬಹುಮಾನಗಳು ತರುವ ಸ್ಫೂರ್ತಿ - ಇವು ಯಾವವೂ ಹೆಬ್ಬಾರರ ಮನಸ್ಸಿನಲ್ಲಿ ಸ್ಥಾಯಿರೂಪದಲ್ಲೆಂಬಂತೆ ನೆಲೆಸಿದ್ದ ನೈರಾಶ್ಯ ಮತ್ತು ವೇದನೆಯನ್ನು ತೊಲಗಿಸಲು ಸಮರ್ಥವಾಗಲಿಲ್ಲ. ೧೩. ೦೭. ೧೯೫೭ರಲ್ಲಿ ದಿನಚರಿಯಲ್ಲಿ 'ಕೆಲಕಾಲದಿಂದ ನನಗೆ ಸೋಲೇ ಅಭ್ಯಾಸವಾಗಿಬಿಟ್ಟಿದೆ. 'ಕಾರ್ಮಿಕ' ಚಿತ್ರವನ್ನು ಮೀಸಲಿಟ್ಟುಕೊಂಡಿದ್ದ ಸಜಾರೆ ಅದನ್ನು ವಾಪಾಸು ಮಾಡಿದ್ದಾನೆ. ಬರ್ಮಾಶೆಲ್ ಹೊಸ ವರ್ಷದ ಕೆಲೆಂಡರ್‌ಗಳಾಗಿ ಕೇಳಿದ ಚಿತ್ರ ಇನ್ನೂ ನನ್ನ ಬಳಿಯೇ ಇದೆ. ವಿಜ್ಞಾನಭವನ ಅಪೇಕ್ಷಿಸಿದ ಭಿತ್ತಿಚಿತ್ರಗಳ ವಾರ್ತೆ ಇಲ್ಲಿ. ಸಾಲದ್ದಕ್ಕೆ ಕಾಶ್ಮೀರದಿಂದ ಬಂದ ಮೇಲೆ ಇದುವರೆಗೆ ಯಾವ ಹೊಸಚಿತ್ರವನ್ನೂ ನಾನು ಮಾಡಿಲ್ಲ. ಕಳೆದ ವಾರ ಇಡೀ 'ಕಾಲುವೆ'ಯನ್ನು ಮುಗಿಸಿದೆ. ನಿರಾಶೆ. ಈಗ ರಾತ್ರಿ ೯ ಆದರೂ ಅದನ್ನೇ ತಿದ್ದುತ್ತಿದ್ದೇನೆ. ಬಿಟ್ಟು ಕೊಡುವುದಿಲ್ಲ ನೋಡೋಣ. ಕೆಲಸವೊಂದೇ ನನ್ನ ಕ್ಲೇಶಗಳಿಗೆ ಔಷದ ಆದರೂ ಇವತ್ತೇಕೋ ನಿರಾಶೆಯ ಪರಮಾವಧಿಯಂತೆ ಕಾಣುತ್ತಿದೆ' ಎಂದು ನಿರುತ್ಸಾಹದ ಮಾತುಗಳನ್ನು ಬರೆದಿಟ್ಟಿದ್ದಾರೆ. ಸೀಬಾ ಕಂಪೆನಿಯು ಕಾರ್ಖಾನೆಯ ಭಿತ್ತಿಚಿತ್ರ ಬರೆಯಲು ಆದೇಶ ಸಿಕ್ಕಿದ್ದೊಂದು, ೧೯೫೮ರ ಏಕವ್ಯಕ್ತಿ ಪ್ರದರ್ಶನ ತಕ್ಕಮಟ್ಟಿಗೆ ಜಯಪ್ರದವಾದದ್ದಿನ್ನೊಂದು ದುಃಖವನ್ನು ತುಸುವಾದರೂ ಉಪಶಮನಮಾಡಿದವು.[೫]

೦೫. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೧೮




೧೯೫೮: ಹೆಬ್ಬಾರರ ಸೀಬಾ ಭಿತ್ತಿಚಿತ್ರ ಮಾರ್ಚ್ ತಿಂಗಳಲ್ಲಿ ಅನಾವರಣಗೊಳ್ಳುವಾಗ ಉದ್ಘಾಟನೆಗೆ ಬಂದಿದ್ದ ಡಾ. ಮೋತಿಚಂದ್ರರು ಔದ್ಯಮಿಕಸಂಸ್ಥೆಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರಿಂದ ಒಂದು ದೇಶದಲ್ಲಿ ಕಲಾಭಿವೃದ್ಧಿ ಸುಗಮವಾಗುವ ಬಗ್ಗೆ ಮಾಡನಾಡಿದರು. ಮುಂಬಯಿಯ ಖ್ಯಾತನಾಮ ಕಲಾವಿದರಾದ ಚಾನಡಾ, ಸತ್ವಲೇಕರ್. ಪಾಲ್ಸೀಕರ್, ಕರ್ಮಾಕರ್ಸ ಅಂಬೇರ್ಕರ್ಸ ಗೊಂದಲೇಕರ ಮುಂತಾದವರು ಸಭೆಯಲ್ಲಿ ಹಾಜರಿದ್ದು ಸದಾಶಯ ವ್ಯಕ್ತಪಡಿಸಿದ್ದರಿಂದ ಸಭೆಗೆ ವಿಶೇಷ ಶೋಭೆ ಬಂದಿತು. ಎಲ್ಲದಕ್ಕೆ ಹೆಚ್ಚಾಗಿ ಡಾ. ಮೇಯರ್ ಅವರ ಸಮೀಪಸ್ನೇಹ ಈ ಚಿತ್ರದ ಮೂಲಕ ಲಭಿಸಿ ತದನಂತ ಹೆಬ್ಬಾರರ ಐರೋಪ್ಯಯಾತ್ರಿಗಳ ಪ್ರಸಂಗದಲ್ಲಿ ಮೇಯರರಿಂದ ತುಂಬಾ ಉಪಕಾರವಾಯಿತು.

ನೂತನ ಕಲಾಮಂದಿರದ ಬೆಳ್ಳಿಹಬ್ಬ ಸಮಿತಿಯ ಅಧ್ಯಕ್ಷತೆ ವಹಿಸಿದ ಹೆಬ್ಬಾರರು ಅಲ್ಲಿನ ಸಮಾರಂಭದಲ್ಲಿ ಸಂಸ್ಥೆಗೆ ಉಪಕಾರಸ್ಮರಣೆ ಮಾಡಿದರು. ಜರ್ಮನ್ ವಿದ್ವಾಂಸ ಹರ್ಮನ್ ಗೋಯಟ್ಟ ಹೆಬ್ಬಾರರ ಸ್ಟುಡಿಯೋ ಸಂದರ್ಶನ ಮಾಡಿ ಕೆಲವು ಕಿವಿಮಾತುಗಳನ್ನು ಹೇಳಿದರು: 'ನಿಮ್ಮ ಚಿತ್ರಗಳಲ್ಲಿ ನೀವು ವರ್ಣಕ್ಕೆ ಪ್ರಾಧಾನ್ಯ ಕೊಡುವುದು ಕಡಿಮೆಯಾಗುತ್ತದೆ. ಹಾಗೆ ಕೊಡದಿರುವುದು ಒಂದು ದೌರ್ಬಲ್ಯವಾಗಿ ಬಿಡುತ್ತದೆ. ವರ್ಣಗಳು ಭಾಷೆಯ ಕೆಲಸ, ಸಂವಹನೆಯ ಕೆಲಸ ಮಾಡುವುದಲ್ಲವೆ? ಅದರಲ್ಲೂ ಆಕೃತಿಶೂನ್ಯವಾದ ಅಮೂರ್ತಕಲೆಯಲ್ಲಿ ಬಣ್ಣಕ್ಕೆ ಸ್ಥಾನವಿರಲೇಬೇಕು. ಇಂದಿನ ಸಹೃದಯರು ಆಕೃತಿಗಳಿಗಾಗಿ ಚಿತ್ರಗಳನ್ನು ನೋಡುವುದಿಲ್ಲ. ಚಿತ್ರದಲ್ಲಿ ಎದ್ದು ತೋರುವ ಆಕೃತಿಗಿಂತ, ಅದರಲ್ಲಡಗಿರುವ ಭಾವನೆಗಳೇನು, ಪ್ರತಿಭೆ ಏನು, ಕಲ್ಪನೆಯೇನು ಎಂಬುದನ್ನು ಮನನಮಾಡುವ ಸಲುವಾಗಿ ಬರುತ್ತಾರೆ. ಬರಿಯ ನೋಟಕ್ಕಾಗಿ ಅಲ್ಲ, ಆಲೋಚನೆಗಾಗಿ ಬರುತ್ತಾರೆ'[೬] - ಇದು ಅವರ ಅಭಿಮತ. ಸಾಂಸಾರಿಕರಂಗದಲ್ಲಿ ನಾನಾಬಗೆಯ ಅಡಚಣೆಗಳು ತಕರಾರುಗಳ ದೆಸೆಯಿಂದ ಮನಸ್ಸು ಸದಾ ಚಂಚಲ. ಅದಾಗ್ಯೂ ಅಣ್ಣನ ಮಗಳು ಇಂದಿರೆಗೆ ಜೆ. ಜೆ. ಸ್ಕೂಲಿನ ವಿದ್ಯಾರ್ಥಿ ಮೈಸೂರಿನ ಬದ್ರಿನಾರಾಯಣ ಅವರ ಜತೆಗೆ ವಿವಾಹ ನಿಶ್ಚಯಮಾಡುವಲ್ಲಿ ಹೆಬ್ಬಾರರು ಉತ್ಸಾಹ ವಹಿಸಿದರು.

೧೯೫೯: ಮೌಲಾನಾ ಅಬುಲ್ ಕಲಮ್ ಆಜಾದರ ವ್ಯಕ್ತಿಚಿತ್ರವನ್ನು ದಿಲ್ಲಿಯ ಅಜಾದ್ ಭವನದಲ್ಲಿರಿಸುವ ಸಲುವಾಗಿ ಐಸಿಸಿಆರ್ ಆದೇಶದಂತೆ ಹೆಬ್ಬಾರರು ಮುಗಿಸಿಕೊಟ್ಟರು. ಅಕ್ಟೋಬರ್ ಒಂದರಿಂದ ದಿಶಂಬರ ೮ರ ವರೆಗೆ ಎರಡು ತಿಂಗಳಿಗೂ ಮಿಗಿಲು ಇಂಡೋನೇಶಿಯಾದ ಯಾತ್ರೆಯಲ್ಲಿ ಎಲ್ಲಾ ದುಃಖವನ್ನು ಮರೆತರು. ಯಾತ್ರೆಯಲ್ಲಿ ಅವರು ಬರೆದ ಕೋಳಿಕಾಳಗದ ಕೃತಿಯನ್ನು ಸಿ. ಆರ್. ಮ್ಯಾಂಡಿ ಭಾರತೀಯ ಚಿತ್ರಪ್ರಪಂಚದಲ್ಲಿ ಅಮೃತಾ ಶೇರ್‌ಗಿಲ್ ಕೃತಿಗಳ ಅನಂತರದಲ್ಲಿ ಬಂದ ಕೃತಿಗಳಲ್ಲೇ ಸರ್ವಶ್ರೇಷ್ಠವಾದದ್ದೆಂದು ಹೊಗಳಿದರೂ ಮುಂಬಯಿ ಆರ್ಟ್ ಸೊಸೈಟಿ ಪ್ರದರ್ಶನದ ನಿರ್ಣಾಯಕರು

೦೬. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೧೮




ಅದನ್ನು ಏಕೋ ಮೆಚ್ಚಿಕೊಳ್ಳಲಿಲ್ಲ. ತರುವಾಯ ಚಂಡೀಗಢದ ಮ್ಯೂಸಿಯಂನವರು ಅದನ್ನು ಪಡೆದುಕೊಂಡರು. ಬಾಲಿಯಲ್ಲಿ ಹೆಬ್ಬಾರರು ಮಾಡಿದ ಸ್ಕೆಚ್ಚುಗಳು, ರೇಖಾಚಿತ್ರಗಳು ತುಂಬಾ ಮೋಹಕವಾಗಿವೆ. ಡಾ. ರೋಜರ್ ಮತ್ತು ರೀವಾ ಲಿವಿಸ್ ಅವರ ಸ್ನೇಹವನ್ನು ಮತ್ತೆ ಜೀವಿಸಲು ಇಂಡೋನೇಶಿಯ ಯಾತ್ರೆ ಅವಕಾಶ ಒದಗಿತೆಂದು ಹೆಬ್ಬಾರರಿಗೆ ಆನಂದವಾಯಿತು.

ಇದೇ ವರ್ಷ ಮಮತೆಯ ಮಾತೆ ಸೀತಮ್ಮನವರು ತೀರಿ ಹೋದದ್ದು ತೀರ ದುಃಖದ ವಿಷಯವಾದರೂ ವರ್ಷದ ಅಂತ್ಯದಲ್ಲಿ ಚಿತ್ರರಂಗದಲ್ಲಿ ತಕ್ಕಮಟ್ಟಿನ ಯಶಸ್ಸು ಪ್ರಾಪ್ತವಾದುದ್ದರ ಸಂತೋಷದ ವಾತಾವರಣ ಮೂಡಿತು.

ಸರಕಾರಿ ಅನುಜ್ಞೆಗಳ ಪಾಲನೆಗಾಗಿ ಬರೆಯುವ ಚಿತ್ರಗಳ ದೆಸೆಯಿಂದ ಎಲ್ಲಿ ತಮ್ಮ ಸೃಜನಶೀಲತೆ ಉದುಗಿಹೋಗುವುದೋ ಎಂಬ ಭೀತಿ ಹೆಬ್ಬಾರರ ಮನದಲ್ಲಿ ಯಾವಾಗಲೂ ಹೊಯ್ದಾಟಕ್ಕೆ ಕಾರಣವಾಗುತ್ತಿತ್ತು. ಇತ್ತ ಜೀವನೋಪಾಯಕ್ಕಾಗಿ ಆರ್ಥಿಕವಾಗಿ ಉಪಯುಕ್ತವೆನಿಸುವ ಸರಕಾರಿ ಕಮಿಶನ್ ಕೆಲಸಗಳನ್ನು ಬಿಡುವಂತಿಲ್ಲ. ಹಿಡಿದುಕೊಂಡರೆ ತನ್ನ ಮುಕ್ತಮನಸ್ಸು ಪಂಜರದ ಗಿಣಿಯಾಗುತ್ತದೆ. ನೆಹರೂ, ಅಜಾದ್, ರಾಜೇಂದ್ರ ಪ್ರಸಾದ್ (ಸಂವಿಧಾನದ ನಿರ್ಮಾಣದ ಸಭೆಯಲ್ಲಿ ಭಾಷಣ ಮಾಡುತ್ತಿರುವ ಭಂಗಿಯಲ್ಲಿ) ಅಂಥ ಮಹಾಮಹಿಮರ ಚಿತ್ರ, ಬರೆಯುವ ಕಾಲಕ್ಕೆ ಅವರ ಸಾಮಿಪ್ಯ - ಇವು ಸುಲಭದಲ್ಲಿ ತಳ್ಳಿಹಾಕುವ ವಿಷಯಗಳೇನಲ್ಲ. ಬದಲು ಓರಗೆಯ ಕಲಾವಿದರು ಓಡೋಡಿ ಬಂದು ಮಾಡುವ ಕೆಲಸ ಅಲ್ಲವೆ? ಆದರೂ ಮನಸ್ಸಿನೊಳಗೆ 'ಎಂದಿಗೆ ಕೊನೆ ಈ ಬಂದಿಗೆ'? ಎಂಬ ಪ್ರಶ್ನೆ ಮಾರ್ದನಿಗೊಡುತ್ತಲೇ ಇತ್ತು.

೧೯೬೧: ಈ ಅವಧಿಯಲ್ಲಿ ಹೆಬ್ಬಾರರಿಗೆ 'ಪದ್ಮಶ್ರೀ' ಪ್ರಶಸ್ತಿ ದೊರಕಿತು. ಸುದ್ಧಿ ಬರುವಾಗ ಅವರು ಇಂದೋರ್ ಕಲಾಶಾಲೆಯ ಒಂದು ಸಭೆಗೆ ಹೋಗಿದ್ದರು. ಪದ್ಮಶ್ರೀ ಸನ್ಮಾನದ ಮೊದಲ ಹಾರ ಕೊರಳಿಗೆ ಬಿದ್ದದ್ದು ಕಲಾವಿದರ ಸಭೆಯಲ್ಲಿ ಎಂಬುದು ಹೆಬ್ಬಾರರಿಗೆ ಹರ್ಷದ ವಿಷಯ. ಗಣರಾಜ್ಯದ ದಿನ ಇಂದೋರಿನಲ್ಲಿ ಪದ್ಮಶ್ರೀ ಬಿರುದಾಂಕಿತ ಹೆಬ್ಬಾರರಿಂದ ಇಂದೋರಿನ ಕಲಾವಿದ್ಯಾರ್ಥಿಗಳಿಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಪಾಠಗಳಿದ್ದವು. ಉಜ್ಜಯಿನಿಯ ವರೆಗೆ ಹೋಗಿ ಇಂದೋರ್ ದಾರಿಯಾಗಿ ಮುಂಬಯಿಗೆ. ಫೆಬ್ರವರಿಯಲ್ಲಿ ಉತ್ತರಪ್ರದೇಶ ರಾಜ್ಯದ ಗೋರಖಪುರದಲ್ಲಿ ಅಲ್ಲಿನ ಕಲಾವಿಭಾಗದ ಅಧ್ಯಯನ ಮಂಡಳಿಯ ಸಭೆಗೆ ಹೋದ ಹೆಬ್ಬಾರರು ಬುದ್ಧನ ಮಹಾನಿರ್ವಾಣದ ಸ್ಥಳವಾದ ಕುಶಿನಾರಕ್ಕೆ ಹೋದರು. ಬುದ್ಧನಿಗೆ ಚಿನ್ನದ ಲೇಪ ಕೊಟ್ಟಿದ್ದು ಅವರ ಮನಸ್ಸಿಗೆ ಹಿಡಿಸಲಿಲ್ಲ. ಅಮೃತಾ ಶೇರ್‌ಗಿಲ್ ಗಂಡನ ಮನೆ ಇರುವ ಸರ್ದಾರ ನಗರ (ಸರಾಯಾ ಗ್ರಾಮ) ಸಮೀಪದಲ್ಲಿಯೇ ಇತ್ತು. ಒಂದು ಕಾಲಕ್ಕೆ ತಾನು ಮೆಚ್ಚಿಕೊಂಡಿದ್ದ




ಶೇರ್‌ಗಿಲ್ ಸ್ಮರಣೆಗಾಗಿ ಸರಾಯದ ಅವರ ಮಹಡಿಮನೆ ನೋಡಿ, ಗಂಡ ಡಾ. ಏಗನ್‌ನ್ನು ಮಾತಾಡಿಸಿ ಬಂದರು. ಖಾಸಗೀ ವಿವಾಹಾರ್ಥ ಮಂಗಳೂರಿಗೆ ಹೋದಾಗ ಪುತ್ತೂರಲ್ಲಿ ಅಲ್ಲಿನ ಗ್ರಾಮಸ್ಥರಿಂದಲೂ, ಉಡುಪಿಯಲ್ಲಿ ಅಲ್ಲಿನ ನಾಗರಿಕರಿಂದಲೂ ಪದ್ಮಶ್ರೀ ದೊರೆತದ್ದಕ್ಕೆ ಕೂಡಿಸಿದ ಸಂತೋಷಸಮಾರಂಭದಲ್ಲಿ ಪಾಲ್ಗೊಂಡರು. ಮುಂಬಯಿಯಲ್ಲಿ ಜೆ. ಜೆ. ಸ್ಕೂಲ್, ಎಸ್.ಕೆ.ಡಿ.ಬಿ. ಸಂಘ, ಪ್ರೆಸ್‌ಗಿಲ್ಡ್, ನೂತನ ಕಲಾಮಂದಿರದಲ್ಲಿ ಎಲ್ಲಾ ಕಡೆಯೂ ಅಕ್ಕರೆಯ ಸನ್ಮಾನ-ಸತ್ಕಾರಗಳು ನೆಡೆದವು. ಮೇ ತಿಂಗಳಲ್ಲಿ ಏಲಂನಲ್ಲಿ ೬೫೦೦ ರೂಪಾಯಿ ಸಂಗ್ರಹಿಸಿ ಆ ನಿಧಿಗೆ ಕಳಿಸಿಕೊಟ್ಟರು ಸೆಪ್ಟೆಂಬರದಲ್ಲಿ ಗುಜರಾತ್ ರಾಜ್ಯಪಾಲ ಮೆಹ್ದಿ ನವಾಜ್ ಜಂಗ್ ಅವರ ಅತಿಥಿಯಾ ಅಹ್ಮದಾಬಾದಿನಲ್ಲಿ ಸಾರಾಭಾಯ್ ಪರಿವಾರದ ಕಲಾಕರ್ತವ್ಯಗಳನ್ನು ವೀಕ್ಷಿಸಿದರು. ಕ್ಯಾಕೋ ಮ್ಯೂಸಿಯಂ, ಮೃಣಾಲಿನಿಯ 'ದರ್ಪಣ' ಹಾಗೂ ಲೀನಾ ಸಾರಾಭಾಯ್‌ಯ 'ಶ್ರೇಯಸ್' ಶೈಕ್ಷಣಿಕ ಸಂಸ್ಥೆಗಳಿಗೆ ಭೇಟ್ಟಿಕೊಟ್ಟರು. 'ಪದ್ಮಶ್ರೀ' ಬಿರುದು, ಹೈದರಾಬಾದಿನಲ್ಲಿ ಒಂದು ಯಶಸ್ವೀ ಪ್ರದರ್ಶನ, ಅಹಮದಾಬಾದ್ ದರ್ಶನಗಳ ದೆಸೆಯಿಂದ ೧೯೬೬ನ್ನು ಒಂದು ಸಂತೋಷದ ವರ್ಷವೆಂದು ಹೆಬ್ಬಾರರು ಕರೆದಿದ್ದಾರೆ.[೭]

೧೯೬೭: ಜನವರಿ ೫ಕ್ಕೆ ಧಾರವಾಡದಲ್ಲಿ ದಂಡಾವತಿಮಠರ ಕಲಾಮಂದಿರದ ಬೆಳ್ಳಿಹಬ್ಬಕ್ಕೆ ಹೋದ ಸಂದರ್ಭದಲ್ಲಿಯೇ ಹಂಪಿಗೆ ಹೋಗಿ ಅನೇಕ ಸ್ಕೆಚ್ಚನ್ನು ಮಾಡಿ ತಂದರು. ಕಲಾವಿದರ ವಸತಿ ನಿರ್ಮಾಣಕ್ಕಾಗಿ ಮೀಸಲಿಟ್ಟ ಕಲಾನಗರದ ಉದ್ಘಾಟನೋತ್ಸವಗಳ ಸಂಭ್ರಮ. ಮಾರ್ಚ್‌ನಲ್ಲಿ ಅಮೇರಿಕದ ಇಂಡಿಯಾ ಇನ್‌ವೆಸ್ಟಮೆಂಟ್ ಸೆಂಟರ್ ಸಲಹೆಗಾರನಿಗೆ 'ಶಿಲಾಗಾಥೆ'ಯ ಮಾರಾಟ. ಟಿ. ಎನ್. ಮೆಡಿಕಲ್ ಕಾಲೇಜಿನ ಮೊಂಟೆರೋ ಪ್ರಗತಿಯ ಚಿತ್ರಗಳನ್ನು ಅಲ್ಲಿ ಮೂಡಿಸುತ್ತಿರುವಾಗಲೇ ಪರಮಾಣು ಸ್ಫೋಟದ ಸಾಧ್ಯತೆಗಳ ನಡುವೆ ನಳನಳಿಸುವ ಗಿವೊಂದು ಹಸಿರಾಗಿ ಚಿಗುರುವ ದೃಶ್ಯವನ್ನು ತಾಳೇ ಇರಿಸಿ ಮನುಷ್ಯನ ಆರೋಗ್ಯಕ್ಕೂ, ಆಯುಷ್ಯಕ್ಕೂ ವಿಜ್ಞಾನ ಕೊಡತಕ್ಕ ಪ್ರೇರಣೆಗಳನ್ನು ಚಿತ್ರಿಸಿದರು. ಇಂಥ ಒಂದು ಮಹತ್ವದ ವಸ್ತುವಿನ ಮೇಲೆ ಚಿತ್ರನಿರ್ಮಾಣಕ್ಕೆ ಕಾರಣರಾದ ಡಾ. ಮೊಂಟೆರೋ ಕೆಲಕಾಲದೊಳಗೆ ವಿಶ್ರಾಂತರಾಗಿ ಬೆಂಗಳೂರಿಗೆ ತೆರಳಿದ ವೇಳೆ ಅವರಿಗೆ ತಮ್ಮದೊಂದು ಕೃತಿಯನ್ನು ಸಮರ್ಪಿಸಿ ಧನ್ಯವಾದ ಹೇಳಿದರು.

ದಿಲ್ಲಿಯ ಕೇಂದ್ರ ಲಲಿತಕಲಾ ಅಕಾಡೆಮಿಯಲ್ಲಿ ಕಲಾವಿದರ ರಾಜಕೀಯದ ದೆಸೆಯಿಂದ ಹೆಬ್ಬಾರರು ಸೂಚಿಸಿದ ಪ್ರತಿನಿಧಿಗಳು ಚುನಾಯಿತರಾಗುವುದು ಸಾಧ್ಯವಾಗಲಿಲ್ಲ. ಚಾವಡಾ ಸಂಕೋ ಚೌಧರಿ ಸೋತದ್ದು ಅನ್ಯಾಯವಾಯಿತು ಎಂದುಕೊಂಡ ಹೆಬ್ಬಾರರು ಮುಂಬಯಿ ಆರ್ಟ್ ಸೊಸೈಟಿಯಲ್ಲಿ ಸೋಲೊಪ್ಪಿಕೊಳ್ಳಬೇಕಾಯಿತು. ತನ್ನ ನಿಲುಮೆಯನ್ನೊಪ್ಪಿಕೊಳ್ಳ ಆಡಳಿತ ಮಂಡಳಿಗೆ 'ನಿಮ್ಮ ಆಡಳಿತದಲ್ಲಿ ಸತ್ಯಕ್ಕೆ ಸ್ಥಾನವಿಲ್ಲವೆಂಬುದು ನನಗೀಗ ಖಾತ್ರಿಯಾಗಿರುವುದರಿಂದ ನನಗೆ ಮಂಡಳಿಯಲ್ಲಿರಲು

೦೭. ಕು. ಶಿ. ಹರಿದಾಸ ಭಟ್ಟ : ಕಟ್ಟಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೨೦



ಇಷ್ಟವಿಲ್ಲ'ವೆಂದು ಪತ್ರ ಬರೆದು ರಾಜೀನಾಮೆ ಕೊಟ್ಟರು. ಸ್ವಂತ ಅನಾರೋಗ್ಯ ಮತ್ತು ಸಮಿತಿಗಳಲ್ಲಿ ಸೋಲುಗಳ ಸರಣಿಯಲ್ಲಿಯೇ ದೇಶದ ಸೋಲು ಸೇರಿ ಕೊಂಡಿತು. ನವಂಬರ್‌ದಲ್ಲಿ ಚೀನಾ ಭಾರತದ ಮೇಲೆ ಅನಿರೀಕ್ಷಿತ ಆಕ್ರಮಣ ಮಾಡಿದ್ದರಿಂದ ಭಾರತದ ರಾಜಕೀಯ ಅಲ್ಲೋಲಕಲ್ಲೋಲವಾಯಿತು. ಆವತ್ತಿನ ರೂಢಿಯಂತೆ ಇಡೀ ಭಾರತ ದೇಶ ಒಗ್ಗಟ್ಟಾಗಿ ಚೀನಾದ ದಾಳಿಯನ್ನು ಎದುರಿಸುವ ಸಿದ್ಧತೆ ಮಾಡಿಕೊಂಡಿತ್ತು.

ಇಂಥ ಸಂದರ್ಭಗಳಿಗೋಸ್ಕರವೇ ಮಾಡಿಸಿದ್ದಂಥ ಮಾತುಗಳನ್ನು ಮೈಕೆಲೆಂಜಲೋ ಬರೆದಿಟ್ಟಿದ್ದನ್ನು ನೆನಪಿಸಿಕೊಂಡರು; 'ವಿನಾಕಾರಣ ಅಪವಾದ ಹೊರಿಸುವ ಮಂದಿಗೆ ಉತ್ತರ ಕೊಡಬೇಕಾದದ್ದು ನಮ್ಮ ಬದುಕಿನಿಂದ ಮತ್ತು ಕೆಲಸಗಳಿಂದ... ಸಾಯುವವರೆಗೂ ನನ್ನ ಕೆಲಸ ಮಾಡಿಕೊಂಡಿರಬೇಕಾದ್ದು ನನ್ನ ಕರ್ತವ್ಯ... ವಿನಾಶಕ ಶಕ್ತಿಗಳಿಗೆ ಸೃಜನಶೀಲತೆಗೆ ಮಣಿಯಬಾರದು'[೮] ಎಂದು ನಿರ್ದರಿಸುವರು.

೧೯೬೩ರಲ್ಲಿ ಶ್ರೀ ಮತ್ತು ಶ್ರೀಮತಿ ಎಂ.ವಿ.ಕಾಮತ್ ಆಗ ವಾಷಿಂಗ್‌ಟನ್‌ನಲ್ಲಿ ಪಿಟಿಐ ವರದಿಗಾರರಾಗಿದ್ದರು ಹೆಬ್ಬಾರ ಸ್ಟೂಡಿಯೋ ಸಂದರ್ಶಿಸಿ ಶಿಲಾಗಾಥೆ ಚಿತ್ರಗಳ ಪೈಕಿ ವಸ್ತ್ರಾಪಹರಣವನ್ನು ಕೊಂಡುಕೊಂಡರು. ಮಹಾರಾಷ್ಟ್ರ ಸರಕಾರದ ರಾಜಭವನಕ್ಕೆ ರಾಜ್ಯಪಾಲ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಭಾವಾವೇಶ ಎಕ್ಸ್‌ಟೆಸೀ ಚಿತ್ರವನ್ನು ತೆಗೆದುಕೊಂಡರು. ಮೇ ತಿಂಗಳಲ್ಲಿ ಮಹಾರಾಷ್ಟ್ರ ಸರಕಾರದ ಸುದ್ದಿ ಖಾತೆಯವರು ದಿಲ್ಲಿಯಲ್ಲಿ ಮಹಾರಾಷ್ಟ್ರದ ಆಧುನಿಕ ಚಿತ್ರಕಾರರ ಒಂದು ಪ್ರದರ್ಶನವನ್ನು ಪಂಡಿತ ನೆಹರೂ ಅವರಿಂದ ಉದ್ಘಾಟನೆ ಮಾಡಿಸಿದರು. ಪಂಡಿತ ನೆಹರೂ ಅವರನ್ನು ಪ್ರದರ್ಶನ ತೋರಿಸಲು ಒಯ್ಯುವ ಜವಾಬ್ದಾರಿ ಹೆಬ್ಬಾರರ ಮೇಲಿತ್ತು.

ಪ್ರಧಾನಮಂತ್ರಿ ನೆಹರೂ ೪೫ ಮಿನಿಟುಗಳಷ್ಟು ದೀರ್ಘ ಕಾಲವನ್ನು ಚಿತ್ರ ವೀಕ್ಷಣೆಯಲ್ಲಿ ಕಳೆದರು. ಆಧುನಿಕ ಚಿತ್ರಕಲೆಯ ವಿಷಯ ನಿಮ್ಮ ಅಭಿಪ್ರಾಯವೇನು? ಎಂದು ಯಾರೋ ಕೇಳಿದರು. ನೆಹರೂ ಅಭಿಪ್ರಾಯ ಕೊಡಲು ನನಗೆ ಅರ್ಹತೆ ಇಲ್ಲವಾದರೂ ಆಧುನಿಕ ವಿಭಾಗದಲ್ಲಿ ನಾವೀನ್ಯದ ಚಿರಂತನ ಉತ್ಸಾಹದ ಅರಿವಾಗುತ್ತದೆ ಎಂದರು.

ಆಧುನಿಕ ಚಿತ್ರಕಲೆ ಜನರನ್ನು ಮುಟ್ಟಬಲ್ಲದೆ? ಎಂಬ ಮುಂದಿನ ಪ್ರಶ್ನೆಗೆ ನೆಹರೂ ಖಂಡಿತವಾಗಿಯೂ ಮುಟ್ಟುತ್ತದೆ. ಸಹೃದಯರ ಮನಸ್ಸು ತೆರೆದುಕೊಂಡಿದ್ದರೆ ಎಂದು ಹೇಳಿದ್ದು ಎಷ್ಟು ಸಮರ್ಪಕ ಉತ್ತರವಾಗಿತ್ತು ಎನ್ನುತ್ತಾರೆ ಹೆಬ್ಬಾರರು. ಕೆಲವೊಮ್ಮೆ ಪೂರ್ವಾಗ್ರಹ ಪೀಡಿತರಲ್ಲದ ಸಾಮಾನ್ಯರು ಆಧುನಿಕ ಕಲೆಯನ್ನು ಆಸ್ವಾದಿಸಬಲ್ಲರು ಎಂಬುದಕ್ಕೆ ಅದೇ ಪ್ರದರ್ಶನಕ್ಕೆ ಆಗಿನ ಶಿಕ್ಷಣ ಸಚಿವ ವೈ.ಬಿ.ಚವಾಣ್ ಸತ್ವಳೇಕರ್ ಅವರ 'ಐಕ್ಯ'ವೆಂಬ ಅಮೂರ್ತಚಿತ್ರದ ಮುಂದೆ ನಿಂತು ಅದನ್ನು ಮೆಚ್ಚಿಕೊಂಡದ್ದನ್ನು ಉದಾಹರಿಸಬಹುದು


೦೮. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೨೧

ಮೇ ತಿಂಗಳಲ್ಲಿ ಹೆಬ್ಬಾರರು ಬರೋಡ ಕಲಾಶಾಲೆಯಲ್ಲಿ ಸಾಂಕೋ ಚೌಧರಿ ಅವರ ಅತಿಥಿಗಳಾಗಿ ಒಂದು ವಾರ ಸ್ವಕುಟಂಬ ಯಾತ್ರೆ ಮುಗಿಸಿ ಬಂದರು.

ಜೂನ್‌ನಲ್ಲಿ ಮುಂಬಯಿ ಆರ್ಟ್ ಸೊಸೈಟಿಯ ಕಾರ್ಯಕರ್ತ ಚಿತ್ರಕಾರ ಶಂಕರ್ ಕರ್ಕರೆ ಅಕಾಲ ನಿಧನಕ್ಕೆ ತುತ್ತಾದರು. ವಾಲ್ಟೇರಿಗೆ ಅಲ್ಲಿನ ಕಲಾಶಾಲೆಯಅಧ್ಯಯನಮಂಡಳದ ಕೆಲಸಕ್ಕಾಗಿ ಹೋದ ಹೆಬ್ಬಾರರು ಭುವನೇಶ್ವರಕ್ಕೆ ಹೋಗಿ ಲಿಂಗರಾಜ ದೇವಸ್ಥಾನವನ್ನು, ಕೋನಾರ್ಕದ ಸೂರ್ಯದೇವಸ್ಥಾನವನ್ನು ನೋಡಿದರು. ೨೪ ಚಕ್ರಗಳ ರಥದಲ್ಲಿ ಸಪ್ತಾಶ್ವಗಳ ಮೇಲೆ ಸಪ್ತವರ್ಣ ಸೂರ್ಯದೇವನ ಸವಾರಿ. ಇಡೀ ಜಗತ್ತಿನ ಪರ್ಯಟನೆ. ಎಂಥ ಭೌಮಕಲ್ಪನೆಗೆ ತಕ್ಕಂತೆ ಕೆತ್ತನೆ ಕೆಲಸ ಸೃಷ್ಟಿಕಾರ್ಯದ ಬಿಂಬಗಳು. ದೇವಸ್ಥಾನದ ಸುತ್ತಲೂ ಹರಿಯುತ್ತಿದ್ದ ಚಂದ್ರ ಭಾಗಾ ನದಿ ಈಗ ಕಣ್ಮರೆಯಾಗಿದೆಯಂತೆ. ಅದು ಪ್ರದಕ್ಷಿಣೆ ಹಾಕುತ್ತಿದ್ದ ಆ ಸ್ವರ್ಣಯುಗದಲ್ಲಿ ಈ ದೇವಸ್ಥಾನದ ವೈಭವವೇನಿದ್ದಿರಬಹುದೆಂಬುದನ್ನು ಹೆಬ್ಬಾರರು ಕಲಾವಿದನ ಕಲ್ಪನಾಕ್ಷಿಗಳಿಂದ ನೋಡಿದರು.

ನಂದಿಯ ಹೆಸರನ್ನುಳಿಸಿಕೊಂಡ ಚಿಕ್ಕ ಮರಗಳ ಗುಂಪೊಂದು ಹೆಬ್ಬಾರರನ್ನು ಸಮುದ್ರ ತೀರದಲ್ಲಿ ಆಕರ್ಷಿಸಿತು. ಅಲ್ಲಿಯೇ ರಾತ್ರಿ ನಿಲ್ಲುವ ಮನಸ್ಸು ಮಾಡಿದರು. ಸಂಜೆ ಹಾಗೂ ಮರುದಿನ ಮುಂಜಾನೆ ಕೋನಾರ್ಕ ದೇಗುಲದ ಸ್ಕೆಚ್ ಮಾಡಿಕೊಂಡರು. ಪುರಿಯಲ್ಲ ಚಿತ್ರಾಕ್ಷಿಕೂಟದ ಗುಡಗಾರ ವಸತಿಯಲ್ಲಿ ಹಳೆಯ ಪಟಬಿಡಿಸುವ ಕಲೆ ಅನುಕರಣಶೀಲವಾಗಿ ಪ್ರವಾಸಿಗಳಿಗೆ ಮಾರುವ ಅಗ್ಗ ಬೆಲೆಯ ಸರಕಾಗಿ ಬದಲಾದ್ದನ್ನು ಕಂಡು ದುಃಖವಾಯಿತು. ಓಬೀರಾಯನ ಕಾಲದಲ್ಲಿ ಸೃಜನಾತ್ಮಕವಾಗಿದ್ದ ಕಲೆ ಹೊಟ್ಟೆಪಾಡಿನ ಕಸುಬಾಗಿ, ವ್ಯಾಪಾರದ ಸುಳಿಗುಂಡಿಯಲ್ಲಿ ಸಿಲುಕಿ ಭ್ರಷ್ಟವಾದುದಕ್ಕೆ ಪುರಿಯ ಪಟಚಿತ್ರಕಾರರು ಉದಾಹರಣೆ ಅಲ್ಲವೆ? ಭಾರತದ ಕಲಾಪರಂಪರೆಯಲ್ಲಿ ಬಿಂಬ ಪ್ರತಿಬಿಂಬ ಅಥವಾ ತದ್ರೂಪತೆಗೆ ಮಾನ್ಯತೆ ಇತ್ತು. ಆಕೃತಿ ಪ್ರಧಾನವಾಗಿದ್ದ ಈ ಕಲೆಯ ಹಿನ್ನೆಲೆಯಲ್ಲಿ ಒಂದು ದರ್ಶನವಿತ್ತು. ಇದನ್ನು ಪರಕೀಯವೆಂದೋ ಅಂತಾರಾಷ್ಟ್ರೀಯವೆಂದೆನಿಸುವ ಶೈಲಿಗಳನ್ನು ಜೀರ್ಣಿಸಿಕೊಳ್ಳುವ, ಆಧುನಿಕವೆಂದೆನಿಸಿಕೊಳ್ಳುವ ಯುಗಧರ್ಮಕ್ಕೆ ಸ್ಪಂದಿಸುವಂತೆ ಪುನಃಸೃಷ್ಟಿ ಮಾಡತಕ್ಕದ್ದು ನಮ್ಮ ಕರ್ತವ್ಯ. ಅದು ಹೇಗೆ ಯುರೋಪ್ ಖಂಡದ ಸೃಜನಶೀಲತೆ ಅಲ್ಲಿನ ವರ್ಣಚಿತ್ರಕಾರರ ಚಿತ್ರಗಳಲ್ಲಿ ಮೂಡಿಬಂದದ್ದನ್ನು ನೋಡಿದರೋ ಅಷ್ಟೇ ಶ್ರದ್ಧೆಯಿಂದ ಭಾರತದ ಪರಂಪರೆಯ ಮಹಾನ್ ಕೃತಿಗಳಾದ ಚಾರಿತ್ರಿಕ ವಾಸ್ತುಶಿಲ್ಪಗಳನು, ಕೈಕಸುಬನ್ನು ಜೀವನದುದ್ದಕ್ಕೂ, ಸಂದರ್ಭ ದೊರೆತಾಗಲೆಲ್ಲಾ ಹೆಬ್ಬಾರರು ಆಸ್ವಾದಿಸುತ್ತಲೇ ಬಂದಿದ್ದಾರೆ. ಸ್ಫೂರ್ತಿ ಪಡೆಯುತ್ತಲೂ ಇದ್ದಾರೆ.

ಕನ್ನಡ ಸಾಹಿತ್ಯದ ದಿಗ್ಗಜಗಳಲ್ಲೊಬ್ಬರಾದ ಶಿವರಾಮ ಕಾರಂತರು ಹೇಗೂ ಹೆಬ್ಬಾರರಿಗೆ ಹಳೆಗಾಲದ ಮಿತ್ರರು ತಾನೇ. ಹಾಗೇ ಬೇಂದ್ರೆಯವರು ಕೂಡ. ಬೇಂದ್ರೆಯವರ ಆಯ್ದು ಕವನಗಳನ್ನು ಒಲವೆ ನಮ್ಮ




ಬದುಕು ಎಂಬ ಶೀರ್ಷಿಕೆಯಲ್ಲಿ ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಪ್ರಕಟಿಸುವ ವೇಳೆ ಹೆಬ್ಬಾರರು ಬೇಂದ್ರೆಯವರ ಪ್ರೇಮಕವನಗಳಿಗೆ ಸುಂದರ ರೇಖಾಚಿತ್ರಗಳನ್ನು ಬರೆದುಕೊಟ್ಟು ಅದನ್ನೊಂದು ಸುಂದರ ಪ್ರಕಟಣೆಯಾಗುವಂತೆ ನೆರವಾದರು. ಶ್ರೀರಂಗರ ಷಷ್ಟ್ಯಬ್ದ ಸಂದರ್ಭದಲ್ಲಿ ಮುಂಬಯಿಯ ಸನ್ಮಾನಸಮಾರಂಭದಲ್ಲಿ ಅವರ ಕೇಳು ಜನಮೇಜಯದ ಪ್ರದರ್ಶನ ನೋಡಿ ಬೆರಗಾದರು. ಸ್ಟುಡಿಯೋಕ್ಕೆ ಬಂದ ಶ್ರೀರಂಗರ ಪ್ರತಿಭಾಯುಕ್ತ ಸಂವಾದಶಕ್ತಿಯನ್ನು ಪರಿಚಯಿಸಿಕೊಂಡರು. ಹಾಗೆಯೇ ಕನ್ನಡದ ಕೆಚ್ಚಿನ ಸಂಶೋಧಕ ಶಂ.ಬಾ.ಜೋಶಿಯವರನ್ನು ಹಲವು ಸಲ ನೋಡಿದ್ದಾರೆ; ಅವರ ನೇರ ನುಡಿಗಳಿಂದ ಪ್ರಭಾವಿತರಾಗಿ ಅವರ ಭೇಟಿಯೇ ಒಂದು ಆಶೀರ್ವಾದವೆಂದು ದಿನಚರಿಯಲ್ಲಿ ಬರೆದಿದ್ದಾರೆ.[೯]

ಸ್ವಂತ ಮನೆಯ ಆಸೆಫಲಿಸುವುದರ ಸಂತೋಷ. ೬೨, ೬೩ ಈ ಎರಡೂ ವರ್ಷಗಳಲ್ಲಿ ಪ್ರದರ್ಶನಗಳಿಗಿಂತ ಹೆಚ್ಚಾಗಿ ಸ್ಟುಡಿಯೊಕ್ಕೆ ಬರುವ ಅಭಿಮಾನಿಗೇ ಗ್ರಾಹಕರಾಗಿ ಆರ್ಥಿಕಸ್ಥಿತಿ ಉತ್ತಮವಾದುದರಿಂದ ಇನ್ನು ತಡಮಾಡತಕ್ಕದ್ದಲ್ಲವೆಂದು ಕಂಟ್ರಾಕ್ಟರನ್ನು ಹುರಿದುಂಬಿಸಲು ಮುಂಗಡ ಹಣ ಪಾವತಿ ಮಾಡಿದರು. ಅಷ್ಟರಲ್ಲೇ ಮುಂಬಯಿಯ ಎಲ್‌ಐಸಿ ಕಟ್ಟಡದಲ್ಲಿ ಭಿತ್ತಿಚಿತ್ರಕ್ಕಾಗಿ ಹೆಬ್ಬಾರರು ಮಾಡಿದ ಸ್ಕೆಚ್ ಸ್ವೀಕೃತವಾಯಿತು. ೧೫ ಅಡಿ ೧೨ ಅಡಿಗಳ ಆ ಚಿತ್ರವನ್ನು ಮೂರು ವಾರಗಳಲ್ಲಿ ಪೂರ್ತಿ ಮಾಡಿಕೊಟ್ಟರು. ಚಿತ್ರದ ಹಲಗೆಯನ್ನು ನೆಲದ ಮೇಲಿಟ್ಟಿದುದರಿಂದ ಬಗ್ಗೆ ಕೆಲಸ ಮಾಡಬೇಕಾಗಿತ್ತು. ಜತೆಗೆ ಎಂ.ಎಫ್.ಹುಸೇನ್ ಕೂಡ ತನ್ನ ಚಿತ್ರ ಬಿಡಸುತ್ತಿದ್ದುದರಿಂದ ಬೇಸರವೆಂಬುದಿರಲಿಲ್ಲ. ಅಂತೂ ಚಿತ್ರದ ನಾಲ್ಕು ತುಂಡುಗಳನ್ನು ಜೋಡಿಸಿ, ನಡುವೆ ಬಣ್ಣ ಹಚ್ಚಿ ಕೆಲಸ ಮುಗಿಸಿಕೊಟ್ಟು ಬಂದರು. ಹುಸೇನ್ ಈ ಕೆಲಸ ಹೆಬ್ಬಾರರಿಗೆ ಹಚ್ಚಿ ಮುಂಬಯಿಂದ ಹೊರಗೆ ಹೊರಟು ಹೋಗಿದ್ದರು.

ನ್ಯೂಯಾರ್ಕಿನ ಜಾಗತಿಕ ವಾಣಿಜ್ಯ ಮಳಿಗೆಯಲ್ಲಿ ನವಿಲಿನ ಚಿತ್ರಬಿಡಿಸುವ ಸಲುವಾಗಿ ಅಮೇರಿಕಕ್ಕೆ ಹೋಗಿ ಕೆಲಸ ಮುಗಿಸಿ ಬರುವಾಗ ಜುಲೈ ತಿಂಗಳು ಕಾಲಿಟ್ಟಿತ್ತು. ಕಲಾವಿದರ ನೆರವಿನ ಸಂಘದ ಜನರು ಲೆಕ್ಕಪತ್ರ ಸರಿಯಾಗಿಟ್ಟಿಲ್ಲವೆಂಬ ದುಃಖ ಒಂದಾದರೂ ತನ್ನ ಚಿತ್ರವನ್ನು ನ್ಯೂಯಾರ್ಕ್ ಮಾಡರ್ನ್ ಆರ್ಟ್ ಮ್ಯೂಸಿಯಮ್ ಸ್ವೀಕರಿಸುವಂತೆ ಅಮೇರಿಕದಲ್ಲಿ ಒಂದು ಸಮಗ್ರ ಪ್ರದರ್ಶನವನ್ನು ಸಂಘಟಿಸುವ ಆಸೆ ಇನ್ನು ಫಲಿಸಲಾರದೋ ಏನೋ ಎಂಬ ಆತಂಕ ಹೆಬ್ಬಾರರಲ್ಲಿ ಕಾಡುತ್ತಿತ್ತು.

ಸ್ಟುಡಿಯೋದಲ್ಲಿರುವ ಚಿತ್ರಗಳನ್ನು ಅಭಿಮಾನಿಗಳು ಕೊಂಡೊಯ್ಯುವುದು ಸಾಮಾನ್ಯ ಪರಿಸ್ಥಿತಿ ಎನಿಸಿದರೂ, ದೇಶವಿದೇಶದ ಕಲಾಭಿಮಾನಿಗಳು ಚಿತ್ರಗಳನ್ನು ಎಷ್ಟೇ ಪ್ರಶಂಸಿಸಿದರೂ, ಹೆಬ್ಬಾರರ ಮನಸ್ಸಿನ ಸಿಡಿತ ಸೆಳೆತಗಳು ನಿಲ್ಲಲೊಲ್ಲವು. ಆರ್ಥಿಕ ಒತ್ತಡದ ನಡುವೆ ಜೀವನ ಸಾಗಿಸುವುದು ರೂಢಿಯಾಗಿದೆ ನಿಜ. ಆದರೆ ಕಲಾಜೀವನದ ಒತ್ತಡಗಳು ಸೃಷ್ಟಿಕಾರ್ಯಕ್ಕೆ ಸಂಬಂಧಿಸಿದಂತಹವು. ಸಂಘಟನೆಗೆ

೦೯. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೨೩



ಸಂಬಂಧಿಸಿದಂತಹವು ಬೇರೆಯೇ ಇರುತ್ತದೆ. ಸೃಷ್ಟಿಕಾರ್ಯಕ್ಕೆ ಮೂಲದಲ್ಲಿರುವ ಅಸಂತೃಪ್ತಯ ಫಲವಾಗಿ ಉಂಟಾಗುವ ಮಾನಸಿಕ ತುಮುಲಗಳು ನಿಲ್ಲಬೇಕಾದರೆ ಹೊಸ ಚಿತ್ರವೊಂದು ಸಾಕಾರಗೊಳ್ಳಬೇಕು. ಇದುವರೆಗೆ ಸಾಗಿದ ದಾರಿ ಅಲ್ಲ ಇದು ಎಂದು ಹೆಬ್ಬಾರರಿಗೇ ಅನಿಸಿದ ಚಿತ್ರ ಸೂರ್ಯ ಮತ್ತು ಚಂದ್ರ ಅಮೂರ್ತ ಕಲೆಗೆ ಸಮೀಪದ ಈ ಚಿತ್ರದಲ್ಲಿ ಪ್ರತ್ಯಕ್ಷಗೊಂಡ ಕಲಾಶೈಲಿ. ಹೊಸ ದಾರಿಯಲ್ಲಿ ಕಲಾವಿದನ ಸ್ವಂತಿಕೆ ಅರಳಲು ಸಾಧ್ಯವೆಂಬ ನಂಬಿಕೆ ಮೂಡುವಂತೆ ಎರಡು ಸಂಗತಿಗಳು ನಡೆದವು.

೧. ಕ್ಯಾನ್ವಾಸಿನ ಮೇಲೆ ನೇರಳೆ ಮತ್ತು ಹಸುರು ಕಂದುಗಳ ವಿಶಿಷ್ಟ ಮಿಶ್ರಣದಿಂದ ಉತ್ಪನ್ನವಾಗುವ ಹಿನ್ನೆಲೆಯಲ್ಲಿ ಒಂದು ಕಡುಕೆಂಪು ಬಿಂದುವನ್ನಿಟ್ಟಾಗ ಅಪೂರ್ವ ವರ್ಣಾನುಭವ ಉಂಟಾದದ್ದು.

೨. ಚಿತ್ರದಲ್ಲಿ ಹರವನ್ನು ಹೇಗೆ ವ್ಯವಸ್ಥೆಗೊಳಿಸಬೇಕು ಎಂಬುದು ಎಲ್ಲ ಕಲಾವಿದರ ಮುಂದಿನ ಸಮಸ್ಯೆಯಷ್ಟೇ. ಇದಕ್ಕೆ ಚರ್ವಿತ ಚರ್ವಣ ತಂತ್ರಗಳೆಷ್ಟೋ ಇವೆ. ಅದೊಂದು ಸುಮೂಹೂರ್ತದಲ್ಲಿ ಹೆಬ್ಬಾರರು ತಮ್ಮದೇ ಒಂದು ಆವಿಷ್ಕಾರ ಮಾಡಿದರು. ಆಶ್ರಯ ಚಿತ್ರದಲ್ಲಿ ಅದರ ಪ್ರಯೋಗ ಯಶಸ್ವಿಯಾಯಿತು. ವರ್ಣದ ಟ್ಯೂಬನ್ನು ನೇರವಾಗಿ ಕ್ಯಾನ್ವಾಸಿನ ಮೇಲೆ ಮೆತ್ತುವುದು ತೀರಸರಳವೆಂದು ತೋರುವ ಈ ತಂತ್ರದ ಶೋಧನೆಯ ಉಲ್ಲಾಸ, ಆಶ್ರಯದಲ್ಲಿ ಅದು ಜಯಪ್ರದವಾದುದೇ ಕಾರಣವಾಗಿ ಅಶಾಂತ ಮನಸ್ಸು ಹಿಡತಕ್ಕೆ ಬಂತು. ಈ ಹೊಸ ಬೆಳಕು ವೈಯಕ್ತಿಕ ಚಿತ್ರರಚನೆಯ ಇತಿಹಾಸದ ಉದ್ದಕ್ಕೂ ಇನ್ನು ಮುಂದೆ ಹಾಯುತ್ತದೆ. ಬದುಕಿನ ಧನ್ಯತೆಗೆ ಕಾರಣವಾಗುತ್ತದೆಂಬ ವಿಶ್ವಾಸ ಮೂಡಿತು.


೧೯೬೮ರಲ್ಲಿ ದೆಹಲಿಯ ಟ್ರಯನಾಲೆ ಮೂರು ವರ್ಷಗಳಿಗೊಮ್ಮೆ ನಡೆಯುವ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಹೆಬ್ಬಾರರ ಸರ್ವನಾಶ ಚಿತ್ರ ಅಂತಿಮ ಆಯ್ಕೆಯಲ್ಲಿ ಬಿದ್ದುಹೋಯಿತು. ಕಾರಣ ಅದಕ್ಕಾಗಿ ಚಿತ್ರಗಳ ಆಯ್ಕೆ ಮಾಡುವ ನಿರ್ಣಾಯಕ ಸಮಿತಿಯ ಸದಸ್ಯರ ರಾಜಕೀಯಗಳು, ನಿರ್ಣಾಯಕ ಸಮಿತಿಯ ಮುಂದೆ ಇಡದೆ, ಪರವಾನಿಗೆಯೂ ಇಲ್ಲದೆ ತನ್ನ ಯಾವುದೋ ಚಿತ್ರಗಳನ್ನು ಟ್ರಯನಾಲೆಗೆ ತಗಲಿಸಿಬಿಟ್ಟು ಒಬ್ಬ ಮಹಾನುಭಾವ ಸ್ವರ್ಣಪದಕ ಗಿಟ್ಟಿಸಿಕೊಂಡಿದ್ದ. ಇನ್ನೊಬ್ಬನಿಗೆ ಶಿಲ್ಪವಿಭಾಗದಲ್ಲಿ ಕೊಡಬೇಕಾದ ಸ್ವರ್ಣಪದಕವನ್ನು ಚಿತ್ರಿಭಾಗಕ್ಕೆ ವರ್ಗಾಯಿಸಿ ಸ್ವರ್ಣವಿಜೇತನಾಗಿ ಮಾಡಲಾಯಿತು. ಇಂಥ ಭ್ರಷ್ಟಾಚಾರ ಟ್ರಯನಾಲೆ ಮುಗಿದ ಮೇಲೆ ವಿಚಾರಣೆಗೆ ಒಳಪಟ್ಟರೂ ಆಪಾದಿತರು ಅಧ್ಯಕ್ಷ ಡಾ.ಮುಲ್ಕ್ ರಾಜ್ ಆನಂದರ ದಯಾಳುತನದಿಂದ ತಪ್ಪಿಸಿಕೊಂಡರು (ಟ್ರಯನಾಲೆಯಲ್ಲಿ ತಿರಸ್ಕೃತವಾದ ಹೆಬ್ಬಾರರ ಚಿತ್ರವನ್ನು ಆಸ್ಟ್ರೇಲಿಯನ್ ರಾಷ್ಟ್ರೀಯ ಮ್ಯೂಸಿಯಮ್ ತನ್ನ ಸಂಗ್ರಹಕ್ಕೆ ಖರೀದಿ ಮಾಡಿತೆಂಬುದು ಇಲ್ಲಿ ಗಮನಿಸಬೇಕಾದ ಅಂಶ).[೧೦]

೧೦. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೨೪

ಜಮ್ಮು-ಕಾಶ್ಮೀರ ಕಲಾ ಅಕಾಡೆಮಿ ಜೂನ್ ೮ ರಿಂದ ಏರ್ಪಾಟುಗೊಳಿಸಿದ ಕಲಾವಿದರ ಶಿಬಿರದಲ್ಲಿ ನಿಸರ್ಗಸುಂದರ ಸನ್ನಿವೇಶದಲ್ಲಿ ಶಾಂತಿ ದವೆ, ಕೆ.ಎಸ್.ಕುಲಕರ್ಣಿ, ಬೀರೇನ್ ಡೇ ಮತ್ತು ಜಿಲಾರ್ ಸಂತೋಷ ಈ ನಾಲ್ಕಾರು ಕಲಾವಿದರ ಸಹವಾಸದಲ್ಲಿ ಸಹ ಸೃಷ್ಟಿ, ಶ್ರೀನಗರದಿಂದ ೧೩ ಮೈಲು ದೂರದ ಒಂದು ಹಳ್ಳಿ ಪ್ರದೇಶ. ಭತ್ತದ ಗದ್ದೆಗಳಿಗೆ ಹಿನ್ನೆಲೆ ಪರದೆಯಂತೆ ನಂತ ಬೃಹತ್ ಬೆಟ್ಟ, ವಾಸದ ಮನೆಯ ಪಕ್ಕದಲ್ಲೇ ಹರಿಯುವ ನಿರ್ಮಲವಾದ ತೊರೆ, ಕಾಶ್ಮೀರದ ಹವೆ ಈ ತನ್ಮಧ್ಯೆ ಕಲಾವಿದರು ಒಬ್ಬರಿಗಿಂತ ಒಬ್ಬರು ಹೆಚ್ಚು ಉತ್ಸಾಹದಿಂದ ಕುಂಚ ಆಡಿಸಿದರು. ಓಡಿಸಿದರು ಹೊರಜಗತ್ತಿನ ಸಂಪರ್ಕವೇ ಇಲ್ಲದ ಒಂದು ಮುಕ್ತ ಸನ್ನಿವೇಶದಲ್ಲಿ ಚಿತ್ರದ ಕೆಲಸ, ಇಸ್ಪೀಟು ಆಟ, ಸಹಜ ತಿರುಗಾಟದಲ್ಲಿ ದಿನಗಳು ಸರಿದದ್ದೇ ಕಾಣಲಿಲ್ಲ. ಹೆಬ್ಬಾರರ ಜತೆಗೆ ಬಂದಿದ್ದ ರೇಖಾ ಕೂಡಾ ನಾಲ್ಕು ಚಿತ್ರಗಳನ್ನು ಬರೆದಳು. ಅಕಾಡೆಮಿಯ ವಾರ್ಷಿಕ ಚಿತ್ರೋತ್ಸವದಲ್ಲಿ ಶಿಬಿರಾರ್ಥಿಗಳ ಚಿತ್ರಗಳನ್ನು ತೂಗಿಸಲಾಯಿತು. ಶಿಬಿರ ಮುಗಿಸಿ ಹೊರಡುವ ವೇಳೆ ಶಿಬಿರಕ್ಕೆ ಬಂದಿದ್ದ ಕಲಾವಿದರು ತಮ್ಮ ಒಂದೊಂದು ಚಿತ್ರವನ್ನು ಅಕಾಡೆಮಿಗೆ ದಾನಮಾಡಿದರು ಖರ್ಚಿನ ಹಣ ಪಡೆದು ಇಂಥ ಶಿಬಿರಗಳ ಪ್ರಯೋಗವನ್ನು ಅರಿತುಕೊಂಡ ಹೆಬ್ಬಾರರು ಕಾಲಾನಂತರದಲ್ಲಿ ತಿರುವನಂತಪುರ, ಮೈಸೂರು, ಬೆಂಗಳೂರು, ಮುಂತಾದ ಕಡೆಗಳಲ್ಲಿ ತರುಣಕಲಾವಿದರ ಸಲುವಾಗಿ ಶಿಬಿರಗಳನ್ನು ನಡೆಸಿದ್ದುಂಟು.

೧೯೬೯ರಲ್ಲಿ ರೇಖಾಳ ಪ್ರಥಮ ಏಕವ್ಯಕ್ತಿ ಪ್ರದರ್ಶನವನ್ನು ಡಾ.ಮುಲ್ಕ್‌ರಾಜ್ ಆನಂದ ಅವರು ಜಹಾಂಗೀರ ಆರ್ಟ್ ಗೆಲರಿಯಲ್ಲಿ ಉದ್ಘಾಟಿಸಿದರು. ಸಮಾರಂಭಕ್ಕೆ ಬಹಳ ಜನ ಬಂದಿದ್ದರು. ಹತ್ತು ಚಿತ್ರಗಳು ಮಾರಾಟವಾದುವು. ಬಾಲ್ಯಕಾಲದ ಆಸಕ್ತಿಯನ್ನು ನಿರಂತರ ಪ್ರಯತ್ನದಿಂದಲೂ ಸ್ವ-ಪ್ರತಿಭೆಯಿಂದಲೂ ಬೆಳೆಸಿಕೊಂಡು ಪ್ರದರ್ಶನ ಕೊಡುವ ಮಟ್ಟಕ್ಕೆ ಮುಟ್ಟಿದ ಮಗಳ ಬಗ್ಗೆ ಹೆಬ್ಬಾರರಿಗೆ ಹೆಮ್ಮೆ ಅನಿಸಿತು. ೧೯೬೯ರಲ್ಲಿ ಅಖಿಲ ಜಗತ್ತಿಗೆ, ಅಖಿಲಭಾರತಕ್ಕೆ ಹಾಗೂ ಹೆಬ್ಬಾರರ ತೀರ ಆತ್ಮೀಯವಲಯಕ್ಕೆ ಸಂಬಂಧಿಸಿದ ಮೂರು ಮುಖ್ಯಘಟನೆಗಳು ನಡೆದದ್ದು . ಜುಲೈ ೨೧ಕ್ಕೆ ಅಮೇರಿಕ ಹಾರಿಸಿದ ರಾಕೆಟ್ ಚಂದ್ರಲೋಕವನ್ನು ಮುಟ್ಟಿತು. ಬಾಹ್ಯಾಕಾಶ ಶೋಧನೆಯಲ್ಲಿ ಇದೊಂದು ಮಹತ್ವದ ದಿನ ಕವಿಗಳ ಕಲ್ಪನೆಯ ಚಂದ್ರನ ಮೇಲೆ ನರಮನುಷ್ಯರು ತಮ್ಮ ಪಾದ ಚಿಹ್ನೆಯನ್ನು ಮೂಡಿಸಿ, ಧ್ವಜ ಏರಿಸಿ ಲೆಕ್ಕಾಚಾರದಂತೆ ವಾಪಾಸು ಭೂಮಿಗೆ ಮರಳಿ ಮನುಷ್ಯಜಾತಿಯ ವಿಶ್ವವಿಜಯದಲ್ಲಿ ಹೊಸ ದಾಖಲೆ ಸ್ಥಾಪಿಸಿದರು.

ಬಾಹ್ಯಾಕಾಶ ಹೆಬ್ಬಾರರ ಕಲ್ಪನೆಗೆ ಗರಿ ಮೂಡಿಸಿತು. ಮನಸ್ಸಿಗೆ ಉಲ್ಲಾಸ ನೀಡುವ ಬಣ್ಣಗಲು, ಚೈತನ್ಯಪೂರ್ಣವಾದ ಭಾವುಕ ಪ್ರವೃತ್ತಿ, ನಿಸರ್ಗದಲ್ಲಿ ಔಚಿತ್ರ ಪ್ರಜ್ಞೆಯಿಂದ ನಿಲ್ಲಿಸಲಾದ ಆಕೃತಿಗಳು




ರೇಖಾ ಪ್ರದರ್ಶನದ ವೈಶಿಷ್ಟ್ಯ ಗಾಳಿಪಟ ಹಾರಿಸುವ, ಶ್ರಾಯ ಇನ್ನೂ ಮುಗಿದಿಲ್ಲ, ಉಲ್ಲಾಸದ ಕ್ಷಣ, ತೋಟದಲ್ಲಿ ಎಲೆಗಳ ಹಾಸಿಗೆ, ಆಕೆ ದಿನ ಕಳೆದದ್ದೇ ಹೀಗೆ ಇಂಥ ಶೀರ್ಷಿಕೆಯಲ್ಲಿ ಪುಟಿಯುವುದು ಬರೆ ರೊಮ್ಯಾಂಟಿಕ್ ಮನೋಧರ್ಮವಲ್ಲ. ಇದು ಕಾವಯ ಅಂತಃಕರಣವನ್ನು ಭಟ್ಟಿ ಇಳಿಸಿದ ಭಾವಸಾರ. ಸಣ್ಣಸಣ್ಣ ಚಿತ್ರಗಳಲ್ಲೂ ರೇಖಾಳ ಸ್ಫೂರ್ತಿ ಎದ್ದು ತೋರುತ್ತಿತ್ತು. ತಾಂತ್ರಿಕ ದೃಷ್ಟಿಯಿಂದಲೂ ರೇಖಾ ಪ್ರಬುದ್ಧಳಾದದ್ದು ವೇದ್ಯವಾಯಿತು.[೧೧]

೧೯೭೦ರಲ್ಲಿ ಕಲಾನಗರದ ಮನೆಯ ತೋಟದ ಕೆಂದಾಳಿತೆಂಗಿನ ಮರದಲ್ಲಿ ಮೊದಲ ಬಾರಿ ಕಾಯಿ ಹಿಡಿದದ್ದು, ಎಳೆಕಾಯಿ ತುಂಬಿದ ಕೊಂಬು ಬಿರಿದದ್ದು, ಹೆಬ್ಬಾರರ ಚೇತನಕ್ಕೆ ಸ್ಫೂರ್ತಿಯನ್ನುಂಟುಮಾಡಿದಂತೆ ಅನಿಸಿತು. ನಾಲ್ಕು ವರ್ಷದಲ್ಲೇ ನಾನು ನೆಟ್ಟ ಮರ ಫಲ ಬಿಡುವ ಯೋಜನೆ ಮಾಡಿತ್ತು. ಸ್ಟುಡಿಯೋದ ಕಿಟಕಿಯಿಂದ ಹೊರಗೆ ನೋಡಿದರೆ ಕಾಣುವ ಈ ಕಲ್ಪವೃಕ್ಷ ನಿಜಕ್ಕೂ ತನ್ನ ಬದುಕಿನ ಕಲ್ಪವೃಕ್ಷವಾಗಬಹುದೇ ನನ್ನ ಹೋರಾಟ, ಅನಿಶ್ಚಿತತೆ ಹಿಂಜರಿಯಬಹುದೇ ಉತ್ಕಟವಾದ ಆಸೆಗಳು ನಿಜಕ್ಕೂ ಮನುಷ್ಯ ಸಹಜವಾದ ಆಸೆಗಳೇ ತಾನೇ ಅನುಕೂಲಕ್ಕಾಗಿ ಒಂದು ಕಾರಿಟ್ಟುಕೊಳ್ಳುವುದೇನು ಮಹತ್ವಾಕಾಂಕ್ಷೆಯೆ ಎರಡು ವರ್ಷ ಹಿಂದೆ ಸಂಜೀವರಾಯರು ಕೊಟ್ಟ ಹಳೇ ಎಂಬಾಸಿಡರ್ ಬದಲುಹೊಸ ಫಿಯೆಟ್ ಕೊಳ್ಳುವ ಮುಹೂರ್ತ ಬರುವುದು ಎಂದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಾಡಿಕೊಟ್ಟ ವೃಷಭಾವತಿ ಭಿತ್ತಿಚಿತ್ರದ ಪಾತಿಯಾದರೂ ಬಂದಿದ್ದರೆ ಎಂಬ ಮಾನಸಿಕ ಗೊಂದಲದ ನಡುವೆ ಗುರು ದಂಡಾವತಿ ಮಠ ಅವರು ಸ್ಟುಡಿಯೋಕ್ಕೆ ಬಂದರು. ಆಗ ತಾನೇ ಹೆಬ್ಬಾರರು ರಾಮಾಯಣದ ಆದಿಶ್ಲೋಕದ ಆಧಾರದ ಮೇಲೆ ಬರೆದಿದ್ದ ಚಿತ್ರದ ಮುದ್ರಿತ ಪ್ರತಿಗಳು ಲಲಿತಕಲಾ ಅಕಾಡೆಮಿಯಿಂದ ಬಂದಿದ್ದವು. ಅವುಗಳಲ್ಲಿ ಒಂದನ್ನು ದಂಡಾವತಿಮಠರಿಗೆ ಅರ್ಪಿಸಿ ಆಶೀರ್ವಾದ ಪಡೆದರು.

ಎಂತಲೋ ಏನೋ ಕೆಲಕಾಲದಲ್ಲಿ ಫಿಯಟ್ ಕಾರಿನ ಆಸೆ ಪೂರೈಸಿತು. ಹೊಸ ಫಿಯೆಟ್ ಮನೆಗೆ ಬಂದಾಗ ಎಲ್ಲರಿಗೂ ಆನಂದ. ಮುಂಬಯಿಯಲ್ಲಿ ರೇಖಾಳ ಎರಡನೇ ಪ್ರದರ್ಶನವೂ ಯಶಸ್ವಿಯಾಯಿತು. ಆಕೆಯ ಚಿತ್ರದ ಪ್ರಬಂಧ ಗುಣವನ್ನೂ ಒಪ್ಪಂದದ ಬಂಧದಲ್ಲಿರುವ ಮಾರ್ದವತೆಗಳು ರೇಖಾಳ ಕೃತಿಗಳಿಗೆ ಪರಿಶುದ್ಧತೆಯ ಗುಣವನ್ನು ಆರೋಪಿಸುತ್ತವೆ. ಎಂಬಂಥ ಒಳ್ಳೇ ವಿಮರ್ಶೆಯನ್ನಾಡಿ ಹೆಬ್ಬಾರರು ತಾರುಮ್ಯಕ್ಕೆ ಸುಲಭ ಸಾಧ್ಯವಾದದ್ದು ಅರುವತ್ತು ವರ್ಷದಲ್ಲಿ ತನಗೆ ಆಗುವುದುಹೇಗೆ ಸಾಧ್ಯ ಎಂದುಕೊಂಡರು. ಸಂಗೀತ ಸರಣಿಯ ಮೊದಲ ಚಿತ್ರ ಯಾವುದೋ ಪ್ರದರ್ಶನಕ್ಕೆ ಹೋಗಿಮೆಚ್ಚಿಗೆ ಗಳಿಸಿದರೂ ಹೆಬ್ಬಾರರಿಗೆ ಸಂತೃಪ್ತಿ ಇರಲಿಲ್ಲ. ಅದನ್ನು ಇನ್ನೊಮ್ಮೆ ಸುಧಾರಿಸಲು ಹೊರಟರು. ಇಡೀ ಕ್ಯಾನ್ವಾಸಿಗೆ ಬಿಳಿ ಬಣ್ಣ ತೇಪಿ

೧೧. ಕು. ಶಿ. ಹರಿದಾಸ ಭಟ್ಟ : ಕಟ್ಟಿಂಗೇರಿ ಕೃಷ್ಣ ಹೆಬ್ಬಾರ : ಕಲೆ ಮತ್ತು ಬದುಕು, ಪುಟ – ೧೨೫




ನೋಡಿದರು ಗೊಂದಲ ಇಮ್ಮಡಿಸಿತು. ರಾತ್ರಿ ಇಡೀ ಅದರ ಚಿಂತೆಯನ್ನು ಕಳೆದು ಮರುದಿನ ಮುಂಜಾನೆ ಮತ್ತೆ ಚಿತ್ರದ ಮುಂದೆ ಕೂತರು. ಮನಃಕ್ಷೋಭೆ ಮುದ್ದೆ ಮುದ್ದೆಯಾಗಿ ಕಣ್ಣಮುಂದೆ ಹಾದು ಹೋಯಿತು. ಎಲ್ಲಿಂದಲೋ ಒಳಬೆಳಕು ಬಂದಂತೆ ಹೊಸ ಆವೇಶದಿಂದ ಬಣ್ಣ ಬಳಿದರು. ಒಳಗಿನ ಬೆಳಕು ಚಿತ್ರದ ಹರವನ್ನು ತುಂಬಿ ಅದರೊಳಗಿನ ತಂಬೂರಿ ಮೀಟುವ ಸದ್ದು ವರ್ಣಗಳ ನಾದತರಂಗವಾಗಿ ಮಾರ್ಪಟ್ಟು ವರ್ಣಪುಂಜವಾಗಿ ಹರಿದು ಬಂತು. ಇದೇ ಕಲಾವಿದನ ಆವೇಶ, ಸಾಕ್ಷಾತ್ಕಾರ, ಇದಕ್ಕೆ ವಯಸ್ಸಿನ ಬಂಧನವಿಲ್ಲ. ಹೆಬ್ಬಾರರಿಗೆ ೧೯೭೧ಕ್ಕೆ ೬೦ ವರ್ಷ ತುಂಬಿದೆ.

ಭಾರತೀಯ ಸಂಪ್ರದಾಯದಂತೆ ಇದು ಮನುಷ್ಯ ಜೀವನದ ಒಂದು ಮಜಲಿನ ಸೂಚಿ. ಜೀವನೋಪಾಯದ ಹೋರಾಟದ ನಡುವೆ ತಾನು ಸಾಧಿಸಿದ್ದನ್ನು ಇತರರು ಹೇಳಲಿ, ಬಿಡಲಿ, ತನಗಂತೂ ಪಾರತಂತ್ರ್ಯವಿಲ್ಲದ ಪ್ರಾಮಾಣಿಕ ಕಲಾಜೀವನ ಆತ್ಮಸಮಾಧಾನ ಉಂಟುಮಾಡಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ಮುಂದಿನ ಆಯುಷ್ಯವನ್ನು ಇನ್ನಷ್ಟುಕಲಾಸೇವೆಯಲ್ಲಿ ಕಳೆಯಬೇಕು ಎಂಬ ನಿರ್ಧಾರ ಮಾಡಿದರು. ನ್ಯಾಶನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನವರು ಬಾಂಗ್ಲಾದೇಶ ಮತ್ತು ಲಲಿತಕಲಾ ಅಕಾಡೆಮಿ ವಿಜಯ ಹೆಬ್ಬಾರರೇ ತಮ್ಮ ಮುಖ್ಯಕೃತಿಗಳೆಂದು ತಿಳಿದಿರುವ ಎರಡು ತೈಲಚಿತ್ರಗಳನ್ನು ಪಡೆದು ಕೊಂಡದ್ದು ಹೆಬ್ಬಾರರ ಕಲಾಸಿದ್ಧಿಯ ಕುರುಹೆಂದು ತಿಳಿಯಬಹುದು.

೧೯೭೨ರಲ್ಲಿ ಐಐಟಿಯ ಶಿಕ್ಷಣ ಮುಗಿಸಿ ಅಮೇರಿಕಾದ ಲಾಸ್ ಎಂಜಲೀಸ್‌ನಲ್ಲಿ ಉನ್ನತ ಅಧ್ಯಯನಕ್ಕಾಗಿ ತೆರಳಿದ್ದ ಹೆಬ್ಬಾರರು ಇದೇ ವರ್ಷ ಡಾ. ಝಾಕೀರ್ ಹುಸೇನರ ವ್ಯಕ್ತಿಚಿತ್ರವನ್ನು ಬಿಡಿಸಿಕೊಟ್ಟರು. ದೆಹಲಿಯ ಲಲಿತಕಲಾ ಅಕಾಡೆಮಿ ಕೆಲವು ಕಾಲದಿಂದ ಕಲಾವಿದರ ರಾಜಕೀಯಕ್ಕೆ ತುತ್ತಾಗಿ ಅಲ್ಲಿನ ವಾತಾವರಣ ಕಲುಷಿತವಾಗಿ ಹೋಗಿತ್ತು. ಹೆಬ್ಬಾರರು ೧೮ ವರ್ಷ ಈ ಅಕಾಡೆಮಿಯ ಆಗುಹೋಗುಗಳಲ್ಲಿ ಭಾಗವಹಿಸಿದ ಮೇಲೆ ಅದರ ಸಂಬಂಧ ಕಡಿದುಕೊಳ್ಳುವುದು ಕಷ್ಟವಾದರೂ ಅಲ್ಲಿಂದ ಹೊರಬಿದ್ದರು.

ಸದಸ್ಯರ ಸ್ವಾರ್ಥ ಕಲಾ ಅಕಾಡೆಮಿಯ ಪ್ರಗತಿಗೆ ಬಾಧಕವಾಗುವಷ್ಟು ಪ್ರಮಾಣದಲ್ಲಿ ಬೆಳೆದು ಹೋಗಿತ್ತು. ಸ್ಥಾಪನೆ ಆದಂದಿನಿಂದಲೂ ಅಧಿಕೃತವಾಗಿ ಅಕಾಡೆಮಿಯ ಸಂಬಂಧ ಇರಿಸಿಕೊಂಡದ್ದಲ್ಲದೆ ಅದರ ಕಾರ್ಯಕಲಾಪಗಳ ವಿಕಸನದಲ್ಲಿ ಸಕ್ರಿಯವಾಗಿ ಭಾಗವಹಿಸಿದರೂ ತಮ್ಮ ನಿರೀಕ್ಷೆಗೆ ಸಮನಾಗಿ ಅದು ಬೆಳೆಯಲಿಲ್ಲವೆಂದು ಖೇದಗೊಂಡರು. ಮುಂದಿನ ಎಂಟು ವರ್ಷಗಳಲ್ಲಿ ಅಕಾಡೆಮಿಯ ಅಧ್ಯಕ್ಷತೆಯ ಜಯಮಾಲೆ ಅವರನ್ನರಸಿಕೊಂಡು ಬಂದು ಕೊರಳಿಗೆ ಬಿದ್ದು, ಅಕಾಡೆಮಿಯ ಕಾರ್ಯಗಳಿಗೆ ಧುರೀಣತ್ವ ಒದಗಿಸುವ ಯೋಗ ಬರಬಹುದೆಂದು ಆಗ ಅವರಿಗೆ ಅನಿಸಿರಲಿಲ್ಲ.




ಅಕಾಡೆಮಿ ಸದಸ್ಯರಿಗೆ ಅಸಂತುಷ್ಟಿ ಉಂಟಾಗಲು ಮುಖ್ಯ ಕಾರಣ ಭಾರತೀಯ ಕಲೆಯ ೨೫ ವರ್ಷಗಳ ವಿಕಾಸವನ್ನು ಸಾಕ್ಷೀಕರಿಸುವ ಒಂದು ಪ್ರದರ್ಶನಕ್ಕೆ ಹೆಬ್ಬಾರರನ್ನು ಏಕಸದಸ್ಯ ಆಯೋಗವಾಗಿ ನೇಮಕಮಾಡಿದ್ದು. ಹೆಬ್ಬಾರರ ನಿಸ್ವಾರ್ಥತೆ ಹಾಗೂ ಪ್ರಾಮಾಣಿಕತೆಯಲ್ಲಿ ವಿಶ್ವಾಸವಿಟ್ಟು ಸರಕಾರ ಅವರನ್ನು ನೇಮಿಸಿದರೂ ಕಲಾವಿದರಿಂದ, ಅದರಲ್ಲೂ ಯಾರ ಚಿತ್ರಗಳನ್ನು ಅವರು ಆರಿಸಲಿಲ್ಲವೋ ಅಂಥವರಿಂದ, ಕ್ಷುಲ್ಲ ಆರೋಪಗಳು ಬಂದವು.

ಭಾರತದ ಬೇರೆ ಬೇರೆ ಕಲಾಕೇಂದ್ರಗಳನ್ನು ಸಂದರ್ಶಿಸಿ ಅವುಗಳ ಸ್ಥಿಗತಿ ತಿಳಿದುಕೊಳ್ಳಲು ಚಿತ್ರಪರಿಶೀಲನಾಯಾತ್ರೆ ಮಾಡಿದಾಗ ಹೈದರಾಬಾದ್ ಮದರಾಸಿನಂಥ ಸ್ಥಳಗಳಲ್ಲಿ ತರುಣಕಲಾವಿದರ ಹುರುಪು ಮೆಚ್ಚುವಂಥದ್ದಾಗಿತ್ತು. ಚೋಳಮಂಡಲದಲ್ಲಿ ಅನೇಕ ಕಲಾವಿದರು ಸ್ವಂತ ಗುಡಿಸಲುಗಳನ್ನು ಕಟ್ಟಿಕೊಂಡು ಬಯಲು ಪ್ರದರ್ಶನವನ್ನೂ, ಸ್ಟುಡಿಯೋಗಳನ್ನೂ, ಸಮುದಾಯ ಪಾಕ ವ್ಯವಸ್ಥೆಯನ್ನೂ ಏರ್ಪಡಿಸಿಕೊಂಡು ಉತ್ಸಾಹದಿಂದ ಕಲಾಸೃಷ್ಟಿಯಲ್ಲಿ ಮಗ್ನರಾಗಿದ್ದರು. ಹೈದರಾಬಾದಿನಲ್ಲಿ ಸಹಪಾಠಿ ರೆಡ್ಡಿಯವರ ಮನೆಯಲ್ಲಿಯೇ ಯುವಕ ಕಲಾವಿದರಿಗೆ ಉಪಯುಕ್ತವಾದ ಒಂದು ಕಾರ್ಯಾಗಾರ ನಿರ್ಮಾಣಗೊಂಡಿತ್ತು.

ದಕ್ಷಿಣಭಾರತದಲ್ಲಿ ತರುಣ ಕಲಾವಿದರ ಅನ್ಯೋನ್ಯತೆ ಮತ್ತು ನೂತನ ಪ್ರಯೋಗಗಳನ್ನು ನೋಡಿ ಹೆಬ್ಬಾರರು ಸಂತೋಷಪಟ್ಟರು. ಕಲ್ಕತ್ತಾ, ಶಾಂತಿನಿಕೇತನ, ಬನಾರಸ್, ಅಲಹಾಬಾದ್, ಲಕ್ನೋ, ದಿಲ್ಲಿ ಎಲ್ಲಾ ಕಡೆಗೂ ಗ್ಯಾಲರಿಗಳನ್ನು, ಕಲಾವಿದರ ಸ್ಟುಡಿಯೋಗಳನ್ನು ಪರೀಕ್ಷಿಸಿ ಚಿತ್ರಗಳನ್ನು ಆಯ್ಕೆಮಾಡಿದರು. ಕೆಲವೊಂದು ಕಲಾವಿದರ ಅಸಹಕಾರ, ಇನ್ನು ಕೆಲವರ ಒಳಸಂಚುಗಳ ನಡುವೆಯೇ ಹೆಬ್ಬಾರರು ಪ್ರಾಮಾಣಿಕವಾಗಿ ದುಡಿದರು ಒಳ್ಳೆಯ ಆಯ್ಕೆ ಮಾಡಿಕೊಟ್ಟರು ಎಂದೆನ್ನಬೇಕು.

೧೯೭೩ರಲ್ಲಿ ಕಲಾಸಂಘಟನೆಯ ಸಂಬಂಧ ಇನ್ನೊಂದು ದುಃಖಕಾರಕ ವಿದ್ಯಮಾನ ಮುಂಬಯಿಯ ಕಲಾಕೇಂದ್ರದಲ್ಲಿ ನಡೆಯಿತು. ೨೦ ವರ್ಷಗಳ ಕಾಲ ಹೆಬ್ಬಾರರು ಕಲಾಕೇಂದ್ರದ ಅಧ್ಯಕ್ಷರು. ಕೆ.ಎಚ್.ಆರಾ ಕಾರ್ಯದರ್ಶಿ, ಆರಾನಿಗೆ ತಾನೇ ಸಮಿತಿಯನ್ನು, ಅಧ್ಯಕ್ಷರನ್ನು ಹೇಳದೆ ತನ್ನದೇ ರಾಜ್ಯಭಾರ ನಡೆಸುವ ಅಭ್ಯಾಸ. ಸಣ್ಣಪುಟ್ಟ ಘಟನೆಗಳನ್ನು ನಿರ್ಲಕ್ಷಿಸಿದ್ದರಿಂದ ೨೦ ವರ್ಷಗಳ ಕಾಲನಿರಾತಂಕವಾಗಿ ಕೇಂದ್ರದ ಕೆಲಸದಲ್ಲಿ ಇಬ್ಬರೂ ಪ್ರವೃತ್ತರಾಗಿರುವುದು ಸಾಧ್ಯವಾದದ್ದು. ೧೯೭೩ರಲ್ಲಿ ಪ್ರದರ್ಶನದ ಆರಂಭದ ದಿನವನ್ನೇ ಸಮಿತಿಯನ್ನು ಕೇಳದೆ ಬದಲಾಯಿಸಿಬಿಟ್ಟಿದ್ದ. ಹಿಂದೆ ಫೋನಿನಲ್ಲಿ ಸಮ್ಮತಿಸಿದ ವಿಷಯಗಳಿಗೂ ತಕರಾರೆಬ್ಬಿಸಿದ. ಇಂಥ ಸರ್ವಾಧಿಕಾರ ಪ್ರವೃತ್ತಿಗೆ ಆಕ್ಷೇಪಿಸಿ ಹೆಬ್ಬಾರರು ತಮ್ಮ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟರು. ಜಗಳ ಮಾಡಿಕೊಂಡಿರುವುದು ಅವರ ಸ್ವಭಾವಕ್ಕೆ ಹೇಳಿಸಿದ್ದಾಗಿರಲಿಲ್ಲ. ಎಷ್ಟುವರ್ಷ ಸಹಿಸಬಹುದೋ ಅಷ್ಟು



ಸಹಿಸಿದ್ದಾಯಿತು. ಆಮೇಲೆ ಬೇರೆ ವೈಯಕ್ತಿಕವಾದ ಯಾವ ಹಗೆಯೂ ಇರಲಿಲ್ಲ. ೧೯೮೭ರಲ್ಲಿ ಆರಾನಿಗೆ ಲಲಿತಕಲಾ ಅಕಾಡೆಮಿಯ ಫೆಲೋಶಿಪ್ ಗೌರವಕ್ಕೆ ಶಿಫಾರಸ್ಸು ಮಾಡಿದ್ದಲ್ಲದೆ, ಮುಂಬಯಿಯಲ್ಲಿ ಆ ಗೌರವಪ್ರಧಾನಕ್ಕಾಗಿ ಒಂದು ಸಮಾರಂಭವನ್ನು ಹೆಬ್ಬಾರರು ಏರ್ಪಡಿಸಿದ್ದಾರೆ.

ರನ್ನ ಅಮೇರಿಕಾದ ಯುಸಿಎಲ್‌ನಲ್ಲಿ ಕೆಮಿಕಲ್ ಇಂಜಿನಿಯರಿಂಗ್ ಅಭ್ಯಾಸ ಮಾಡುತ್ತಿದ್ದಾನೆ. ರೇಖಾ ಅಲ್ಲಿಯೇ ಗಂಡನಸಂಗಡ ಹೋಗಿದ್ದವಳು ಒಂದು ಪ್ರದರ್ಶನ ಕೊಟ್ಟಿದ್ದಾಳೆ. ತನ್ನ ಕೃತಿಗಳನ್ನು ಅಂತಾರಾಷ್ಟ್ರೀಯ ಮಾನದಂಡದಲ್ಲಿಯೂ ತೇರ್ಗಡೆ ಮಾಡಿಸಿದ್ದಾಳೆ. ಸ್ವಾಧ್ಯಾಯದ ಬಲದಿಂದಲೇ ಚಿತ್ರಕಲೆಯಲ್ಲಿ ಪರಿಣತಿಸಾಧಿಸುತ್ತಿರುವ ರೇಖಾ ತನ್ನದೇ ದಾರಿಯಲ್ಲಿ ನಡೆಯುತ್ತಿರುವುದು ತಂದೆ ಹೆಬ್ಬಾರರಿಗೆ ಮಹಾನಂದ. ರಜನಿಯೊಬ್ಬಳೇ ಸದ್ಯ ಸಮಸ್ಯೆ. ಸ್ನಾತಕೋತ್ತರಪದವಿ ಪಡೆದವರಲ್ಲಿ ತಮ್ಮ ಹೆಬ್ಬಾರ ಕುಟುಂಬಕ್ಕೆ ಸರ್ವ ಪ್ರಥಮ ವ್ಯಕ್ತಿ ಎನಿಸಿದ ರಜನಿಯದಾಖಲೆಗೆ ಮನಸ್ಸು ಅರಳುತ್ತದೆ. ಮರುಕ್ಷಣ ಇನ್ನೂ ಆಕೆಗೆ ಉದ್ಯೋಗವಿಲ್ಲ. ಮದುವೆಯ ವಯಸ್ಸಾಗಿದೆ ಎಂಬೆರಡು ಚಿಂತೆಗಳು ಕಾಡುತ್ತಿವೆ. ಸಿತಾರ್ ಕಲಿತು ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಲ್ಲಿ ಒಂದು ಕಚೇರಿಕೊಡುವಷ್ಟು ವಾದನವನ್ನು ಪ್ರಸಿದ್ಧ ಉಸ್ತಾದ್ ಹಲೀಮ್ ಜಾಫರ್ ಖಾನ್ ಅವರಿಂದ ಕಲಿತಿದ್ದ ರಜನಿಯ ಮದುವೆಯ ಚಿಂತನೆ ಬಲವತ್ತರವಾಗಿ ಮುಂದಿನ ಎರಡು ಮೂರು ವರ್ಷ ಹೆಬ್ಬಾರರನ್ನು ಕಾಡುತ್ತಿತ್ತು. ಆಕೆ ಅನುರೂಪನಾದ ವರ ಸಿಗುವವರೆಗೆ ಹುಡುಕಾಟ ನಡೆದೇ ನಡೆಯಿತು.


ಸುದೈವದಿಂದ ಆಕೆಗೂ ೧೯೭೬ರಲ್ಲಿ ಇಂಜಿನಿಯರ್ ಪ್ರಸನ್ನನೊಡನೆ ಮದುವೆ ಆದ ಮೇಲೆ ಹೆಬ್ಬಾರರು ತಂದೆಯ ಕರ್ತವ್ಯ ಮಾಡಿ ಸಂಸಾರದ ಮುಖ್ಯ ಚಿಂತೆಗಳಿಂದ ಮುಕ್ತರಾದರು. ಕೆಲವರ್ಷಗಳ ಮೇಲೆ ರಜನಿ ಕಲಾನಗರದಲ್ಲಿ ಹೆಬ್ಬಾರರ ಸ್ಟುಡಿಯೋದ ಮೇಲೆ ತಮ್ಮ ಸ್ವಂತ ಮನೆ ಕಟ್ಟಿಕೊಂಡು ಈಗ ಅಲ್ಲೇ ವಾಸವಾಗಿದ್ದಾರೆ. ಒಂದು ಗಂಡು, ಹೆಣ್ಣು ಮಕ್ಕಳಿವೆ. ಮೊಮ್ಮಕ್ಕಳ ಆಟಗಳನ್ನು ನೋಡಿಕೊಂಡು ಅವಳ ಸಂಗದಲ್ಲೇ ಇರುವ ಭಾಗ್ಯ ಅಜ್ಜ ಹೆಬ್ಬಾರರದು. ಹೆಬ್ಬಾರರು ಕಲಿತ ಜೆ.ಜೆ.ಸ್ಕೂಲಿನಲ್ಲಿ ಕಲೆಯ ಇತಿಹಾಸದ ವಿಷಯದಲ್ಲಿ ಆಕೆ ಉಪನ್ಯಾಸಕಿ. ಚೆನ್ನಾಗಿ ತನ್ನ ವಿದ್ವತ್ತು ಬೆಳೆಸಿಕೊಂಡಿದ್ದಾಳೆನ್ನುತ್ತಾರೆ ಹೆಬ್ಬಾರರು.

೧೯೭೪ರಲ್ಲಿ ದೆಹಲಿಯ ಅಭಿನವ ಪ್ರಕಟಣಾಲಯದಿಂದ ಹೆಬ್ಬಾರರ ಸಚಿತ್ರ ಆರ್ಟಿಸ್ಟ್ ಕ್ವೆಸ್ಟ್ ಕಲಾವಿದನ ಶೋಧ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿ ಹೆಬ್ಬಾರರು ತಮ್ಮ ಕಲಾವಿಕಸನದ ಆತ್ಮಕಥೆಯನ್ನು ಬಿತ್ತರಿಸಿದ್ದಾರೆ. ಹೆಬ್ಬಾರರ ಕುರಿತ ಪ್ರಕಟಣೆಗಳಲ್ಲಿ ೧೯೮೪ರ ನಲಂದಾ ಪ್ರಕಟಣೆ ಹೆಬ್ಬಾರ ರೇಖಾಚಿತ್ರ, ವರ್ಣಚಿತ್ರದ ಬಳಿಕ ಇದೇ ಹೆಬ್ಬಾರರ ಸಮಗ್ರ ಪರಿಚಯವನ್ನು ವರ್ಣಚಿತ್ರಗಳ ಮೂಲಕ

ಮಾಡಿಕೊಡುವ ಗ್ರಂಥ. ಈ ಎರಡರ ನಡುವೆ ಪ್ರಕಟಗೊಂಡ ಹಾಡುವ ರೇಖೆಗೆ ಮುಲ್ಕ್‌ರಾಜ್ ಆನಂದರ ಮುನ್ನುಡಿಯ ಮುಕುಟವಿದ್ದರೂ ಅದು ಬರೇ ಚಿತ್ರಗಳನ್ನೊಳಗೊಂಡ ಪುಸ್ತಕವಾದ್ದರಿಂದ ಸಮಗ್ರ ಹೆಬ್ಬಾರದರ್ಶನವಾಗಲಿಲ್ಲ. ಕಲಾವಿದ ಕೇಂದ್ರದ ವಾರ್ಷಿಕಸಭೆಯಲ್ಲಿ ಆರಾನ ಸರ್ವಾಧಿಕಾರಿ ಪ್ರವೃತ್ತಿ ಮತ್ತೆ ಹೆಡೆ ಎತ್ತಿತು. ಪ್ರದರ್ಶನಕ್ಕೆ ಮುನ್ನವೇ ಚಾವಡಾನ ಒಂದು ಚಿತ್ರವನ್ನು ಮಾರುವುದರಲ್ಲಿ ಆರಾ ಕೈವಾಡವಿತ್ತು, ಸಮಿತಿಯನ್ನು ಕೇಳದೆ ಮಾಡಿದ ಈ ಕೆಲಸವನ್ನು ಹೆಬ್ಬಾರರು ಕೇಂದ್ರದ ಸಭೆಯಲ್ಲಿ ಆಕ್ಷೇಪಿಸಿದರು. ಆರಾ ಏನೇನೋ ಹೇಳಿ ತಪ್ಪಿಸಿಕೊಳ್ಳಲು ನೋಡಿದ. ಮಾತಿಗೆ ಬಿಸಿಏರಿತು. ಆತನ ಮಾತಿಗೆ ನೊಂದ ಸಮಿತಿಯ ಕೆಲ ಸದಸ್ಯರು ಆತ ಹೆಬ್ಬಾರರ ಹತ್ತಿರ ಕ್ಷಮೆ ಕೇಳಬೇಕೆಂದು ಅಪೇಕ್ಷಿಸಿದರು. ಆತ ಸಮ್ಮತಿಸಲಿಲ್ಲ. ಹೆಬ್ಬಾರರು ರಾಜೀನಾಮೆಯನ್ನು ಕೊಟ್ಟು ಪರಿಸ್ಥಿತಿಯನ್ನು ನಿವಾರಿಸಿದರು. ಆತನ ಸಹವಾಸವನ್ನು ನಿವಾರಿಸಿಕೊಂಡರು.

ಡಿಸೆಂಬರ್ ತಿಂಗಳಲ್ಲಿ ಮಣಿಪುರದ ಇಂಫಾಲಿಗೆ ಕಲಾಪ್ರದರ್ಶನಕ್ಕೂ ಕಲಾವಿದ ಶಿಬಿರ ಸಂಯೋಜನೆಗೆ ದೊರೆತ ಆಮಂತ್ರಣದಂತೆ ಇಂಫಾಲಿಗೆ ತೆರಳಿದರು. ರಾಜಕುಮಾರಿ ಬಿನೋದಿನಿದೇವಿಯ ಅತಿಥಿಯಾಗಿ ಕಲಾವಿದ ಶಿಬಿರದಲ್ಲಿ ಸಂತೋಷದಲ್ಲಿ ಎರಡು ವಾರ ಕಳೆದರು. ಸ್ತ್ರೀಯರೇ ವ್ಯಾಪಾರ ಮಾಡುವ ಬಜಾರಿನ ದೃಶ್ಯಗಳ ಹಲವಾರು ಸ್ಕೆಚ್ ಮಾಡಿಕೊಂಡರು. ಊರಿನ ಹೊರಗಿನ ಮಣಿಪುರದ ಸುಂದರ ನಿಸರ್ಗವನ್ನು ಲೆಕ್ಕಣಿಯಲ್ಲಿ ಸೆರೆ ಹಿಡಿದರು. ಮಣಿಪುರ ಸರಕಾರ ಇಂಫಾಲಿ ನಲ್ಲೊಂದು ಗ್ರಂಥಾಲಯ ಭವನ ನಿರ್ಮಿಸಿ ಅದರೊಳಗೆ ಆರ್ಟ್ ಗ್ಯಾಲರಿಯನ್ನು ಸೇರಿಸಿಕೊಳ್ಳುವ ಯೋಜನೆಯನ್ನು ಮಾಡಿಕೊಂಡಿತ್ತು. ಶಿಬಿರದಲ್ಲಿ ಹೆಬ್ಬಾರರು ತಾನು ರಚಿಸಿದ ಇಂಫಾಲ ಬಜಾರಿನ ಚಿತ್ರವನ್ನೂ, ನಾಲ್ಕು ರೇಖಾಚಿತ್ರಗಳನ್ನೂ ಭಾವಿ ಗ್ಯಾಲರಿಗೆ ದಾನ ಮಾಡಿದರು. ಮಣಿಪುರದ ಶೀತಲವಾತಾವರಣದಲ್ಲಿ ಕಳೆದ ಎರಡು ವಾರ ಅಧಿಕಾರಿಗಳೂ ಶಿಬಿರವಾಸಿಗಳೂ ಹೆಬ್ಬಾರರ ಮೇಲೆ ಅತ್ಯಂತ ಪ್ರೀತಿ ಗೌರವಗಳನ್ನು ತೋರಿಸಿದ್ದರಂತೆ.

೧೯೭೫ರಲ್ಲಿ ಗೋವೆಯ ಕಲಾಂಗುಟೆ ಬೀಚ್ ಸಂದರ್ಶನ. ಕಲಾ ಅಕಾಡೆಮಿಯ ಸಲಹಾಮಂಡಲಿಯ ಸದಸ್ಯರಾಗಿ ಗೋವಾಗೆ ಹೋಗುವುದೆಂದರೆ ಹೆಬ್ಬಾರರಿಗೆ ಬಲು ಇಷ್ಟ. ಅಲ್ಲಿನ ಬೀಚುಗಳಲ್ಲಿ ಮುಂಜಾನೆಯ ವಾಕಿಂಗ್ ಅವರ ಮನಸ್ಸಿಗೆ ಹಿಡಿದ ವಿಷಯ. ಏಪ್ರಿಲ್, ಮೇ, ಜೂನ್‌ನಲ್ಲಿ ವಿದೇಶ ಪರ್ಯಟನೆ, ಪೂರ್ವಜರ್ಮನಿಯಲ್ಲಿ ಫ್ರಿಸ್‌ನ್ಯಾಮ್, ಬಾಡ್‌ವಿಲ್ ಮತ್ತು ಮುನ್ಸ್ಟರ್‌ನಲ್ಲಿ ಪ್ರದರ್ಶನ ಮುಗಿದ ಬಳಿಕ ಸ್ವಿಝರ್‌ಲ್ಯಾಂಡ್, ಪ್ಯಾರಿಸ್ ಮೂಲಕ ಮುಂಬಯಿಗೆ ತೆರಳಿದರು. ಜರ್ಮನಿಯಲ್ಲಿ ಯಶಸ್ವಿ ಪ್ರದರ್ಶನ ನಡೆಸಿಕೊಟ್ಟುದಕ್ಕಾಗಿ ಮುಂಬಯಿಯಲ್ಲಿ ಜರ್ಮನ್ ಕಾನ್ಸುಲೇಟ್ ವತಿಯಿಂದ ಸನ್ಮಾನ ಸಭೆ ಜುಲೈ ೧೫, ೧೯೭೫ರಂದು ಜರಗಿತು.




ಜುಲೈ ತಿಂಗಳಲ್ಲಿ ಕಲಾವಿದನ ಶೋಧದ ಪ್ರತಿಯೊಂದನ್ನು ಧಾರವಾಡದ ಕಲಾಶಾಲೆಯ ಪ್ರಿನ್ಸಿಪಾಲ್ ಹಾಳಭಾವಿಯವರಿಗೆ ಕಳಿಸಿಕೊಟ್ಟರು. ಗುರು ದಂಡಾವತಿ ಮಠ ಅವರ ಆದೇಶವನ್ನು ನೆರವೇರಿಸಿಕೊಟ್ಟಿದ್ದೇನೆ. ಅವರೀಗ ಇಲ್ಲವಾದರೂ ಅವರ ಸಂಸ್ಥೆಯ ಮುಖ್ಯಸ್ಥರಾದ ನಿಮಗೆ ಈ ಪ್ರತಿ ಸಲ್ಲಿಸುತ್ತೇನೆ. ಕೃತಜ್ಞತೆ ಸಲ್ಲಿಸಲು ಇದೊಂದು ಅವಕಾಶ ಎಂದು ನಾನು ತಿಳಿದಿದ್ದೇನೆಂದು ಅವರಿಗೆ ಪತ್ರ ಬರೆದರು.

೧೯೭೬ರಲ್ಲಿ ಮಹಾರಾಷ್ಟ್ರದಲ್ಲಿರುವ ಕಲಾಶಾಲೆಗಳ ಪರಿಶೀಲನೆಗಾಗಿ ನಾಸಿಕ, ಎಲ್ಲೋರ, ಔರಂಗಾಬಾದ್, ಅಜಂತಾ, ಬೀರ್, ತುಳುಜಾಪುರ, ಸೋಲಾಪುರ, ಪಂಡರಾಪುರಗಳಿಗೆ ಡೈರೆಕ್ಟರ್ ಹನುಮಂತನ ಸಂಗಡ ಪ್ರಯಾಣ. ಕೇರಳದಲ್ಲಿ ಒಂದು ಅಭಯಾರಣ್ಯದ ಬುಡದಲ್ಲಿರುವ ಭೂತನಕ್ಕಾಟು ಗ್ರಾಮದಲ್ಲಿ ಕಲಾವಿದ ಶಿಬಿರದಲ್ಲಿ ಕೆಲಸ. ೩೫ ಮಂದಿ ಶಿಬಿರಾರ್ಥಿಗಳು, ರಮಣೀಯ ಸನ್ನಿವೇಶ. ಕೇರಳ ಕಲಾ ಅಕಾಡೆಮಿಯ ದೇವನ್ ಅಸಾಧಾರಣ ಆಡಳಿತಗಾರ, ದಕ್ಷ, ಸಜ್ಜನ, ಕಲಾಪ್ರೇಮಿ ತಿರುವನಂತಪುರದಲ್ಲಿ ಕೇರಳದ ಕಲಾಶಾಲೆಯ ಉದ್ಘಾಟನೆ. ೬೫ನೆಯ ಹುಟ್ಟುಹಬ್ಬದ ದಿನ ದೆಹಲಿಯ ಲಲಿತಕಲಾ ಅಕಾಡೆಮಿ ಮುಂಬಯಿಯಲ್ಲಿ ಫೆಲೋಶಿಪ್ ಪ್ರಧಾನ ಸಮಾರಂಭವನ್ನು ಏರ್ಪಾಟು ಮಾಡಿತು. ಲಲಿತಕಲಾ ಅಧ್ಯಕ್ಷ ರಾಮನಿವಾಸ ಮಿರ್ಧಾ ಮತ್ತು ಮಹಾರಾಷ್ಟ್ರದ ಶಿಕ್ಷಣ ಸಚಿವೆ ಶ್ರೀಮತಿ ಪ್ರಭಾರಾವ್ ಸಮ್ಮುಖದಲ್ಲಿ ಪ್ರಶಸ್ತಿ ಪಡೆದ ಹೆಬ್ಬಾರರು ತಾಮ್ರಪತ್ರವನ್ನು ಇಟ್ಟುಕೊಂಡು ಸಂಗಡಕೊಟ್ಟಿದ್ದ ೧೦ ಸಾವಿರ ರೂಪಾಯಿಗಳನ್ನು ೪೦ ವರ್ಷ ಮೀರದ ಯುವ ಕಲಾವಿದರ ಕೃತಿಗಳಿಗೆ ಬಹುಮಾನ ನೀಡುವ ಪುದುವಟ್ಟಿನ ಸಲುವಾಗಿ ಸ್ಥಳದಲ್ಲೇ ದಾನಮಾಡಿ ಸಭಾಸದಸ್ಯರನ್ನು ಚಕಿತಗೊಳಿಸಿದರು.

ಸ್ವಲ್ಪಕಾಲದಲ್ಲೇ ಮುಂಬಯಿಯಲ್ಲಿ ಹೆಬ್ಬಾರರ ಸನ್ಮಾನ ಸಮಿತಿಯೊಂದು ಮಹರಾಷ್ಟ್ರ ಸರಕಾರದ ಕಲಾನಿರ್ದೇಶಕ ಬಾಬೂ ರಾವ್ ಸದ್ವಲೇಕರ್ ನೇತೃತ್ವದಲ್ಲಿ ರಚಿತವಾಯಿತು. ಜೂನ್ ೧೬ರಂದು ನಿಸ್ಸಿಮ್ ಎಜೆಕಿಲ್, ಅಂಬೇಡ್ಕರ್, ಗೊಂದಳೇಕರ್, ನಾಡ್ಕರ್ಣಿ ಈ ನಾಲ್ವರ ಸಮ್ಮೇಳನವುಳ್ಳ ಒಂದು ವಿಚಾರಗೋಷ್ಠಿ, ಸಾಯಂಕಾಲ ಒಂದು ಸತ್ಕಾರ. ಇಷ್ಟೆಲ್ಲ ಆದ ಮೇಲೆ ಮುಂಬಯಿ ಟಿ.ವಿ. ಕೇಂದ್ರ ಹೆಬ್ಬಾರರ ಕಲಾಜೀವನವನ್ನು ಚಿತ್ರಿಸುವ ಒಂದು ಸಾಕ್ಷ್ಯಚಿತ್ರವನ್ನು ಹಾಡುವ ಗೆರೆ ಎಂಬ ಶೀರ್ಷಿಕೆಯಲ್ಲಿ ತಯಾರಿಸಿತು. ಇದರ ತಯಾರಕ ವಿನಯ ದುಮಾಲೆ, ಸಂಗೀಕೊಟ್ಟವರು ಅಶೋಕ ರಾನಡೆ, ಫಲೋಶಿಪ್ ಪ್ರಧಾನ ಸಮಾರಂಭವೇ ಈ ಚಿತ್ರದ ಕೊನೇ ದೃಶ್ಯವಾಗಿದೆ.

ಮೈಸೂರು ವಿಶ್ವವಿದ್ಯಾಲಯ ಜುಲೈ ೨೭ರ ಘಟಿಕೋತ್ಸವದಲ್ಲಿ ಹೆಬ್ಬಾರರಿಗೆ ಗೌರವ ಡಾಕ್ಟರೇಟ್ ನೀಡಿತು. ಜತೆಗೆ ಡಾಕ್ಟರೇಟ್ ಪಡೆದವರು ಆರ್.ಕೆ.ನಾರಾಯಣ, ಆದ್ಯ ರಂಗಾಚಾರ್, ಎಂ.ಎಲ್.ವಸಂತಕುಮಾರಿ, ದೊರೆಸ್ವಾಮಿ ಅಯ್ಯಂಗಾರ್, ವಿಜ್ಞಾನಿ ಯು.ಆರ್.ರಾವ್ ಕಾಲೇಜಿನ ಮೆಟ್ಟಲು ಹತ್ತುವ ಭಾಗ್ಯವಿಲ್ಲದ ತನ್ನನ್ನು ಕರ್ನಾಟಕದ ಒಂದು ವಿಶ್ವವಿದ್ಯಾನಿಲಯ ಕರೆದು ಗೌರವಿಸಿದ್ದನ್ನು




ಹೆಬ್ಬಾರರು ಬಹುಪರಿಯಾಗಿ ನೆನಪಿಸಿಕೊಳ್ಳುತ್ತಾರೆ. ಈ ರೀತಿ ಪದೇ ಪದೇ ಕರುಣೆ ತೋರಿಸಿದ ಬದುಕಿನ ಮಹಾಚೇತನಕ್ಕೆ ವಂದಿಸುತ್ತಾರೆ. ಮೈಸೂರು ಬೆಂಗಳೂರಿನಲ್ಲಿ ತರುವಾಯ ಸನ್ಮಾನಗಳ ಸುರಿಮಳೆ, ಚಾಮರಾಜಪೇಟೆ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಕೆನ್‌ಸ್ಕೂಲ್, ಚಿತ್ರಕಲಾ ಪರಿಷತ್ತು ಇ.ಇ.ಮುಂಬಯಿಗೆ ಮರಳಿದ ಮೇಲೆ ಗೋಕುಲದಲ್ಲಿ ಅಕಾಡೆಮಿ ಪ್ರಶಸ್ತಿ ಮತ್ತು ವಾರ್ಸಿಟಿ ಡಾಕ್ಟರೇಟ್ ಹೀಗೆ ಎರಡೆರಡು ಪ್ರಶಸ್ತಿಗಳನ್ನು ಗೆದ್ದುಕೊಂಡ ನಮ್ಮ ಕಲಾವಿದ ಹೆಬ್ಬಾರರಿಗೆ ಕನ್ನಡಿಗರಿಂದ ಅದರ ಪೂರ್ವ ಸತ್ಕಾರ ಸಭೆ.

ಇಂಥ ಎಲ್ಲಾ ಸನ್ಮಾನಗಳಲ್ಲಿಯೂ ಹೆಬ್ಬಾರರಿಗೆ ಇವರೆಲ್ಲಾ ಏತಕ್ಕಾಗಿ ಸನ್ಮಾನ ಮಾಡುತ್ತಿದ್ದಾರೆ ನನ್ನ ಹೆಸರಿಗೋ ಪ್ರಸಿದ್ಧಿಗೋ ನನ್ನ ಕೃತಿಗಳಲ್ಲಿ ಏನನ್ನಾದರೂ ಇವರು ನೋಡಿದ್ದಾರೋ ನೋಡುವ ಆಸೆ ಇವರಿಗಿದ್ದಿತೊ ಅಪರಾಧ ನನ್ನದೇ ಇರಬೇಕು. ಇವರನ್ನು ನಾನು ನನ್ನ ಪ್ರದರ್ಶನಗಳಿಗೆ ಕರೆಯಬೇಕಾಗಿತ್ತೋ ಏನೋ. ಜನರು ನಮ್ಮ ಹತ್ತಿರ ಬರುವುದಿಲ್ಲವೆಂದು ತೀರ್ಪುಕೊಡುವ ಮುನ್ನ ನಾವು ಅವರಿಗೆ ಬರಲು ಏನು ಪ್ರೇರಣೆ ಒದಗಿಸಿದ್ದೇವೆ ಎನ್ನುವುದನ್ನೂ ಗಮನಿಸಬೇಡವೇ ಎಂದು ತಮ್ಮ ಪ್ರಶ್ನೆಗೆ ತಾವೇ ಉತ್ತರಿಸಿ ತಮ್ಮನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಕೊಳ್ಳುತ್ತಾರೆ.

ಮೌಲಾನಾ ಅಬುಲ್ ಕಲಮ್ ಆಜಾದ್ ಕೇಂದ್ರದಲ್ಲಿ ಶಿಕ್ಷಣಸಚಿವರಾಗಿದ್ದಾಗ ಅವರಿಗೊಬ್ಬ ಶಿಕ್ಷಣ ಇಲಾಖೆಯ ಸಜ್ಜನಮನುಷ್ಯ ಆಪ್ತಕಾರ್ಯದರ್ಶಿಯಾಗಿದ್ದ. ಆಶ್‌ಫಾಕ್ ಹುಸೇನ್ ಎಂಬ ಹೆಸರಿನ ಈ ಅಧಿಕಾರಿ ಹೆಬ್ಬಾರರ ಅಚ್ಚುಮೆಚ್ಚಿನ ಗೆಳೆಯನಾದ. ಈತನ ಸಜ್ಜನಿಕೆ, ಧರ್ಮಪರಾಯಣಬುದ್ಧಿ ದಿನಕ್ಕೆ ನಾಲ್ಕು ಸಲ ನಮಾಜ್ ಮಾಡುತ್ತಿದ್ದ ಅಲ್ಲದೆ ಆಡಳಿತ ಶಿಸ್ತುಗಳನ್ನು ಮನಸಾರೆ ಕೊಂಡಾಡುವ ಹೆಬ್ಬಾರರಿಗೆ ಆತ ಪಾಕಿಸ್ತಾನಕ್ಕೆ ಹೋಗಿರುವ ತನ್ನ ತಾಯಿ ಸಲುವಾಗಿ ಭಾರತವನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿದ್ದು ಒಂದು ಶೋಚನೀಯ ಪ್ರಸಂಗವೆಂದೆನಿಸಿತು. ಸಂಸಾರದಲ್ಲಿ ಅಷ್ಟು ಸೌಖ್ಯದಲ್ಲಿರದ ಆಶ್‌ಫಾಕ್ ಹುಸೇನ್‌ಗೆ ಕಲೆಯೇ ಮನಃಶಾಂತಿ ತರುತ್ತಿತ್ತೋ ಏನೋ ರೇಖಾಳ ಚಿತ್ರಕಲಾಶಕ್ತಿಯನ್ನು ಎಳವೆಯಲ್ಲಿ ಗುರುತಿಸಿ ಇವಳಲ್ಲಿ ಸಹಜಪ್ರಭೆ ಇರುವುದರಿಂದ ಯಾವ ಕಲಾಶಾಲೆಗೂ ಇವಳನ್ನು ಕಳಿಸಬೇಡಿರೆಂದು ಉಪದೇಶ ಮಾಡಿದ ಆಶ್‌ಫಾಕ್ ಹುಸೇನ್ ಭಾರತದಿಂದ ನಿರ್ಗಮಿಸುವ ಹೊತ್ತಿಗೆ ರೇಖಾ ತಕ್ಕಷ್ಟು ಬೆಳೆದ ಕಲಾವಿದೆಯಾಗಿದ್ದಳು. ಹೊರಡುವ ಗಳಿಗೆಯಲ್ಲಿ ಆತ ರೇಖಾಳ ಚಿತ್ರಗಳನ್ನು ನೋಡಿ ಸಂತೋಷಪಟ್ಟು ಅವುಗಳಲ್ಲಿ ಒಂದನ್ನು ಆರಿಸಿ ಈ ಚಿತ್ರದಲ್ಲಿರುವ ಕಲೆಗೆ ಅದರ ಕೆಳಗಡೆ ಕುರಾನಿನ ಎರಡು ವಾಕ್ಯ ಬರೆಯುತ್ತೇನೆ ಆಗ ಇದು ಪವಿತ್ರ ಕಲೆಯಾಗುತ್ತದೆ. ನನಗಿದು ಬರೀ ಚಿತ್ರವಾಗಿರುವುದಿಲ್ಲ ಎಂದು ತೀರ ಆತ್ಮೀಯವಾಗಿ ನುಡಿದನಂತೆ.

ಮೇ ೧೨ಕ್ಕೆ ಬಹಳ ಕಾಲದಿಂದ ಹೆಬ್ಬಾರರು ವ್ಯಥೆಪಡುತ್ತಿದ್ದ ಸಮಸ್ಯೆಯೊಂದು ಪರಿಹಾರವಾಯಿತು.



ಅದೇ ರಜನಿಯ ಮದುವೆ. ಹರಕೆ ಹೇಳಿಕೊಳ್ಳದಿದ್ದರೂ ಹೆಬ್ಬಾರರು ಮದುವೆ ಮುಗಿದ ೧೫ ದಿನಗಳಲ್ಲಿ ದಿಲ್ಲಿಯಲ್ಲಿ ಕಲೆಯ ಪರೀಕ್ಷಾರ್ಥ ಹೋದ ಸಂದರ್ಭದಲ್ಲಿ ಹರಿದ್ವಾರದ ಪ್ರವಾಸ ಕೈಗೊಂಡರು. ಎಲ್ಲಾ ಭಾವುಕರಂತೆ ಗಂಗಾಸ್ನಾನ ಮಾಡಿದರು. ಅದರಲ್ಲೇನೂ ವಿಶೇಷ ಕಾಣಿಸಲಿಲ್ಲ. ಆದರೆ ಅದ್ಭುತ ಕಂಡದ್ದು ಅಲ್ಲಿ ನೆರೆದ ಲಕ್ಷಾಂತರ ಹಿಂದೂ ಜನರ ನಂಬಿಕೆ ಸಾವಿರಾರು ಜನ ನಿರ್ಜಲ ಏಕಾದಶಿಯ ವ್ರತ ಆಚರಿಸಿ ತಮ್ಮ ಪರಂಪರಾಗತ ಶ್ರದ್ಧೆಯಲ್ಲಿ ಗಂಗಾಸ್ನಾನ ಮಾಡುವ ದೃಶ್ಯ ಹೆಬ್ಬಾರರ ಅಂತಃಕರಣವನ್ನು ಕದಡಿತು. ಹರಿದ್ವಾರದ ಈ ಸನ್ನಿವೇಶ ಮುಂಬಯಿಗೆ ಮರಳಿದ ಮೇಲೆ ಶ್ರದ್ಧೆ ಎಂಬ ಶೀರ್ಷಿಕೆ ಪಡೆದ ಬೃಹತ್ ಗಾತ್ರದ ವರ್ಣಚಿತ್ರವಾಗಿ ಮೂಡಿ ಬಂದಿತು. ಹಸುರು ಕಂದು ವರ್ಣಗಳ ಪ್ರಾಧಾನ್ಯವುಳ್ಳ ಈ ಚಿತ್ರದಲ್ಲಿ ಹರಿದ್ವಾರದ ಹರಮಂದಿರವನ್ನು ಭೌಮವಾಗಿ ನಿಲ್ಲಿಸಿದ್ದಾರೆ. ಅದರ ಸನಿಹದಲ್ಲಿ ಸುಳಿಯುವ ಗಂಗಾನದಿಯ ಪ್ರವಾಹದಲ್ಲಿ ಹಣತೆಗಳನ್ನು ಶ್ರದ್ಧೆಯ ಉಜ್ವಲಬಿಂಬಗಳನ್ನು ತೇಲಗೊಡುವ ದೃಶ್ಯವಿದೆ ಇದು ಹೆಬ್ಬಾರರ ಒಂದು ಆಚಾರ್ಯಕೃತಿಯಾಗಿದೆ


ಮುಂಬಯಿ ಟೈಮ್ಸ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದ ಆಸ್ಟ್ರಿಯನ್ ಪ್ರಜೆ ವಾಲ್ಟರ್ ಲ್ಯಾಂಕ್ ಹ್ಯಾಮರ್ ಲಂಡನಿನಲ್ಲಿ ತೀರಿಕೊಂಡರು. ಅವರು ೨೦ ವರ್ಷ ಕಾಲ ಮುಂಬಯಿಯ ಕಲಾಸನ್ನಿವೇಶದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಸ್ವತಃ ಕಲಾವಿದರಾಗಿದ್ದರು ಅಲ್ಲದೆ ಅವರಂತೆ ಚೂರಿಯಿಂದ ಕೆಲಸ ಮಾಡುವ ಕಲಾವಿದ ಬೇರೆ ಇರಲಿಕ್ಕಿಲ್ಲವೆಂದು ಹೆಬ್ಬಾರರು ಹೇಳುತ್ತಾರೆ. ಅವರ ಸ್ವಭಾವದಲ್ಲಿರುವ ದೊಡ್ಡ ಗುಣವೆಂದರೆ ತರುಣ ಕಲಾವಿದರ ಮೇಲಿನ ಪ್ರೀತಿ ಅವರಿಗೆ ಕೂಡುತ್ತಿದ್ದ ಪ್ರೋತ್ಸಾಹ. ಚಿತ್ರಗಳ ನೇಯ್ಗೆಯಲ್ಲಿ ಹಾಸುಹೊಕ್ಕಿನ ಭಾವ ಸ್ಫುರಿಸಬೇಕಾದರೆ ಕುಂಚಕ್ಕಿಂತ ಚೂರಿಯಲ್ಲಿಮೆತ್ತುವ ತಂತ್ರ ಒಳ್ಳೆಯದೆಂದು ಲ್ಯಾಂಕ್ ಹ್ಯಾಮರ್ ಹೆಬ್ಬಾರರಿಗೆ ಪಾಠ ಕಲಿಸಿದರಂತೆ. ಅವರಿಗಾಗಿ ಮುಂಬಯಿಯಲ್ಲಿ ಒಂದು ಶೋಕಸಭೆ ಏರ್ಪಟ್ಟಾಗ ಹೆಬ್ಬಾರರು ಅದರ ಸಂಘಟನೆಯಲ್ಲಿ ಪಾಲ್ಗೊಂಡರು.

೧೯೭೮ರಲ್ಲಿ ನಾಲ್ಕನೆಯ ಟ್ರಯನಾಲೆ ದೆಹಲಿಯಲ್ಲಿ ಸಮಾವೇಶಗೊಂಡ ಸಂದರ್ಭದಲ್ಲಿ ಹೆಬ್ಬಾರರ ಜತೆಗೆ ರೇಖಾಳ ಎರಡು ಚಿತ್ರಗಳು ಆಯ್ಕೆಯಾಗಿದ್ದವು. ರೇಖಾಳ ಚಿತ್ರಕ್ಕೆ ಹೆಚ್ಚು ಆಕರ್ಷಕ ಸ್ಥಳದಲ್ಲಿ ಅವಕಾಶ ಮಾಡಿಕೊಟ್ಟಿದ್ದನ್ನು ಕಂಡು ಹೆಬ್ಬಾರರಿಗೆ ಹೆಚ್ಚು ಸಂತೋಷವಾಯಿತು. ಯುವಜನಾಂಗ ನಮಗಿಂತ ಮುಂದಿರುವುದು ಒಳ್ಳೆಯದ್ದಾಗಿದೆ. ವರ್ಷದ ಮೊದಲಲ್ಲಿ ರನ್ನ ಅಮೇರಿಕದಲ್ಲಿ ೬ ವರ್ಷಗಳ ಕಾಲ ಅಧ್ಯಯನವನ್ನೂ ಉದ್ಯೋಗಪರ್ವವನ್ನೂ ಪೂರ್ತಿಗೊಳಿಸಿ ಭಾರತವಾಸಿಗಾಯುವ ಉದ್ದೇಶದಿಂದ ಮರಳಿ ಬಂದ. ಅದೇ ವರ್ಷ ಬೆಂಗಳೂರಿನ ಅರಣ್ಯ ಇಲಾಖೆಯ ಶ್ರೀ ಶ್ಯಾಮಸುಂದರರ ಮಗಳು ಶಶಿಯೊಡನೆ ಆತನ ವಿವಾಹವಾಯಿತು. ಈಗ ಬೆಂಗಳೂರಿನ ಎವ್ಕೊ ಬ್ಯಾಟರಿಯಲ್ಲಿ ಸಂಶೋಧನ

ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದಾನೆ. ಎರಡು ಮಕ್ಕಳಾಗಿವೆ.

ನಾಲ್ಕನೆಯ ಟ್ರಯನಾಲೆಯ ಆಯ್ಕೆ ಸಮಿತಿಗೂ ಲಲಿತಕಲಾ ಅಕಾಡೆಮಿಗೂ ಏನೋ ಜಿದ್ದು ಪ್ರಾರಂಭವಾಗಿದೆ. ಭಾರತೀಯ ವಿಭಾಗದ ಆಯ್ಕೆ ವಿಷಯದಲ್ಲಿ, ತಾವು ಮಾಡದ ಆಯ್ಕೆಯನ್ನು ಬದಿಗೊತ್ತಿ ಬೇರೆ ಸಮಿತಿ ನೇಮಕಮಾಡಿ ಚಿತ್ರಗಳನ್ನು ಆರಿಸುತ್ತಿದ್ದಾರೆಂದು ಆಯ್ಕೆ ಸಮಿತಿಯವರೂ, ತಮ್ಮ ಮಾರ್ಗದರ್ಶಕ ಸೂತ್ರಗಳನ್ನು ಪರಿಪಾಲಿಸದೆ ಮನಬಂದಂತೆ ಆಯ್ಕೆಮಾಡಿದ್ದಾರೆಂದು ಲಲಿತಕಲಾ ಅಕಾಡೆಮಿಯೂ ಪರಸ್ಪರ ದೂಷಣೆಗೆ ತೊಡಗಿದ್ದರು. ಖೇದಜನಕ ಪರಿಸ್ಥಿತಿಯಾದರೂ ಈ ಸಂದರ್ಭದಲ್ಲಿ ತನ್ನ ಜವಾಬ್ದಾರಿ ಇಲ್ಲ. ಏಕೆಂದರೆ ತನಗೂ ಅಕಾಡೆಮಿಗೂ ಸಂಬಂಧವಿಲ್ಲ ಎಂದು ಹೆಬ್ಬಾರರು ಸಮಾಧಾನ ಮಾಡಿಕೊಂಡರು. ಆದ್ದರಿಂದಲೇ ಟ್ರಯನಾಲೆಗೆ ತಮ್ಮ ಚಿತ್ರಕ್ಕೆ ಬೇಡಿಕೆ ಬಂದಾಗ ಸಂತೋಷದಿಂದ ಕಳಿಸಿಕೊಟ್ಟರು.

ಪೂರ್ವಜರ್ಮನಿಯ ಡ್ರೆಸ್ಡೆನ್‌ನಲ್ಲಿ ನಾಲ್ಕು ದಿನಗಳ ಕಲಾಸಮ್ಮೇಳನಕ್ಕೆ ಹೆಬ್ಬಾರರನ್ನು ಆಮಂತ್ರಿಸಿದ್ದರು. ಡ್ರೆಸ್ಡ್‌ನ ಮುಟ್ಟಿದೊಡನೆ ಅಲ್ಲಿನ ಕಲಾಶಾಲೆಯನ್ನು ಸಂದರ್ಶಿಸಿ ಅಲ್ಲಿನ ಶಿಕ್ಷಣದ ಮಟ್ಟ ಅಕಾಡೆಮಿಕ್ ದೃಷ್ಟಿಯಿಂದ ಉತ್ತಮವಾಗಿದ್ದುದನ್ನೂ, ವಿದ್ಯಾರ್ಥಿಗಳಿಗೆ ಸರಕಾರದ ಸಕಲ ಪ್ರೋತ್ಸಾಹ ಸಿಗುತ್ತಿದ್ದುದನ್ನೂ ಗಮನಿಸಿದರು. ಕಲೆಯ ಜತೆಗೆ ಸಾಕಷ್ಟು ಸಮಾಜವಿಜ್ಞಾನದ ಪಾಠಗಳೂ ನಡೆಯುತ್ತಿದ್ದವು. ಆದರೆ ಎಲ್ಲಾ ವಿದ್ಯಾರ್ಥಿಗಳು, ತಾವು ಕಲಿತ ಸಿದ್ಧಾಂತವನ್ನು ಪ್ರತ್ಯಕ್ಷಗೊಳಿಸುವ ಪ್ರಯೋಗಾಲಯ ಕಾಣಿಸಲಿಲ್ಲ. ಪೂರ್ವಜರ್ಮನಿ ಸಂವಾದಿ ಸದಸ್ಯರಾಗಿ ಹೆಬ್ಬಾರರನ್ನು ಆ ದೇಶ ಆರಿಸಿಕೊಂಡಿತ್ತಷ್ಟೆ. ಇಂಥ ೯ ಬೇರೆ ದೇಶಗಳ ಸದಸ್ಯರಲ್ಲದ ಇತರ ನೂರು ಕಲಾವಿದ ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು. ಪ್ರದರ್ಶನ ವಿಭಾಗದಲ್ಲಿ ಒಂದು ಸಾವಿರ ಚಿತ್ರಗಳನ್ನು ೩೦೦೦ದಲ್ಲಿ ಆಯ್ಕೆ ಮಾಡಿ ತೂಗು ಹಾಕಿದ್ದರು. ಸಂಖ್ಯಾಬಾಹುಲದಿಂದಾಗಿ ಒಳ್ಳೆಯ ಚಿತ್ರಗಳು ಎದ್ದು ತೋರುತ್ತಿರಲಿಲ್ಲವಾದ್ದರಿಂದ ಅಷ್ಟು ಆಕರ್ಷಕವಾಗಿರಲಿಲ್ಲವೆಂದು ಹೆಬ್ಬಾರರ ಅಭಿಪ್ರಾಯ. ಸಮ್ಮೇಳನದ ಮುಖ್ಯ ವಿಷಯ ಸಮಾಜದಲ್ಲಿ ಕಲಾವಿದನ ಸ್ಥಾನಮಾನ. ರಾಜಕೀಯದ ಮೂರಿ ಬಡಿಯುವ ಈ ಸಮ್ಮೇಳನದ ಬದಲು ಹೆಬ್ಬಾರರು ಡ್ರೆಸ್ಡೆನ್ ಸಿಂಫನಿ ಸಂಗೀತ ಕಛೇರಿಗೆ ಹೋದರು. ಮರುದಿನದ ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ಪರಮಬಶಸ್ನಾದ ವಿರುದ್ಧ ಭಾಷಣ ಮಾಡಿದರು. ಅಧ್ಯಕ್ಷರ ಉಪನ್ಯಾಸವನ್ನು ಅನುಮೋದಿಸಿ ಮಾತನಾಡಿದರು. ಅಮೇರಿಕನ್ ಕಲಾವಿದ ಚಾರ್ಲಸ್ ಮೌಂಟ್ ಕಲಾವಿದ ಸಮಸ್ಯೆಯ ರಾಜಕೀಯವನ್ನು ಬಿಟ್ಟು ಹೊರಗೆ ಬರುತ್ತಿರಲಿಲ್ಲ. ಒಟ್ಟಿನಲ್ಲಿ ಪ್ರಚಲಿತ ಅಂತಾರಾಷ್ಟ್ರೀಯ ರಾಜಕೀಯವಿವಾದದ ಒಂದು ಭಾಗವಾಗಿ ಸಮ್ಮೆಳನ ಏರ್ಪಟ್ಟಂತೆ ಅನಿಸಿತು. ಅಸ್ಸೀರಿಯಾ ಬಾಬಿಲೋನಿಯಾ ಕಲೆಗಾಗಿ ಮೀಸಲಿಟ್ಟದ್ದು




ಒಂದು, ಮಧ್ಯಪೂರ್ವದ ಇಸ್ಲಾಮಿಕ್ ಕಲೆಗಳಿಗೆ ಮೀಸಲಿಟ್ಟ ಇನ್ನೊಂದು ಮ್ಯೂಸಿಯಂನ್ನು ನೋಡಿದರು.

ಶಿವರಾಮ ಕಾರಂತರು ೧೯೭೮ರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ತಮ್ಮ ಕಾದಂಬರಿ ಮೂಕಜ್ಜಿಯ ಕನಸುಗಳಿಗಾಗಿ ಗೆದ್ದುಕೊಂಡರಷ್ಟೆ. ಕಾರಂತರ ಸಾಹಿತ್ಯದ ಸೃಷ್ಟಿಶೀಲತೆಯನ್ನು ಹಲಗಾಲದಿಂದ ಬಲ್ಲ ಹೆಬ್ಬಾರರಿಗೆ ಇದು ಸಂತೋಷವನ್ನು ತಂದಂತೆ ಅದೇ ವರ್ಷ ಪ್ರಕಟಗೊಂಡ ಅವರ ಕಲಾಪ್ರಪಂಚವೂ ಇಷ್ಟವಾಯಿತು. ಯಾವ ಭಾರತೀಯ ಸಾಹಿತ್ಯದಲ್ಲೂ ಇಂಥದೊಂದು ಕಲೆಯನ್ನು ಪರಿಚಯಿಸುವ ಸಮಗ್ರ ಗ್ರಂಥ ಇರುವುದಿಲ್ಲ. ಇದನ್ನು ತಮ್ಮ ಭಾಷೆಯಲ್ಲೇ ಓದಬಲ್ಲ ಕನ್ನಡಿಗರು ಭಾಗ್ಯವಂತರು ಎಂದು ದಿನಚರಿಯಲ್ಲಿ ಬರೆದಿದ್ದಾರೆ. ಟೀವಿಗೂ, ಆಕಾಶವಾಣಿಗೂ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾರಂತರ ಸಂದರ್ಶನವನ್ನು ವ್ಯಾಸರಾಯ ಬಲ್ಲಾಳರ ಸಹಯೋಗದಲ್ಲಿ ನಡೆಸಿಕೊಟ್ಟಿದ್ದು ಹೆಬ್ಬಾರರು. ನವಂಬರನಲ್ಲಿ ಅಹ್ಮದಾಬಾದಿಯಲ್ಲಿ ನಡೆದ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಉದ್ಘಾಟಿಸಿದರು.

೧೯೭೯ರಲ್ಲಿ ಎಡೆಬಿಡದ ಕಾರ್ಯಕ್ರಮಗಳು, ಸಂಚಾರಗಳು, ಸ್ಟುಡಿಯೋ ಸಂದರ್ಶನ ಮಾಡುವ ಸಹೃದಯರೊಡನೆ ಸಲ್ಲಾಪ, ಹಳೇಮಿತ್ರರ ಭೇಟಿ, ಅಧ್ಯಕ್ಷತೆ ವಹಿಸಿಕೊಂಡ ಕರ್ನಾಟಕ ರಾಜ್ಯದ ಲಲಿತಕಲಾ ಅಕಾಡೆಮಿಯ ಕೆಲಸಗಳು, ಸ್ವಂತ ಕಲಾಕಾಯಕ ೭೦ನೆಯ ಹರೆಯಕ್ಕೆ ಧಾವಿಸುತ್ತಿದ್ದ ಹೆಬ್ಬಾರರ ಜೀವನಕ್ರಮ ಹೆಚ್ಚು ಹೆಚ್ಚು ನಿಬಿಡವಾಗುತ್ತಿತ್ತು. ಆಸೇತು ಹಿಮಾಚಲವೆಂಬಂತೆ ಕಲಾಪ್ರಪಂಚದಲ್ಲಿ ಪ್ರತಿಭಾಸಂಪನ್ನ ಕಲೆಗಾರಿಕೆಗೂ, ನಿರ್ಣಾಯಕನ ನಿಸ್ವಾರ್ಥತೆ ಮತ್ತು ಪ್ರಾಮಾಣಿಕತೆಗೂ, ಸಂಘಟನಾಚಾತುರ್ಯಕ್ಕೂ ಬಹುಶ್ರುತರೆನಿಸಿದ ಹಿರಿಯ ಕಲಾವಿದ ಹೆಬ್ಬಾರರನ್ನು ದೇಶದ ಎಲ್ಲೆಡೆಗೂ ಕರೆಯುತ್ತಿದ್ದರು. ಅವರ ಸಲಹೆ ಸೂಚನೆಗಳಿಗೆ ಎಲ್ಲ ರಾಜ್ಯಗಳಲ್ಲೂ ಮಾನ್ಯತೆ ಇತ್ತು. ಇಂಥ ಕಾಲಘಟ್ಟದಲ್ಲಿ ಅವರ ಕಾರ್ಯಕ್ರಮಗಳ ಒಂದು ತಪಶೀಲನ್ನು ಪರಿಶೀಲಿಸಿದರೆ ಅವರ ಉಪಯುಕ್ತ ಕ್ರಿಯಾತಾತ್ಪರ್ಯಗಳ ಹೊಲಬಾಗುತ್ತದೆ. ೧೯೭೯ನೆಯ ವರ್ಷದಲ್ಲಿ ನಡೆದ ವಿಷಯಗಳು.


ಕರ್ನಾಟಕದ ಲಲಿತಕಲಾ ಅಕಾಡೆಮಿಯ ಆಶ್ರಯದಲ್ಲಿ ಅಖಿಲಭಾರತೀಯ ಕಲಾಪ್ರದರ್ಶನ ಬಿ.ವಿ.ಕೆ.ಶಾಸ್ತ್ರಿ ಮತ್ತು ಎಂ.ಎಸ್.ನಾಗರಾಜ ರಾವ್ ಅವರು ಜತೆಗಾರರಾಗಿ ಪ್ರದರ್ಶನದಲ್ಲಿ ರಾಜ್ಯದ ಗ್ಯಾಲರಿಗೆ ೬೦.೦೦೦ ರೂಪಾಯಿನ ಚಿತ್ರಗಳನ್ನು ಕೊಂಡದ್ದು ಫೆಬ್ರವರಿ ೧೯೭೯ರಲ್ಲಿ ಗೋವೆಯ ಕಲಾಅಕಾಡೆಮಿಯ ಪರೀಕ್ಷಾಸಭೆಗಳ ಕಲಾಂಗುಟೆ ಬೀಚ್ ಹತ್ತಿರದ ಹೊಟೇಲ್ ಕೊಠಡಿಯಿಂದ ತೇಲುವ ಕಡಲಿನ ನಾನಾರೂಪಗಳನ್ನು ಮನಸ್ಸಿನಲ್ಲಿ ಸೆರೆಹಿಡುವುದು, ಸಣ್ಣಗಾತ್ರದ ಚಿತ್ರಗಳನ್ನು ಅಕ್ರಲಿಕ್ ವರ್ಣಗಳ ಬಳಕೆಯಿಂದ ತಯಾರಿಸುವುದು ಇಲ್ಲಿಂದ ಆರಂಭ ಗೋವಾ ಕಲಾ ಅಕಾಡೆಮಿ ನಿರ್ದೇಶಕ ಲಕ್ಷ್ಮಣ ಪೈ ಅವರ ಮನೆಯಿಂದ ಮುಂಬಯಿಗೆ ವಾಪಾಸು ೨೧ರಿಂದ ೩೦ ಏಪ್ರಿಲ್‌ನಲ್ಲಿ ಪಿ.ಟಿ. ರೆಡ್ಡಿಯವರ ೪೦ ವರ್ಷದ ಕಲಾವ್ಯಾಸಾಂಗ ಬಿಂಬಿಸುವ ಪೂರ್ವಾನು ಲೋಕನದ ಚಿತ್ರಗಳ ಆಯ್ಕೆಗಾಗಿ ಹೈದರಾಬಾದ್



ಪ್ರಯಾಣ ೧೬ನೇ ಮೇ, ೧೯೭೯ ಕೇರಳ ಕಲಾಶಾಲೆಯ ಪರಿಶೀಲನೆಗೋಸ್ಕರ ತಿರುವನಂತಪುರಕ್ಕೆ ಪಯಣ ೨೨ ಮೇ, ೧೯೭೯ ಬೆಂಗಳೂರಿನಲ್ಲಿ ಡಾ.ಶೆಟ್ಟರ್ ಮತ್ತು ಲಂಕೇಶ ಭೆಟ್ಟಿ, ಲಂಕೇಶರ ಭೇಟಿ, ಪ್ರತಿಭೆಯ ಪರಿಚವಾದದ್ದು. ಅವರನ್ನು ಮೆಚ್ಚಿಕೊಂಡದ್ದು. ಕನ್ನಡ ವಿದ್ಯಾರ್ಥಿಗಳು ಹೊರರಾಜ್ಯದ, ಅಂದರೆ ಮುಂಬಯಿ, ಬರೋಡಾ, ಶಾಂತಿನಿಕೇತನದಂಥ ದೇಶದ ಉತ್ಕೃಷ್ಟ ಕಲಾಶಾಲೆಗಳಲ್ಲಿ ಅಭ್ಯಾಸ ಮಾಡಲನು ಕೂಲವಾಗುವಂತೆ ಶಿಷ್ಯವೇತನದ ಯೋಜನೆ ಹಾಕಿದ್ದು.

ಜೂನ್ ೬, ೧೯೭೯ರಲ್ಲಿ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ಆಸ್ಟ್ರೇಲಿಯದ ರಿಚರ್ಡ್ ಬ್ರೂಕ್ಸನ ಕುಂಬಾರ ಕಲೆಯ ಪ್ರದರ್ಶನವನ್ನು ತೆರೆದದ್ದು, ಜೂನ್ ೧೩, ೧೯೭೯ರಲ್ಲಿ ಬಂದೋಪಾಧ್ಯಾಯ, ಹಿತೇನ ಚೌಧರಿ ಅವರು ಸ್ಟುಡಿಯೋ ಭೇಟಿ ಮಾಡಿ ಶಾಂತಿ ಮತ್ತು ಕಡಲಿನ ಊಟ ಈ ಎರಡು ಚಿತ್ರಗಳನ್ನು ಕಾದಿರಿಸಿದರು. ಜುಲೈ ೮ ೧೯೭೯ರಲ್ಲಿ ರೆಡ್ಡಿ ಮುಂಬಯಿ ಆಗಮನ, ಜುಲೈ ೧೭, ೧೯೭೯ರಲ್ಲಿ ಶಾಂತಿನಿಕೇತನಕ್ಕೆ ವರ್ಣಚಿತ್ರಕಲೆಯ ಪ್ರಾಧ್ಯಾಪಕರ ಆಯ್ಕೆಗಾಗಿ ಪ್ರಯಾಣ, ೨೮ ಜುಲೈ, ೧೯೭೯ರಲ್ಲಿ ಪುಣೆಯಲ್ಲಿ ಮರಾಠಿ ಭಾಷೆ ಕಲಿಯಲು ಬಂದಿದ್ದ ಅಮೇರಿಕನ್ ವಿದ್ಯಾರ್ಥಿ ಟಾಮ್‌ನಾರ್ದಾಸ್ಟ್ರೋಮ್ ಸ್ಟುಡಿಯೋಕ್ಕೆ ಬಂದು ಕಲಾಸಕ್ತಿ ತೋರಿಸಿದ್ದು, ೧೪ ಆಗಸ್ಟ್ ಬೆಂಗಳೂರಿನಲ್ಲಿ ವಾಸುದೇವ, ಬಿ.ವಿ.ಕೆ., ಅನಿರುದ್ಧ ದೇಸಾಯಿ ಇವರನ್ನು ಕೂಡಿಕೊಂಡು ಶಿಕ್ಷಣ ಸಚಿವ ಶ್ರೀ ಸುಬ್ಬಯ್ಯ ಶೆಟ್ಟರನ್ನು ನೋಡಿ ರಾಜ್ಯದಲ್ಲಿ ಒಂದು ಉತ್ಕೃಷ್ಟ ಕಲಾಶಾಲೆ ಸ್ಥಾಪಿಸಬೇಕೆಂಬ ಸಲಹೆ ನೀಡಿದ್ದು, ೧೭, ಆಗಸ್ಟ್‌ನಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಸ್ಟುಡಿಯೋ ಸಮಿತಿಯ ಸಭೆ, ೯ ಸೆಪ್ಟಂಬರ್‌ನಲ್ಲಿ ಬಿಸಿಲ್ಗುದುರೆ ಚಿತ್ರರಚನೆ, ೧೩ರಿಂದ ೨೮ ಸಪ್ಟೆಂಬರ್‌ನಲ್ಲಿ ಕಲಾಂಗುಟೆ ಮೀನು ಮಾರ್ಕೆಟಿನ ಚಿತ್ರ, ೩೦ ಸೆಪ್ಟಂಬರ್‌ನಲ್ಲಿ ಹೌಸ್ ಆಫ್ ಸೋವಿಯತ್ ಕಲ್ಚರ್‌ನಲ್ಲಿ ಹಂಗೇರಿಯನ್ ಗ್ರಾಫಿಕ್ ಆರ್ಟ್ ಪ್ರದರ್ಶನದ ಉದ್ಘಾಟನೆ, ೧೬ ಅಕ್ಟೋಬರ್‌ರಲ್ಲಿ ಮಕ್ಕಳ ಬುಕ್ ಟ್ರಸ್ಟ್ ಸಂಘಟಿಸಿದ ಸೆಮಿನಾರ್‌ನಲ್ಲಿ ಭಾಗವಹಿಸಲು ದೆಹಲಿಗೆ ಪ್ರಯಾಣ ಮಕ್ಕಳ ಚಿತ್ರಗಳು ಹೇಗಿರಬೇಕು ಎಂಬ ಬಗ್ಗೆ ಭಾಷಣ. ನವೆಂಬರ್ ೧೫ರಲ್ಲಿ ರಶಿಯನ್ ಲೇಖಕಿ ಜರೀನ ಇನ್ನೊಬ್ಬ ಆರ್ಮೆನಿಯನ್ ಲೇಖಕನ ಸಂಗಡ ಸ್ಟುಡಿಯೋಕ್ಕೆ ಭೇಟಿ ನೀಡಿ ತಾನು ಹೆಬ್ಬಾರರ ಬಗ್ಗೆ ಬರೆಯಲಿರುವ ಲೇಖನಕ್ಕೆ ಸಾಮಗ್ರಿ ಸಂಗ್ರಹಿಸಿದ್ದು, ನವೆಂಬರ್ ೨೦ರಲ್ಲಿ ಗ್ಯಾಲರಿಯ ಸ್ಥಾಪನೆಯ ಬಗ್ಗೆ ಆಸಕ್ತಿಯುಳ್ಳ ಪಾಠಕ್ ಬಂಧುಗಳು ಹೆಬ್ಬಾರರ ಸಲಹೆ ಕೇಳಲು ಸ್ಟುಡಿಯೋಕ್ಕೆ ಬಂದರು.


ನವೆಂಬರ್ ೨೫ ೧೯೮೦ ಜನವರಿ ೧ ರಿಂದ ವಾರಪೂರ್ತಿ ನಡೆದ ಮುಂಬಯಿ ಪ್ರದರ್ಶನ. ಅವರ ಪ್ರದರ್ಶನಸರಣಿಯಲ್ಲಿ ಅತ್ಯಂತ ಜಯಪ್ರದವೆನಿಸಿತು. ಸಹೃದಯರ ಸಂಖ್ಯೆ ಮಾತ್ರವೇ ಅಲ್ಲ ಗ್ರಾಹಕ ದೃಷ್ಟಿಯಿಂದಲೂ ಈ ಪ್ರದರ್ಶನ ಅಭೂತಪೂರ್ವ ಯಶಸ್ಸನ್ನು ಗಳಿಸಿತು. ಯಾವತ್ತಿನಿಂದಲೂ



ತಮ್ಮ ಮೇಲೆ ಅಭಿಮಾನ ತೋರಿದ ರಸಿಕರಲ್ಲದೆ ಬೇರೆ ಅನೇಕ ಹೊಸ ಗ್ರಾಹಕರನ್ನು ದಿನಚರಿಯ ಯಾದಿಯಲ್ಲಿ ನಮೂದಿಸಿದ್ದಾರೆ. ಮುಂಬಯಿಯಲ್ಲಿ ನೂತನವಾಗಿ ತಲೆ ಎತ್ತಿದ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಲ್ ಡೈನಾಮಿಸಮ್ ಸಂಘದ ಆಶ್ರಯದ ಕಲೆಯ ಅಂತಃಸ್ಫೂರ್ತಿಯ ಬಗೆಗೆ ಹೆಬ್ಬಾರರದೇ ಪ್ರಥಮ ಭಾಷಣವಾಗಿತ್ತು. ಅವರ ಬಳಿಕ ಶ್ರೀಮತಿ ರೋಮಿಲಾ ಥಪಾರ್ ಇತಿಹಾಸ ವಿಷಯದಲ್ಲಿ ವಿದ್ವತ್ ಉಪನ್ಯಾಸ ನೀಡಿದಳು ಸಹೃದಯ ಅಭಿಮಾನಿ ವಿಮರ್ಶಕ ಮಿತ್ರ ಕಾರ್ಲ್ ಖಂಡೆಲ್ವಾಲರಿಗೆ ಲಲಿತಕಲಾ ಅಕಾಡೆಮಿಯ ಫೆಲೋಶಿಪ್ ದೊರೆತ ಸಂತೋಷ ಸಮಾರಂಭದಲ್ಲಿಯೂ, ಜಹಾಂಗೀರ ಗೆಲರಿಯಲ್ಲಿ ನಡೆದ ಕಲಾಸ್ವಾದನೆಯ ಕೋರ್ಸಿನಲ್ಲೂ ಹೆಬ್ಬಾರರು ಭಾಷಣ ಮಾಡಿದರು. ಬೆಂಗಳೂರಿನಲ್ಲಿ ರಾಜ್ಯದ ಲಲಿತಕಲಾ ಅಕಾಡೆಮಿ ಏರ್ಪಡಿಸಿದ್ದ ಕಲಾಶಿಬಿರದಲ್ಲಿ ೧೫ ದಿನಗಳನ್ನು ಕಲಾವಿದರ ಸಹವಾಸದಲ್ಲಿ ಕಳೆದದ್ದು ೮೦ರ ಒಂದು ಸ್ಮರಣೀಯ ಘಟನೆಯಾಯಿತು.

ಜೂನ್ ೨೨ರಂದು ಚಂಬೂರಿನ ಕನ್ನಡ ಸಂಘ ಹೆಬ್ಬಾರರಿಗೆ ಇತರ ಐವರು ಪ್ರತಿಭಾವಂತ ಕನ್ನಡಿಗರಿಗೆ ಸನ್ಮಾನ ಮಾಡಿತು. ಅಕ್ಟೋಬರ ತಿಂಗಳಲ್ಲಿ ಹೆಬ್ಬಾರರ ಅರ್ಧಶತಮಾನದ ಕಲಾಕಾರ್ಯಗಳಿಗೆ ಕಲಶವಿಟ್ಟಂತೆ, ಭಾರತ ಸರಕಾರ ಅವರನ್ನು ಕೇಂದ್ರ ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ನೇಮಿಸಿತು. ವರ್ಷದ ಅಂತ್ಯದಲ್ಲಿ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ನಡೆದ ಪೂರ್ವಾವಲೋಕನ ಪ್ರದರ್ಶನ ದಿಲ್ಲಿಯ ಪೂರ್ವಾವಲೋಕನಕ್ಕಿಂತ ಹೆಚ್ಚು ಸುಪುಷ್ಟವೂ. ಸಂಪನ್ನವೂ, ಅರ್ಥಪೂರ್ಣವೂ ಆಗಿದ್ದು, ದೆಹಲಿಯ ಲಲಿತಕಲಾ ಸಂಸ್ಥೆಗೆ ಅವರನ್ನು ಅಧ್ಯಕ್ಷರಾಗಿ ಆರಿಸಿದ್ದ ಸರ್ವಧಾ ಸಮರ್ಪಕವಾದದ್ದೆಂದು ಸಮರ್ಥಿಸಿಕೊಂಡಿತು. ೧೯೮೧ರಲ್ಲಿ ಹೊಸವರ್ಷದ ದಿನ ಹೆಬ್ಬಾರರಿಗೆ ಇನ್ನೊಮ್ಮೆ ಹುಟ್ಟೂರಿನ ಸನ್ಮಾನ ಜರಗಿತು. ಉಡುಪಿಯಲ್ಲಿ ಮಣಿಪಾಲದ ಅಕಾಡೆಮಿ ಮತ್ತು ರೋಟರಿ ಕ್ಲಬ್ ಪ್ರತಿವರ್ಷ ನಡೆಸುವ ಪ್ರಸಿದ್ಧ ದಕ್ಷಿಣ ಕನ್ನಡ ಸಂಜಾತರ ಸನ್ಮಾನ ಪಟ್ಟಿಯಲ್ಲಿ ಆ ವರ್ಷ ಲಲಿತಕಲೆಯಲ್ಲಿ ಪರಮೋಚ್ಚ ಪದವಿಯನ್ನು ಸ್ವ-ಪ್ರಯತ್ನದಿಂದ ಗಳಿಸಿ ಜಿಲ್ಲೆಯ ಸಾಹಸ ಧ್ವಜವನ್ನು ಕಲಾಕ್ಷೇತ್ರದಲ್ಲಿ ಚಿರಂತನವಾಗಿ ನಿಲ್ಲಿಸಿದ ಸಾಹಸೀ ಪುತ್ರನಿಗೆ ಸ್ಥಾನಕೊಟ್ಟಿತು.


ಒರಿಸ್ಸಾ ರಾಜ್ಯದಲ್ಲಿ ಪಟಚಿತ್ರಕಲೆಯ ಒಂದು ಪರಂಪರೆ ಇಂದಿನವರೆಗೂ ಉಳಿದುಕೊಂಡು ಬಂದಿರುವುದು ಸರಿಯಷ್ಟೇ. ಅದು ಗತವೈಭವದ ಸ್ಮಾರಕವೆಂಬ ಹಾಗೆ ಕೇವಲ ಅಗ್ಗದ ಅನುಕರಣೆಯಾಗಿ, ಪ್ರವಾಸಿ ಜನರ ಮನರಂಜಕ ಒಡವೆಯಾಗಿ, ಮಾರುಕಟ್ಟೆ ಸರಕಾಗಿ ವಿರೂಪಗೊಂಡಿರುವುದನ್ನು ಹೆಬ್ಬಾರರು ಹಿಂದೆ ಮಾಡಿದ ಒರಿಸ್ಸಾ ಯಾತ್ರೆಗಳಲ್ಲಿ ಗಮನಿಸಿದ್ದರು. ಕೇಂದ್ರ ಅಕಾಡೆಮಿ ಅಧ್ಯಕ್ಷರಾಗಿರುವ ವೇಳೆ ಒಳ್ಳೆಯ ಪರಂಪರೆಯಿದ್ದರೂ ರಾಜ್ಯದ ಅಕಾಡೆಮಿ ನಿರುಪಯುಕ್ತವಾದ ಸಂದರ್ಭದಲ್ಲಿ ಕೇಂದ್ರ ಅಕಾಡೆಮಿಯ



ಪ್ರವೇಶದಿಂದ ಏನಾದರೂ ಅಭಿವೃದ್ಧಿ ಸಾಧ್ಯವಾದೀತೆ ಎಂಬ ದೃಷ್ಟಿಯಿಂದ ಭುವನೇಶ್ವರದಲ್ಲಿ ಲಲಿತಕಲಾ ಅಕಾಡೆಮಿಯ ಒಂದು ಪ್ರಾದೇಶಿಕ ಕೇಂದ್ರವನ್ನು ತೆರೆಯುವ ಪೂರ್ವಸಿದ್ಧತೆಗಳನ್ನು ಅತ್ಯುತ್ಸಾಹದಿಂದ ಕೈಗೊಂಡರು. ಒರಿಸ್ಸಾದ ಪ್ರತಿಭಾವಂತ ಕಲಾವಿದನೂ, ಜಾನಪದ ಮತ್ತು ಬುಡಕಟ್ಟಿನ ಕಲೆಯ ಸಂಶೋಧಕನೂ ಆಗಿರುವ ಪತಿಯನ್ನು ಭೇಟಿಯಾಗಿ ಅವನೊಡನೆ ಚರ್ಚಿಸಿದರು. ಆ ವರ್ಷ ವಿಶ್ವಚೈತನ್ಯ ಎಂಬ ಶೀರ್ಷಿಕೆಯಲ್ಲಿ ಚೂರಿ ಪೆಲೆಟ್, ಬಳಕೆ ಇಲ್ಲದಂಥ ೫ ಅಡಿ ೫ ಅಡಿಯ ದೊಡ್ಡ ಗಾತ್ರದ ಒಂದು ಚಿತ್ರ ಬರೆದರು. ಹೊಸ ತಂತ್ರದಲ್ಲಿ ಚಿತ್ರ ಹೆಚ್ಚು ಜ್ವಾಜ್ವಲ್ಯ ಮಾನವಾಗಿರುವಂತೆ ಕಂಡಿತು.

ಕರ್ನಾಟಕ ರಾಜ್ಯ ಅಕಾಡೆಮಿ ೧೯೮೧ರ ಕಲಾಮೇಳಕ್ಕೆ ಮುಖ್ಯ ಅಥಿತಿಯಾಗಿ ಭಾಗವಹಿಸಿದರು. ವರ್ಷದ ಕೊನೇ ತಿಂಗಳಲ್ಲಿ ಖೈರ್‌ಗಡದ ಸಂಗೀತ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಅಧ್ಯಾಪಕರ ಸಂಗಡ ೧೫ ಸಂತೋಷದ ದಿನಗಳನ್ನು ಕಳೆದರು. ಆಗ ಅಲ್ಲಿ ಕುಲಪತಿಯಾಗಿದ್ದ ಹಿಂದುಸ್ತಾನಿ ಸಂಗೀತಗಾರ ಹಾಗೂ ವಿದ್ವಾಂಸ ಎಂ. ಆರ್. ಗೌತಮ್ ಅವರ ಸ್ನೇಹ ಎಷ್ಟು ಗಾಢವಾಗಿ ಬೆಳೆಯಿತೆಂದರೆ ಹೊರಡುವ ಮುನ್ನ ಗೌತಮ್ ಅವರ ಒಂದು ವ್ಯಕ್ತಿಚಿತ್ರವನ್ನು ಬಿಡಿಸಿಯೇ ಕೊಟ್ಟರು. ೧೯೮೨ ಜನವರಿ ೮ನೇ ತಾರೀಕು ಉಡುಪಿಯಲ್ಲಿ ರಾಷ್ಟ್ರೀಯ ಯಕ್ಷಗಾನ ಮಹೋತ್ಸವ. ದೆಹಲಿಯ ನಾಟಕಶಾಲೆಯ ವಿದ್ಯಾರ್ಥಿಗಳಿಗಾಗಿ ಉಡುಪಿಯ ಯಕ್ಷಗಾನ ಕೇಂದ್ರ ಮುದ್ದಾಂ ಏರ್ಪಡಿಸಿದ ಹತ್ತು ದಿನಗಳ ಅದ್ದೂರಿಯ ಅಧ್ಯಯನ ಶಿಬಿರ ಮತ್ತು ಉತ್ಸವಕ್ಕೆ ಹೆಬ್ಬಾರರ ಉದ್ಘಾಟನೆಯ ಸಹಕಾರವಿತ್ತು. ಕಾರಂತರ ಆಶೀರ್ವಾದ ಮತ್ತು ಮಹಾತ್ಮಾ ಗಾಂಧೀ ಕಾಲೇಜಿನ ಶಿಸ್ತುಬದ್ಧ ಸಂಘಟನೆಗಳಿಂದ ಹೊರಗಡೆಯಿಂದ ಬಂದ ಪ್ರೊ. ಮರೊತ್ತಿ ಇಟೆಲಿ, ಶ್ರೀಮತಿ ರುಕ್ಮಿಣಿ ಅರುಂಡೇಲ್ ಅಂಥವರು ಪ್ರಭಾವಿತರಾದರು. ಸ್ಥಳದಲ್ಲೇ ಪ್ರೊ. ಮರೊತ್ತಿ ಯಕ್ಷಗಾನ ನಡೆಸಲು ಇಟಲಿಗೆ ಬರಲು ಆಮಂತ್ರಣವಿತ್ತರು. ಆಗಸ್ಟ್‌ನಲ್ಲಿ ಯಕ್ಷಗಾನ ಕೇಂದ್ರದ ವ್ಯವಸಾಯಿ ಮೇಳ ಇಟಲಿಯಾತ್ರೆ ಕೈಗೊಂಡಿತು. ಇಪ್ಪತ್ತು ವರ್ಷದ ಕೆಳಗೆ ಕಾರಂತ ಬ್ಯಾಲೆಗಳ ಮುಂಬಯಿ ಪ್ರದರ್ಶನದಲ್ಲಿ ಬೀಜರೂಪವಾಗಿ ಮೊಳೆತ ಯಕ್ಷಗಾನದ ವಿಶ್ವಮಾನ್ಯತೆ ಎರಡು ದಶಕದಲ್ಲೇ ತನ್ನ ಕಣ್ಮುಂದೆಯೇ ಎಂಬಂತೆ ಅರಳುತ್ತಿರುವುದನ್ನು ನೋಡಿ ಹುಟ್ಟು ಯಕ್ಷಗಾನ ಪ್ರೇಮಿಗಳಾದ ಹೆಬ್ಬಾರರು ಆನಂದಿತರಾದರು.


ಹೆಬ್ಬಾರರು ಕೇಂದ್ರ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ನಡೆದ ಟ್ರನಾಲೆಯಲ್ಲಿ ೧೩ ಮಾರ್ಚ್ ೧೯೮೨ರಲ್ಲಿ ಅಂತಾರಾಷ್ಟ್ರೀಯ ಕಲಾವಿಮರ್ಶಕರನ್ನು ಸ್ವಾಗತಿಸುವ ಹೊಣೆ ಹೆಬ್ಬಾರರ ಮೇಲಿತ್ತು. ಶ್ರೀಮತಿ ಇಂದಿರಾ ಗಾಂಧಿಗೆ ಹಾಡುವ ರೇಖೆಯ ದ್ವಿತೀಯ ಆವೃತ್ತಿಯನ್ನು ಕಳಿಸಿಕೊಟ್ಟರು. ಅದನ್ನು ನೋಡಿ ಹೆಬ್ಬಾರರಿಗೆ ನಿಮ್ಮ ಪುಸ್ತಕ ನೋಡಿ ತುಂಬಾ ಹರ್ಷಿತಳಾಗಿದ್ದೇನೆ. ಅಷ್ಟು ಕಡಿಮೆ ಗೆರೆಗಳಲ್ಲಿ ಎಂಥ ಚಲನೆ ಮತ್ತು ಲಾವಣ್ಯವನ್ನು ತುರುಕಿಸಿದ್ದೀರಿ ಎಂದು ಪ್ರಧಾನಿ ಬರೆದರಂತೆ. ಹಿಮಾಚಲ ಪ್ರದೇಶದ ವಿಧಾನಸಭೆಯಲ್ಲಿಡಲು



ಗಾಂಧೀಜಿಯವರ ಒಂದು ಚಿತ್ರವನ್ನು ಅಲ್ಲಿನ ಸರಕಾರ ಹೆಬ್ಬಾರರಿಂದ ಅಪೇಕ್ಷಿಸಿತು. ಅದನ್ನು ಬರೆಯಲು ಹೆಬ್ಬಾರರು ಮೂರು ವಾರಗಳ ಹಿಮಾಚಲ ಯಾತ್ರೆ ಕೈಗೊಂಡರು. ರಾಜ್ಯದ ಕಲಾವಿದರ ಪರಿಚಯ, ಸಹೃದಯರ ಪರಿಚಯ, ಮಧುರ ಅನುಭವವೇ ಆಗಿತ್ತು. ಮೂರು ವಾರಗಳಲ್ಲಿ ಚಿತ್ರ ಪೂರ್ತಿಗೊಳಿಸಿ ಮುಂಬಯಿಗೆ ಮರಳಿದರು. ಇದೇ ಅವಧಿಯಲ್ಲಿ ತಮ್ಮ ಆಪ್ತ ಗೆಳೆಯನೂ ಲಲಿತಕಲಾ ಅಕಾಡೆಮಿಯ ಪ್ರಕಟನ ಶಾಖೆಯ ಮುಖ್ಯಸ್ಥನೂ ಆಗಿದ್ದ ಎಸ್.ಎ.ಕೃಷ್ಣನ್ ಆಕಸ್ಮಿಕವಾಗಿ ದಿಲ್ಲಿಯಲ್ಲಿ ಅಪಘಾತಕ್ಕೆ ಸಿಲುಕಿ ಮೃತನಾದ ಸುದ್ದಿ ಸಿಮ್ಲಾಕ್ಕೆ ಮುಟ್ಟಿತು. ದಾರಿಯಲ್ಲಿ ಆಪ್ತ ಸಹೋದ್ಯೋಗಿಯ ಶೋಕಸಭೆಯಲ್ಲಿ ಪಾಲ್ಗೊಂಡರು.

ಭಾರತೀಯ ಕಲೆಯನ್ನು ಆಧುನಿಕಕಾಲದಲ್ಲಿಯೂ, ರೂಪದಲ್ಲಿಯೂ ಸಂಘಟಿಸುವುದರಲ್ಲಿ ಹೆಬ್ಬಾರರು ಮಹತ್ವಪೂರ್ಣ ಪಾತ್ರವಹಿಸಿದ್ದಾರೆ. ಕಲಾವಿದನ ಸೃಜನಶೀಲತೆ ಒಂದು ಭಾಗವಾದರೆ ಇನ್ನೊಂದು ಭಾಗ ಕಲಾಸಂಘಟನೆಯದು ಎರಡರ ಸಾವಯವ ಸಂಬಂಧದಿಂದ ಒಂದು ದೇಶದ ಕಲಾಸನ್ನಿವೇಶ ಉತ್ಪನ್ನವಾಗುತ್ತದೆ. ಕಲಾವಿದನ ಸೃಷ್ಟಿಶಕ್ತಿ ಬೀಜರೂಪದಲ್ಲಿದ್ದರೆ ಅದಕ್ಕೆ ಮೊಳಕೆ ಬರುವಂತೆ ಮಾಡುವ ಮಣ್ಣು, ನೀರು, ಗಾಳಿಗಳಂಥ ಪರಿಸರವನ್ನು ಆಯಾ ದೇಶದ, ಕಾಲದ ಸನ್ನಿವೇಶ ಒದಗಿಸಬೇಕು. ಹೆಬ್ಬಾರರು ಭಾರತೀಯ ಕಲಾಪ್ರಪಂಚದಲ್ಲಿ ಕುಂಚ ಆಡಿಸುವುದಕ್ಕೆ ಮುನ್ನ ಹೇಳಿಕೊಳ್ಳುವಂಥ ಕಲಾಪರಿಸರವೇ ಈ ದೇಶದಲ್ಲಿರಲಿಲ್ಲ. ಅರಮನೆಗಳ ವಾಸ್ತುಶಿಲ್ಪ, ಪೌರಾಣಿಕ ದೇವಾನುದೇವತೆಗಳ ವಿಗ್ರಹಗಳು, ಗೋಪುರದ ಕುಸುರಿಕೆತ್ತನೆಗಳಲ್ಲೆ ಭಾರತದ ಕಲಾಪ್ರತಿಭೆ ಪೂರ್ತಿ ವ್ಯಯವಾಗುತ್ತಿತ್ತು. ವರ್ಣಚಿತ್ರ ರಚನೆಯ ಇತಿಹಾಸ ಸಿತನಿವಾಸಲ್ ಅಜಂತಾಗಳಲ್ಲಿ ಪುಟಿದು, ಪ್ರಭಾವಶಾಲಿಯಾಗಿ ಪ್ರಕಟಿತವಾಗಿ, ತದನಂತರ ಮೊಘಲ್ ಚಿಕಣಿ ಚಿತ್ರಗಳಲ್ಲಿ ಕೆಲಗಾಲ ಜೀವಂತಿಕೆ ತೋರಿಸಿ ಮರೆಯಾದದ್ದು ಮತ್ತೆ ಆಧುನಿಕ ಈಸೆಲ್ ಪಿಕ್‌ಚರ್ಸ್, ಜಲವರ್ಣ, ತೈಲವರ್ಣದ ಚಿತ್ರಗಳ ಪ್ರಕಾರದಲ್ಲಿ ವ್ಯಕ್ತವಾದದ್ದು. ಬ್ರಿಟಿಷರ ಆಳ್ವಿಕೆಯಲ್ಲಿಯೇ, ವಿಕ್ಟೋರಿಯಾ ಕಲೆ ಎನಿಸಿಕೊಂಡಿರುತ್ತಿದ್ದ ಕಾಲದಲ್ಲಿ ಹೆಬ್ಬಾರರು ಕಲಾಪ್ರಪಂಚವನ್ನು ಪ್ರವೇಶಿಸಿದರು.

ಮುಂದಿನ ಐವತ್ತು ವರ್ಷಗಳಲ್ಲಿ ಪಶ್ಚಿಮದ ಪ್ರಭಾವಗಳು ಈ ದೇಶದ ಮೇಲೆ ಒತ್ತರಿಸಿ ಬರುತ್ತಿರುವಂತೆ ಸಂಘಟನೆಯ ವಿಷಯದಲ್ಲಿಯೂ ಗೆಲರಿಗಳು, ಮುದ್ರಿತ ಪ್ರಕಟಣೆಗಳು, ಪತ್ರಿಕಾ ವಿಮರ್ಶೆಗಳು, ಪ್ರಾದೇಶಿಕ ಹಾಗೂ ಅಖಿಲಭಾರತೀಯ ಪ್ರದರ್ಶನಗಳು, ಅಂಥಲ್ಲಿ ಪ್ರೋತ್ಸಾಹಕ ಬಹುಮಾನ ಯೋಜನೆಗಳು, ಕಲಾವಿದರ ಪ್ರದರ್ಶನಗಳು, ಅಂಥಲ್ಲಿ ಪ್ರೋತ್ಸಾಹಕ ಬಹುಮಾನ ಯೋಜನೆಗಳು, ಕಲಾವಿದರ ಪ್ರದರ್ಶನಗಳನ್ನು ಏರ್ಪಡಿಸಲು ನೆರವಾಗಲು ಕಲಾಸಂಘಗಳು ಇಂಥ ಸ್ಥಾವರಗಳು ಮೆಲ್ಲ ಮೆಲ್ಲನೆ ಭಾರತದ ಕಲಾನಕಾಶೆಯಲ್ಲಿ ಮೂಡಿಬಂದ ಕಾಲಾವಧಿಯೂ ಹೆಬ್ಬಾರರು ಕಾರ್ಯ ಪ್ರವೃತ್ತರಾಗಿದ್ದ




ಕಾಲಾವಧಿಯೂ ಒಂದೇ ಆಗಿದೆ. ದಾರಿ ಇಲ್ಲದ ಒಂದು ಅರಣ್ಯದಲ್ಲಿ ನಾವು ನಾವೇ ದಾರಿಮಾಡಿಕೊಳ್ಳುವಂತೆ ಹೆಬ್ಬಾರರಾದರೂ ಈ ವಿಷಯದಲ್ಲಿ ಮೂಲಕರ್ತರು ಪಯೋನಿಯರ್ ಎನಿಸುತ್ತಾರೆ.

ತಮ್ಮ ಕಲಾಸೃಷ್ಟಿಗೆ, ಸೃಜನಶೀಲತೆಗೆ ಬದ್ಧರಾದ ಹೆಬ್ಬಾರರಿಗೆ ಕಲೆಯ ಸಂಘಟನಾ ಕಾರ್ಯಗಳು ಇದಕ್ಕೆ ವಿಘ್ನಕಾರಕಗಳೆಂದು ಅನಿಸಿದ್ದಿಲ್ಲ. ಕಲೆಗೆ ಸಂಬಂಧಿಸಿದ ಸಭೆ ಸಮಾರಂಭಗಳು, ಸಮಿತಿಗಳ ಸದಸ್ಯತ್ವ, ಪ್ರದರ್ಶನ ಮತ್ತು ಕಲಾವಿದಶಿಬಿರಗಳ ಸಂಘಟನೆ, ಕಲಾಶಾಲೆಗಳ ಪರೀಕ್ಷೆ, ಅಧ್ಯನಮಂಡಲದ ಕೆಲಸಗಳು, ಇವನ್ನು ಸಾಧಿಸಲು ಅಖಿಲಭಾರತ ಸಂಚಾರ ಯಾವುದನ್ನೂ ತೊಂದರೆ ಎಂದು ಭಾವಿಸದೆ, ಸಂಘಟನೆಯ ಬೆಂಬಲವಿಲ್ಲದೆ ಕಲಾಸೃಷ್ಟಿ ಮರಳುಗಾಡಿಗೆ ಹರಿಯುವ ನದಿಯಾಗುತ್ತದೆಂದು ತಿಳಿದು, ಮಹಾರಾಷ್ಟ್ರ, ದಿಲ್ಲಿ, ಕೇರಳ, ಕರ್ನಾಟಕ, ಒರಿಸ್ಸಾ, ಆಂಧ್ರ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಕಲಾಸಂಘಟನೆಯ ಕರ್ತವ್ಯಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಸಹಕಾರನೀಡಿದರು. ಯಾವತ್ತೂ ತಮ್ಮ ಅಭಿಪ್ರಾಯವನ್ನು ಸಮಿತಿಯ ಮೇಲೆ ಹೇರದೆ ಸದಸ್ಯರ ಬಹುಮತದ ಮೇಲೆ ಕಾರ್ಯಕ್ರಮಗಳನ್ನು ರೂಪಿಸುವ ಹೆಬ್ಬಾರರ ಧೋರಣೆ ಪ್ರಜಾತಂತ್ರಾತ್ಮಕವಾದದ್ದೆಂದು ತಿಳಿದ ಸರ್ವರಿಗೂ ಅವರ ಧುರೀಣತ್ವ ಹಾಗೂ ಮಾರ್ಗದರ್ಶನಗಳ ಮೇಲೆ ವಿಶ್ವಾಸವಿರುತ್ತಿತ್ತು. ಎಂತಲೇ ಅವರು ೧೯೮೦ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಗೆ ಸ್ವಂತ ಅರ್ಹತೆ ಮೇಲೆ ಕಲಾವಿದ ಅಧ್ಯಕ್ಷರಾದರು. ಅದಕ್ಕೆ ಮೊದಲು ಪ್ರತಿಷ್ಠಿತ ರಾಜಕಾರಣಿಗಳೂ, ಸಮಾಜ ಕಾರ್ಯಕರ್ತರೋ ಇದರ ಅಧ್ಯಕ್ಷರಾಗಿರುತ್ತಿದ್ದುದು ರೂಢಿ.

ಅಖಿಲ ಭಾರತದ ಕಲಾಸಂಘಟನೆಯ ನಕಾಶೆಯಲ್ಲಿ ಲಲಿತಕಲಾ ಅಕಾಡೆಮಿ ಪ್ರತ್ಯಕ್ಷವಾಗುವ ಮೊದಲು ಪ್ರಾದೇಶಿಕ ಸಂಘಗಳ ಮೂಲಕವೇ ಕಲಾಕಾರ್ಯ ನಡೆಯುತ್ತಿತ್ತು. ೩೦ರ ದಶಕದಲ್ಲಿ, ಅಂದರೆ ಹೆಬ್ಬಾರರು ಮುಂಬಯಿಗೆ ಬಂದ ಸಂದರ್ಭದಲ್ಲಿ ಮುಂಬಯಿಯಲ್ಲಾದರೂ ಅಲ್ಲಿನ ಆರ್ಟ್ ಸೊಸೈಟಿಯ ವಾರ್ಷಿಕ ಪ್ರದರ್ಶನವೊಂದೇ ಕಲಾವಿದರ ಇರಸ್ತಿಕೆಯನ್ನು ಜನರಿಗೆ ತಿಳಿಸಿಕೊಡುವ ಉಪಕರಣ, ಉಪಾಯವೆನಿಸಿತ್ತು. ಚಿತ್ರಗಳು ಪ್ರದರ್ಶನಕ್ಕೆ ಸ್ವೀಕೃತವಾದ ಮೇಲೆ ಪ್ರದರ್ಶನದ ಹಿಂದಿನ ದಿವಸ ಕಲಾವಿದನಿಗೆ ಪ್ರದರ್ಶನ ಭವನದ ಆಗ ಟೌನ್‌ಹಾಲಿನಲ್ಲಿ ಇದು ನಡೆಯುತ್ತಿತ್ತು ಒಳಗಡೆ ಪ್ರವೇಶವಾದರು.


ಪ್ರವೇಶ ದೊರೆತ ಕಲಾವಿದನಿಗೆ ಹೆಮ್ಮೆ. ಸ್ವೀಕೃತಿಯೇ ಯಶಸ್ಸಿನ ಸೂಚನೆ. ಆಮೃತಾ ಶೇರ್‌ಗಿಲ್ ಮುಂಬಯಿ ಕಲಾಸನ್ನಿವೇಶಕ್ಕೆ ಪ್ರವೇಶ ಮಾಡಿದ್ದು ಆಟ್ ಸೊಸೈಟಿಯಲ್ಲಿ ೩೭ರ ಪದಕಗಳಿಸಿಕೊಂಡು. ಅದುವರೆಗೆ ಮುಂಬಯಿ ಕಲಾವಿದರು ಬ್ರಿಟಿಷ್ ಪದ್ಧತಿಯ ಅಕಾಡೆಮಿಕ್ ಶೈಲಿಗೆ ಮಾರುಹೋಗಿದ್ದರು. ಆದ್ದರಿಂದ ಶೇರ್‌ಗಿಲ್ ಕೃತಿಗಳು ಅವರಿಗೆ ಮೆಚ್ಚುಗೆಯಾಗಿರಲಿಲ್ಲ. ಕಲಾಸಂಚಾರದ ಪ್ರತಿನಿಧಿ ಎಂದು



ಕನೈಲಾಲ್ ವಕೀಲ ಎಂಬ ವಿಮರ್ಶಕ ಆಕೆಯನ್ನು ಟೀಕಿಸಿದನಂತೆ. ಲೇಡನ್ ಮತ್ತು ಖಾಂಡೇವಾಲ್ಕರಂಥ ಶೇರ್‌ಗಿಲ್ ನವ್ಯಶೈಲಿಯನ್ನು ಎತ್ತಿಹಿಡಿದ ವಿಮರ್ಶಕರೂದ್ದರು. ಕಲಾಸನ್ನಿವೇಶದ ಜಡತ್ವವನ್ನು ಕದಲಿಸಲು ಅಮೃತಾ ಶೇರ್‌ಗಿಲ್ ಒಂದು ಕಾರಣವಾದರೆ ಇನ್ನೊಂದು ಪ್ರಬಲ ಪ್ರಭಾವ ಜೆ.ಜೆ. ಸ್ಕೂಲಿಗೆ ನಿರ್ದೇಶಕರಾಗಿ ಬಂದ ಚಾರ್ಲ್ಸ್ ಜೆರಾರ್ಡ್ ಅವರಿಂದಲೂ ಆಯಿತು. ಬ್ರಿಟಿಷ್ ಶೈಲಿಯ ಪುರಾತನ ಸಂಕಲೆಗಳಿಂದ ಬಿಡಿಸಿ ಭಾರತದ ಪರಂಪರೆಯ ಬೆಳಕಿನಲ್ಲಿ ಇಲ್ಲಿನ ಕಲಾವಿದರು ತಮ್ಮ ತನವನ್ನು ಕೊಂಡುಕೊಳ್ಳಬೇಕೆಂದು ಜೆರಾರ್ಡ್ ಅವರು ಸೂಚಿಸಿದರು.

೧೯೪೫ರಲ್ಲಿ ಕಲ್ಕತ್ತಾ ಕಲಾವಿದರ ಗುಂಪು ಮುಂಬಯಿಯಲ್ಲಿ ತನ್ನ ಪ್ರಥಮ ಪ್ರದರ್ಶನ ಕೊಟ್ಟಿತು. ಬಂಗಾಳಿ ಪಂಥದ ವಾಶ್‌ತಂತ್ರವನ್ನು ಪರಿತ್ಯಜಿಸಿ ಜಾನಪದ ವಸ್ತು ವಿಷಯಗಳಿಂದಲೂ, ಪಶ್ಚಿಮದ ಕಲಾಚಳವಳಿಗಳಿಂದಲೂ ಪ್ರಭಾವಿತರಾದ ಈ ತರುಣ ಬಂಗಾಳಿ ಕಲಾವಿದರ ಕೃತಿಗಳಲ್ಲಿನ ನವೀನತೆ ಮುಂಬಯಿಯವರನ್ನು ಆಲೋಚಿಸುವಂತೆ ಮಾಡಿತು. ೧೯೪೭-೪೮ರಲ್ಲಿ ಪ್ರಗತಿಶೀಲ ಕಲಾವಿದರ ಗುಂಪು ತರುವಾಯ ಮುಂಬಯಿಯ ಗುಂಪೆಂದು ಹೆಸರು ಬದಲಾಯಿಸಿಕೊಂಡದ್ದು ಉದಯುವಾಯಿತು. ೧೮೮೮ರಲ್ಲೇ ಸ್ಥಾಪಿತವಾಗಿದ್ದ ಮುಂಬಯಿ ಆರ್ಟ್ ಸೊಸೈಟಿಗೆ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮ್ ಹಿಂದುಗಡೆ ಒಂದು ಪ್ರದರ್ಶನಭವನವೂ ಇದ್ದಿತು. ಕಲಾವಿದರಿಗೆ ಅನ್ಯೋನ್ಯಸಂವಾದಕ್ಕೆ, ಭೇಟಿಯಾಗುವುದಕ್ಕೆ ಇದೇ ಆಗಿನ ಕಾಲದಲ್ಲಿ ಪ್ರಶಸ್ತ ಸ್ಥಳ. ಕಲಾವಿದನ ಸಹಾಯಕ ಕೇಂದ್ರ ಆಮೇಲೆ ಕಲಾವಿದ ಕೇಂದ್ರವೆಂದು ಹೆಸರು ಬದಲಾಯಿಸಿಕೊಂಡದ್ದು, ಇದೇ ಕೊಠಡಿಯಲ್ಲಿ ಜನ್ಮತಾಳಿತು. ಖಾಸಗಿ ಗ್ಯಾಲರಿಗಳಿಲ್ಲದ ಆ ಯುಗದಲ್ಲಿ ಕಲಾವಿದರ ಕೃತಿಪ್ರದರ್ಶನಕ್ಕೆ ಇದೊಂದೇ ಸ್ಥಳ. ಅದು ೧೯೪೫ರಲ್ಲಿ ಅರಾ ಮತ್ತು ಹೆಬ್ಬಾರರ ಪ್ರಥಮ ಪ್ರದರ್ಶನ ನಡೆದುದು ಇಲ್ಲೇ.

ಏಕಾಂಗ ಪ್ರದರ್ಶನವೆಂಬುದೂ ಮುಂಬಯಿಯಲ್ಲಿ ಆಗ ಅಪರೂಪದ ವಿಷಯ. ಗ್ಯಾಲರಿ ಕೆಮೂಲ್ಡ್ ಮುಂಬಯಿಯ ಮೊದಲ ಗೆಲರಿ ಹುಟ್ಟಿದ ಮೇಲೆ ಅದು ದಿಲ್ಲಿಯಲ್ಲಿ ಪ್ರದರ್ಶನ ಏರ್ಪಡಿಸದ್ದು ೪ ಮಂದಿ ಕಲಾವಿದರ ಕೃತಿಗಳದ್ದು ಶೇರ್‌ಗಿಲ್, ಶೈಲಜ ಮುಖರ್ಜಿ, ಚಾವಡಾ ಮತ್ತು ಹೆಬ್ಬಾರ. ಮುಂಬಯಿ ಜನರು ಪ್ರದರ್ಶನಕ್ಕೆ ಬಂದರೆ ಅದು ಚಿತ್ರವೀಕ್ಷಣೆಗಾಗಿ ಅಲ್ಲ, ಉದ್ಘಾಟನಸಮಾರಂಭಕ್ಕೆ ಸದಾ ಬಂದೇ ಬರುತ್ತಿದ್ದ ಬ್ರಿಟಿಷ್ ಗವರ್ನರ್‌ನ ದರ್ಶನ, ಹಸ್ತಲಾಘವಗಳಿಗಾಗಿ, ಮಾರಾಟದ ಕತೆಯೂ ಅಷ್ಟೇ. ರಾಜಮಹಾರಾಜರುಗಳು ಏನೋ ಒಂದೆರಡು ಕೊಂಡರೆ ಅಷ್ಟಕ್ಕೆ ತೃಪ್ತಿ ಪಡಬೇಕು. ಮ್ಯೂಸಿಯಮ್‌ಗಳು ಮುಂಬಯಿಯಲ್ಲಿದ್ದದ್ದು ಒಂದೇ ಒಂದು ಪ್ರಿನ್ಸ್ ಆಫ್ ವೇಲ್ಸ್ ಕೊಳ್ಳುವುದೂ ಅಷ್ಟರಲ್ಲೇ ಇತ್ತು. ಮುಂಬಯಿ, ಕಲ್ಕತ್ತಾ, ದಿಲ್ಲಿ, ಮೈಸೂರು ದಸರಾ ಪ್ರದರ್ಶನ ಸಿಮ್ಲಾ ಇಂಡಿಯಾ ಸರಕಾರದ ಬೇಸಗೆಯ ರಾಜಧಾನಿ




ಇಷ್ಟು ಕಡೆಗಳಲ್ಲಿ ನಡೆಯುವ ಪ್ರದರ್ಶನದಲ್ಲಿ ತಮ್ಮ ಚಿತ್ರಗಳು ಜನರ ಕಣ್ಣಿಗೆಬೀಳಬೇಕು, ಜೇಬಿಗೆ ಏನಾದರೂ ಬಹುಮಾನ ಪ್ರಥಮ, ದ್ವಿತೀಯ, ತೃತೀಯ, ಸ್ಪರ್ಧಾಪದಕ ಇತ್ಯಾದಿ ಬೀಳಬೇಕು ಇಷ್ಟೇ ಕಲಾವಿದರ ಮನಸ್ಸಿನಲ್ಲಿದ್ದದ್ದು.

೧೯೫೪ರಲ್ಲಿ ಲಲಿತಕಲಾ ಅಕಾಡೆಮಿ ಸ್ಥಾಪನೆಗೊಂಡಂದಿನಿಂದ ೧೮ ವರ್ಷಗಳ ಕಾಲ ಹೆಬ್ಬಾರರು ಅದರ ಬೆಳವಣಿಗೆಯಲ್ಲಿ ತಮ್ಮ ಕಾಣಿಕೆ ನೀಡಿದರು. ಒಂಭತ್ತು ಖ್ಯಾತನಾಮ ಕಲಾವಿದರಿಗೆ ಕೇಂದ್ರ ಅಕಾಡೆಮಿಯ ಸಂವಿಧಾನ ಅವಕಾಶ ಮಾಡಿಕೊಟ್ಟಿತ್ತು. ಒಂಭತ್ತರೊಳಗೊಬ್ಬರಾಗಿ ಹೆಬ್ಬಾರರು ಅಕಾಡೆಮಿಗೆ ಪ್ರವೇಶ ಮಾಡಿದರು. ಪ್ರಾದೇಶಿಕವಾಗಿ, ಪ್ರತ್ಯೇಕ ಸ್ಥಳಗಳಲ್ಲಿ ನಡೆಯುತ್ತಿರುವ ಕಲಾಸಂಘಟನೆಯನ್ನು ಅಖಿಲ ಭಾರತ ವ್ಯಾಪ್ತಿಯಲ್ಲಿ ಸಂಘಟಿಸುವ ಮಹಾಪ್ರಯತ್ನವನ್ನು ಸ್ವಾತಂತ್ರ್ಯ ದೊರೆತ ಕೆಲವೇ ವರ್ಷಗಳಲ್ಲಿ ನೆಹರೂ ಸರಕಾರ ಮಾಡಲೆಳಸಿದ್ದು ಸ್ತುತ್ಯವೇ ಆಗಿದೆ. ಸಾಹಿತ್ಯ, ಸಂಗೀತ ನಾಟಕ ಮತ್ತು ಲಲಿತಕಲೆ ಈ ಮೂರಕ್ಕೆ ಮೂರು ಪ್ರತ್ಯೇಕ ಅಕಾಡೆಮಿಗಳನ್ನು ರೂಪಿಸಿ ಅನತಿಕಾಲದಲ್ಲಿ ಅವುಗಳಿಗೆ ಒಟ್ಟಾಗಿ ರವೀಂದ್ರ ಭವನದಲ್ಲಿ ನೆಲೆಯನ್ನು ರೂಪಿಸಿಕೊಟ್ಟು ಸರಕಾರ ಈ ಅಕಾಡೆಮಿಗಳು ಸ್ವತಂತ್ರವಾಗಿ ಸರಕಾರಿ ಹಸ್ತಕ್ಷೇಪವಿಲ್ಲದೆ ತಮ್ಮ ಕಾರ್ಯಕಲಾಪಗಳನ್ನು ಸಂಯೋಜಿಸುವುದಕ್ಕೆ ಅವಕಾಶಮಾಡಿಕೊಟ್ಟಿತು. ಕಲಾವಿದರಿಗೆ ಪ್ರೋತ್ಸಾಹನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರದರ್ಶನಗಳು, ಈಚೆಗೆ ಟ್ರನಾಲೆಯಂಥ ಬೃಹತ್ ಪ್ರದರ್ಶನ, ಕಲೆಯ ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳು ವಾರ್ಷಿಕ ಪ್ರಶಸ್ತಿಗಳು, ಗ್ರಂಥಪ್ರಕಟಣೆಗಳು, ಪ್ರಾದೇಶಿಕ ಕೇಂದ್ರಗಳು ಹೀಗೆ ನಾನಾಮುಖವಾಗಿ ಲಲಿತಕಲಾ ಅಕಾಡೆಮಿಯ ಕಾರ್ಯಗಳು ದೇಶವಿಶಾಲವಾಗಿ ಹಬ್ಬುತ್ತಿವೆ.

ಇದರ ಹದಿನೆಂಟು ವರ್ಷಗಳ ಸುದೀರ್ಘ ಸಂಪರ್ಕವನ್ನು ಕಡಿದುಕೊಳ್ಳಬೇಕಾದ ಸಂದರ್ಭ ೧೯೭೨ರಲ್ಲಿ ಹೆಬ್ಬಾರರಿಗೆ ಎದುರಾಯಿತು. ಯಾವ ಘನೋದ್ದೇಶಗಳಿಗಾಗಿ ಅಕಾಡೆಮಿ ಸ್ಥಾಪಿತವಾಗಿತ್ತೋ ಅವನ್ನು ಮರೆತು ಕ್ಷುದ್ರಸ್ವಾರ್ಥದ ಆಡುಂಬೊಲವಾಗಿ ಬಿಟ್ಟ ಅಕಾಡೆಮಿಯಲ್ಲಿರುವುದು ಹೆಬ್ಬಾರರಿಗೆ ಇಷ್ಟವಾಗಲಿಲ್ಲ. ಈ ಮೊದಲೆ ಬಿಡಬೇಕಾಗಿತ್ತು. ಆದರೆ ನಾನೆ ಹಾರ್ದಿಕವಾಗಿ ಊರ್ಜಿತಕ್ಕೆ ತಂದ ಸಂಸ್ಥೆ ಎಂದು ಇಷ್ಟು ದಿನ ಇದ್ದೆ. ಆದರೇನು ಮಾಡೋಣ ದೀರ್ಘಕಾಲ ಇದರ ಸೇವೆ ಮಾಡಿದ್ದೇ ನನ್ನ ಅಪರಾಧವೆನ್ನುವಂತೆ ಯುವಜನಾಂಗದ ಸದಸ್ಯರು ಕರುಗುತ್ತಿದ್ದಾರೆ.

ದೇಶದ ಕಲಾಸನ್ನಿವೇಶದ ಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳುವ ಬದಲು ಸದಸ್ಯತ್ವದಿಂದ ತಮ್ಮ ಬೇಳೆ ಬೇಯಿಸಿಕೊಳ್ಳುವ ಮಂದಿ ಹೆಚ್ಚಾಗುತ್ತಿದ್ದಾರೆ. ಇವರ ಸಹವಾಸ ಬೇಡವೆಂದು ೯. ೧೦. ೭೨ರಂದು ರಾಜೀನಾಮೆ ಕೊಟ್ಟರು. ಲಲಿತಕಲಾ ಅಕಾಡೆಮಿಯ ವರಿಷ್ಠಮಂಡಳಿ ರಾಜೀನಾಮೆ ವಾಪಸ್ಸು




ಪಡೆದುಕೊಳ್ಳಿರೆಂದು ಎಷ್ಟೋ ಬಾರಿ ಪ್ರಾರ್ಥಿಸಿಕೊಂಡರು. ಹೆಬ್ಬಾರರು ಕೇಳಲಿಲ್ಲ. ಕಲುಷಿತ ವಾತಾವರಣದಲ್ಲಿ ಕೆಲಸ ಮಾಡಲು ಅವರ ಮನಸ್ಸು ಒಡಂಬಡಲಿಲ್ಲ. ಮತ್ತೆ ಅಕಾಡೆಮಿಯನ್ನು ಪ್ರವೇಶಿಸಿದ್ದು ಏಳು ವರ್ಷಗಳ ಅವಧಿಯ ಅನಂತರ ೧೯೭೭ರಲ್ಲಿ, ತರುವಾಯ ೧೯೮೦ರಲ್ಲಿ ಅದರ ಅಧ್ಯಕ್ಷರಾದರು.

ಯಾವುದೇ ಸ್ಥಾನಮಾನಗಳು ಮನುಷ್ಯನಿಗೆ ಸಿಕ್ಕಾಗ ಅವನದನ್ನು ತನ್ನ ಸ್ವಂತ ಯೋಗ್ಯತೆಯ ಬಲದಿಂದಲೇ ಸಂಪಾದಿಸಿದ್ದಾಗಬೇಕು ಮತ್ತು ಅದನ್ನು ಸರ್ವಥಾ ತನ್ನ ಸ್ವಾರ್ಥಕ್ಕಾಗಿ, ತನ್ನ ಕೀರ್ತಿಸಂವರ್ಧನೆಗಾಗ ಅಥವಾ ಸ್ವಾರ್ಥಸಂಗ್ರಹಕ್ಕಾಗಿ ಬಳಸಿಕೊಳ್ಳಬಾರದೆಂಬುದು ಹೆಬ್ಬಾರರ ದೃಢವಾದ ನಿಲುಮೆ. ಮೈಸೂರು ವಿಶ್ವವಿದ್ಯಾಲಯ ಅವರಿಗೆ ಡಾಕ್ಟರೇಟು ಕೊಟ್ಟಿತ್ತಷ್ಟೆ. ಅವರು ಲಲಿತಕಲಾ ಅಕಾಡೆಮಿಗೆ ಅಧ್ಯಕ್ಷರಾಗಿ ನೇಮಿತರಾದ ಹೊತ್ತಿನಲ್ಲಿ ಮಾಡಸಿದ ಒಂದು ಆಮಂತ್ರಣ ಪತ್ರದಲ್ಲಿ ಈ ಗೌರವಾರ್ಥ ದೊರೆತ ಡಾಕ್ಟರೇಟನ್ನು ಅವರ ಹೆಸರಿನ ಹಿಂದೆ ಹಚ್ಚಿ ಮುದ್ರಿಸಿದರಂತೆ ಆಮಂತ್ರಣ ಪತ್ರ ಮುದ್ರಣಾಲಯದಿಂದ ಬಂದ ಮೇಲೆ ಇಡೀ ಕಟ್ಟಿಗೆ ಕಟ್ಟನ್ನೇ ವಿಸರ್ಜಿಸಿ ಹೆಬ್ಬಾರರು ಅದರಲ್ಲಿ ಡಾಕ್ಟರೇಟ್ ಅಳಿಸಿ ಮರುಮುದ್ರಣ ಮಾಡುವಂತೆ ಆದೇಶವಿತ್ತರು. ಕರ್ತವ್ಯ ಸಂದರ್ಭದಲ್ಲಿ ಪ್ರಾಪ್ತವಾಗುವ ಇಂಥ ಡಿಗ್ರಿಗಳು, ಉಪಾಧಿಗಳು ಸಮ್ಮಾನದ ಬಿರುದುಗಳು ತತ್ಕಾಲ ಬಾವಲಿಗಳೇ ವಿನಾ ಅವುಗಳನ್ನು ಬೆನ್ನಲ್ಲಿ ಹೊತ್ತು ಯಾರೂ ಮೆರೆಯಕೂಡದೆಂಬುದು ಅವರ ಅಭಿಪ್ರಾಯ.

ಲಲಿತಕಲಾ ಅಕಾಡೆಮಿಯಂಥ ಸಂಸ್ಥೆಯ ಅಧ್ಯಕ್ಷತೆ ಉದ್ಯೋಗವೇನೂ ಅಲ್ಲ. ಅದೊಂದು ಗೌರವದ ಹುದ್ದೆ ಅಲ್ಲವೆ ಗೌರವ ಹುದ್ದೆಯಲ್ಲಿರುವಾಗ ಅದರ ವಿಳಾಸಕ್ಕೆ ಯಾರಾದರೂ ತನಗೆ ಪ್ರಶಸ್ತಿ ನೀಡಿದರೆ ಅದನ್ನೂ ಸ್ವೀಕರಿಸತಕ್ಕದ್ದಲ್ಲವೆಂಬ ತಮ್ಮ ನಿಲುಮೆಯನ್ನು ಸೋವಿಯತ್‌ಲ್ಯಾಂಡ್ ಪ್ರಶಸ್ತಿ ದೊರಕಿದಾಗ ಬಹಿರಂಗವಾಗಿ ಆಚರಿಸಿ ಅಕಾಡೆಮಿಯ ಘನತೆಯನ್ನು ಎತ್ತಿ ಹಿಡಿದರು. ಸೋವಿಯತ್ ಲ್ಯಾಡ್ ಪ್ರಶಸ್ತಿ ದೊರಕಿದಾಗ ಅಬ್ರಾಮೊವ್ ಉಪಹಾರ ಸಹಿತ ಬಂದು ಏನೇನು ಒತ್ತಾಯ ಮಾಡಿದರೂ ಹೆಬ್ಬಾರರು ಒಪ್ಪಿಕೊಳ್ಳಲಿಲ್ಲ. ಪದನಿಮಿತ್ತವಾಗಿ ಬರುವ ಪ್ರಶಸ್ತಿ ಒಲ್ಲೆನೆಂದು ಬಿಟ್ಟರು. ಮರುವರ್ಷ ಸೋವಿಯತ್ ಲ್ಯಾಂಡ್ ಎಂಬ ವೈಯಕ್ತಿಕ ಪ್ರಶಸ್ತಿ ಹೆಬ್ಬಾರರಿಗೆ ಕೊಡುತ್ತೇವೆ ಎಂದು ಒಪ್ಪಿಕೊಂಡರು.


ಹೆಬ್ಬಾರರ ನಿಷೆ ಮತ್ತು ನಿಷ್ಪಕ್ಷಪಾತಕ್ಕೆ ಅವರ ನಾಲ್ಕು ವರ್ಷಗಳ ಅಧ್ಯಕ್ಷತೆಯ ಪರ್ವದಲ್ಲಿ ಹಲವು ಉದಾಹರಣೆಗಳು ಸಿಗುತ್ತವೆ. ೧೯೮೧ರಲ್ಲಿ ಹೈದರಾಬಾದಿನಲ್ಲಿ ನಡೆದ ಕಾರ್ಯನಿರ್ವಾಹಕಸಭೆ ಅಕಾಡೆಮಿ ಫೆಲೋಶಿಪ್‌ಗೆ ಐವರು ಅಯೋಗ್ಯರನ್ನು ಆರಿಸ ವರಿಷ್ಠ ಮಂಡಳಿಗೆ ಕಳಿಸಿಕೊಟ್ಟಿತು. ಹೆಬ್ಬಾರರ ಅಧ್ಯಕ್ಷತೆಯ ಈ ಮಂಡಳಿ ಸಾರಾಸಗಟು ಈ ಅಯೋಗ್ಯರ ಶಿಫಾರಸ್ಸುಗಳನ್ನು ತಿರಸ್ಕರಿಸಿತು. ನಿಷ್ಠುರತೆ ತೋರಿಸಿದ್ದರಿಂದ ಮುಂದಿನ ವರ್ಷಗಳಲ್ಲಿ ಸಾಂಕೋ ಚೌಧರಿ, ದಾಸಗುಪ್ತ, ಟಿ.ಎಸ್.ಕುಲಕರ್ಣಿ, ಎಂ.ಎಸ್. ರಾಂಧವಾ,



ರಝಾ, ಅರಾ ಮುಂತಾದ ಅರ್ಹತೆಯುಳ್ಳ ಕಲಾವಿದರಿಗೆ ಪ್ರಶಸ್ತಿ ದೊರಕುವಂತಾಯಿತು. ಮುಂಬಯಿ ಆರ್ಟ್ ಸೊಸೈಟಿಯಲ್ಲಿ ಅರಾನಿಗೂ ತನಗೂ ಭಿನ್ನಾಭಿಪ್ರಾಯ ಬಂದು ತಾನು ಹೊರಬೀಳಬೇಕಾದದ್ದಕ್ಕೆ ಬೇಸರವಾದರೂ ಆರಾನ ಕಲಾಶ್ರೇಷ್ಠತೆಯ ಬಗ್ಗೆ ಅನುಮಾನವಿಲ್ಲದೆ ಆತನನ್ನು ಫೆಲೋಶಿಪ್‌ಗೆ ಸೂಚಿಸಿದವರೇ ಹೆಬ್ಬಾರರು.

ಇಷ್ಟಾಗಿಯೂ ಅಕಾಡೆಮಿಯ ಪ್ರಶಸ್ತಿಗಳ ಬಗ್ಗೆ ಫೆಲೋಶಿಪ್‌ಗೆ ಆಯ್ಕೆಗಳ ಬಗ್ಗೆ, ಕಲಾವಿದರ ಚಿತ್ರಗಳನ್ನು ಪ್ರದರ್ಶನಗಳಿಗೆ ಆಯ್ಕೆ ಮಾಡುವ ಸಂದರ್ಭದಲ್ಲಿ ಪಕ್ಷಪಾತ ತನದೇ ಆರೋಪ ಬಂದರೆ ಅದು ಮನುಷ್ಯಸ್ವಭಾವವೆಂದು ತಿಳಿಯಬೇಕು. ಯಾರೂ, ಮುಖ್ಯವಾಗಿ ಹತ್ತಾರು ಜನರು ಸೇರಿದ ಸಮಿತಿಯೊಂದು ನಿರ್ಣಯ ಕೈಗೊಳ್ಳುವಾಗ ಸಂಪೂರ್ಣವಾಗಿ ವಸ್ತುನಿಷ್ಠತೆ ಅರ್ಥಾತ್ ೧೦೦ ಶೇಕಡಾ ನಿಷ್ಪಕ್ಷಪಾತನಿರ್ಣಯ ಆದೀತೆಂದು ಭಾವಿಸುವುದು ಸರಿಯಲ್ಲವೇನೋ. ಹತ್ತರಲ್ಲಿ ಐದು ಆಯ್ಕೆ ಅರ್ಹತೆಯ ಮೇಲೆ ಆಗುವುದರಲ್ಲಿ ಸಂತೋಷಪಡಬೇಕು. ವರ್ಷಕ್ಕೆ ೨೦-೩೦ ಲಕ್ಷ ರೂಪಾಯಿಗಳ ಬಜೆಟನ್ನು ಹೊಂದಿಸಿಕೊಟ್ಟು, ಅಕಾಡೆಮಿ ಸದಸ್ಯರ ಔಚಿತ್ಯ ಪ್ರಜ್ಞೆಗೆ ಸಂದ ವಿಷಯವೆಂದು ಸರಕಾರ ನೀಡುವ ಸ್ವಾತಂತ್ರ್ಯವನ್ನು ಬೆಲೆಯರಿತು ಅಳವಡಿಸಿ ಸೇವಾಭಾವದಿಂದ ದುಡಿಯಬೇಕು. ಹಾಗೆ ದುಡಿಯುವ ಸದವಕಾಶವೆಂದು ಹೆಬ್ಬಾರರು ತಮ್ಮ ಅಧ್ಯಕ್ಷತೆಯ ನಾಲ್ಕು ವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಸಂಪೂರ್ಣಗೊಳಿಸಿದರು.

ಮೂರು ವರ್ಷಕ್ಕೊಮ್ಮೆ ಲಲಿತಕಲಾ ಅಕಾಡೆಮಿ ನಡೆಸುವ ಟ್ರಿನಾಲೆಗಾಗಿ ೨೦-೩೦ ಲಕ್ಷ ಹಣವನ್ನು ವಿನಿಯೋಗಿಸುವುದು ಸಾಧುವಾದ್ದೇ ಎಂದು ಕೇಳಿದರೆ ಹೆಬ್ಬಾರರು ಅದರ ಪ್ರಯೋಜನವನ್ನು ಬಣ್ಣಿಸುತ್ತಾರೆ. ಒಂದು ಅಂತಾರಾಷ್ಟ್ರೀಯ ಕಲೋತ್ಸವಕ್ಕೆ ೨೦-೩೦ ಲಕ್ಷ ತಗಲಿದರೆ ಅದೇನೂ ಹೆಚ್ಚಲ್ಲ ನಮ್ಮ ಕಲಾವಿದರ ಕೃತಿಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲೇ ತುಲನೆ ಮಾಡುವುದಕ್ಕೆ ಇದೊಂದು ಸುವರ್ಣಸಂದರ್ಭ, ಕಲಾವಿದರಿಗೂ ವಿಶ್ವಕಲಾ ಪಪಂಚದಲ್ಲಿ ತಮ್ಮ ಸ್ಥಾನವೆಲ್ಲಿ ಎಂದು ಗುರುತಿಸಿಕೊಳ್ಳಲು ಟ್ರಿನಾಲೆ ಅನುಕೂಲ. ಹೆಚ್ಚಿನ ಕಲಾವಿದರಿಗೆ ವಿದೇಶಗಳಲ್ಲಿ ತಮ್ಮ ಪ್ರದರ್ಶನ ನಡೆಸುವುದಾಗಲಿ ಬರಿದೆ ಅಲ್ಲಿನ ಪ್ರದರ್ಶನಗಳನ್ನು ನೋಡುವುದಕ್ಕಾಗಿ ಹೋಗುವುದಾಗಲೀ ಸುಲಭವಲ್ಲ. ಅದಕ್ಕೆ ಅಂತಾರಾಷ್ಟ್ರೀಯ ಚಿತ್ರಗಳನ್ನೇ ಮನೆಬಾಗಿಲಿಗೆ ಕರೆದು ತೋರಿಸುವುದು ನಮ್ಮ ಕಲಾವಿದರ ಜ್ಞಾನಪರಿಧಿಯ ವಿಸ್ತಾರಕ್ಕೂ, ತುಲನಾತ್ಮಕ ವಿಮರ್ಶೆಗೂ ಹಿತಕರವಾಗಿರುತ್ತದೆ. ಸಾರ್ವಜನಿಕರಿಗೂ ಇದೊಂದು ಒಳ್ಳೆಯ ಅವಕಾಶ. ನಮ್ಮ ಕಲಾವಿದರು ಬೇರೆಯವರಿಗಿಂತ ಕಡಿಮೆ ಇಲ್ಲವೆಂಬುದನ್ನು ತೋರಿಸುವಂತೆ ಎಂಟರಲ್ಲೊಂದು ಪ್ರಶಸ್ತಿ ಭಾರತೀಯ ಕಲಾವಿದನಿಗೆ ಸಿಕ್ಕಿತು. ತಂತ್ರದಲ್ಲಾಗಲಿ, ಶೈಲಿಯಲ್ಲಾಗಲಿ, ದರ್ಶನದಲ್ಲಾಗಲಿ, ಭಾರತೀಯ ಕಲಾವಿದ




ಇತರರಿಗೆ ಸಮಸ್ಪರ್ಧಿಯಾಗಿ ನಿಲ್ಲಬಲ್ಲನೆಂಬ ಅಂಶ ಟ್ರನಾಲೆ ಸಾರ್ಥಕ ಪ್ರಯತ್ನವೆಂಬುದನ್ನು ಸಾರುತ್ತದೆ.

ದಿಲ್ಲಿಯಲ್ಲಿ ಮಾತ್ರವಲ್ಲದೆ ದೇಶದ ಇತರ ಭಾಗಗಳಲ್ಲೂ ಕಲಾಭಿವೃದ್ಧಿಯಾಗುವಂತೆ ಅಕಾಡೆಮಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಅಕಾಡೆಮಿ ಅಲ್ಲಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲುದ್ದೇಶಿಸಿದೆ. ಕಲಾವಿದರ ಕಮ್ಮಟಗಳನ್ನು ಏರ್ಪಡಿಸುವುದು, ಅವರಿಗೆ ಸ್ಟುಡಿಯೋ ಸೌಕರ್ಯವನ್ನು ಒದಗಿಸುವುದು, ಕಲಾವಿದ ಶಿಬಿರಗಳನ್ನು ಸಂಘಟಿಸುವುದು, ವಿವಿಧ ರಾಜ್ಯಗಳ ಕೃತಿಗಳನ್ನು ಒಂದೆಡೆ ಸೇರಿಸಿ ಅಂತಾರಾಜ್ಯ ಕಲಾಪ್ರದರ್ಶನ ಸಂಯೋಜಿಸುವುದು ಮುಂತಾದ ಕೆಲಸಗಳನ್ನು ಪ್ರಾದೇಶಿಕ ಕೇಂದ್ರಗಳು ಮಾಡುತ್ತಿವೆಯಷ್ಟೆ ಮದ್ರಾಸ್ ಕೇಂದ್ರದ ಚಟುವಟಿಕೆಯ ವ್ಯಾಪ್ತಿಯಲ್ಲಿ ಕೇರಳ, ಕರ್ನಾಟಕ, ಆಂಧ್ರದ ಕಲಾವಿದರನ್ನು ಸೇರಿಸಿಕೊಳ್ಳುವ ಯೋಚನೆ ಹೆಬ್ಬಾರರ ಅಧ್ಯಕ್ಷತೆಯ ಕಾಲದಲ್ಲಿ ಸೂಚಿತವಾಯಿತು. ಲಕ್ನೋ ಕೇಂದ್ರದ ಉದ್ಘಾಟನೆ ಅವರ ಕಾಲದಲ್ಲೇ ಆಯಿತು. ಮುಂದೆ ಪಂಜಾಬ, ಹಿಮಾಚಲ, ರಾಜಸ್ಥಾನಗಳಲ್ಲಿ, ವಾಯುವ್ಯ ಭಾರತದಲ್ಲೂ ಪ್ರಾದೇಶಿಕ ಕೇಂದ್ರಗಳಿಗೆ ನೀಲನಕಾಶೆ ಸಿದ್ಧವಾಯಿತು. ಇದರಲ್ಲಿ ಕೇಂದ್ರ ಅಕಾಡೆಮಿಗೆ ರಾಜ್ಯ ಸರಕಾರಗಳು ಹಾರ್ದಿಕವಾಗಿ ಬೆಂಬಲ ನೀಡಬೇಕಾಗುತ್ತದೆ. ಕೇಂದ್ರದ ಕಟ್ಟಡಕ್ಕೆ ಸ್ಥಳ ಒದಗಿಸಿ ಕಟ್ಟಡ ಕಟ್ಟುವ ವೆಚ್ಚದ ಶೇಕಡ ೫೦ರಷ್ಟು ಹಣವನ್ನು ಸಲುವಳಿ ಮಾಡಿದರೆ ಆಮೇಲೆ ಕೇಂದ್ರದ ಸಿಬ್ಬಂದಿ ಸಲಕರಣೆಯ ವಾರ್ಷಿಕವೆಚ್ಚವನ್ನು ಕೇಂದ್ರ ಅಕಾಡೆಮಿಯೆ ನೋಡಿಕೊಳ್ಳುತ್ತದೆ. ಹೀಗಿದ್ದೂ ರಾಜ್ಯಸರಕಾರಗಳು ಈ ವಿಷಯದಲ್ಲಿ ಮಂದಗಮನ ಮಾಡುತ್ತಿವೆ. ಮುಂಬಯಿ ಸರಕಾರವಂತೂ ತನ್ನ ಬಳಿ ಒಂದುಕಲಾ ಡೈರೆಕ್ಟರೇಟ್ ಇರುವಾಗ ಬೇರೆ ಅಕಾಡೆಮಿ ಕೇಂದ್ರವೆಂದು ಹೆಗ್ಗಳಿಸುತ್ತಿದೆ. ಡೈರೆಕ್ಟೋರೇಟ್ ಕಲಾಶಿಕ್ಷಣಕ್ಕಾಗಿ ಇರುವುದೇ ಹೊರತು, ಪ್ರಸಾರಕ್ಕಲ್ಲ. ಕಲಾವಿದರ ಸಂಘಟನೆಗಾಗಿ ಅಲ್ಲವೆಂಬ ಸಾಮಾನ್ಯ ತಿಳುವಳಿಕೆಗಳಿಗೂ ಅಧಿಕಾರಸ್ಥರು ಕಿವಿಗೊಡದೆ ಠೆಂಕಾರದಲ್ಲೇ ಮುಳುಗಿಕೊಂಡಿದ್ದಾರೆ.


ಹೆಬ್ಬಾರರ ಅಧಿಕಾರಾವಧಿಯಲ್ಲಿ ಅಕಾಡೆಮಿ ಪ್ರಕಟಣೆಗಳ ಮರುಮುದ್ರಣ ಯಥಾಪ್ರಕಾರ ನಡೆದೆ ನಡೆಯುತ್ತಿತ್ತು. ವರ್ಣಚಿತ್ರಗಳ ಮುದ್ರಿತ ಪ್ರತಿಗಳು. ಸಮಕಾಲೀನ ಭಾರತೀಯ ಕಲೆಯ ಹೊತ್ತಿಗೆಗಳ ಸಂಪುಟ ಪ್ರಕಟಿತವಾಗುತ್ತಲೇ ಇವೆ. ಈ ಪೈಕಿ ಜಾನಪದ ಕಲೆಯ ಬಗ್ಗೆ ವಿಶಿಷ್ಟ ಸಂಶೋಧನಾತ್ಮಕ ಕೃತಿಗಳನ್ನು ಪ್ರಕಟಿಸುವ ಯೋಜೆ ಮೊತ್ತ ಮೊದಲಿಗೆ ಫಲಿಸಿದ್ದು ಡಾ. ಜ್ಯೋತೀಂದ್ರ ಜೈನರ ಸೃಷ್ಟಿಯ ಮಿಥಗಳು ಮಿತ್ಸ್ ಆಫ್ ಕ್ರಿಯೇಶನ್‌ನಲ್ಲಿ ಇದು ರಾಜಸ್ಥಾನದ ಬುಡಕಟ್ಟಿನ ಜನರ ವಿಲಕ್ಷಣ ಕಲೆಯ ಆಳವಾದ ಅನ್ವೇಷಣೆ. ಇದೇ ರೀತಿ ವರ್ಲಿ ಕಲೆಯ ಬಗ್ಗೆಯೂ ಒಂದು ಗ್ರಂಥ ರಚಿತವಾಗಿದೆ. ಅಕಾಡೆಮಿ ಪ್ರಕಟಣೆಗಳ ಇತಿಹಾಸಕ್ಕೆ ನೂತನ ಆಯಾಮವೊಂದು ಈ ಗ್ರಂಥಗಳಿಂದ ಪ್ರಾಪ್ತವಾಗಿದೆ.

ಸಿದ್ಧಿ ಸಾಧನೆಗಳೇನೆ ಇರಲಿ ಹೆಬ್ಬಾರರ ಅಧ್ಯಕ್ಷತೆಯ ಕಾರ್ಯ ವೈಖರಿಯಲ್ಲಿ ಅವರ ಕರ್ತವ್ಯಪ್ರಜ್ಞೆ



ಅನುಕರಣೀಯವಾಗಿತ್ತು. ಸಭೆಯ ಕಲಾಪಗಳು ಎಷ್ಟು ದೀರ್ಘವಾಗಿದ್ದರೂ ಅದನ್ನು ನಿರ್ವಹಿಸಲೇಬೇಕು. ಆರೋಗ್ಯ ಅಷ್ಟು ಸುಸ್ಥಿತಿಯಲ್ಲಿಲ್ಲದಿರುವಾಗಲೂ ಕರೆದ ಸಭೆಯ ವಜಾಮಾಡದೆ ಎರಡು ದಿನ ಸಂಕಟದಲ್ಲಿಯೇ ಸಭೆಯನ್ನು ನಟ್ಟಿರುಳವರೆಗೂ ನಡೆಸಿಕೊಟ್ಟ ಉದಾಹರಣೆಗಳಿವೆ. ಸದಸ್ಯರ ಅಭಿಪ್ರಾಯಕ್ಕೆ ಸರ್ವದಾ ಅವಕಾಶ, ಮನ್ನಣೆ, ಅಭಿಪ್ರಾಯವನ್ನು ಸಮಿತಿಗಳ ಮುಂದೆ ಇರಿಸಿದರೂ ಅದು ಬಹುಮತಕ್ಕೆ ಅಧೀನವಾಗಿ ಸ್ವೀಕೃತವಾಗತಕ್ಕದ್ದು ಅಥವಾ ಬಿಡತಕ್ಕದ್ದು. ಚರ್ಚೆಗಳು ಮುಕ್ತವಾಗಿರಬೇಕು. ನಿರ್ಣಯಗಳು ನ್ಯಾಯಸಮ್ಮತವಾಗಿರಬೇಕು. ಯಾವುದರಲ್ಲೇ ಆದರೂ ವಶೀಲಿಬಾಜಿಗಿಂತ ಅರ್ಹತೆಗೆ ಆದ್ಯತೆ ಸಿಗಬೇಕು. ಹೆಬ್ಬಾರರ ಈ ನಿಲುವನ್ನು ಹೆಚ್ಚಿನ ಸದಸ್ಯರು ಅನುಮೋದಿಸಿದ್ದರು. ಅವಧಿಯ ಕೊನೆಯ ಕೆಲ ತಿಂಗಳಲ್ಲಿ ಒಬ್ಬ ಸದಸ್ಯರ ಸ್ವಾರ್ಥಪೂರಿತ ಸಂಚುಹೊಂಚುಗಳನ್ನು ಬಿಟ್ಟರೆ ನಾಲ್ಕು ವರ್ಷಗಳ ಅವಧಿಯಲ್ಲೂ ಅಕಾಡೆಮಿ ಸಭೆಗಳ ವಾತಾವರಣ ನಿರ್ಮಲವಾಗಿಯೇ ಇತ್ತು. ಅಕಾಡೆಮಿ ಕಚೇರಿಯ ವೇದಪ್ರಕಾಶ ಮತ್ತು ಪ್ರಕಟಣ ವಿಭಾಗದ ಆತ್ಮೀಯ ಮಿತ್ರ ಕೃಷ್ಣನ್ ಸಾವು ತುಂಬಲಾರದ ನಷ್ಟವೆನಿಸಿತು. ಅಕಾಡೆಮಿಯ ಮಹೋದ್ದೇಶಕ್ಕೆ ಅರ್ಪಿಸಿಕೊಂಡ ಹೆಬ್ಬಾರರ ಸ್ನೇಹಶೀಲವರ್ತನೆಯನ್ನು ಬಹುಸಂಖ್ಯಾತ ಸದಸ್ಯರು ವಯೋಬೇಧವಿಲ್ಲದೆ ಗಮನಿಸಿ ಒಟ್ಟಿನಲ್ಲಿ ರಾಷ್ಟ್ರದ ಕಲಾಕಾರ್ಯ ಸುಗಮವಾಗುವಂತೆ ನೆರವಾದರೆಂದೆ ಹೆಬ್ಬಾರರಿಗನಿಸಿದೆ. ಲಕ್ನೋ ಮತ್ತು ಕಲ್ಕತ್ತದ ಪ್ರಾದೇಶಿಕ ಕೇಂದ್ರಗಳು ಉದ್ಘಾಟಿತವಾದದ್ದು ಹಾಗೂ ಭುವನೇಶ್ವರ ಕೇಂದ್ರಕ್ಕೆ ಶಂಕುಸ್ಥಾಪನೆ ಆದದ್ದು ಹೆಬ್ಬಾರರ ಚತುರ್ವಾಷಿಕ ಅವಧಿಯಲ್ಲಿ. ಮದ್ರಾಸ್ ಕೇಂದ್ರದಲ್ಲಿ ಎರಡನೇ ಹಂತದ ಕಟ್ಟಡಗಳೂ ಎದ್ದು ನಿಂತುವು.

ಭಾರತದ ಚಿತ್ರಕಲಾ ಪ್ರಪಂಚಕ್ಕೆ ಕರ್ನಾಟಕ ನೀಡಿದ ಕೊಡುಗೆಯ ಜೊತೆ ಕಲಾವಿದ ಹೆಬ್ಬಾರರು ವೈಯಕ್ತಿಕವಾಗಿಯೂ, ವಿಶ್ವವಿದ್ಯಾಲಯಗಳ ಮೂಲಕವೂ ತಮ್ಮ ರಾಜ್ಯದೊಡನೆ ಸಂಬಂಧವಿರಿಸಿ ಕೊಂಡರೂ ರಾಜ್ಯದ ಕಲಾಸನ್ನಿವೇಶದ ಮೇಲೆ ಅವರು ನೇರವಾಗಿ ಪ್ರಭಾವ ಬೀರಲು ಶಕ್ಯರಾಗಿದ್ದು ಅವರು ಅಲ್ಲಿನ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಮೇಲೆ ೧೯೭೭- ೭೯ ಸಾಹಿತ್ಯರಂಗದಲ್ಲಿ ಕಳೆದ ೨೦ ವರ್ಷಗಳಲ್ಲಿ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಹೀಗೆ ನಾಲ್ಕು ಜ್ಞಾನಪೀಠ ಪ್ರಶಸ್ತಿಯನ್ನೂ ಸಂಗೀತ ಕ್ಷೇತ್ರದಲ್ಲಿ ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು ಅಂಥ ಸಂಗೀತಗಾರರನ್ನು ಅರ್ಪಿಸಿದ ಕರ್ನಾಟಕ ಅಷ್ಟೇ ಸಂಖ್ಯೆಯಲ್ಲಿ ಅಷ್ಟೇ ಮಟ್ಟದಲ್ಲಿ ಹೆಬ್ಬಾರ ಒಬ್ಬರನ್ನು ಬಿಟ್ಟರೆ ಅದೇಕೆ ಚಿತ್ರಕಲಾವಿದರನ್ನು ಸೃಷ್ಟಿ ಮಾಡಲಿಲ್ಲ ಸುಪ್ರಸಿದ್ಧರೆನಿಸಿಕೊಂಡ ಕರ್ನಾಟಕದ ಕಲಾವಿದರಿಗೆ ಭಾರತೀಯ ಕಲಾಪ್ರಪಂಚದೊಳಗೆ ಯಾವ ಸ್ಥಾನವನ್ನೂ ಗಳಿಸಲು ಏಕೆ ಆಗಲಿಲ್ಲ ಎಂಬುದನ್ನು ಯೋಚಿಸಬೇಡವೇ ಅಲ್ಪತೃಪ್ತಿ, ಆತ್ಮರತಿ, ಹೊರಗಿನ ಸಂಪರ್ಕದ ಅಳುಕು, ಸ್ಪರ್ಧಾ




ಶಕ್ತಿಗಳ ಅಭಾವದಿಂದ ಬೆಳವಣಿಗೆಗೆ ನಿಂತ ನೀರಾಯಿತು. ಶಿಲ್ಪವಾಸ್ತುಗಳ ಗತವೈಭವವನ್ನು ಜ್ಞಾಪಿಸಿಕೊಳ್ಳುವಾಗಲೂ ಸಾರ್ವಜನಿಕ ಪ್ರಜ್ಞೆಗೆ ಬೇಲೂರು ಹಳೆಬೀಡುಗಳ ಕುಸುರಿಕಲೆ, ಐಹೊಳೆ, ಬಾದಾಮಿ, ಪಟ್ಟದಕಲ್ಲಿನ ಗಟ್ಟಿಕಲೆಯನ್ನು ಹಿಂತಳ್ಳಿದ ಮಾಯಾಮೃಗವಾತು. ಇದರಿಂದ ತಪ್ಪು ಹಾದಿ ಹಿಡಿದ ರಾಜ್ಯದ ಕಲಾವಿದರು ಕಣ್ತೆರೆದು ಭಾರತೀಯ ಕಲೆಯ ಪ್ರವಾಹದಲ್ಲಿ ಈಜಲು ಬಯಸಲಿಲ್ಲ. ರಾಜ್ಯದ ಅಕಾಡೆಮಿಯಾದರೂ ಹಲಗಾಲ ಕನ್ನಡದ ಅಭಿಮಾನಕ್ಕೆ ಕಟ್ಟುಬಿದ್ದು ಕನ್ನಡ ಸೀಮೆಯೊಳಗೆ ಕುಂಚವಾಡಿಸಿದವರೆಲ್ಲರೂ ಉತ್ತಮ ಕಲಾವಿದರೆಂಬ ಭ್ರಮೆಯಲ್ಲಿ ನಿಷ್ಠುರ ಮಾನದಂಡಗಳಿಗೆ ಮನ ಒಲಿಯಲಿಲ್ಲ.

ಹೆಬ್ಬಾರರು ಅಧ್ಯಕ್ಷರಾದುದು ಈ ಪರಿಸ್ಥಿತಿ ತುಸುವೇ ಹಿಮ್ಮೆಟ್ಟುತ್ತಿರುವ ಕಾಲದಲ್ಲಿ, ಯುವಪೀಳಿಗೆಯ ಕಲಾವಿದರು ಪ್ರಯೋಗಶೀಲರಾಗಿ ತಮ್ಮ ವ್ಯವಸಾಯವನ್ನು ಪುನಃ ಸಂಘಟಿಸಿಕೊಳ್ಳಬೇಕೆಂಬ ತವಕದಲ್ಲಿರುವಾಗ, ಹೆಬ್ಬಾರರಂಥ ಅಂತಾರಾಷ್ಟ್ರೀಯ ಮಟ್ಟವನ್ನು ಮುಟ್ಟಿದ ಹಿರಿಕಲಾವಿದನೊಬ್ಬ ಅಧ್ಯಕ್ಷನಾಗಿ ಬಂದರೆ ಕರ್ನಾಟಕದ ಕಲಾ ಪರಿಸರ ಉತ್ತಮಿಕೆಯತ್ತ ಧಾವಿಸುವುದೆಂಬ ವಿಶ್ವಾಸ ಅವರಲ್ಲಿ ಮೂಡಿದ ಸಂದರ್ಭದಲ್ಲಿ.

ಹೆಬ್ಬಾರರು ಯುವ ಕಲಾವಿದರ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಒಂದನೆಯದಾಗಿ ರಾಜ್ಯ ಅಕಾಡೆಮಿಯ ಕಲಾಪ್ರದರ್ಶನ ಆಯ್ಕೆಗೆ ರಾಜ್ಯದ ಹೊರಗಿನಿಂದ ಇಬ್ಬರು ನಿರ್ಣಾಯಕರನ್ನು ಕರೆತಂದರು. ೨೦೦೦ ರೂಪಾಯಿಗಳ ಪ್ರಶಸ್ತಿಗೆ ನಾಲ್ಕು ಒಳ್ಳೆಯ ಚಿತ್ರಗಳೂ ಒಂದು ಶಿಲ್ಪವೂ ಆಗಿಸಲ್ಪಟ್ಟವು. ಎರಡನೆಯದಾಗಿ ಕರ್ನಾಟಕದ ಕಲಾವಿದರಿಗೆ ಬರೋಡಾ ಸ್ಕೂಲ್ ಹಾಗೂ ಶಾಂತಿನಿಕೇತನಗಳಲ್ಲಿ ಶಿಕ್ಷಣ ಪಡೆಯುವ ಸಲುವಾಗಿ ಒಂದು ವರ್ಷದಲ್ಲಿ ಈ ಕಲಾವಿದರಲ್ಲಿ ಒಬ್ಬಳು ಪುಷ್ಪಮಾಲಾ ದಿಲ್ಲಿಯ ಅಂತಾರಾಷ್ಟ್ರೀಯ ಪ್ರದರ್ಶನದಲ್ಲಿ ಬಹುಮಾನ ಗಳಿಸಿಬಿಟ್ಟಳು. ಮೂರನೆಯದಾಗಿ ಅಖಿಲ ಭಾರತ ಕಲಾಪ್ರದರ್ಶನವೊಂದನ್ನು ಕರ್ನಾಟಕ ರಾಜ್ಯ ಅಕಾಡೆಮಿ ಆಶ್ರಯದಲ್ಲಿ ಸಂಘಟಿಸಿದರು. ಇದು ಇಂಥ ಅಖಿಲಭಾರತ ನಿಟ್ಟಿನ ಪ್ರದರ್ಶನಗಳಲ್ಲಿ ಮೊದಲನೇ ಬಾರಿಗೆ ನಡೆದದ್ದು. ತನ್ನ ಕೃತಿಗೆ ತಾನೇ ಮಣಿಯುವುದು ಜ್ಞಾನದಿಂದಲೋ ಅಜ್ಞಾನದಿಂದಲೋ ಬೇರೆ ಕೃತಿಗಳನ್ನು ನೋಡಬಯಸದ ಉಷ್ಟ್ರಪಕ್ಷಿ ಧೋರಮೆ ಒಂದು ಸ್ವ-ರಕ್ಷಣ ತಂತ್ರವಾಗಿರಬಹುದೆ ಕಲಾವಿದನಿಗೆ ತನ್ನ ಪ್ರಪಂಚದ ಪ್ರತ್ಯಕ್ಷ ಅರಿವು ಮೂಡುತ್ತದೆ.

ಹೀಗೆಯೇ ಕಲಾವಿದ ಕೆ. ಕೆ. ಹೆಬ್ಬಾರರು ತಮ್ಮ ನಿತ್ಯದ ಕಲಾಚಟುವಟಿಕೆಗಳಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದರು. ಶಿಸ್ತಿನ ಸಿಪಾಯಿಯಾಗುವುದರ ಜೊತೆಗೆ ಅನೇಕ ಸ್ನೇಹಿತರ ಬಳಗವನ್ನು ಸಂಪಾದಿಸಿದವರು. ಹಳ್ಳಿಯಿಂದ ಪ್ರಾರಂಭಿಸಿದ ಕಲಾಚಟುವಟಿಕೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ



ಗುರುತಿಸುವಿಕೆಯ ಕಾಲಘಟ್ಟವನ್ನೇರಿದ ಕಲಾವಿದರು ಅನೇಕ ಉಪಯುಕ್ತ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮುಖೇನ ಜಾರಿಗೊಳಿಸಿದ ವ್ಯಕ್ತಿಯು ಹೌದು. ಜೀವನದ ತನ್ನ ಬದುಕಿನ ಬವಣೆಗಳನ್ನು ವಿನೂತನವಾಗಿ ರೂಪಿಸಿದ ಕಲಾವ್ಯಕ್ತಿಯಾಗಿ ಪ್ರಜ್ವಲಿಸಿದ ಕಲಾವಿದನೂ ಶ್ರೀ ಸಾಮಾನ್ಯನೆಂಬಂತೆ ಚರಿತ್ರೆಯಲ್ಲಿ ಗುರುತಿಸಿಕೊಂಡಿರುವ ಕಲಾವಿದ ಕೆ. ಕೆ. ಹೆಬ್ಬಾರರೂ ಅನೇಕ ಪ್ರದರ್ಶನಗಳು, ಶಿಬಿರಗಳು ಹಾಗೂ ಸಂಘ ಸಂಸ್ಥೆಗಳು ನೀಡುವ ಉನ್ನತ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿ ಸೈ ಎನಿಸಿಕೊಂಡವರು.


ಸುಮಾರು ೨೦ ವರ್ಷಗಳ ಕಾಲ ಕೇಂದ್ರ ಲಲಿತಕಲಾ ಅಕಾಡೆಮಿಯಂಥಹ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವ ಹಾಗೂ ಉಪಯುಕ್ತ ಕೊಡುಗೆಯನ್ನು ಕಲಾಪ್ರಪಂಚಕ್ಕೆ ನೀಡಿದ ಹೆಬ್ಬಾರರದ್ದು ವಿಭಿನ್ನ ವ್ಯಕ್ತಿತ್ವವೆಂದೆನ್ನಬಹುದು. ಅವರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಬಂದಿದ್ದು, ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಹೆಸರಿಸಲಾಗಿದೆ.

ಕೆ. ಕೆ. ಹೆಬ್ಬಾರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

೧೯೪೫ರಲ್ಲಿ ಬಾಂಬೆಯ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಮಾಡಿದ ನಂತರ ಹೊರದೇಶದ ಮಹಾನ್ ನಗರಗಳಿಂದ ಲಂಡನ್, ಪ್ಯಾರಿಸ್, ಬರ್ನ್‌ಗಳಲ್ಲಿ ೧೯೫೦ರಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ನಡೆಸಿದರು. ಹೆಬ್ಬಾರರು ಏಕಾಂಗಿ ಪ್ರದರ್ಶನವನ್ನು ಹೆಚ್ಚು ಮಾಡಿದ್ದಾರೆ. ಮುಖ್ಯವಾಗಿ ಏಕಾಂಗಿ ಪ್ರದರ್ಶನದಲ್ಲಿ ಕಲಾವಿದನಿಗೂ ಸಮಾಜಕ್ಕೂ ಸಂಬಂಧ ಬೆಳೆಯುತ್ತದೆ. ಕಲಾವಿದ ಅದುವರೆಗೆ ಮುಟ್ಟಿದ ಮಜಲು ಯಾವುದು, ಇನ್ನೂ ಮುಂದಿನನ ಗುರಿ ಏನೆಂಬುದು ಪ್ರದರ್ಶನದಲ್ಲಿ ಪ್ರಕಟವಾಗುತ್ತದೆ. ಹಾಗೆಯೇ ಚಿತ್ರ ಕಲಾಕೃತಿಗಳ ಪ್ರದರ್ಶನಗಳ ಸಂಘಟನೆಯಲ್ಲಿ ಹೆಬ್ಬಾರರ ಅನುಭವ ಅವರ ಸಮಕಾಲೀನ ಕಲಾವಿದರೆಲ್ಲರಿಗಿಂತಲೂ ಹೆಚಚು ಮನನೀಯ. ಏಕೆಂದರೆ ಪ್ರತಿಯೊಂದು ಪ್ರದರ್ಶನದ ಹಿನ್ನೆಲೆಯಲ್ಲಿ ಅವರ ವಿಶಿಷ್ಟ ಗುಣಶೀಲಗಳ ಪ್ರವರ್ತನೆ ಇದೆ. ಇದಿರಿಸಿದ ತತ್ಕಾಲಿನ ಸಮಸ್ಯೆಗಳ ಪರಿಜ್ಞಾನವಿರುತ್ತದೆ ಎಂಬುದನ್ನು ಕಾಣಬಹುದು.

ಇಂಡೋ-ಸೋವಿಯತ್ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ೧೯೪೫ರಲ್ಲಿ ಹೆಬ್ಬಾರರು ಅಫಘಾನಿಸ್ತಾನ, ಸೋವಿಯತ್ ರಷಿಯಾ, ಪೋಲ್ಯಾಂಡ್, ಜರ್ಮನಿಗಳ್ಲಲಿ ಸಂಚಾರ ಮಾಡುವಾಗ ಬಿಡಿಸಿದ್ದ ಸ್ಕೆಚ್ ಆಧಾರಿತ ಚಿತ್ರಗಳ ಪ್ರದರ್ಶನ ಮುಂಬಯಿಯ ಭೂಲಬಾಯಿ ಸ್ಮಾರಕ ಸಂಸ್ಥೆಯಲ್ಲಿ ಆರಂಭವಾಯಿತು. ಈ ಕಲಾಕೃತಿಯ ಪ್ರದರ್ಶನವನ್ನು ಡಾ. ಮುಲ್ಕರಾಜ್ ಆನಂದರು ಎಡಪಂಥಿಯ ಭಾಷಣದಿಂದ ಉದ್ಘಾಟಿಸಿದರು.

೧೯೬೧ರಲ್ಲಿ ಬ್ರಿಜೆಲ್‌ನ ಸಾವೊಪಾ ಪ್ಲೊದಲ್ಲಿ ನಡೆದ ದ್ವೈವಾರ್ಷಿಕ ಅಂತರಾಷ್ಟ್ರೀಯ ಚಿತ್ರೋತ್ಸವಕ್ಕೆ



ಭಾರತವನ್ನು ಪ್ರತಿನಿಧಿಸಿದ ಚಿತ್ರಗಳಲ್ಲಿ ಹೆಬ್ಬಾರರ ಐದು ಚಿತ್ರಗಳಿದ್ದವು, ಅವುಗಳೆಂದರೆ ಮಹಿಮ್‌ದರ್ಗಾ, ಪಂಜರದ ಹಕ್ಕಿಗಳು, ಪ್ರಬಂಧ, ಜಾಡಮಾಲಿ, ಪಥಿಕರು ಇವುಗಳಲ್ಲಿ ಎರಡು ಕಲಾಕೃತಿಗಳು ಮಾರಾಟವಾಗಿದ್ದು, ವಿಶೇಷವಾದ ಅಂಶವಾಗಿದೆ.


೧೯೬೪ರಲ್ಲಿ ತಾಜ್ ಗ್ಯಾಲರಿಯಲ್ಲಿ ಏರ್ಪಡಿಸಿದಾಗ ಚಾವಡಾ ತುಂಬಾ ನೆರವು ನಿಡಿದಂತೆ ಈ ಗ್ಯಾಲರಿಯಲ್ಲಿ ಪ್ರದರ್ಶನವನ್ನು ಮಾಡುವ ಸಂದರ್ಭದಲ್ಲಿ ಆ ಕಲಾವಿದರೇ ಕಲಾಕೃತಿಗಳ್ನನು ತೆಗೆದುಕೊಂಡು ಹೋಗಿ ಪ್ರದರ್ಶನಕ್ಕೆ ಏರ್ಪಾಡಿ ಮಾಡಿದಾಗ ಪ್ಯಾರಿಸ್ ಮತ್ತು ನ್ಯೂಯಾರ್ಕ್‌ನಿಂದ ಲೇಖಕರು ಮತ್ತು ಕಲಾವಿಮರ್ಶಕರು ಬಂದು ಚಿತ್ರಗಳನ್ನು ವೀಕ್ಷಿಸಿ, ಅನೇಕ ಕಲಾಕೃತಿಗಳನ್ನು ಕೊಂಡುಕೊಂಡರು.

೧೯೬೭ರಲ್ಲಿ ಸ್ವಿಝರ್‌ಲ್ಯಾಂಡ್‌ನಲ್ಲಿ ಪ್ರದರ್ಶನ ಆಯೋಜಿಸಿದ ಸಂದರ್ಭದಲ್ಲಿ ಅಲ್ಲಿನ ಭಾರತೀಯರು ತುಂಬಾ ಉತ್ಸಾಹಕರಾಗಿದ್ದರು. ಹೆಬ್ಬಾರರ ಸ್ನೇಹಿತರಿಂದ ಕುಮಾರಿ ಸುನೀಲ ಬ್ಯಾನರ್ಜಿ ಮತ್ತು ಆಕೆಯ ಸ್ನೇಹಿತೆ ಹೆಬ್ಬಾರರ ಸ್ಲೈಡ್‌ಗಳನ್ನು ನೋಡಿ ತಕ್ಷಣ ಪ್ರದರ್ಶನದ ಬಗ್ಗೆ ಯೋಚನೆ ಮಾಡಲಾರಂಭಿಸಿ,ಅಲ್ಲಿನ ರಾಯಭಾರಿ ತ್ರಿವೇದಿಯವರನ್ನು ಭೇಟಿ ಮಾಡಿದಾಗ ಅವರು ಒಪ್ಪದ ಪರಿಸ್ಥಿತಿಯಲ್ಲಿದ್ದರು. ಆ ಸಂದರ್ಭದಲ್ಲಿ ಬಾಸೆಲ್‌ನಲ್ಲಿರುವ ಡಾ. ಮಯರ್‌ರವರರಲ್ಲಿ ಹೋಗಿ ಒಟ್ಟು ಕಲಾಕೃತಿಗಳನ್ನು ಸ್ಲೈಡ್‌ಗಳ ಮೂಲಕ ತೋರಿಸಿದರು. ಆದರೂ ಈ ಸ್ಥಳದಲ್ಲಿ ಪ್ರದರ್ಶನ ಮಾಡಲು ಇಷ್ಟವಿಲ್ಲದ ಕಾರಣ ವಿಶಿಷ್ಟ ರೀತಿಯ ಕಲಾವಿಷಯ ಕುರಿತು ಗೋಷ್ಠಿಯಲ್ಲಿ ಭಾಗವಹಿಸಿ ಅನೇಕ ಉಪಯುಕ್ತ ವಿಚಾರಗಳನ್ನು ತಿಳಿಸಿಕೊಟ್ಟರು.

೧೯೬೯ರಲ್ಲಿ ಹೆಬ್ಬಾರರ ಜೀವನದಲ್ಲಿ ನಡೆದ ಒಂದು ಒಳ್ಳೆಯ ಶುಭದಿನಗಳೆಂದೇ ಹೇಳಬಹುದು. ಅಕಾಡೆಮಿವತಿಯಿಂದ ಬೆಂಗಳೂರಿನಲ್ಲಿ ಫೆಬ್ರವರಿಯಲ್ಲಿನಡೆದರೆ, ಮೈಸೂರಿನಲ್ಲಿಯೂ ಕೂಡ ಅದೇ ಸಮಯದಲ್ಲಿ ಪ್ರದರ್ಶನಗಳು ನಡೆದವು. ಈ ಸಂದರ್ಭದಲ್ಲಿ ಹೆಬ್ಬಾರರು ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕಲೆಯ ಕುರಿತು ವಿಶೇಷ ಉಪನ್ಯಾಸವನ್ನು ಮಾಡಿದರು.

೧೯೭೦ರಲ್ಲಿ ಮುಂಬೈಯಲ್ಲಿ ಸಂಘಟಿಸಲಾದ ಹೆಬ್ಬಾರರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ನೀರಸವಾಗಿ ಮುಗಿಯಿತು. ೧೯೭೩ರಲ್ಲಿ ಹೆಬ್ಬಾರರ ತವರೂರಾದ ಉಡುಪಿಯಲ್ಲಿ ಚಿತ್ರಪ್ರದರ್ಶನವೊಂದು ಜರುಗಿತು. ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ನಮ್ಮೂರಿಗ ಎಂಬ ಹೆಮ್ಮೆಯ ಗೌರವ ತಂದಿತ್ತವನಿಗೆ ನಮನ ಹೇಳುವ ಉದ್ದೇಶವಿಟ್ಟುಕೊಂಡು ಪ್ರದರ್ಶನಕ್ಕೆ ಕಾಲಿಟ್ಟ ಅನೇಕರು ಆಶೀರ್ವಾದ ಜೊತೆಗೆ ಉತ್ತಮ ಕೃತಿಗಳನ್ನು ಕಂಡು ಹಾಡಿ ಹೊಗಳಿದರು.

೧೯೭೫ರಲ್ಲಿ ಜರ್ಮನಿಯ ಪ್ರೇನ್ಸ್ ಹೀಮ್ ನಗರದ ಸೂರ್ಯ ಗ್ಯಾಲರಿಯಲ್ಲಿ ಹೆಬ್ಬಾರರ ಪ್ರದರ್ಶನವಿತ್ತು. ಪಿಕಾಸೋ, ಬ್ರಾಕ್, ಸಸಂಗ್ರಹವನ್ನಿರಿಸಿಕೊಂಡಿದ್ದ ಕಲಾರಸಿಕ ಹರ್ಬಟ್ ಲೇಮನ್



ಹೆಬ್ಬಾರರ ಕೃತಿ ಶೋಧವನ್ನು ಪಡೆದುಕೊಂಡರು. ೧೯೮೪ರ ಜೂನ್‌ನಲ್ಲಿ ಪಶ್ಚಿಮ ಜರ್ಮನಿಯ ಮುನ್ಸ್‌ಟರ್‌ದಲ್ಲಿ ಭಾರತೀಯ ಉತ್ಸವದ ಅಂಗವಾಗಿ ಚಿತ್ರಕಲಾ ಪ್ರದರ್ಶನ ನಡೆಯಿತು. ಇಲ್ಲಿ ಉತ್ತಮವಾದ ಪ್ರತಿಕ್ರಿಯೆ ಸಿಕ್ಕಿತು.

ಭಾರತದಲ್ಲಿರುವ ಅನೇಕ ಚಿತ್ರ ಮತ್ತು ಶಿಲ್ಪ ಕಲಾವಿದರು ರಾಷ್ಟ್ರ ಹಾಘೂ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವುದು ನಮ್ಮ ರಾಷ್ಟ್ರದ ಕೀರ್ತಿಗೆ ಕಿರೀಟವಿಟ್ಟಂತೆ. ಹಾಗೆಯೇ ಚಿತ್ರಕಲಾವಿದರಾದ ಕೆ. ಕೆ ಹೆಬ್ಬಾರರು ಕರ್ನಾಟಕ ರಾಜ್ಯದವರಾದರು. ಹೆಚ್ಚು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಕೆಲಸವನ್ನು ನಿರ್ವಹಿಸಿದ ಏಕೈಕವ್ಯಕ್ತಿ ಎಂದರೆ ತಪ್ಪಿಲ್ಲ. ಕೆ. ಕೆ. ಹೆಬ್ಬಾರರು ತುಂಬಾ ಉತ್ಸುಕದಿಂದ ಕೆಲಸ ನಿರ್ವಹಿಸಿದ ವ್ಯಕ್ತಿಯಾಗಿದ್ದು, ತಮ್ಮ ಕೆಲಸದ ಜೊತೆ ವಿವಿಧ ಕಲಾಚಟುವಟಿಕೆಗಳಲ್ಲಿ ಭಾಗಿಯಾಗಿ ಯಶಸ್ವಿತೊಂಡವರು. ಪ್ರಮುಖವಾಗಿ ಈ ಅಧ್ಯಾಯನವು ಕಲಾವಿದರ ಕಲಾಚಟುವಟಿಕೆಗಳ ಕುರಿತಾಗಿರುವುದು ವಿಶೇಷವಾಗಿದೆ.

ಭಾರತೀಯ ಕಲೆಯನ್ನು ನವೋದಯದ ಕಡೆಗೆ ಕೊಂಡೊಯ್ದ ಭಾರತದ ಅಗ್ರಮಾನ್ಯ ಕಲಾವಿದ ಕೆ. ಕೆ. ಹೆಬ್ಬಾರರು ೨೬ ಮಾರ್ಚ್ ೧೯೯೬ರಲ್ಲಿ ಕಲಾಲೋಕವನ್ನು ತ್ಯಜಿಸಿ ಬಾರದ ಲೋಕಕ್ಕೆ ಹೋದರು. ಆದರೆ ಅವರು ಕಲಾವಲಯದಲ್ಲಿ ಸಾಧಿಸಿದ, ನೀಡಿದ ಕೊಡುಗೆ ಅನನ್ಯವಾದುದ್ದಾಗಿದೆ.


ಪ್ರಮುಖ ಪ್ರಶಸ್ತಿ ಮತ್ತು ಪುರಸ್ಕಾರಗಳು

೧೯೪೧	–	ಸ್ವರ್ಣಪದಕ, ಅಕಾಡೆಮಿ ಆಫ್ ಫೈನ್ ಆರ್ಟ್ಸ್, ಕಲ್ಕತ್ತ
೧೯೪೭	–	ಸ್ವರ್ಣಪದಕ, ಬಾಂಬೆ ಆರ್ಟ್ಸ್ ಸೊಸೈಟಿ
೧೯೫೬	–	ಪ್ರಥಮ, ಮುಂಬಯಿ ರಾಜ್ಯದ ಕಲಾಪ್ರದರ್ಶನದಲ್ಲಿ ಪ್ರಶಸ್ತಿ
೧೯೫೬, ೫೭, ೫೮	–	ನ್ಯಾಷನಲ್ ಅಕಾಡೆಮಿ ಆರ್ಟ್ಸ್ ಪ್ರಶಸ್ತಿಗಳು, ಲಲಿತಕಲಾ ಅಕಾಡೆಮಿ, ನವದೆಹಲಿ
೧೯೬೧	–	ಭಾರತ ಸರ್ಕಾರದಿಂದ 'ಪದ್ಮಶ್ರೀ' ಗೌರವ
೧೯೭೬	–	ಫೆಲೋಶಿಪ್, ಲಲಿತಕಲಾ ಅಕಾಡೆಮಿ, ನವದೆಹಲಿ
೧೯೭೬	–	ಗೌರವ ಡಿ.ಲಿಟ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು
೧೯೮೩	–	ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ
೧೯೮೫	–	ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ
೧೯೮೬	–	ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

೧೯೮೮	–	ಮಹಾರಾಷ್ಟ್ರದ ಗೌರವ ಪುರಸ್ಕಾರ (ರಾಜ್ಯಪ್ರಶಸ್ತಿ)
೧೯೮೯	–	ಭಾರತ ಸರ್ಕಾರದಿಂದ 'ಪದ್ಮಭೂಷಣ' ಪ್ರಶಸ್ತಿ
೧೯೯೦	–	ಮಹಾರಾಷ್ಟ್ರದ ಗೌರವ ಪುರಸ್ಕಾರ
೧೯೯೫	–	ಕರ್ನಾಟಕ ಸರ್ಕಾರದ 'ವರ್ಣಶಿಲ್ಪಿ ಕೆ. ವೆಂಕಟಪ್ಪ ಪ್ರಶಸ್ತಿ'
೧೯೯೫	–	ಕರ್ನಾಟಕ ಸರ್ಕಾರ, ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯಲ್ಲಿ 'ಹೆಬ್ಬರ್ ವಿಭಾಗ' ಪ್ರಾರಂಭ


ಹೀಗೆ ಹೆಬ್ಬಾರರಿಗೆ ರಾಜ್ಯ, ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿ ಮತ್ತು ಪುರಸ್ಕಾರಗಳು ಜೀವನದುದ್ದಕ್ಕೂ ಲಭಿಸುತ್ತಾ ಬಂದಿವೆ.

❖❖❖❖



ಅಧ್ಯಾಯ - ಏಳು

ಕೆ.ಕೆ. ಹೆಬ್ಬಾರರ ಕುರಿತು ಬಂದ ಕಲಾಸಾಹಿತ್ಯ ಸಮೀಕ್ಷೆ




ಅಧ್ಯಾಯ : ಏಳು

ಕೆ. ಕೆ. ಹೆಬ್ಬಾರರ ಕುರಿತು ಬಂದಂತಹ ಕಲಾಸಾಹಿತ್ಯ ಸಮೀಕ್ಷೆ

ಕಲಾವಿದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ ಕುರಿತಾಗಿ ಹಲವಾರು ಕಲಾ ಸಾಹಿತ್ಯ ಪ್ರಕಾರಗಳು ಬಂದಿವೆ. ಅವುಗಳಲ್ಲಿ ಪತ್ರಿಕಾ ಸಾಹಿತ್ಯ, ಪುಸ್ತಕ ಸಾಹಿತ್ಯಗಳು ಪ್ರಮುಖವಾಗಿವೆ. ಪತ್ರಿಕಾ ಸಾಹಿತ್ಯದಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ, ತ್ರೈಮಾಸಿಕ ಹೀಗೆ ಹಲವಾರು ಪತ್ರಿಕಾ ಸಾಹಿತ್ಯ ಪ್ರಕಾರಗಳಿವೆ ಅದೇ ರೀತಿಯಲ್ಲಿ ಪುಸ್ತಕ ಸಾಹಿತ್ಯದಲ್ಲಿಯೂ ಸಹ ಏಕ ವ್ಯಕ್ತಿಯ ಕುರಿತಾದ ಸಾಹಿತ್ಯ, ವಿಮರ್ಶ ಸಾಹಿತ್ಯ ಹಾಗೂ ಸಂಪಾದನ ಸಾಹಿತ್ಯ ಹೀಗೆ ಹಲವಾರು ಪುಸ್ತಕ ಸಾಹಿತ್ಯ ಪ್ರಕಾರಗಳಿವೆ. ಅಂತೆಯೇ ಕೆ. ಕೆ. ಹೆಬ್ಬಾರರ ಕುರಿತಾಗಿ ಹಲವಾರು ಕಲಾಸಾಹಿತ್ಯಗಳು ಹಲವು ಪ್ರಕಾರಗಳಲ್ಲಿ ಬಂದಿವೆ.

ಭಾರತ ಕಂಡ ಹಲವು ಸೃಜನಶೀಲ ಕಲಾವಿದರಲ್ಲಿ ಕೆ. ಕೆ. ಹೆಬ್ಬಾರರು ಸಹ ಒಬ್ಬರು. ಇವರ ಕುರಿತಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಪ್ರಕಾರದ ಸಾಹಿತ್ಯಗಳು ಪ್ರಕಟವಾಗಿವೆ. ಅಂತೆಯೇ ಇವರ ಹಿರಿಮೆಯೂ ಸಹ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹಬ್ಬಿದೆ. ಈ ಸಂಗತಿಯು ಇವರ ಸಾಧನೆಯ ಪ್ರತಿರೂಪವಾಗಿದೆ. ಹೆಬ್ಬಾರರೂ ಸಹ ಮೊದಲಿನಿಂದ ಸಾಹಿತ್ಯದ ಹಾಗೂ ಸಾಹಿತಿಗಳ ನಂಟನ್ನು ಬೆಳೆಸಿಕೊಂಡು ಬಂದವರು. ಇವರು ರಾಷ್ಟ್ರ ಅಕಾಡೆಮಿಯ ಅಧ್ಯಕ್ಷರಾದಾಗ ಇವರು ಕಲಾಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದುದು. ಕಲೆ, ಕಲಾವಿದ, ಕಲಾಸೃಷ್ಟಿಯ ಜಿಜ್ಞಾಸೆಯ ಹೊಡಲನ್ನು ಬೇದಿಸಲು ಪ್ರಯತ್ನಿಸಿದ ಮಹಾನ್ ಚೇತನ ಕೆ. ಕೆ. ಹೆಬ್ಬಾರರು. ಸಾಹಿತಿಗಳು ನಾಡುನುಡಿಗಾಗಿ



ತೋರುವ ಆಸಕ್ತಿಯನ್ನು ಹೆಬ್ಬಾರರು ಕಲೆ, ಕಲಾವಿದ, ಕಲಾಪರಿಸರ, ಜಾನಪದ ಹಾಗೂ ಸಾಂಪ್ರದಾಯಿಕ ಕಲೆಯ ಒಳನೋಟವನ್ನು ಅಭಿವ್ಯಕ್ತಿಸುವಲ್ಲಿ ನಿರಂತರ ಪರಿಶ್ರಮವನ್ನು ಹೆಬ್ಬಾರರು ಮಾಡಿದ್ದಾರೆ. ಅದೇ ರೀತಿಯಲ್ಲಿ ಇವರ ಜೀವನ ಸಾಧನೆಯನ್ನು ಕುರಿತಾಗಿ ಹಲವಾರು ಕಲಾಸಾಹಿತ್ಯಗಳು ಬಂದಿವೆ.

ಕಲಾವಿದನ ಜೀವನ ಪರಿಚಯ ಹಾಗೂ ಕಲಾ ಜೀವನವನ್ನು ಪರಿಚಯಿಸುವ ಕೆಲಸವನ್ನು ಮಾತ್ರ ಇಲ್ಲಿಯವರೆಗೆ ಮಾಡಲಾಗಿದೆ. ಆದರೆ ಕಲೆ ಹಾಗೂ ಕಲಾಕೃತಿಯ ವಿಮರ್ಶಾ ಸಂಶೋಧನ ಸಾಹಿತ್ಯಗಳು ಬರಬೇಕಾದ ಅವಶ್ಯಕತೆಗಳು ಮಾತ್ರ ಬಾಕಿಯಿವೆ. ಇದನ್ನು ನಾಡಿನ ವಿಶ್ವವಿದ್ಯಾಲಯಗಳು ಮನಗಂಡು ಈ ನಿಟ್ಟಿನ ಕುರಿತಾಗಿ ಸಂಶೋಧನೆಯನ್ನು ಕೈಗೊಳ್ಳುವ ಅವಶ್ಯಕತೆ ಹೆಚ್ಚಾಗಬೇಕಾಗಿದೆ. ಹೆಬ್ಬಾರರ ಕುರಿತು ಹಲವಾರು ಪುಸ್ತಕಗಳು ಪ್ರಕಟವಾಗಿವೆ ಇವುಗಳು ಇವರ ಬದುಕಿನ ಸಂಪೂರ್ಣ ಮಾಹಿತಿಯನ್ನು ನಮಗೆ ನೀಡುತ್ತವೆ. ಹೀಗೆ ಇವರ ಕುರಿತು ಬಂದಂತಹ ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ವಿವೇಚಿಸಿ ಸತ್ಯಾ ಸತ್ಯತೆಗಳನ್ನು ಸಂಕ್ಷಿಪ್ತ ಮಾಹಿತಿಯನ್ನು ಮುಂದೆ ಗಮನಿಸಲಾಗಿದೆ.


ಸಿಂಗಿಂಗ್ ಲೈನ್ (೧೯೬೪)

೧೯೬೪ರಲ್ಲಿ ಸಿಂಗಿಂಗ್ ಲೈನ್ ಎಂಬ ಕೃತಿಯನ್ನು ಪಿಕಾಕ್ ಪಬ್ಲಿಕೇಶನ್, ಮುಂಬೈ ಇವರು ಪ್ರಕಟಿಸಿದ್ದಾರೆ. ಈ ಪುಸ್ತಕವು ಆಂಗ್ಲ ಭಾಷೆಯಲ್ಲಿದೆ. 'ಸಿಂಗಿಂಗ್ ಲೈನ್' ಹೆಸರೇ ಸೂಚಿಸುವಂತೆ ಈ ಪುಸ್ತಕವು ಹೆಬ್ಬಾರರ ರೇಖಾಚಿತ್ರಗಳನ್ನು ವಿಶೇಷವಾಗಿ ಗಮನಿಸಿ ಹೊರತರಲಾಗಿದೆ. ಹೆಬ್ಬಾರರು ಭಾರತದಲ್ಲಿ ತನ್ನದೇಯಾದ ರೇಖಾ ಚಿತ್ರದ ಚಾಪನ್ನು ಮೂಡಿಸಿದವರು. ರೇಖಾ ಚಿತ್ರಕಲೆಯಲ್ಲಿದ್ದ ಇವರ ಹಿಡಿತ ಅಪಾರವಾದುದು. ಸಾಮಾನ್ಯವಾಗಿ ಕಲಾಕೃತಿಯ ಮುನ್ನ ರೇಖಾ ಚಿತ್ರಗಳನ್ನು ರಚಿಸುವುದು, ಕಲಾವಿದ ಅಭ್ಯಾಸ ಆದರೆ ಹೆಬ್ಬಾರರು ರೇಖೆಯಲ್ಲಿಯೇ ಕೃತಿಯ ಜೀವ ಭಾವವನ್ನು ಹೇಳುವ ಕಲೆಯನ್ನು ರೂಢಿಸಿಕೊಂಡವರಾಗಿದ್ದರು. ಆದ ಕಾರಣದಿಂದಾಗಿ 'ಸಿಂಗಿಂಗ್ ಲೈನ್' ಎಂಬ ಕೃತಿಯನ್ನು ಹೊರತರಲಾಗಿದೆ. ಈ ಕೃತಿಯಲ್ಲಿ ಹೆಚ್ಚು ಹೆಬ್ಬಾರರ ರೇಖಾ ಚಿತ್ರಗಳನ್ನು ಬಳಸಿಕೊಂಡಿದ್ದು, ಇವುಗಳ ಸಂದರ್ಭ, ವಿಷಯ, ಅರಿವು, ಭಾವ ಹಾಗೂ ಪರಿಚಯಗಳನ್ನು ಈ ಪುಸ್ತಕದಲ್ಲಿ ಸವಿಸ್ತಾರವಾಗಿ ಹೇಳಲಾಗಿದೆ. ಇದೇ ಕೃತಿಯ ಪರಿಷ್ಕೃತ ಮುದ್ರಣವನ್ನು ಅಭಿನವ ಪ್ರಕಾಶನ ನವದೆಹಲಿ ಇವರು ೧೯೮೨ರಲ್ಲಿ ಪ್ರಕಟಿಸಿದರು.[೧]

ಆನ್ ಆರ್ಟಿಸ್ಟ್ ಕ್ವೆಸ್ಟ್ (೧೯೭೪)

೧೯೭೪ರಲ್ಲಿ ಆನ್ ಆರ್ಟಿಸ್ಟ್ ಕ್ವೆಸ್ಟ್ ಎಂಬ ಕೃತಿಯನ್ನು ಅಭಿನವ ಪ್ರಕಾಶನ, ನವದೆಹಲಿ ಇವರು

೦೧. ಸಿಂಗಿಂಗ್ ಲೈನ್, ಪಿಕಾಕ್ ಪಬ್ಲಿಕೇಶನ್, ಮುಂಬೈ, ೧೯೬೪



ಹೊರತಂದಿದ್ದಾರೆ. ಈ ಪುಸ್ತಕದ ಕನ್ನಡದ ಭಾವಾರ್ಥ ಕಲಾವಿದನ ರೋಧವೆಂದು. ಇದೇ ಹೆಸರಿನಲ್ಲಿ ಈ ಪ್ರಕಾಶನ ಸಂಸ್ಥೆ ಹಲವಾರು ಪುಸ್ತಕಗಳನ್ನು ಹೊರತಂದಿದ್ದು, ಅದರಲ್ಲಿ ಹೆಬ್ಬಾರರ ಪುಸ್ತಕವೂ ಒಂದಾಗಿದೆ. ಇಲ್ಲಿ ಹೆಬ್ಬಾರರ ಕಲಾಕೃತಿಗಳ ವಿಮರ್ಶೆ, ಕಲಾವಿದನ ಸಂಪೂರ್ಣ ಇತಿಹಾಸವನ್ನು ಹೇಳಲಾಗಿದೆ. ಈ ಪುಸ್ತಕವು ಇಂಗ್ಲೀಷ್ ಹಾಗೂ ಹಿಂದೀ ಎರಡೂ ಭಾಷೆಯಲ್ಲಿಯೂ ಪ್ರಕಟವಾಗಿದೆ.[೨]

ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ ಕಲೆ ಮತ್ತು ಬದುಕು (೧೯೮೮)

೧೯೮೮ರಲ್ಲಿ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ ಕಲೆ ಮತ್ತು ಬದುಕು ಎಂಬ ಪುಸ್ತಕವನ್ನು ಕು.ಶಿ. ಹರಿದಾಸ ಭಟ್ಟರು ಬರೆದಿದ್ದು, ಇದನ್ನು ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ ಇವರು ಪ್ರಕಟಿಸಿದ್ದು. ಇದೊಂದು ಹೆಬ್ಬಾರರ ಸಮಗ್ರ ವಿಷಯವನ್ನು ತಿಳಿಸಿಕೊಡುವ ಪುಸ್ತಕವಾಗಿದೆ. ಈ ಪುಸ್ತಕದಲ್ಲಿ ಹೆಬ್ಬಾರರ ಬಾಲ್ಯದಿಂದಿಡಿದು ಅವರ ಸಂಧ್ಯಾಕಾಲದವರೆಗೆ ಸಂಪೂರ್ಣ ಮಾಹಿತಿಯನ್ನು ಈ ಪುಸ್ತಕ ಹೊಂದಿದೆ. ಈ ಪುಸ್ತಕದಲ್ಲಿ ಹೆಬ್ಬಾರರ ಬಾಲ್ಯದ ದಿನಗಳು, ಜೆ.ಜೆ. ಕಲಾಶಾಲೆಯಲ್ಲಿನ ಅಧ್ಯಯನ ಹಾಗೂ ಅಧ್ಯಾಪನ ಸೇವೆ, ಇವರು ಪ್ರಥಮವಾಗಿ ವಿದೇಶಕ್ಕೆ ಯಾತ್ರೆಕೈಗೊಂಡಿದ್ದು, ಅಕಾಡೆಮಿ ಜೂಲಿಯನ್‌ನಲ್ಲಿ ಶಿಕ್ಷಣ ಪಡೆದಿದ್ದು, ಏಕಾಂಗಿಯಾಗಿ ಪ್ರದರ್ಶನಗಳನ್ನು ಮಾಡಿದ್ದು ಹಾಗೂ ಇವರು ನಡೆಸಿದ ಕಲಾ ಸಂಘಟನೆಗಳ ಕುರಿತಂತೆ ಇವರ ಜೀವನದ ಸಂಪೂರ್ಣ ಮಾಹಿತಿಯನ್ನು ಇಲ್ಲಿ ಹೇಳಲಾಗಿದೆ. ಒಟ್ಟಾರೆಯಾಗಿ ಈ ಪುಸ್ತಕವು ಹೆಬ್ಬಾರರ ಜೀವನದ ಕೈಗನ್ನಡಿಯಾಗಿದೆ ಎಂದರೆ ತಪ್ಪಾಗಲಾರದು.[೩]

ಕೆ.ಕೆ ಹೆಬ್ಬಾರ್ (೧೯೮೩)

೧೯೮೩ರಲ್ಲಿ ಎನ್. ಮರಿಶಾಮಾಚಾರ್‌ರವರು ಕೆ. ಕೆ. ಹೆಬ್ಬಾರ್ ಎಂಬ ಪುಸ್ತಕವನ್ನು ಬರೆದಿದ್ದು, ಈ ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದೆ. ಈ ಪುಸ್ತಕದಲ್ಲಿ ಹೆಬ್ಬಾರರ ಕಿರು ಪರಿಚಯದ ಮಾಹಿತಿಯನ್ನು ಒದಗಿಸುವ ಪುಟ್ಟ ಪುಸ್ತಕ ಇದಾಗಿದೆ. ಇದರಲ್ಲಿ ಹೆಬ್ಬಾರರ ಕಲೆ, ಬದುಕು, ಕಲಾ ಚಟುವಟಿಕೆ ಹಾಗೂ ಕಲಾಕೃತಿಗಳ ಕುರಿತಾಗಿ ಸಂಕ್ಷಿಪ್ತವಾಗಿ ಹೇಳಲಾಗಿದ್ದು, ಈ ಪುಸ್ತಕದಲ್ಲಿ ವೆಂಕಟಪ್ಪನವರ ಹಲವು ಕಲಾಕೃತಿಗಳನ್ನು ಸಹ ಬಳಸಿಕೊಳ್ಳಲಾಗಿದೆ.[೪]

ಹೆಬ್ಬಾರ್


ಈ ಕೃತಿಯನ್ನು ಎನ್. ಮರಿಶಾಮಾಚಾರ್ ಅವರು ಕನ್ನಡದಲ್ಲಿ ರಚಿಸಿದ್ದು, ಅವರದೇಯಾದ

---

೦೨. ಆನ್ ಆರ್ಟಿಸ್ಟ್ ಕ್ವೆಸ್ : ಅಭಿನವ ಪ್ರಕಾಶನ, ನವದೆಹಲಿ, ೧೯೭೪

೦೩. ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್ : ಕು. ಶೀ. ಹರಿದಾಸ ಭಟ್ಟ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ. ೧೯೮೮

೦೪. ಕೆ. ಕೆ. ಹೆಬ್ಬಾರ್ : ಎನ್. ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೩



ಸಿ.ಎಂ.ಎನ್. ಪ್ರಕಾಶನದಿಂದ ಹೊರತರಲಾಗಿದೆ. ಈ ಪುಸ್ತಕದಲ್ಲಿ ಹೆಬ್ಬಾರರ ಕುರಿತು ಬರೆದಂತಹ ಹಲವು ಲೇಖನಗಳಿದ್ದು, ಕೆಲವಾರು ಚಿತ್ರಗಳನ್ನು ಸಹ ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಪುಸ್ತಕವು ಹೆಬ್ಬಾರರ ಅಭಿವ್ಯಕ್ತ ಬಿಂಭಿತವೆಂದರೆ ತಪ್ಪಾಗಲಾರದು.[೫]

ವಾಯೇಜ್ ಇನ್ ಇಮೇಜಸ್ (೧೯೯೧)

೧೯೯೧ರಲ್ಲಿ ಜಹಾಂಗೀರ್ ಆರ್ಟ್ ಗ್ಯಾಲರಿ, ಮುಂಬೈ ಇವರು ಈ ಪುಸ್ತಕವನ್ನು ಹೊರತಂದಿದ್ದಾರೆ. ಇದರಲ್ಲಿ ಹೆಬ್ಬಾರರ ಹಲವು ಕಲಾಕೃತಿ ಹಾಗೂ ಅದರ ಕುರಿತಂತಹ ವಿಶ್ಲೇಷಣೆಗಳನ್ನು ಇಲ್ಲಿ ನೀಡಲಾಗಿದೆ. ಇ ಪುಸ್ತಕದಲ್ಲಿ ಇವರು ಮುಂಬೈಯಲ್ಲಿ ರಚಿಸಿದ ಹಲವು ಕಲಾಕರತಿಗಳು ಹೆಚ್ಚಾಗಿ ಕಂಡುಬರುತ್ತವೆ. ಹಾಗೂ ಅದರ ಕೆಳಭಾಗದಲ್ಲಿ ಇದಕ್ಕೆ ಸಂಬಂಧಿಸಿದ ವಿವರಣೆಯನ್ನು ಸಹ ಪಡೆಯಬಹುದಾಗಿದೆ.[೬]

ಕಲಾವಿದ ಹೆಬ್ಬಾರರ ರೇಖಾಲಾವಣ್ಯ


೧೯೯೯ರಲ್ಲಿ ನವಕರ್ನಾಟಕ ಪ್ರಕಾಶನವು ಈ ಕೃತಿಯನ್ನು ಹೊರತಂದಿದೆ. ಇದನ್ನು ವ್ಯಾಸರಾಯ ಬಲ್ಲಾಳರು ಬರೆದಿದ್ದು, ಇದರಲ್ಲಿ ಹೆಬ್ಬಾರರ ಕುರಿತಾಗಿ ಬಂದಂತಹ ಲೇಖನ ಹಾಗೂ ಪುಸ್ತಕಗಳ ಕುರಿತಾಗಿ ವಿಮರ್ಶಾ ಸಂಪಾದನವಾಗಿದೆ. ಮೊದಲನೆಯದಾಗಿ ಕಲಾವಿದರ ಪರಿಚಯ, ಕಲಾವಿದನಿಗಿದ್ದ ಸ್ವಗ್ರಾಮ ಪ್ರೇಮ, ಇವರ ಕಲಾಕೃತಿಗಳ ಕುರಿತು ಬಂದಂತಹ ಚಿತ್ರ ಸಂಪುಟ ಹೀಗೆ ಇನ್ನೂ ಹಲವಾರು ಪತ್ರಿಕಾ ಲೇಖನಗಳ ಕುರಿತಂತಹ ಸಮಗ್ರ ಮಾಹಿತಿಯನ್ನು ಈ ಪುಸ್ತಕದಲ್ಲಿ ವಿಸ್ತೃತವಾಗಿ ಹೇಳಲಾಗಿದೆ.[೭]

ಕಲಾಸಾಧಕ : ಹೆಬ್ಬಾರರನ್ನು ಕುರಿತ ವಿವಿಧ ಲೇಖನಗಳು

ಈ ಪುಸ್ತಕವನ್ನು ಎನ್. ಮರಿಶಾಮಾಚಾರ್‌ರವರು ರಚಿಸಿದ್ದು, ಇದನ್ನು ಸಿ.ಎಂ.ಎನ್. ಪ್ರಕಶಾನದವರು ಪ್ರಕಟಿಸಿದ್ದಾರೆ. ಇದು ಸಂಪಾದನಾ ಲೇಖನಗಳಿಂದ ಕೂಡಿದ ಕೃತಿಯಾಗಿದೆ. ಹೆಬ್ಬಾರರ ಕುರಿತು ಬಂದಂತಹ ಹಲವಾರು ಲೇಖನಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಪುಸ್ತಕದಲ್ಲಿ ಹೆಬ್ಬಾರರನ್ನು ವ್ಯಕ್ತಿಯಾಗಿ, ಕಲಾವಿದನಾಗಿ, ಇವರು ಮಾಡಿದ ಕಲಾ ಚಟುವಟಿಕೆ ಹಾಗೂ ಕಲಾಕ್ಷೇತ್ರಕ್ಕೆ ಇವರ ಕೊಡುಗೆಗಳ ಕುರಿತಂತೆ ಬಂದಂತಹ ಹಲವು ಪತ್ರಿಕಾ ಲೇಖನಗಳನ್ನು ಬಳಸಿಕೊಂಡು ಈ ಪುಸ್ತಕವನ್ನು ರಚಿಸಲಾಗಿದ್ದು, ಒಟ್ಟಾರೆಯಾಗಿ ಹೆಬ್ಬಾರರ ಕುರಿತು ಬಂದಂತಹ ಹಲವು ಲೇಖನಗಳ ತುಂಡು ಬರಹಗಳನ್ನು ಸಂಗ್ರಹಿಸಿ, ಸಂಪಾದಿಸಿ ಹೊರತರಲಾಗಿದೆ.[೮]

---

೦೫. ಹೆಬ್ಬಾರ್ : ಎನ್. ಮರಿಶಾಮಾಚಾರ್, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು.
೦೬. ವಾಯೇಜ್ ಇನ್ ಇಮೇಜಸ್ : ಜಹಾಂಗೀರ್ ಆರ್ಟ್ ಗ್ಯಾಲರಿ, ಮುಂಬೈ. ೧೯೯೧
೦೭. ಕಲಾವಿದ ಹೆಬ್ಬಾರರ ರೇಖಾಲಾವಣ್ಯ : ವ್ಯಾಸರಾಯ ಬಲ್ಲಾಳ, ನವಕರ್ನಾಟಕ ಪಬ್ಲಿಕೇಶನ್ ಪ್ರೈ.ಲಿ. ೧೯೯೯
೦೮. ಕಲಾಸಾಧಕ : ಹೆಬ್ಬಾರರನ್ನು ಕುರಿತ ವಿವಿಧ ಲೇಖನಗಳು, ಎನ್. ಮರಿಶಾಮಾಚಾರ್. ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು.



HEBBAR (೨೦೧೧)

ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಬೆಂಗಳೂರು ಇವರು ಪ್ರಕಟಿಸಿದ HEBBAR ಪುಸ್ತಕವನ್ನು ಕೆ. ಜಿ. ಸುಬ್ರಹ್ಮಣ್ಯಂ ಅವರ ಸಂಪಾದಿಸಿದ್ದಾರೆ. ಈ ಪುಸ್ತಕದಲ್ಲಿ ಹೆಬ್ಬಾರರ ಕಲಾಕೃತಿಗಳ ವಿಹಂಗಣ ನೋಟವನ್ನು ನೋಡುವ ಅವಕಾಶ ಈ ಪುಸ್ತಕದಲ್ಲಿದೆ. ಹೆಬ್ಬಾರರ ಸಂಪೂರ್ಣ ಕಲಾಕೃತಿಗಳು, ಹೆಬ್ಬಾರರ ಕಲಾಕೃತಿಗಳು, ಛಾಯಾಚಿತ್ರಗಳು, ರೇಖಾ ಚಿತ್ರಗಳು ಹಾಗೂ ವರ್ಣ ಸಂಯೋಜಿತ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಕಲಾವಿದರು ನಡೆದು ಬಂದಂತಹ ಹಾದಿಯ ಕಾಲಾವನ್ನು ಸಮೇತವಾಗಿ ಕಲಾಕೃತಿಗಳ ಸಂಪೂರ್ಣ ವಿವರಣೆಯನ್ನು ಈ ಪುಸ್ತಕದಲ್ಲಿ ಸಾಕಾರಗೊಳಿಸಲಾಗಿದೆ. ಅಲ್ಲದೆ ಈ ಪುಸ್ತಕವು ಇಂಗ್ಲೀಷ್ ಅವತರಣಿಕೆಯಾಗಿರುವುದರಿಂದ ಜಗತ್ತಿನ ಎಲ್ಲೆಡೆಯಲ್ಲಿಯೂ ಈ ಪುಸ್ತಕ ಸಿಗುವ ಅವಕಾಶಗಳಿವೆ.[೯]

ಪ್ರತಿಮಾ ಲೋಕದಲ್ಲಿ ಪಯಣ

ಈ ಪುಸ್ತಕವನ್ನು ಎನ್ ಮರಿಶಾಮಾಚಾರ್ ಅವರು ರಚಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಪುಸ್ತಕದಲ್ಲಿ ಹೆಬ್ಬಾರರ ಜೀವನ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಹೇಳಲಾಗಿದ್ದು, ಇದರಲ್ಲಿ ಹೆಚ್ಚಾಗಿ ಹೆಬ್ಬಾರರ ಕಲಾಕೃತಿಗಳನ್ನೇ ಬಳಸಿಕೊಳ್ಳಲಾಗಿದೆ. ಅಲ್ಲದೇ ಹೆಬ್ಬಾರರ ಕಲಾಕೃತಿಗಳ ಹಿಂದಿದ್ದ ಉದ್ದೇಶ, ಪ್ರಭಾವ, ಪ್ರೇರಣೆಗಳನ್ನು ಗೌಪ್ಯವಾಗಿ ಇಲ್ಲಿ ಹೇಳುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಈ ಪುಸ್ತಕದಲ್ಲಿ ಹೆಬ್ಬಾರರ ಹಲವಾರು ಕಲಾಕೃತಿಗಳ ಛಾಯಾಚಿತ್ರಗಳು ನಮಗೆ ಕಾಣಸಿಗುತ್ತವೆ.[೧೦]

ಹಾಡುವ ರೇಖೆ (೨೦೧೦)


೨೦೧೦ರಲ್ಲಿ ಹಾಡುವ ರೇಖೆ ಎಂಬ ಪುಸ್ತಕವನ್ನು ಎನ್. ಮರಿಶಾಮಾಚಾರ್‌ರವರು ರಚಿಸಿದ್ದು, ಅವರದೇ ಆದ ಸಿ.ಎಂ.ಎನ್. ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಹೆಸರೇ ಹೇಳುವಂತೆ ಹೆಬ್ಬಾರರ ರೇಖಾಚಿತ್ರಗಳ ಕುರಿತಾಗಿ ಈ ಪುಸ್ತಕವನ್ನು ರಚಿಸಲಾಗಿದ್ದು, ಹೆಚ್ಚಾಗಿ ಸಾಹಿತ್ಯಕ್ಕೆ ಹೊತ್ತು ಕೊಡದೆ ಇವರ ರೇಖಾಚಿತ್ರಗಳನ್ನೇ ಮುಖ್ಯವಾಗಿ ಬಳಸಿಕೊಂಡು ಈ ಪುಸ್ತಕವನ್ನು ರಚಿಸಲಾಗಿದೆ. ಮಧ್ಯದಲ್ಲಿ ಲೇಖಕರ ಕುರಿತಾಗಿ ಸಂಕ್ಷಿಪ್ತ ಪರಿಚಯವನ್ನು ಸಹ ಸ್ವಲ್ಪ ಮಟ್ಟಿಗೆ ಇಲ್ಲಿ ಮಾಡಲಾಗಿದೆ.[೧೧]

---

೦೯. Hebbar : An Artist Quest, Ministri of Culture, Govt of India and K.K Hebbar Art Foundation. 2011

೧೦. ಪ್ರತಿಮಾ ಲೋಕದಲ್ಲಿ ಪಯಣ : ಎನ್. ಮರಿಶಾಮಾಚಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೧. ಹಾಡುವ ರೇಖೆ : ಎನ್. ಮರಿಶಾಮಾಚಾರ್, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು. ೨೦೧೦



ಮೇಲೆ ಹೇಳಿರುವಂತೆ ಎಲ್ಲಾ ಕೃತಿಗಳು ಅವರ ಜೀವನ ಮತ್ತು ಕಲೆಗೆ ಕುರಿತು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ವಿವರಿಸಿರುವುದು ಕಾಣಬಹುದಾಗಿದೆ. ಹಾಗೆಯೇ ಮೇಲೆ ಕಂಡುಬರುವ ಕಲಾಸಾಹಿತ್ಯಗಳಲ್ಲಿ ಕಲಾವಿದರ ಬಾಲ್ಯಜೀವನ, ಶೈಕ್ಷಣಿಕ ಶಿಕ್ಷಣ, ಕಲಾಶಿಕ್ಷಣ, ಕಲೆಗಾಗಿ ಹೋರಾಟ, ಕಲಾಶ್ರದ್ಧೆ, ಬೆಳವಣಿಗೆಯ ಹಂತ, ಅಕಾಡೆಮಿಯ ಸಾಧನೆ, ಪ್ರಮುಖ ಅಂಶಗಳನ್ನು ಇದರೊಳಗಡಗಿದೆ. ಪ್ರಮುಖವಾಗಿ ಕನ್ನಡದ ಕಲಾಸಾಹಿತಿಗಳು ವಿಶೇಷವಾಗಿ ಹಾಡು ಮಾತೆಂಬಂತೆ ರೇಖೆಗಳ ಚಲನವಲನದ ರೂಪತೆಯನ್ನು ಲೇಖನದ ಮೂಲಕ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದು ತುಂಬಾ ವಿಶೇಷವಾಗಿದೆ.

ಪ್ರಸ್ತುತ ಈ ಅಧ್ಯಾಯದಲ್ಲಿ ಕಲಾವಿದ ಹೆಬ್ಬಾರರ ಕುರಿತು ಬಂದಂತಹ ಸಾಹಿತ್ಯಗಳ ಸಮೀಕ್ಷೆಯಾದ್ದರಿಂದ ಲೇಖಕರು, ಪ್ರಕಾಶಕರು ಬೆಳಕಿಗೆ ಬಂದ ವರ್ಷ, ಒಳಗಡಗಿರುವ ಪ್ರಮುಖ ಅಂಶವನ್ನು ಪರಿಚಯಿಸಿಕೊಡುವ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಕೆ ಕೆ. ಹೆಬ್ಬಾರರ ಕುರಿತಾಗಿ ಬಂದಂತಹ ಹಲವಾರು ಪುಸ್ತಕಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡುವ ಪ್ರಯತ್ನ ಮಾಡಲಾಗಿದೆ. ಇದಲ್ಲದೆ ಹೆಬ್ಬಾರರ ಕುರಿತಾಗಿ ಹಲವಾರು ಪುಸ್ತಕಗಳಲ್ಲಿ ಸಾಂದರ್ಭಿಕ ಉಲ್ಲೇಖಗಳು ಸಿಗುತ್ತವೆ ಆದರೆ ಹೆಬ್ಬಾರರನ್ನು ಕೇಂದ್ರವಾಗಿಟ್ಟುಕೊಂಡು ಬಂದಂತಹ ಹಲವು ಪುಸ್ತಕ ಸಾಹಿತ್ಯವನ್ನು ಕುರಿತು ಹೇಳಲಾಗಿದೆ.


❖❖❖❖



ಅಧ್ಯಾಯ - ಎಂಟು

ಸಮಾರೋಪ





ಅಧ್ಯಾಯ : ಎಂಟು


ಸಮಾರೋಪ

ಕಲೆಯು ಮುಲತಃ ಮಾನವನ ಸೃಷ್ಠಿ ಅಂದು ಪ್ರತಿಭಾನ್ವಿತ ಮಾನವನ ಜೀವನಾನುಭವ ಅಭಿವ್ಯಕ್ತಿ, ಕಲೆ ಮಾನವೀಯತೆಯ ವಿಶಿಷ್ಟ ಆನಂದದಾಯಿಯಾದ ಮಾತೃಶಕ್ತಿ, ಭೌತಿಕ ಜಗತ್ತಿನ ಬಾಹ್ಯ ಸೃಷ್ಠಿಗಿಂತ ಹೆಚ್ಚಾಗಿ, ಮಾನವನ ಆಂತರಿಕ ನಿತ್ಯ ಸತ್ಯದ, ಆಂದಾನುಭವದ ಅಭಿವ್ಯಕ್ತಿ, ಕಲಾವಿದನ ಆತ್ಮದರ್ಶನ, ಅಂತರ್ ಪ್ರೇರಣೆ ಬಾಹ್ಯ ಪ್ರಭಾವಗಳ ಸಾಮೂಹಿತ ಅಭಿವ್ಯಕ್ತಿ ಈ ಕಲೆ, ಭಾವ, ಬಣ್ಣರೇಖೆ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಹೊರಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಮಾಡುತ್ತದೆ.

ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ ಮನಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು, ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು.[೧]

ಮಾನವನ ಉಗಮವನ್ನು ಶಿಲಾಶ್ರಯಗಳಲ್ಲಿ ವಾಸಿಸುತ್ತಿದ್ದ ಆದಿ ಮಾನವನು ಆತನ ಮೂಲಭೂತ ಅವಶ್ಯಕತೆಗಳು ಮಿತವಾಗಿದ್ದು, ತನಗೊಂದು ಸೂರು ಮಾಡಿಕೊಳ್ಳುವುದು, ಹಸಿವು ನೀರಡಿಕೆ ಹಿಂಗಿಸುವುದು ಮುಖ್ಯವಾಗಿದ್ದು, ಅವನ ಮುಖ್ಯ ಕಸುಬೆಂದರೆ ಬೇಟೆ. ಹೀಗೆ ತನ್ನ ಶಾರೀರಿಕ ಅಗತ್ಯತೆಗಳನ್ನು ಪೂರೈಸಿದ ಮೇಲೆ ಜೀವನದ ಅನುಭವಗಳನ್ನು ಸುಖ–ದುಃಖಗಳನ್ನು ವ್ಯಕ್ತಗೊಳಿಸುವುದುಂಟು ಹಾಗಾಗಿ ಅವನಿಗೆ

೦೧. ಡಾ. ಎಸ್. ಸಿ. ಪಾಟೀಲ್ (ಸಂ) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ – ೪೯




ಭಾಷೆಯ ಬೆಳವಣಿಗೆ ಇಲ್ಲದ ಕಾಲದಲ್ಲಿ ಗುಹೆಯ ಗೋಡೆಗಳ ಮೇಲೆ ಕಲ್ಲು ಬಂಡೆಗಳ ಮೇಲೆ, ಅವನ ಭಾವನೆಗಳನ್ನು ವ್ಯಕ್ತಪಡಿಸಲು ಗೆರೆಗಳನ್ನು ಮೂಡಿಸುವುದರ ಜೊತೆಗೆ ಚಿತ್ರ ರಚನೆಯ ಮೂಲಕವೇ ಮಾನವನ ಮೊದಲ ಭಾಷೆ "ಚಿತ್ರ" ಎಂದು ರೂಪಿಸಿದನು. ಅದರಂತೆಯೇ ಕಲೆಯ ಸೃಷ್ಟಿ ಆರಂಭಗೊಂಡಿತು. ಅವನು ಕಂಡ ಜಿಂಕೆ, ಕಾಡುಕೋಣ, ಸಿಂಹ ಮುಂತಾದ ಪ್ರಾಣಿಗಳ ಸ್ವಭಾವವನ್ನು ಎದ್ದು ತೋರುವ ಗೆರೆಗಳು ಹಾಗೂ ಸರಳ ಬಣ್ಣಗಳಲ್ಲಿ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುವ ಮೂಲಕ ಅವುಗಳ ಸ್ವಭಾವವನ್ನು ಎದ್ದು ತೋರುವ ಗೆರೆಗಳಲ್ಲಿ ಹಾಗೂ ಸರಳ ಬಣ್ಣಗಳಲ್ಲಿ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುವ ಮೂಲಕ ಅವುಗಳ ಒತ್ತಡದಿಂದ ಮುಕ್ತವಾಗುವುದರೊಂದಿಗೆ ಸೌಂದರ್ಯ ಪ್ರಜ್ಞೆಯನ್ನು ಅಭಿವ್ಯಕ್ತಿಸಿದನು. ಅಂತೆಯೇ ಆಧುನಿಕ ಮಾನವನು ಕಲೆಯ ಕುರಿತಂತೆ ತನ್ನದೇಯಾದ ಕಲಾಕ್ಷೇತ್ರವನ್ನು ಸೃಷ್ಟಿಸಿಕೊಂಡನು.

ಭಾರತದ ಆಧುನಿಕ ಕಲೆಯ ಪ್ರಮುಖರಲ್ಲಿ ಹೆಬ್ಬಾರರು ಒಬ್ಬರು. ಅವರು ಕಲೆಯಲ್ಲಿ ಆಧುನಿಕತೆಯನ್ನು ಹೊಂದಿದ್ದು, ಪ್ರಾಚೀನ ಮೌಲ್ಯಗಳನ್ನು ಹಾಗೂ ಅವರ ಅನುಭವಗಳ ಫಲ, ಅವರ ಕಲಾಕೃತಿಗಳಲ್ಲಿ ಶಾಂತತೆ, ಸಮಾಧಾನ ಎದ್ದು ಕಾಣುತ್ತದೆ. ಸದಾ ಪ್ರಯೋಗಶೀಲರಾದ ಹೆಬ್ಬಾರರ ಜೀವನ ಪ್ರಾರಂಭದಿಂದ ಮಗುವಿನಂತೆ ಮತ್ತು ಬಣ್ಣದ ಮೂಲಕ ಸಂತೋಷ ಮತ್ತು ದುಃಖಗಳು ಅಭಿವ್ಯಕ್ತಿಯೊಂದಿಗೆ ಚಿತ್ರಕಲೆ ಅವರಿಗೆ ಉಸಿರಾಡುವಷ್ಟೇ ಸಹಜ.

ನಿತ್ಯ ಚಿಂತನೆ, ಪ್ರಯೋಗಶೀಲತೆ, ಜಾನಪದ ಸಂಸಾರ, ಸ್ನಿಗ್ಧ ಜೀವನದ ಪ್ರೀತಿ ಮುಗ್ಧತೆ ಇವೆಲ್ಲಾ ಬೆರೆತ ಒಂದು ಮಾನವ ಚಿತ್ರಶೈಲಿಯನ್ನು ತನ್ನದಾಗಿಸಿಕೊಂಡಿರುವ ಹೆಬ್ಬಾರರ ಕಲಾಕೃತಿಗಳನ್ನು, ರೇಖೆಗಳನ್ನು ಕೃತಿಕಾರನ ಸಹಿಯನ್ನು ಗುರುತಿಸದೆಯೂ ಈ ಕೃತಿ ಹೆಬ್ಬಾರರದ್ದೆಂದು ಹೇಳಬಹುದಾದಷ್ಟರ ಮಟ್ಟಿಗೆ ಅವರು ಖ್ಯಾತಿಯಾಗಿದ್ದಾರೆ. ಹಾಗೂ ಕಲೆಯ ಸೃಜನಶೀಲ ಪ್ರಕ್ರಿಯೆಯಲ್ಲಿ ಮುಗ್ಧ ಸೌಂದರ್ಯಪ್ರಜ್ಞೆ ವಹಿಸಬಹುದಾದ ಪಾತ್ರದ ತಿಳುವಳಿಕೆಯುಳ್ಳವರಿಗೆ ಕಲಾವಿದನ ವ್ಯಕ್ತಿತ್ವದಲ್ಲೂ ಅದು ಹೇಗೆ ಕಾಣಬಹುದು ಎಂಬುದಕ್ಕೆ ಹೆಬ್ಬಾರರು ನಿದರ್ಶನ.

ಅಧ್ಯಾಯ : ಒಂದು

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಮತ್ತು ವೈಧಾನಿಕತೆಯನ್ನು ಕುರಿತಂತೆ ಹೇಳಲಾಗಿದೆ. ಅಧ್ಯಯನದಲ್ಲಿ ಕಲಾವಿದನ ಕುರಿತಂತೆ ಅವರ ಕಲೆ ಮತ್ತು ಬದುಕಿನ ಬಗ್ಗೆ ತಿಳಿಯುವುದು ಹೇಗೆ, ಅದರ ಅವಶ್ಯಕತೆ ಏನು?, ಕಲಾವಿದರ ಅಧ್ಯಯನದಿಂದ ಸಮಾಜಕ್ಕೆ ಆಗಬಹುದಾದ ಅನುಕೂಲವೇನು? ಎಂಬ ನಿಟ್ಟಿನಲ್ಲಿ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.



ಅಧ್ಯಾಯ : ಎರಡು

ಈ ಅಧ್ಯಾಯದಲ್ಲಿ ಹೆಬ್ಬಾರರ ಸಂಪೂರ್ಣ ಜೀವನವನ್ನು ವಿಸ್ತೃತವಾಗಿ ಕಟ್ಟಿಕೊಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಹೆಬ್ಬಾರರ ಬಾಲ್ಯ ಜೀವನ, ಮುಂಬೈಯಲ್ಲಿನ ಕಲಾಶಿಕ್ಷಣ, ಅವರ ಉನ್ನತ ಶಿಕ್ಷಣಕ್ಕಾಗಿ ಪ್ಯಾರಿಸ್‌ಗೆ ಪಯಣ ಅಲ್ಲಿ ಅವರ ಕಲಾಚಟುವಟಿಕೆಗಳು ಮತ್ತು ಮರಳಿ ಭಾರತಕ್ಕೆ ಬಂದ ಅವರು ಪಡೆದ ಶಿಕ್ಷಣದಿಂದ ಪ್ರೇರೇಪಿತರಾಗಿ ಹಲವು ಕಲಾಕೃತಿಗಳನ್ನು ರಚಿಸಿದ್ದು, ಜೆ.ಜೆ. ಕಲಾಶಾಲೆಯಲ್ಲಿ ಉಪನ್ಯಾಸ ವೃತ್ತಿಯನ್ನು ಕೈಗೊಂಡಿದ್ದು, ಶಿಷ್ಯರ ಮಾರ್ಗದರ್ಶನಕ್ಕೆ ಹಲವಾರು ಕಲಾಕೃತಿಗಳನ್ನು ರಚಿಸಿದ್ದು, ಜೊತೆಯಲ್ಲಿ ರೇಖಾಚಿತ್ರಗಳ ರಚನೆ, ನೃತ್ಯ ಮತ್ತು ಸಾಹಿತ್ಯದ ನಂಟು, ಭಾರತದ ಆಧುನಿಕ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಈ ಅಧ್ಯಾಯದಲ್ಲಿ ನೋಡಬಹುದಾಗಿದೆ.

ಅಧ್ಯಾಯ : ಮೂರು


ಈ ಅಧ್ಯಾಯದಲ್ಲಿ ಕೆ. ಕೆ. ಹೆಬ್ಬಾರರ ರೇಖಾಚಿತ್ರಗಳ ಕುರಿತಾಗಿದ್ದು, ಹೆಬ್ಬಾರರ ರೇಖಾಚಿತ್ರಗಳು ವಿಶ್ವಪ್ರಸಿದ್ಧಿಯನ್ನು ಹೊಂದಿದ್ದು, ಅಂತಹ ಚಿತ್ರಗಳಿಗೆ ಮೂಲ ಪ್ರೇರಣೆ ಮತ್ತು ವಿವಿಧ ಮಾಧ್ಯಮಗಳಲ್ಲಿ ನೆಲಸಿದಂತೆ ನಡೆಸಿದ ಅಧ್ಯಯನವನ್ನು ಇಲ್ಲಿ ಹೇಳಲಾಗಿದ್ದು, ಹೆಬ್ಬಾರರು ರೇಖಾಚಿತ್ರಗಳಲ್ಲಿ ಮಾಡಿದ ವ್ಯಕ್ತಿ ಚಿತ್ರಣ ಅತಿ ಕಡಿಮೆ ರೇಖೆಗಳಲ್ಲಿ ಒಂದು ಕೃತಿಗೆ ಜೀವ ತುಂಬುವ ಕಲಾಕೌಶಲ್ಯತೆಯ ಕಲಾವಿದರಿಗಿದ್ದು, ಪ್ರಮುಖವಾಗಿ ಈ ಅಧ್ಯಾಯದಲ್ಲಿ ಹೆಬ್ಬಾರರ ರೇಖಾ ಚಿತ್ರಕಲಾಕೃತಿಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ : ನಾಲ್ಕು

ಈ ಅಧ್ಯಾಯವು ಹೆಬ್ಬಾರರ ವರ್ಣಚಿತ್ರಗಳ ಕುರಿತದ್ದಾಗಿದ್ದು, ಹೆಬ್ಬಾರರು ರಚಿಸಿದ ಎಲ್ಲಾ ವರ್ಣಚಿತ್ರ ಕಲಾಕೃತಿಗಳ ಸಂಗ್ರಹ ಈ ಅಧ್ಯಾಯದಲ್ಲಿ ಮಾಡಲಾಗಿದೆ. ಅವರ ವರ್ಣಸಂಯೋಜನೆಗಳು, ವ್ಯಕ್ತಿ ಚಿತ್ರಣಗಳು, ಪಂಚಭೂತಗಳ ಕುರಿತಂತಹ ವರ್ಣಚಿತ್ರಗಳು ಹೀಗೆ ವರ್ಣಚಿತ್ರಕ್ಕೆ ಸಂಬಂಧಿಸಿದ ತಂತ್ರ, ಶೈಲಿಯನ್ನು ಕಾಣಬಹುದಾಗಿದೆ. ಜಲವರ್ಣ, ಟೆಂಪರಾ, ತೈಲವರ್ಣ ಮತ್ತು ಮಿಶ್ರಮಾಧ್ಯಮಗಳಲ್ಲಿ ಕಲಾಕೃತಿಗಳ ರಚನೆಯನ್ನು ಕಾಣಬಹುದಾಗಿದೆ.

ಅಧ್ಯಾಯ : ಐದು

ಈ ಅಧ್ಯಾಯದಲ್ಲಿ ಹೆಬ್ಬಾರರ ಕಲಾಕೃತಿಗಳಲ್ಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಯನ್ನು ಕುರಿತಂತ್ರೆ ಅಧ್ಯಯನ ಮಾಡಲಾಗಿದೆ. ಹೆಬ್ಬಾರರಿಗೆ ಮೂಲವಾಗಿ ಕಲೆಯ ಕುರಿತಂತೆ ರವಿವರ್ಮನ ಕಲಾಕೃತಿಗಳಿಂದ ಹಿಡಿದು ಅಮೃತಶೇರ್‌ಗಿಲ್, ಕೂಲಿ ಮತ್ತು ವಿದೇಶಿ ಪ್ರವಾಸದಲ್ಲಿನ ಕಲಾಶಾಲೆಗಳಿಂದ



ಪಡೆದ ಪ್ರೇರಣೆಯನ್ನು ಮತ್ತು ಕಲಾವಿದರ, ಸಂಗ್ರಹಾಲಯಗಳಿಂದ ಪಡೆದ ಶಿಕ್ಷಣ, ಅದರಿಂದ ಕಲಿತ ಕೆಲವು ಪ್ರಮುಖ ಅಂಶಗಳನ್ನು ಗಮನೀಕರಿಸಿದ ಕಲಾವಿದ ಕೆ. ಕೆ. ಹೆಬ್ಬಾರರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ತಂತ್ರಗಳ ಕುರಿತು ವಿವರಿಸಲಾಗಿದೆ.

ಅಧ್ಯಾಯ : ಆರು

ಈ ಅಧ್ಯಾಯವು ಹೆಬ್ಬಾರರ ಕಲಾಚಟುವಟಿಕೆಗಳ ಕುರಿತು ಅಧ್ಯಯನ ಮಾಡಿದ್ದು, ಹೆಬ್ಬಾರರು ಕಲಾವಿದರಾಗಿ, ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ವಿಚಾರಗಳ ವಿಮರ್ಶೆಯನ್ನು ಇಲ್ಲಿ ಕಾಣಬಹುದಾಗಿದೆ. ಅಕಾಡೆಮಿಯಲ್ಲಿ ನಡೆದ ಕಲಾಶಿಬಿರಗಳು, ಕಲಾಶಿಕ್ಷಣ ಕುರಿತಂತೆ ಈ ಅಧ್ಯಾಯದಲ್ಲಿ ಕಾಣಬಹುದು.

ಅಧ್ಯಾಯ : ಏಳು

ಈ ಅಧ್ಯಾಯದಲ್ಲಿ ಕೆ. ಕೆ. ಹೆಬ್ಬಾರರ ಕುರಿತು ಪ್ರಕಟವಾದ ಅನೇಕ ಸಾಹಿತ್ಯ ಹಾಗೂ ವರ್ಣಚಿತ್ರಗಳು ಮತ್ತು ರೇಖಾಚಿತ್ರಗಳ ಕುರಿತಂತೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅವರ ಕಲಾಜೀವನದ ಬಗ್ಗೆ ಮೂಡಿಬಂದತಹ ಕಟ್ಟಂಗೇರಿ ಕೃಷ್ಣ ಹೆಬ್ಬಾರ್, ಹಾಡುವ ರೇಖೆಗಳು, ಹೆಬ್ಬಾರ್, ಕಲಾಸಾಧಕ, ಕಲಾವಿದನ ಶೋಧ, ಇವುಗಳನ್ನು ಕುರಿತು ವಿವರಿಸುವುದರ ಜೊತೆಗೆ ವಿಮರ್ಶಿಸಲಾಗಿದೆ.


ಅಧ್ಯಾಯ : ಎಂಟು

ಈ ಮೇಲೆ ಹೇಳಿದ ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚಿಸಿದ ಅನೇಕ ವಿಷಯಗಳನ್ನು ಈ ಕೊನೆಯ ಅಧ್ಯಾಯವಾದ ಸಮಾರೋಪದಲ್ಲಿ ಸಮೀಕ್ಷಿಸಲಾಗಿದೆ. ಅಲ್ಲದೇ ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಾಯನದಿಂದ ಕಂಡುಕೊಂಡ ಉತ್ತಮವಾದ ಫಲಿತಗಳನ್ನು ಸಹ ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ಫಲಿತಗಳು

- ಕರ್ನಾಟಕದಲ್ಲಿ ಹೆಬ್ಬಾರರು ಕುರಿತಂತೆ ಇನ್ನೂ ಅನೇಕ ಸಂಶೋಧನೆಗಳು, ಸಾಹಿತ್ಯ ಪುಸ್ತಕಗಳು ಹೊರಬರಬೇಕಾಗಿದೆ.
- ಈ ಅಧ್ಯಯನದಿಂದ ಕಲಾವಿದರು ಬೆಳೆದು ಬಂದ ಬಾಲ್ಯ ಜೀವನ, ಅವರ ಪೂರ್ವಿಕ ಇತಿಹಾಸ, ಸಂಸ್ಕೃತಿ, ಸಂಸ್ಕಾರಗಳ ಕುರಿತು ಅಧ್ಯಯನ ನಡೆಸಿದಂತಾಗುತ್ತದೆ.
- ಕರ್ನಾಟಕದ ಕರಾವಳಿ ಪ್ರದೇಶದಿಂದ ಬಾಂಬೆಯಂತಹ ನಗರದಲ್ಲಿ ಕನ್ನಡದ ಕೀರ್ತಿಯನ್ನು

❖❖❖❖




ಹಬ್ಬಿದ ಹೆಬ್ಬಾರರು ದೇಶ ವಿದೇಶಗಳಲ್ಲಿ ಕಲೆಯ ಮುಖಾಂತರ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ನಾವು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

- ಹೆಬ್ಬಾರರ ರೇಖೆ ಹಾಗೂ ವರ್ಣಚಿತ್ರಗಳ ಪ್ರಭಾವ ಭಾರತವಲ್ಲದೇ ವಿದೇಶದಲ್ಲಿಯೂ ಬೀರಿದೆ. ಇದರಿಂದ ಯುವಕಲಾವಿದರು ಮತ್ತು ಕಲಾಭಿಮಾನಿಗಳು ಪ್ರೇರೇಪಿತರಾಗಿದ್ದಾರೆ.
- ಸ್ವಾತಂತ್ರ್ಯ ನಂತರದ ಭಾರತದ ನವೋದಯ ಸಂದರ್ಭದಲ್ಲಿ ಕಲಾ ಜಗತ್ತಿಗೆ ಆಧುನಿಕ ಕಲೆಯ ಹರಿಕಾರನಂತೆ ಹಾಕಿದ ಬುನಾದಿಯು ಭಾರತದ ಕಲೆಯನ್ನು ವಿಶ್ವಮಾನ್ಯ ಮಟ್ಟಕ್ಕೆ ಒಯ್ಯುತ್ತಿದೆ.
- ಹೆಬ್ಬಾರರ ಬದುಕು ಅವರ ಕುರಿತಂತೆ ನಡೆದ ಅಧ್ಯಯನದಿಂದ ಕಲಾವಿದರಾಗಲಿ, ಕಲಾವಿದ್ಯಾರ್ಥಿಗಳಾಗಲಿ ತಮ್ಮ ಸಾಧನೆಗೆ ಮಾರ್ಗವನ್ನು ಕಂಡುಕೊಳ್ಳಲು ಆದರ್ಶ ಪ್ರಿಯರಾಗಿದ್ದಾರೆ.




ಅನುಬಂಧ



ಅನುಬಂಧ – ೧

ಸಂಕ್ಷೇಪಗಳು

ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಮೈ.ವಿ.ವಿ.	:	ಮೈಸೂರು ವಿಶ್ವವಿದ್ಯಾಲಯ
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಪು	:	ಪುಟ
ದ.ಕ	:	ದಕ್ಷಿಣ ಕನ್ನಡ
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ



ಅನುಬಂಧ – ೨

ಕೆ. ಕೆ. ಹೆಬ್ಬಾರರ ಕಲಾಕೃತಿಗಳ ಸಂಗ್ರಹದ ನೆಲೆಗಳು

ರೇಖಾ ಮತ್ತು ವರ್ಣಚಿತ್ರಗಳು

* ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ದೆಹಲಿ
* ಬಿರ್ಲಾ ಅಕಾಡೆಮಿ, ಕಲ್ಕತ್ತ
* ಏರ್ ಇಂಡಿಯಾ
* ಲಲಿತಕಲಾ ಅಕಾಡೆಮಿ, ದೆಹಲಿ
* ಭಾರತ ಕಲಾಭವನ, ವಾರಣಾಸಿ
* ರಾಜಭವನ, ಮುಂಬೈ
* ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು
* ರಾಷ್ಟ್ರಪತಿ ಭವನ, ದೆಹಲಿ
* ಕರ್ನಾಟಕ ಪ್ರವಾಸೋದ್ಯಮ, ಇಲಾಖೆ, ಬೆಂಗಳೂರು
* ಸಂಸದ್ ಭವನ, ದೆಹಲಿ
* ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ
* ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ, ಮುಂಬೈ

ಸರ್ಕಾರಿ ಮ್ಯೂಸಿಯಂಗಳು

* ಚಂಡೀಗಡ ಸರ್ಕಾರಿ ಮ್ಯೂಸಿಯಂ
* ಹೈದರಾಬಾದ್ ಸರ್ಕಾರಿ ಮ್ಯೂಸಿಯಂ
* ಮದರಾಸು ಸರ್ಕಾರಿ ಮ್ಯೂಸಿಯಂ


ರಾಷ್ಟ್ರೀಯ ಮ್ಯೂಸಿಯಂಗಳು

* ಕಾಮೆನ್‌ವೆಲ್ತ್ ಮ್ಯೂಸಿಯಂ, ಆಸ್ಟ್ರೇಲಿಯಾ

* ಪೋಲಾಂಡ್ ಮ್ಯೂಸಿಯಂ
* ಡ್ರೆಸ್ಡೆನ್ ಮ್ಯೂಸಿಯಂ
* ಜೆಕೊಸ್ಲೊವಾಕಿಯಾ ಮ್ಯೂಸಿಯಂ
* ಲೆನಿನ್‌ಗ್ರಾಡ್ ಮ್ಯೂಸಿಯಂ

ಭಿತ್ತಿಚಿತ್ರಗಳು

* ಭಾರತೀಯ ದೂತಾವಾಸ, ಪ್ಯಾರಿಸ್
* ಭಾರತೀಯ ದೂತಾವಾಸ, ಬರ್ನ್, ಸ್ವಿಝರ್ಲ್ಯಾಂಡ್
* ಸೀಬಾ, ಮುಂಬೈ
* ನಾಯರ್ ಆಸ್ಪತ್ರೆ, ಮುಂಬೈ
* ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ, ಮೈಸೂರು
* ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯ, ಮೈಸೂರು



ಅನುಬಂಧ – ೩
ಗ್ರಂಥ ಋಣ

೧. ಕನ್ನಡ ಗ್ರಂಥಗಳು

೧. **ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ ಕಲೆ ಮತ್ತು ಬದುಕು** — **ಕು.ಶಿ. ಹರಿದಾಸ ಭಟ್ಟ**
ಪ್ರಾದೇಶಿಕ ಜಾನದಪ ರಂಗಕಲೆಗಳ ಅಧ್ಯಯನ
ಕೇಂದ್ರ, ಉಡುಪಿ. ೧೯೮೮

೨. **ಕಲಾಸಾಧಕ** — **ಎನ್. ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ
ಬೆಂಗಳೂರು


೩. **ಕಲಾವಿದ ಹೆಬ್ಬಾರರ ರೇಖಾಲಾವಣ್ಯ** — **ವ್ಯಾಸರಾಯ ಬಲ್ಲಾಳ**
ನವಕರ್ನಾಟಕ ಪಬ್ಲಿಕೇಶನ್
ಬೆಂಗಳೂರು,

೪. **ಕೆ.ಕೆ. ಹೆಬ್ಬಾರ್** — **ಎನ್. ಮರಿಶಾಮಾಚಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೮೭

೫. **ಕೆ.ಕೆ. ಹೆಬ್ಬಾರ್ ಚಿತ್ರ ಸಂಪುಟ** — **ಮನುಬಳಿಗಾರ್**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು
೨೦೧೧

೬. **ಪ್ರತಿಮಾ ಲೋಕದಲ್ಲಿ ಪಯಣ** — **ಎನ್. ಮರಿಶಾಮಾಚಾರ್**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು

೭. **ರೇಖಾಚಿತ್ರ** — **ಬಿ.ವಿ.ಕೆ. ಶಾಸ್ತ್ರಿ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು
೧೯೯೧



೭. **ಹಾಡುವ ರೇಖೆ ಕೆ.ಕೆ. ಹೆಬ್ಬಾರರ ರೇಖಾ ಚಿತ್ರಗಳು** — **ಎನ್. ಮರಿಶಾಮಾಚಾರ್**
ಸಿ.ಎಂ.ಎನ್. ಪ್ರಕಾಶನ
ಬೆಂಗಳೂರು

೮. **ಹೆಬ್ಬಾರ್** (ಸಮಕಾಲೀನ ಕಲಾವಿದರ ಮಾಲೆ)
ಲಲಿತಕಲಾ ಅಕಾಡೆಮಿ,
ನವದೆಹಲಿ
೧೯೮೨

೨. ಇಂಗ್ಲೀಷ್ ಗ್ರಂಥಗಳು

೧. **An Artist's Quest**
Abhinav Publication,
New Delhi, 1974

೨. **Hebbar** — **Rekha Rao**, **Rajani prasanna**
An artist's Quest
Ministry of Cultere
Government of India and
K K Hebbar's Art Foundation
2011

೩. **Singing Line**
Peacock Publication,
Bombay, 1964

೪. **Singing Line (Revised)**
Abhinav Publication,
New Delhi 1982

೫. **Voyage in Images**
Jhangir Art Gallery,
Mumbai 1991

❖❖❖❖

